ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಸರಸ್ವತಿ ಸಂಹಾರ

ಬೀchi

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಸರಸ್ವತಿ ಸಂಹಾರ

**ಬೀChi**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**SARASWATHI SAMHARA :** (A Novel) by **Beechi** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xviii + ೧೨೩
ಬೆಲೆ : ರೂ. ೪೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧ **(ಗೋವಿಂದ ಎಂ. ಕಾರಜೋಳ)**



## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

## ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ



ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



## ಮುನ್ನುಡಿಯ ಬದಲು

(ಪ್ರಥಮ ಮುದ್ರಣಕ್ಕಾಗಿ ಬರೆದುದು)

'ಅ' ಎನ್ನುವವರೊಬ್ಬರು ಒಂದು ಪುಸ್ತಕವನ್ನು ಬರೆದು 'ಬ' ಎನ್ನುವವರನ್ನು ಮುನ್ನುಡಿಗಾಗಿ ವಿನಂತಿಸಿದರು. 'ಬ' ಎನ್ನುವವರು 'ಅ' ಎನ್ನುವವರನ್ನು ಮುಕ್ತಕಂಠದಿಂದ ಹೊಗಳಿ, ನಾನಾ ರೀತಿಯಲ್ಲಿ ಕೊಂಡಾಡಿ, ನೀವೇ ಸರಸ್ವತಿಯ ಜ್ಯೇಷ್ಠ ಪುತ್ರರು ಎಂದು ಮುನ್ನುಡಿಯಲ್ಲಿ ಅವರು ಅಪೇಕ್ಷಿಸಿದ ಹಾಡು ಹಾಡದೆ, ಇದರಲ್ಲಿಯ ನಿಮ್ಮ ಕೆಲವು ಅಭಿಪ್ರಾಯಗಳು ನನಗೆ ಸರಿ ಎನಿಸಲಿಲ್ಲ ಎಂದು ಬರೆದು ತಿಳಿಸಿದರು. ಕೂಡಲೆ 'ಅ' ಎನ್ನುವವರು ನುಡಿದೇ ಬಿಟ್ಟರು "ಅವನಿಗೇನು ಗೊತ್ತೈತೆ" ಎಂದು, ಈ ಮನೋವೃತ್ತಿ ಒಳ್ಳೆಯದಲ್ಲ ಎಂಬುದು ಕತ್ತೆಗೂ ತಿಳಿಯಬಹುದು. 'ಅ' ಎನ್ನುವವರಿಗೂ ತಿಳಿದೀತು, ದೇವರು ಇವರಿಗೂ ಸದ್ಬುದ್ಧಿಯನ್ನು ದಯಪಾಲಿಸಿದರೆ ಅಕಸ್ಮಾತ್ತಾಗಿ.

"ಈ ಸಾಹಿತಿಗಳು ಬರೆದುದೆಲ್ಲವೂ ಉತ್ತಮ ಸಾಹಿತ್ಯ, ನೂತನ ಸಾಹಿತ್ಯ, ಶಾಶ್ವತ ಸಾಹಿತ್ಯ. ಈ ಪ್ರತಿಭಾಶಾಲಿಗಳು ಈ ಗ್ರಂಥವನ್ನು ರಚಿಸಿರದಿದ್ದರೆ ಜಗತ್ತು ಹಾಳಾಗಿ ಹೋಗುತ್ತಿತ್ತು. ಇತ್ಯಾದಿ ಇತ್ಯಾದಿ" ಎಂದು ಅರಿಯದವರಿಂದ 'ಕಾಂಡಕ್ಟ್ ಸರ್ಟಿಫಿಕೇಟ' ಬರೆಯಿಸಿಕೊಂಡಂತೆ ಯಾರೋ ಒಬ್ಬರಿಂದ ನಾನೂ ಬರೆಯಿಸಿಗೊಂಡು ಮೆರವಣಿಗೆ ಮಾಡಿಸಿಗೊಂಡರೆ ನನ್ನ ಗತಿ ಏನು? ತಿಂಮನಾದರೂ ಏನಂದಾನು? ಈ ದಡ್ಡ ಪದ್ಧತಿಯನ್ನು ದೂರ ಮಾಡಬೇಕೆಂದೇ ಪೂಜ್ಯರಾದ ಶ್ರೀ ವಿ.ಕೃ. ಗೋಕಾಕರವರ ಪತ್ರವನ್ನು ಇಲ್ಲಿ ಪ್ರಕಟಿಸಿದ್ದೇನೆ.

ಶ್ರೀ ವಿ.ಕೃ. ಗೋಕಾಕರು ಈ ಕಿರುಕಾದಂಬರಿಗೆ ಮುನ್ನುಡಿ ಬರೆಯಲು ಒಪ್ಪಿದ್ದರು. ಆದರೆ ಮುನ್ನುಡಿಯ ಬದಲು ಈ ವಿಮರ್ಶಾತ್ಮಕವಾದ ಸುದೀರ್ಘ ಪತ್ರವನ್ನು ಬರೆದು ನನಗೆ ಇನ್ನೂ ಹೆಚ್ಚಿನ ಉಪಕಾರ ಮಾಡಿದರು. ಬೆನ್ನು ಚಪ್ಪರಿಸುವ ಮಾಮೂಲು ಸಹೃದಯರು ಬೇಕಾದಷ್ಟು ಅಥವಾ ಬೇಡಾದಷ್ಟು ದೊರೆಯುತ್ತಾರೆ. ಇತರ ಕಾರಣಗಳಿಂದ ಬಣ್ಣದ ಗಾಜಿನಲ್ಲಿ ನೋಡಿ, ಓದದೆ ಬೈಯುವ ಮಾಮೂಲು ಸಹೃದಯರಿಗೂ ಕೊರತೆಯಿಲ್ಲ. ಆದರೆ ಶ್ರೀ ವಿ.ಕೃ. ಗೋಕಾಕರಂತೆ ಸಹೃದಯತೆಯಿಂದ ಓದಿ, ಬೈದು, ಆಶೀರ್ವದಿಸುವ ಆಪ್ತ ಹಿತೈಷಿಗಳು ಬಹು ವಿರಳ. ಅವರ ಈ ಉಪಕಾರ ಸ್ಮರಣೆಯ ಕುರುಹು ಆಗಿ, ಮತ್ತು ಪ್ರಾಮಾಣಿಕತೆಯ ಪ್ರೇಮಕ್ಕಾಗಿ ಆ ಪೂಜ್ಯರ ಪತ್ರವನ್ನೇ ಪ್ರಕಟಿಸಿದ್ದೇನೆ. ಪ್ರಕಟಿಸಲು ಒಪ್ಪಿಗೆ ಇತ್ತಿರುವದು ಅವರ ಇನ್ನೊಂದು ಉಪಕಾರ.

ಶ್ರೀಯುತರು 'ಭೇಷ್' ಎಂದ ದಿನವೇ ನಾನು ಬರೆಯುವದನ್ನೇ ಬಿಡುವೆನೇನೊ ಎನ್ನುವ ಭಯವೂ ನನಗಿದೆ, ಅಷ್ಟಿದೆ ಅವರ ಅಭಿಪ್ರಾಯಕ್ಕೆ ನನ್ನ ಗೌರವ. ಆದಕಾರಣ ಸದಾ ಅವರು ಹಾಗೆಯೇ ಅನ್ನುತ್ತಿರಲಿ, ನಾನು ಹೀಗೆಯೇ ಬರೆಯುತ್ತಿರಲಿ ಎಂಬುದೇ ನನ್ನಾಶೆ. ಇದೇ ಅಲ್ಲವೆ ಮತ್ತೆ ಗುರು–ಶಿಷ್ಯರ ಸಂಬಂಧವೆಂದರೆ?

ಇನ್ನೊಂದು ಮಾತು: ನನ್ನ ಹಸ್ತಪ್ರತಿಯು ಶ್ರೀಯುತ ಮಾಳವಾಡರ ಬಳಿಹೋಯಿತು–ಓದಿ ನೋಡಿ ಅಭಿಪ್ರಾಯವನ್ನು ತಿಳಿಸಲು, ಅವರು ಮಾಸ್ತರರು, ವೃತ್ತಿಯಿಂದ ಮತ್ತು ಮನೋವೃತ್ತಿಯಿಂದ, ಮೇಜಿನ ಮೇಲಿದ್ದ ಸೀಸಕಡ್ಡಿ ತಾನಾಗಿಯೇ ಕೈಗೆ ಬಂದಿತು. ಬಡಬಡ ತಪ್ಪುಗಳನ್ನೆಲ್ಲ ತಿದ್ದಿಬಿಟ್ಟರು–ಕೇವಲ ಅಭ್ಯಾಸಬಲದಿಂದ, ಶ್ರೀ ಮಾಳವಾಡ ಮಾಸ್ತರರ ಈ ಒಳ್ಳೆಯ ಅಭ್ಯಾಸಕ್ಕೆ ನಾನು ಋಣಿ ಎನ್ನದಿದ್ದರೆ ನನ್ನದಾದರೂ ಹೇಗೆ ಒಳ್ಳೆಯ ಅಭ್ಯಾಸವಾದೀತು? ಅರಿಯದೆ ಮಾಡಿದ ಮಾತ್ರಕ್ಕೆ ಉಪಕಾರವಲ್ಲವೇ? ಅವರು ತಿಳಿಯದೆ ಉಪಕರಿಸಿದರು–ನಾನು ತಿಳಿದು ಸ್ಮರಿಸುತ್ತೇನೆ.

"ಸರಸ್ವತಿ ಸಂಹಾರ"ವನ್ನು ನನ್ನ ಕೈಯಿಂದ ಮಾಡಿಸಿದ ಆ ಮಹಾಶಕ್ತಿಯು ಬೇಗ 'ಲಕ್ಷ್ಮೀಪೂಜೆ'ಯನ್ನೂ ಮಾಡಿಸಲಿ.

ಎಲ್ಲರಿಗೂ ನಿಮ್ಮವನೆ

**ಬೀಚಿ**

ಬಳ್ಳಾರಿ
೫–೧೧–೫೬



**Guruji,**

Will you please permit me to publish your letter you wrote me some time back instead of a foreword? I shall be much obliged for your 'yes'.

28-9-56

Yours as always

**ಬೀChi**

From:

**Shree V.K. Gokak,** M.A. (Oxon)
Principal
Karnatak College,
Dharwar,

My dear Beechi,

It is generous of you to print this letter, You can.

29-9-56

Yours affectionately

**Gokak**

ಧಾರವಾಡ
೨೧-೩-೧೯೫೬

**ಪ್ರಿಯ ಬೀಚಿ,**

ನಿಮ್ಮ ಕಾದಂಬರಿಯನ್ನು ಇಷ್ಟರಲ್ಲೇ ನಾನು ಓದಬೇಕಿತ್ತು. ಬಹುಶಃ ಸಿಟ್ಟಾಗಿಯೇ ಧಾರವಾಡಕ್ಕೆ ಬಂದಾಗ ನನ್ನನ್ನು ಕಾಣದೆ ನೀವು ಹೋಗಿದ್ದೀರಿ. ನಾನು ಅಸಹಾಯಕನಾಗಿದ್ದೆ. ಈಗ ಬಿಡುವು ದೊರೆತು ಓದಿ ಬರೆಯುತ್ತಿದ್ದೇನೆ.

ಸಮಿತಿಯ ಓರ್ವ ಸದಸ್ಯರು ಇದರಲ್ಲಿ ಒಂದೇ ಸಮಾಜದ ಟೀಕೆಯಿದೆಯೆಂದಿದ್ದರು. ಹಾಗೇನು ನಾನು ಹೇಳಲಾರೆ. ಪ್ರತಿಯೊಂದು ಸಮಾಜದಲ್ಲಿ ನೀಚರೂ, ಉತ್ತಮರೂ ಇದ್ದೇ ಇರುತ್ತಾರೆ. ಕಾದಂಬರಿಯಲ್ಲಿ ಎಲ್ಲ ಸಮಾಜಗಳೂ ಬರಲು ಸಾಧ್ಯವಿಲ್ಲ. ಕಾರಣ ಒಂದು ಸಮಾಜ ಉಳಿದವುಗಳನ್ನು ಪ್ರತಿನಿಧಿಸುತ್ತದೆ. ಅಲ್ಲದೆ ಗೌರಮ್ಮ ಬಾಳಪ್ಪರಂತೆ ಇಲ್ಲಿ ಬ್ರಹ್ಮಾನಂದ ಅಚ್ಚಮ್ಮರೂ ಇದ್ದಾರೆ.

ನನಗೆ ಬರುವ ಆತಂಕ ಬೇರೆಯಾಗಿದೆ. ಹಾಸ್ಯದಲ್ಲಿ ಇಷ್ಟೊಂದು ಕೋಮಲರಾದ ನೀವು ಉಳಿದ ರಸಾತ್ಮಕ ಲೇಖನದಲ್ಲಿ ಇಷ್ಟೊಂದು ನಿಷ್ಠುರರು ಹೇಗಾದಿರಿ? 'ಸರಸ್ವತಿ ಸಂಹಾರ'ವನ್ನೋದಿ ಜೀವನದ ಬಗ್ಗೆ ದೊಡ್ಡ ಜಿಗುಪ್ಸೆ ಏಳುತ್ತದೆ. ನೀಚರು ಕೊನೆಗೆ ವಿಜಯಶಾಲಿಯಾಗುವದು ಇದರ ಕಾರಣವಿರಬಹುದು. ಇದು ವಾಸ್ತವಿಕವಾಗಿರಬಹುದು. ಇದೇನು ಅಂತಹ ಆತಂಕವಲ್ಲ. ಆದರೆ ಇಲ್ಲಿಯ ಸಾತ್ವಿಕರು ತೀರ ಅಸಹಾಯಕರಾಗಿದ್ದಾರೆ. ಅವರ ಸಾತ್ವಿಕತೆ ಮನೋಹರವಾಗಿ ವ್ಯಕ್ತವಾಗಿದೆ. ಸಾಮಾಜಿಕ ಚಿತ್ರಣ ಮೋಹಕವಾಗಿದೆ. ಆದರೆ ನೀಚರ ವಿಜಯದೊಡನೆ ಸಾತ್ವಿಕರ ಅಸಹಾಯತೆಯೂ ಕೂಡಿ, ಓದುಗನ ಅಂತಃಕರಣಕ್ಕೆ ಬಲವಾದ ಪೆಟ್ಟು ಕೊಡುತ್ತದೆ. ಜೀವನವೆಂದರೆ ಬರಿ ಬಲಿದಾನವೆಂಬ ಅರ್ಥ ಬರುತ್ತದೆ. ಇದೇ ಆಕಸ್ಮಿಕತೆಯೇ ಜಗತ್ತಿನಲ್ಲಿ ದೇವರೆಂಬ ಸ್ವರ ಏಳಿಸುತ್ತದೆ.

ಇದೂ ಒಂದು ದೃಷ್ಟಿಕೋನದ ರೀತಿಯಾಗಿರಬಹುದು. ಇದನ್ನು ಅಲ್ಲಗಳೆಯುವದು ಯೋಗ್ಯವಾಗಲಿಕ್ಕಿಲ್ಲ. ಆದರೆ ಇನ್ನೊಂದು ಮಾತಿದೆ. ಸಾತ್ವಿಕರ ಸೋಲಿನಿಂದ ಅವರಿಗೆ ಯಾವ ಬಾಹ್ಯಸಾಂತ್ವನ ಸಿಗದೆಹೋದರೂ, ಆಂತರಿಕ ಸಮಾಧಾನವಾದರೂ ಅವರಿಗೆ ಇರಬಹುದಲ್ಲ! ಪತಂಗಗಳಂತೆ ಅವರು ಪಟಪಟನೆ ಸತ್ತರೆ, ಎಲ್ಲ ಸಾತ್ವಿಕರ ಸತ್ವವೇ ಪೊಳ್ಳೆಂದು ಅರ್ಥವಾದೀತು. ಯಾವುದೇ ಒಂದು ಆಂತರಿಕ ಸಮಾಧಾನದಿಂದ ತಮ್ಮ ಯಾತನೆಯನ್ನು ಸಹಿಸಲು ಸಾತ್ವಿಕರು ಸಮರ್ಥರಾಗುತ್ತಾರೆ. ಬ್ರಹ್ಮಾನಂದರ ಚಿತ್ರಣದಲ್ಲಿ ಇದರ ಬಗ್ಗೆ ಮಾತಿದೆ. ಆದರೆ



ಅದು ಬರಿ ಮಾತು, ಆ ಶಾಂತಿಯ ವಿವರ ಹಾಗೂ ಜೀವಂತ ಚಿತ್ರಣಗಳಿಲ್ಲ. ಸರಸ್ವತಿ–ಅಚ್ಚಮ್ಮ–ಗಣಪತಿಯರಿಗಂತೂ ಇದರ ಅರಿವೇ ಇಲ್ಲ. ಬರಿ ಅಸಹಾಯಕರಾಗಿ ಅವರು ಸಾಯುತ್ತಾರೆ. ಹೊರಗಿನಿಂದ ನೋಡುವ ಸಾಮಾಜಿಕ ದೃಷ್ಟಿಯಿಂದ ಇದು ಸತ್ಯವಾಗಿ ಕಾಣಬಹುದು. ಆದರೆ ಇಂಥವರ ಹೃದಯಗಳನ್ನು ಒಳಹೊಕ್ಕು ನೋಡಿದರೆ, ಅಲ್ಲಿ ಬೇರೆ ಮಾತು ಹೊಳೆಯಬಹುದು. ಈ ಭಾಗ ಕೃತಿಯಲ್ಲಿ ಬಂದಿಲ್ಲ. ಬಂದಿದ್ದರೆ ಸಾತ್ವಿಕರ ವ್ಯಾವಹಾರಿಕ ಸೋಲೂ ಸಹ್ಯವಾಗಬಹುದಾಗಿತ್ತು.

ಅಲ್ಲದೇ ಈ ಸಾತ್ವಿಕ ಅಸಹಾಯಕತೆಯನ್ನು ಪರಿಸ್ಫುಟವಾಗಿಸಲೆಂಬಂತೆ 'ಐನ' ವೇಳೆಯಲ್ಲಿಯೇ ಗೌರಮ್ಮ–ಬಾಳರು ರಂಗದ ಮೇಲೆ ಬಂದು ಸಾತ್ವಿಕರ ಸುಖವನ್ನು ಸೂರೆ ಮಾಡುತ್ತಾರೆ. ಗೋಕರ್ಣೇಶ್ವರದ ಕೊನೆಯ ದೃಶ್ಯವೂ ಈ ಕಾರಣಕ್ಕಾಗಿಯೇ ಎಳೆದುತಂದಂತೆ ತೋರುತ್ತದೆ. ಭಾಸ್ಕರಭಟ್ಟರದು ಸಂದಿಗ್ಧ ಪಾತ್ರ.

ಸಾತ್ವಿಕರ ಮನೋರಂಗವನ್ನು ಚಿತ್ರಿಸದೆ, ಬರಿ ಅವರ ಅಸಹಾಯಕತೆಯನ್ನು ಚಿತ್ರಿಸುವದರಿಂದ ಓದುಗರ ಮೇಲೆ ವಿಪರೀತ ಪರಿಣಾಮವಾಗುವ ಸಂಭವವಿದೆ. ಇದನ್ನು ಮಾರ್ಪಡಿಸುವುದು ಅಗತ್ಯವೆನಿಸುವುದಿಲ್ಲವೆ?

ಈ ಸಂಘದ ಸದಸ್ಯರು ಹಳ್ಳಿಯಲ್ಲಿಯ ವಾಚಕರು. ನನ್ನಂತಹ ಕಲಿತವರು ಈ ಪರಿಣಾಮವನ್ನು ಹೇಗೋ ಅರಗಿಸಿಕೊಳ್ಳಬಹುದು. ಅವರ ಗತಿಯೇನು?

ಇವೆಲ್ಲ ಕಾರಣಗಳ ಮೂಲಕ ಮುನ್ನುಡಿಯ ಬದಲು ಈ ಪತ್ರವನ್ನು ನಿಮಗೆ ಬರೆಯಬೇಕಾಗಿ ಬಂದಿದೆ. ಕ್ಷಮಿಸಿ, ಸಮಿತಿಗೂ ಇದನ್ನೇ ನನ್ನ ಅಭಿಪ್ರಾಯವೆಂದು ತೋರಿಸುತ್ತಿದ್ದೇನೆ. ಇದಕ್ಕೆ ನೀವು ನನ್ನನ್ನು ಕ್ಷಮಿಸುವಿರಾಗಿ ಭಾವಿಸಿದ್ದೇನೆ. ಇದರಲ್ಲಿ ಕಲಾಪ್ರತಿಭೆ ನಿಮ್ಮ ಉಳಿದ ಕೃತಿಗಳಲ್ಲಿಯಂತೆ ಸಮೃದ್ಧವಾಗಿದೆ. ಆದರೆ ಈ ಕೆಲವು ಮಾತು ನನ್ನ ದಾರಿಯಲ್ಲಿ ಕಟ್ಟಿವೆ.

ಇತಿ ಸಪ್ರೇಮ ವಂದನೆಗಳು,

ನಿಮ್ಮೊಲವಿನ,
**–ವಿ.ಕೃ. ಗೋಕಾಕ**

## ಪರಿವಿಡಿ

| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಮುನ್ನುಡಿಯ ಬದಲು | xi |
| **ಸರಸ್ವತಿ ಸಂಹಾರ** | **೧–೧೨೩** |



# ಸರಸ್ವತಿ ಸಂಹಾರ

೧

ಹೆಂಡ್ತಿನ್ನ ಏನು ಮಾಡ್ತಿಯೋ, ಬಾಳಪ್ಪಾ?"

"ಕುತ್ಗಿ ಹಿಚಿಗಿ ಭಾವ್ಯಾಗ ಹಾಕ್ತೀನಿ"

ಕೂಡಲೆ ಕುಳಿತವರೆಲ್ಲರೂ ಖೊಳ್ಳೆಂದು ನಗುವದು ಭಟ್ಟರ ಮನೆಯಲ್ಲಿಯ ನಿತ್ಯದ ಮನರಂಜನ ಕಾರ್ಯಕ್ರಮ.

ಬಾಳಪ್ಪ ಬಾಯಿ ತೆರೆಯಬೇಕು ಅಷ್ಟೇ, ಅವನ ತಾಯಿ ಗೌರಮ್ಮಳಿಗೆ ಮುತ್ತಿನ ಸುರಿಮಳೆಯೇ! ಆರು ವರ್ಷಗಳ ವರೆಗೂ ಅಪ್ಪ ಎನ್ನಲು ಸಹ ಬಂದಿರಲಿಲ್ಲ. ಕತ್ತೆ ಬಾಳೆಕಾಯಿಯಂತೆ ಬೆಳೆದಿದ್ದ ಕಣ್ಮಣಿ ಬಾಳಪ್ಪನಿಗೆ. ಕಡೆಗೂ ಇವನು ಮೂಕನಾಗುತ್ತಾನೇನೋ ಎಂಬ ಅಂಜಿಕೆ ಕಾಡುತ್ತಿತ್ತು ಗೌರಮ್ಮನನ್ನು. ಆದರೆ ಆ ಪುಣ್ಯವನ್ನು ಪಡೆದು ಬಂದಿರಬೇಕಲ್ಲ ಈ ಬಡ ಜಗತ್ತು?

ಚೊಚ್ಚಲ ಮಗಳಾದ ಅಚ್ಚಕ್ಕಳ ನಂತರ ಅಲ್ಪಾಯು ಕನ್ನಡ ಪತ್ರಿಕೆಗಳಂತೆ ಸಾಲಾಗಿ ಏಳು ಹುಟ್ಟಿ ಸತ್ತವು, ಒಂದರ ದನಿಯನ್ನೊಂದು ಸಹ ಕೇಳದಲೆ, ಗೌರಮ್ಮ ಅತ್ತು ಅತ್ತು ಮೆತ್ತಗಾದಳಾಗಲಿ, ಮಕ್ಕಳೇನೂ ಉಳಿಯಲಿಲ್ಲ. ಭಾಸ್ಕರಭಟ್ಟರನ್ನು ಕಟ್ಟಿಕೊಂಡು ವಿದುರಾಶ್ವತ್ಥಕ್ಕೆ ಬಂದು ನಾಗಪ್ರತಿಷ್ಠೆ ಮಾಡಿದಳು –ಗೌರಮ್ಮ, ಮಕ್ಕಳು ಸಾಯದಿರಲೆಂದು. ಒಬ್ಬ ಮಗನು ಮಗನಲ್ಲ. ಒಬ್ಬ ದೇವನೂ ದೇವನಲ್ಲ! ಸತ್ಯನಾರಾಯಣ, ಸಾಯಿಬಾಬಾ, ದುರಗದಯ್ಯ, ಕನ್ನೇರಮ್ಮ, ಭೊಂಭೊ ಸ್ವಾಮಿ ಹುಲಿಗೆಮ್ಮ ತಾಯಿ, ಹುಚ್ಚುರಾಯ, ಖೋಟಾ ಆಂಜನೇಯ, ಗುಳಕವ್ವ ಮುಂತಾದ ವಗೈರಾ ವಗೈರಾ ಪುಡಿ ದೇವರುಗಳ ಪೂಜೆಯಿಂದ ಹಿಡಿದು ಬಾಣಗೇರಿ ಪೀರಲ ದೇವರಿಗೂ ಸಕ್ಕರೆ ಓದಿಸಾಯಿತು. ಈ ಎಲ್ಲ ಪಾಪದ ಫಲವೋ ಅಥವಾ ಇನ್ನಾವುದೋ ಕರ್ಮದ ಕಾಟವೋ ಎಂಬಂತೆ, ಅದೇ ವರ್ಷವೇ ಅವತಾರವೆತ್ತಿ ಭೂಲೋಕದ ಭಕ್ತರಿಗೆ ದರ್ಶನವನ್ನಿತ್ತ ನಮ್ಮ ಮುದ್ದು ಮೊದ್ದು ಬಾಳಪ್ಪ. ಕಲ್ಲು ಗುಂಡು ತಿಪ್ಪೆ, ಚೇಳು, ಕೋತಿ, ಕೊಂಗ, ಹುಚ್ಚ ಎಂಬೆಲ್ಲ ಸಾರ್ಥಕನಾಮಗಳಿಂದ ಮೊದಲು ಕೂಗಿ ಕರೆದು, ಕಟ್ಟಕಡೆಗೆ ಬೆಪ್ಪಾಗಿಯಾದರೂ ಬಹುಕಾಲ ಬಾಳಲಿ ಎಂದು ಹರಸಿ, ಬಾಳಪ್ಪ ಎಂದು ತೊಟ್ಟಿಲಲ್ಲಿಯೇ ಹೆಸರಿಟ್ಟರು.

ಹೆತ್ತವರ ಹರಕೆ ಹುಸಿಯಾಗಲಳವೇ? ಬಾಲಗ್ರಹದ ಕಾಟವಿಲ್ಲದೆ, ನವಗ್ರಹಗಳ ಜಪತಪ ಬೇಡದೆ ಬಹುಕಾಲ ಬೆಪ್ಪಾಗಿಯೇ ಬಾಳಿದ ಬಾಳಪ್ಪ, ಸಾಯುವವರೆಗೂ ಉಳಿದೇ ಇದ್ದ ಶೂರ ಬಾಳಪ್ಪ.

ಬಾಳನ ಬಾಲಲೀಲೆಗಳು ಅಗಣಿತವಷ್ಟೇ ಅಲ್ಲದೇ, ಅದ್ಭುತ ರಮ್ಯವೂ ಆಗಿದ್ದವು.

"ನಿನ್ನ ಹೊಟ್ಟಿ ತುಂಬ್ಯಾದೆ. ಎದ್ದೇಳು ಬಾಳಾ, ಊಟ ಸಾಕು."

ಗೌರಮ್ಮ ಅವನನ್ನು ದರದರ ಹೊರಮನೆಗೆ ಎಳೆಯುವ ವರೆಗೂ ಉಣ್ಣುತ್ತಲೇ ಕುಕ್ಕರಿಸುತ್ತಿದ್ದ ಆ ಬಾಲಬಕಾಸುರ.

ಆರು ಮೂರು ಔನ್ಸು ರೇಶನ್ ಅಳೆಯುತ್ತಿದ್ದ ಸರಕಾರವು ಬಾಳ ಭೂಪನ ಮಿತ ಭೋಜನವನ್ನು ಒಂದು ಬಾರಿಯಾದರೂ ನೋಡಿದ್ದರೆ ಚೆನ್ನಾಗಿತ್ತು. ಚುನಾವಣೆ ಸನಿಹ ಬರುವವರೆಗೂ ಕಾಯದಲೆ, ಸೀದಾ ಪ್ರಮಾಣವನ್ನು ಮೂವತ್ತೆರಡು ಔನ್ಸಿಗಾದರೂ ಹೆಚ್ಚಿಸುತ್ತಿತ್ತು.

ನಿದ್ರಿಸುತ್ತಿದ್ದಾಗ ಅಚ್ಚಕ್ಕಳ ಬೆರಳನ್ನು ಒಂದು ಬಾರಿ ಬಾಳಪ್ಪ ಚೆನ್ನಾಗಿ ಕಚ್ಚಿಟ್ಟ ಎಲ್ಲರೂ ಅಂಜಿದರು ನಂಜಾಗುವದೇನೋ ಎಂದು. ಎಲ್ಲ ಔಷಧೋಪಚಾರಗಳೂ ಆದವು, ನಾಯಿ ಕಚ್ಚಿದಾಗ ಹೊಟ್ಟೆಗೆ ಚುಚ್ಚುವ ಸೂಜಿಮದ್ದೊಂದನ್ನು ಬಿಟ್ಟು. ಅಚ್ಚಕ್ಕ ಆಗ ಆರು ತಿಂಗಳ ಚೊಚ್ಚಿಲ ಬಸುರಿ.

"ನೋಡಿ ನೋಡಿ, ಈ ಎಬಡಗೆ ನಾನೆಲ್ಲಿ ಮಗಳ್ನ ಕೊಡಲೆವ್ವ" ಎಂದು ಅದೆಂದೂ ಅಚ್ಚಕ್ಕ ನಗೆಯಾಡಿದ್ದಳಂತೆ. ಕಾಳಿಂಗನಂತಹ ಬಾಳಪ್ಪ ಬಿಟ್ಟಾನೆ ಸೇಡು ತೀರಿಸಿಕೊಳ್ಳದೆ?

ಕೇವಲ ಏಳೇ ವರ್ಷದ ಕೈ ಕೂಸಾಗಿದ್ದ ಬಾಳಪ್ಪನ ಮೂಗಿನಿಂದ ಬೇಸಿಗೆಯಲ್ಲಿಯೂ ಬತ್ತುವ ಭಯವಿಲ್ಲದೆ, ತ್ರಿಕಾಲದಲ್ಲಿಯೂ – ಎದ್ದಾಗ, ನಿದ್ದೆಯಲ್ಲಿದ್ದಾಗ, ನಿದ್ದಯಲ್ಲಿದ್ದು ಉಣ್ಣುತ್ತಿದ್ದಾಗ – ತುಂಬಿ ಹೊರಸೂಸಿ ಹರಿಯುತ್ತಿದ್ದ ಜೋಡಿಪ್ರವಾಹಗಳಿಗೆ ಮುಕುರುತ್ತದ್ದ ನೊಣಗಳನ್ನು ಗೌರಮ್ಮನೇ ಓಡಿಸಬೇಕು. ಹಾಸಿಗೆಯನ್ನು ಬಿಸಿಲಿಗೆ ಹಾಕದ ದಿನವೇ ಇಲ್ಲ ಗೌರಮ್ಮನ ಜೀವನದಲ್ಲಿ ಬಾಳಪ್ಪ ಹುಟ್ಟಿದಂದಿನಿಂದ.

ಇಂತಹ ಸುಪುತ್ರ ಬಾಳಪ್ಪ ಗಿಳಿಯಂತೆ ಮಾತನಾಡಿದಾಗ, ಯಾರಿಗೆ ತಾನೆ ಅತ್ಯಾನಂದವಾಗಲಿಕ್ಕಿಲ್ಲ? ಯಾವ ಧನ್ಯ ತಾಯ್ತಂದೆಗಳು ಎದೆತುಂಬಿ ನಗಲಿಕ್ಕಿಲ್ಲ?



ಮನೆಗೆ ಯಾರೇ ಬರಲಿ, ಅವರೆದುರು ಬಾಳಕುಮಾರನ ಚತುರೋಕ್ತಿಯ ಪ್ರದರ್ಶನವಾಗಲೇಬೇಕು. ಬಂದ ಬಕರಾಗಳು ಈ ಹಿಂಸೆಗೆ ಆಹುತಿಯಾಗಲೇಬೇಕು. ಅದಾವ ಕಾರಣದಿಂದಲಾದರೂ ಈ ಕಾರ್ಯಕ್ರಮ ತಪ್ಪಿದರೆ ಗೌರಮ್ಮಳ ಜೀವಕ್ಕೆ ಅಂದೆಲ್ಲ ಅದೇನೋ ಹುರು ಹುರು, ಹಪ, ಹಪ, ಭಣ, ಭಣ; ಉಪ್ಪಿಲ್ಲದ ಸಾರು ಉಂಡಂತೆ ಈ ಬೃಹಸ್ಪತಿ ಬಾಳಪ್ಪನಿಗೆ ಅದಾರೋ ದಡ್ಡರು 'ಅರೆ ಹುಚ್ಚ' ಎಂದರಂತೆ ಒಂದು ಬಾರಿ. ಘಟಾಣಿ ಗೌರಮ್ಮ ಸೆರಗು ಬಿಟ್ಟು, ನಡುರಸ್ತೆಗೆ ಬಂದು ನಿಂತು ಎರಡೂಕಾಲು ಗಂಟೆ ಬಾಯಿ ಮಾಡಿದಳು. ಸುತ್ತುಮುತ್ತು ಇದ್ದೆಲ್ಲರ ಮಾನವನ್ನು ಸೋಪು ಹಾಕಿ ತೊಳೆದು ಒಳನಡೆದಳು.

ಪಾಪ! ಅನ್ನಬಹುದೇ ಅರೆ ಹುಚ್ಚ ಎಂದು, ಸಂಪೂರ್ಣ ಹುಚ್ಚನಿಗೆ?

## ೨

ಮಧ್ಯಾಹ್ನ, ಊಟವಾಗಿದೆ. ಸಾಲದುದಕ್ಕೆ ಸಿಹಿ ಊಟ ಬೇರೆ, ತತ್ರಾಪಿ ಬೇರೆಯವರ ಮನೆಯಲ್ಲಿ, ಮಲಗದೆ ಮತ್ತೇನು ಮಾಡಬೇಕು ಭಾಸ್ಕರಭಟ್ಟರು?

ಉಂಡಮೇಲೆ ದುಡಿಯುವ ಹೇಡಿಯು ಬ್ರಾಹ್ಮಣನೇ? ಅದೂ ಹರಪನಹಳ್ಳಿಯಲ್ಲಿ! ನಿಂತ ನೀರಿನಂತೆ ಮಲೆತು, ಹರಿಯದೆ ಸರಿಯದೆ ಹೆಪ್ಪುಗಟ್ಟಿ ಬ್ರಾಹ್ಮಣಿಕೆ ಹೊಲಸು ನಾರುವದನ್ನು ನೋಡಬೇಕು ಹರಪನಹಳ್ಳಿಯಲ್ಲಿಯೇ. ನಲವತ್ತೆರಡರ ಚಳುವಳಿಯಲ್ಲಿ ಭೂಗತನಾಗಿ ಹೋಗಿ, ಅಲ್ಲಿಯ ಕರೀಕಲ್ಲುಗುಡ್ಡದ ಗುಹೆಯೊಂದರಲ್ಲಿ ಮಲಗಿ, ಅರವತ್ತೆರಡರಲ್ಲಿ ಎಚ್ಚತ್ತು ಅಲ್ಲಿಗೆ ಬಂದರೂ ಅವನಿಗೆ ಅದಾವ ಭ್ರಾಂತಿಯೂ ಆಗಬೇಕಿಲ್ಲ. ಪ್ರಗತಿಯ ಅಪಾಯವು ಮಾತ್ರ ಅದೆಷ್ಟೂ ಇಲ್ಲ ಈ ಊರಿಗೆ. 'ಅಂದಿಗೂ ಇಂದಿಗೂ ಎಂದೆಂದಿಗೂ ನಾನೊಂದೇ, ಗೋವಿಂದಾ' ಎಂದು ಹಾಡುವುದೇ ಆ ಊರಿನ ವೈಶಿಷ್ಟ್ಯ. ನಿದ್ರಾಹಾರಭಯ ಇತ್ಯಾದಿಗಳನ್ನು ಪರಮಾತ್ಮನು ಕರುಣಿಸಿದಷ್ಟು ಪಡೆದು ಎರಡೂಟಗಳ ಮಧ್ಯೆ ನಿದ್ರೆ, ಎರಡು ನಿದ್ರೆಗಳ ಮಧ್ಯೆ ಊಟ ಮುಗಿಸಿ ಆನಂದದಲ್ಲಿ ಆರೋಗ್ಯವನ್ನು ಕೆಡಿಸಿಗೊಂಡಿದ್ದಿತು ಅಲ್ಲಿಯ ಬ್ರಾಹ್ಮಣಿಕೆ. ಅನ್ನಕ್ಕಾಗಿ ದುಡಿದು ಶೂದ್ರನಾಗಿ ಬಾಳುವದಕ್ಕಿಂತಲೂ ಸಾಲವನ್ನು ತಂದುಂಡು ದುಂಡಾಗಿ ಬ್ರಾಹ್ಣಣಿಕೆಯಲ್ಲಿಯೇ ಮಡಿಯುವದು ಮೇಲಲ್ಲವೇ? 'ಋಣಂ ಕೃತ್ವಾ ಘೃತಂ ಪಿಬೇತ್' ಎಂಬುದೇ ವೇದ, ವಾದ, ಉಪನಿಷತ್ತು, ಉಸಿರು, ಜೀವನದ ಆದಿ ಮತ್ತು ಅಂತ್ಯ ಆ ವಿಪ್ರೋತ್ತಮರಿಗೆ. ಹರಪನಹಳ್ಳಿಯ ಬ್ರಾಹ್ಮಣರ ಮನೆಯ ಇರಿಬೆಗಳು ಕೂಡ ದುಡಿದು ಅರಿಯವು. ಪಾಪ! ಅಂದಮೇಲೆ ಅಡಕಲ ಕೋಣೆಯಲ್ಲಿ ಏಕೆ ಶಯನ

ಹಾಕಬಾರದು ಭಾಸ್ಕರಭಟ್ಟರು, ಶೃಂಗೇರಿ ಸ್ವಾಮಿಗಳು ಆಶೀರ್ವದಿಸಿದ ಶಾಲಿನಿಂದ ಮುಸುಗಿಕ್ಕಿ?

ಗಂಡಸರ ಸುಳಿವಿಲ್ಲವೆಂದು ಪಕ್ಕದ ಮನೆಯ ಪಾರ್ವತಮ್ಮ ಮದುವೆಗಾದ ಮಗಳೊಂದಿಗೆ ಬಂದು ಮಾತಿಗೆ ಕುಳಿತಳು, ಆಕಳಿಸುತ್ತಿದ್ದ ಗೌರಮ್ಮಳೊಟ್ಟಿಗೆ ಎದುರು ಮನೆಯ ಗೋದಾವರೆಮ್ಮ ಧಾವಿಸಿದಳು. ಭಾಗೀರತಿ, ತುಂಗಜ್ಜಿ, ಮರೆಕ್ಕ, ತುಳಸವ್ವ, ರಿಂದಾವನಿ, ತೋಳಪ್ಪಾಚಾರ್ಯರ ಹೆಂಡತಿ ಶ್ರೀರಂಗಮ್ಮ, ವದ್ದಿ ಬಟ್ಟೆ ಮಧ್ವಾಚಾರ್ಯರ ಹೆಂಡತಿ ಭೀಮಕ್ಕ ಮುಂತಾದೆಲ್ಲ ಅತಿಮಾತಿನ ಮಲ್ಲಮ್ಮಗಳು ಮನೆ ತುಂಬ ಕುಳಿತವು.

ಇದೇ ಸಮಯವೆಂದು ಗೌರಮ್ಮ ಹಳೆ ಹುಣಸಿಹಣ್ಣನ್ನು ಹೊರತಂದು ಎಲ್ಲರ ಮುಂದೂ ಕುಪ್ಪೆ ಹಾಕಿದಳು, ಬೀಜಗಳನ್ನು ಆರಿಸಿರೆಂದು.

ಮಹಿಳಾ ಮಂಡಳಿಯ ಕಾರ್ಯಕ್ರಮವು ಸಾಂಗೋಪಾಂಗವಾಗಿ ನೆರವೇರಹತ್ತಿತು. ಅನಭಿಷಿಕ್ತ ಅಧ್ಯಕ್ಷಿಣಿಯಾದ ಗೌರಮ್ಮಳ ಹಿರಿತನದಲ್ಲಿ ಗವರ್ನಮೆಂಟ್ ಡಾಕ್ಟರನ ಗಂಡ ಬಿಟ್ಟ ಮಗಳ ಉಡುಗೆ–ತೊಡುಗೆಗಳ ಬಗ್ಗೆ ದೀರ್ಘ ವಿಮರ್ಶೆ ಕೂಲಂಕಷವಾಗಿ ಆಯಿತು. ಶಾಲೆಗೆ ಹೋಗುವ ಕನ್ನೆಯರ ಸೊಟ್ಟ ಬೈತಲೆ ಸಭೆಯ ಸಿಟ್ಟಿಗೆ ಅನ್ನವಾಯಿತು. ಸಾರಿನಪುಡಿಗೆ ಹೆಚ್ಚು ಕೊತ್ತಂಬರಿ ಬೀಜವನ್ನು ಹಾಕಬೇಕೆಂದು ಸರ್ವಾನುಮತದಿಂದ ಸಾರಲಾಯಿತು. ಸೀದಾ ಅಂಗಡಿಗಳಲ್ಲಿ ಬಿಳೀಗೋದಿಯನ್ನು ಕೊಡುತ್ತಿದ್ದ ಅಪರಾಧಕ್ಕಾಗಿ ಸತ್ತ ಗಾಂಧಿಯನ್ನು ಶಪಿಸಿದ್ದಾಯಿತು. ಪೊಲೀಸ ಸೀತಮ್ಮನ ಗಂಡ ಖಂಡ ತಿನ್ನುತ್ತಾನೆಂಬ ಗುಟ್ಟಿನ ವಾರ್ತೆ ಹೊರಬಂದಿತು. ರಾಜಮ್ಮಳ ಗಂಡನು ಗಂಡುಸೇ ಅಲ್ಲವೆನ್ನುತ್ತಿದ್ದರೂ, ರಾಜಮ್ಮಳಿಗೆ ಅದು ಹೇಗೆ ಎರಡು ಮಕ್ಕಳಾದವು ಎಂಬ ಆಶ್ಚರ್ಯೋದ್ಗಾರವೂ ಬಂದಿತು. ಪುರೋಹಿತರ ಹನುಮಂತ ಇನ್ನೂ ಕೂದಲನ್ನೇ ತೆಗೆಯಲಿಲ್ಲ ಎಂಬ ಆಕ್ಷೇಪ ಸಭೆಯಲ್ಲಿ ಎದ್ದಿತು. ಅಮೇರಿಕೆ; ಇಂಗ್ಲಂಡು ಮುಂತಾದ ಊರುಗಳಿಗೆ (!) ಹೋಗಿ ಬಂದವರ ಜಾತಿ ಉಳಿದಿದಯೇ ಎಂಬ ಪ್ರಶ್ನೆ ಉತ್ತರವಿಲ್ಲದೆ ಗೆದ್ದು ಹೋಯಿತು. ಒಂಬತ್ತು ಮಕ್ಕಳ ತಂದೆಯಾದ ಭಗವಂತರಾಯ ಬತ್ತ ಕುಟ್ಟಲು ಮನೆಗೆ ಬಂದಿದ್ದ ಕೂಲಿಯವಳ ಕೈಯಿಂದ ಅದೇಕೆ ಕಸಬರಿಗೆ ಏಟು ತಿಂದ ಎಂಬುದನ್ನು ವಿವರಿಸಿ ಹೇಳಲಾಯಿತು. ಎಂ.ಎ., ಪಿ.ಎಚ್.ಡಿ ಓದಿದ ವೀರಭದ್ರಪ್ಪನವರು ತಮ್ಮ ಮನೆಯ ಗೋಡೆ, ಬಾಗಿಲುಗಳ ಮೇಲೆಲ್ಲ 'ತಿಗಣಿಗಳು ಸಾಯಲಿ' ಎಂದು ಬರೆದಿರುವುದನ್ನು ನೆನೆನದು ಹೊಟ್ಟೆ ಹುಣ್ಣಾಗುವಷ್ಟು ನಕ್ಕಾಯಿತು.



ನಿದ್ರಾಭಂಗವಾಗಿ ಅಚ್ಚಕ್ಕ ಎಚ್ಚತ್ತಳು, ತುಂಬಿದ ಬಸುರಿ, ನೆಲಕ್ಕೆ ಕೈಯೂರಿ ಎದ್ದು ನೀರಮನೆಗೆ ಹೋಗಿ ಮುಖತೊಳೆದು ಕನ್ನಡಿ ನೋಡದೆ ಕುಂಕುಮವನ್ನಿಟ್ಟುಕೊಂಡಳು. ಎರಡು ಕಾಳು ಹಚ್ಚಿದ ಅವಲಕ್ಕಿಯನ್ನು ಬಾಯಾಡಿಸುತ್ತ ಎದುರಿಗಿದ್ದ ಪಾರ್ವತೆಮ್ಮನ ಮಗಳಿಗಿಷ್ಟು ಕೊಟ್ಟಳು. ನಂತರ ಇಬ್ಬರೂ ಹುಲಿಕಟ್ಟು ಆಡುತ್ತ ಕುಳಿತರು.

ಬುಡುಬುಡುಕೆಯೂ ಒಲ್ಲೆಂದು ಬಿಸುಟಿಹೋಗಿದ್ದ ಭಾಸ್ಕರ ಭಟ್ಟರ ಹಳೆಯ ಹೊಲಸು ಅಂಗಿಯನ್ನು ತಿರುವು ತೊಟ್ಟಿದ್ದ ಬಹಾದ್ದೂರ ಬಾಳಪ್ಪ ಅಂಗಿಯ ಕಿಸೆಯನ್ನು

ಹುಡುಕುತ್ತ ಕಸಬರಿಗೆ ಮೂಲೆಯಲ್ಲಿ ಕುಳಿತು ಆಡುತ್ತಿದ್ದ.

"ಕಣಗಲ ಭಾವ್ಯಾಗ ಯಾರೋ ಒಬ್ಬ ಪಿಂಜಾರಾಕಿ ಬಿದ್ದಳಂತೆ ನೋಡ್ರಿ, ಪಾಪ".

ಗೋದಾವರೆಮ್ಮ ಕನಿಕರದಿಂದ ನುಡಿದಳು.

"ಅಯ್ಯ, ಅದೇನು ಮಹಾಸುದ್ದಿ! ನಮ್ಮ ಬಾಳ ಮೊನ್ನೆ ಪುರೋಹಿತರ ಮನೀ ಮಿಳ್ಳಿನ್ನ ತಂದು ನಮ್ಮ ಭಾವ್ಯಾಗೇ ಹಾಕಿಬಿಟ್ಟ."

ಹಿಂದೆಯೇ ನುಡಿದಳು ಗೌರಮ್ಮ ಹೆಮ್ಮೆಯಿಂದ.

"ಅದಾವುದೋ ಹಳ್ಳೀಲಿ ಮೂರು ರೈತ್ರು ಬಡಿಗೆಗಳಿಂದಲೇ ಹೊಡೆದು ಕೊಂದರಂತೆ ಒಂದು ಹುಲೀನ"

ತೋಳಪ್ಪಾಚಾರ್ಯರ ಪತ್ನಿ ವರ್ತಮಾನ ಪತ್ರಿಕೆಯ ವಾರ್ತೆಯನ್ನು ತಾನು ಕೇಳಿದಂತೆ ಬಿತ್ತರಿಸಿದಳು ತನ್ನದೇ ಆದ ಕನ್ನಡದಲ್ಲಿ.

"ನಾವಲ್ಲೆ ಬಿಡ್ರಿ. ಅದೇನು ದೊಡ್ಡ ಸುದ್ದಿ ಅಂತ ಹೇಳಿದಿರಿ? ಆಡಾಡುತ್ತ ನಮ್ಮ ಬಾಳಪ್ಪ ನಿನ್ನೆ ಖಾಜಾಸಾಹೇಬನ ಆಡಿನ ಮರೀ ಕಾಲು ಕುಂಟು ಮಾಡಿದ".

ಗೌರಮ್ಮ ಪೌರುಷದಿಂದ ಹೇಳಿಕೊಂಡಳು.

"ಬೊಂಬಾಯಿ ಸರ್ಕಸ್ಸಿನಾಗೆ ಒಂದು ಹುಡುಗಿ ಕೈ ಬಿಟ್ಟು ತಂತಿಮ್ಯಾಲೆ ನಡಿತೈತಂತೆ ನೋಡ್ರಿ ಗೌರಮ್ಮ"

ಮರಕ್ಕ ಮೆಚ್ಚುಗೆಯಿಂದ ಮಾತಿಗಾರಂಭಿಸಿದಳು.

"ನೀನು ನಮ್ಮ ಬಾಳ ಮಾಡೋದು ನೋಡಿಲ್ಲ. ಒಮ್ಮೊಮ್ಮೆ ಇದ್ದಲಿ ಚೀಲದ ಮ್ಯಾಲೆ ನಿಂತಿರತಾನ ಗೊತ್ತೆ ಗ್ವಾಡಿ ಹಿಡಕೊಂಡು?"

ಉತ್ತರರೂಪವಾಗಿ ತಿಳಿಸಿದಳು ಗೌರಮ್ಮ.

"ಕಾಫೀ ಹೊತ್ತಾತಮ್ಮ, ಬರ್ತೀನಿ"

ಶ್ರೀ ರಂಗಮ್ಮ ಮೆಲ್ಲನೆ ಎದ್ದು ಮೈ ಮುರಿದಳು.

“ಇಲ್ಲಿ ಕುಂಡ್ರೆ ನಮ್ಮವ್ವ, ನೀ ಬರೋದೆ ಅಪರೂಪ”

ಆಗ್ರಹ ಮಾಡಿದಳು ಮರೆಮ್ಮ.

“ನಮ್ಮ ಗಂಡ್ರು ಬರೋ ಹೊತ್ತಾತಮ್ಮ”

ಪುನ: ತನ್ನ ಕನ್ನಡದಲ್ಲಿಯೇ ನುಡಿದು ಹೊರಟೇಬಿಟ್ಟಳು ಶ್ರೀ ರಂಗಮ್ಮ.

“ಗಂಡ್ರಂತೆ, ಎಷ್ಟು ಮಂದಿ ಇದ್ದಾರೋ ಈಕೀಗೆ!”

ನಗೆಯಾಡುತ್ತ ರಿಂದಾವನಿ ಸುರು ಮಾಡಿದಳು.

“ದೇವರು ನಿಜ ಆಡಿಸೇ ಬಿಟ್ಟ ನೋಡು, ಆಕೀ ಬಾಯಿಂದಾನೆ”

ಕಿಡಿಗೇಡಿ ಭಾಗೀರತಿ ಕೊಂಕು ಮಾತು ಆಡಿ ಬಿಟ್ಟಳು.

“ಆಕಿಮ್ಮೈದುನನೇ ಅಂತೆ ಬ್ಯಾರೆ ಯಾರೂ ಅಲ್ಲ”

ತುಳಸವ್ವ ಆ ಹಳೇ ಹಳಿಸಿದ ಮಾತಿಗೇ ಹೊಸ ಒಗ್ಗರಣೆ ಕೊಟ್ಟು ಹೇಳಿದಳು–ಕೇಳುವ ಮೂರ್ಖರಿಗೆ.

“ಸಾಕು ಮುಗಿಸಿರಿ ಆ ಸುಡುಗಾಡು ಸುದ್ದೀನ. ಯಾರೇನು ನೋಡ್ಯಾರೇನು? ನಮ್ಮ ಬೆನ್ನೇ ನಮಗೆ ಕಾಣೋದಿಲ್ಲ.”

ಅನ್ನುವ ಒಂದು ಪ್ರಾಣಿಯೂ ಆ ಸಭೆಯಲ್ಲಿ ಇಲ್ಲದ ಕಾರಣ, ಮಾತುಗಳು ಮುಗಿಲ ಆ ಬದಿಯವರೆಗೂ ಬೆಳೆದವು. ಅದೇಕೋ ಮಧ್ಯೆ ಪ್ರವಾಹವು ಇತ್ತ ಹರಿದು ಮಾತಿನ ರೀತಿ ಬೇರೆಯಾಯಿತು, ಭಾಸ್ಕರಭಟ್ಟರು ಮುಸುಕು ತೆಗೆಯುವ ಒಳಗಾಗಿ.

“ಆ ಭಾವೀ ಶಾರದಮ್ಮನ ಮಕ್ಕಳು ಎಷ್ಟು ಶಾಣ್ಯಾರಂಡೇವು ನೋಡ್ರಿ, ಮೂರೂ ಪಾಸಾಗ್ಯಾವಂತೆ ಈ ವರ್ಷ.”

ತಿಳಿದೋ ತಿಳಿಯದೆಯೋ ಪಾರ್ವತಮ್ಮ ಈ ಮಹಾಪರಾಧವನ್ನು ಮಾಡಿಯೇ ಬಿಟ್ಟರು.

ಇತರರ ಮಕ್ಕಳ ಸಿಫಾರಸೇ, ಬಾಳಪ್ಪನ ತಾಯಿಯ ಇದಿರಿನಲ್ಲಿ!

“ಹೆಂಡ್ತಿನ್ನ ಏನು ಮಾಡ್ತೀಯೋ ಬಾಳಪ್ಪ?”

ಕುಳಿತಲ್ಲಿಂದಲೇ ಕೂಗಿ ಕೇಳಿದರು ಗೌರಮ್ಮ.

“ಕುತ್ಗಿ ಹಿಚಿಗಿ ಭಾವ್ಯಾಗೆ ಹಾಕ್ತೀನಿ.”

ಇದ್ದಲಿಂದಲೇ ಉತ್ತರಿಸಿದ ಗಿಳಿರಾಮ–ಏಳು ವರ್ಷದ ಬಾಳಪ್ಪ. ತಮ್ಮ ಹೊಣೆಯನ್ನರಿತ ಹೆಂಗಳೆಯರೆಲ್ಲರೂ ಖೊಳ್ಳೆಂದು ನಕ್ಕರು ಗೌರಮ್ಮನ ಆತ್ಮ ತೃಪ್ತಿಗಾಗಿ;



ಸುಮ್ಮನಿದ್ದವರಿಗೆ ನಗಲು ಕಣ್ಣಸನ್ನೆಯಿಂದ ಸೂಚಿಸಿದರು.

ಆಟದಲ್ಲಿ ತೊಡಗಿದ್ದ ಅಚ್ಚಕ್ಕಳಿಗೆ ಮಾತ್ರ ಅದೇಕೋ ಅಂಜಿಕೆಯಾದಂತಾಗಿ ಮುಖವು ಹುಚ್ಚಿಟ್ಟಿತು. ಗರ್ಭದಲ್ಲಿದ್ದ ಪಿಂಡವೂ ಮಿಸುಕಾಡಿತ್ತೇನೋ ಬಾಲಪ್ಪನ ಮಾತು ಕೇಳಿ!

ಚಳಿಯ ನೆವದಿಂದ ಕಂಬಳಿಯನ್ನು ಹೊದ್ದು ಅಚ್ಚಕ್ಕ ಕೂಡಲೆ ಮಲಗಿಯೇಬಿಟ್ಟಳು. ಮಗಳ ಬೆನ್ನ ಮೇಲೆ ಕೈಯಾಡುತ್ತ, ಬದಿಯಲ್ಲಿ ಕುಳಿತ ಭಾಸ್ಕರ ಭಟ್ಟರು, ‘ಏನಾತೆವ್ವ ತಂಗೀ’ ಎಂದು ಎರಡೆರಡು ಬಾರಿ ಕಾತರದಿಂದ ಕೇಳಿದರು. ಅಚ್ಚಕ್ಕ ಏನೇನನ್ನೋ ಹರಕುಮುರುಕಾಗಿ ಕನವರಿಸುತ್ತ ಬಾಳಗಂತೂ ನನ್ನ ಮಗಳ್ನ ಕೊಡೋದು ಬ್ಯಾಡವ್ವಾ. ಕುತ್ಗಿಹಿಚಿಗಿ ಭಾವ್ಯಾಗೆ ಹಾಕ್ತಾನವನು ಎಂದು ಪೇಚಾಡುತ್ತ ಹಾಗೆಯೇ ನಿದ್ರೆಯ ಆಳದಲ್ಲಿ ಇಳಿದುಬಿಟ್ಟಳು. ಅಂದು ಹಾಸಿಗೆಹಿಡಿದ ಅಚ್ಚಮ್ಮ ಹೆರಿಗೆಯಾಗಿ ಮೂರು ತಿಂಗಳವರೆಗೂ ಮೇಲಕ್ಕೇಳಲೇ ಇಲ್ಲ.

೩

“ಅಚ್ಚೀ ಕೂಸು ಮಾತ್ರ ಜತನವ್ವಾ. ಬಾಳನ್ನ ತೊಟ್ಟಿಲ, ಹತ್ತಿರ ಬಿಟ್ಟುಗಿಟ್ಟೀ ನೋಡು. ಅವನಿಗೆ ಬುದ್ಧಿ ಒಂದೇ ರೀತಿ ”

ಭಟ್ಟರಿನ್ನು ಬಾಯಿ ತೆರೆಯುತ್ತಿರುವಾಗಲೆ ಹುರ್ರೆಂದು ಹೊರಬಂದ ಗೌರಮ್ಮ ವಿಶ್ವರೂಪವನ್ನೇ ತಾಳಿ ರಾದ್ಧಾಂತ, ರಸಕಸಿ, ಅಳುವುದು, ಕರೆವುದು. ಮುದ್ದು ಬಾಳನಿಗೆ ಮುತ್ತಿಕ್ಕುವದು. ಎಲ್ಲವನ್ನು ಏಕಕಾಲದಲ್ಲಿಯೇ ಮುಗಿಸಿಬಿಟ್ಟಳು.

“ಮನ್ಯಾಗಿನ ನೀವೆ ಹೀಗೆಲ್ಲ ಅಂದ್ರೆ ಮಂದಿ ಯಾಕೆ ಬಿಟ್ಟಾರು? ಅವನೇನು ಗ್ವಾಡಿ ಕೆರಿತಾನೇ, ಬಟ್ಟೆ ಹರಿತಾನೇ, ಕಲ್ಲು ಮಣ್ಣು ತಿನ್ತಾನೇ, ಏನು ಮಾಡ್ತಾನೆ? ಏನೋ ಕೂಸು, ಚಿಕ್ಕ ವಯಸ್ಸು. ಅಚ್ಚಾದಿಂದ  ಬೆಳೆದದೆ, ಹಾಗದೆ ಅಷ್ಟೆ. ಅದೂ  ಒಂದು ತಪ್ಪೇ ಏನು? ಶ್ರೀ ಕೃಷ್ಣ ಕೂಸಿದ್ದಾಗ ಏನು ಕಡಿಮೆ ಮಾಡಿದನೇನು? ವರಳು ಎಳಕೊಂಡು ಹೋದ, ಬೆಣ್ಣೆ ಕದ್ದು ತಿಂದ, ಕಾಳಿಂಗ ಸರ್ಪ ಕೊಂದ. ರಾಮದೇವರು  ಚಂದ್ರನ್ನ ನೋಡಿ ಅಳಲಿಲ್ಲೇನು ಬೇಕೂ ಅಂತ? ಇವರಕಿಂತ ಕೀಳಾದನೇನು ನನ್ನ ಮಗ ಬಾಳಾ?....”

ಗೌರಮ್ಮಳ ಪಾಂಡಿತ್ಯ ಪೂರ್ಣ ಭಾಷಣದ ಪ್ರವಾಹವು ನಿರರ್ಗಳವಾಗಿ ಹರಿಯಹತ್ತಿತ್ತು. ‘ಸದ್ಯದ ಪರಿಸ್ಥಿತಿ’ಯ ಮೇಲೆ ಸದಾ ಮಾತನಾಡುವ ದೇಶಭಕ್ತನ ಭಾಷಣದಂತೆ.

ಸಿಟ್ಟಿಗೆ ಬಂದ ಭಾಸ್ಕರಭಟ್ಟರು ಕಡೆಗೆ ಕಟ್ಟಿಗೆ ಹಿಡಿದು ಬಂದರು ಗೌರಮ್ಮನ ಮೇಲೆ ಕಣ್ಣು ಕಿಸಿದು. ಗೌರಮ್ಮಳ ಬೆನ್ನಿಗೆ ಬೀಳುತ್ತಿತ್ತು ಭಟ್ಟರ ಕಟ್ಟಿಗೆ. ಕೈಯಲ್ಲಿ ಕೂಸನ್ನು ಹಿಡಿದು ಅಚ್ಚಕ್ಕ ಅಡ್ಡ ಬಂದು ನಿಂತಳು.

ಏನೂ ಅರ್ಥವಾಗದೆ ನಿಂತು ನೋಡುತ್ತಿದ್ದ ಬಾಳಪ್ಪ ಇದ್ದಕ್ಕಿದ್ದಂತೆ ಅವ್ವಾ ಎಂದು ಅಳಲು ಬಾಯಿ ತೆರೆದ ನೀರುಕುದುರೆಯಂತೆ; ಸಂಜೆಯಾದರೂ ಮುಚ್ಚಲಿಲ್ಲ ಕೊನೆಗೆ ಗೌರಮ್ಮಳೇ ಮುಚ್ಚಿದಳು ಸೇರು ಹುರಿಕಡಲೇ, ಮೂರು ಕೊಬ್ಬರಿ ಬಟ್ಟಲು ತುಂಬಿ.

ಈ ಕುರುಕ್ಷೇತ್ರವನ್ನು ಕಂಡು ಬೇಸತ್ತ ಅಚ್ಚಕ್ಕ ತೌರಿನ ಬೋಗದಿಂದ ತೃಪ್ತಿಪಟ್ಟು, ಮರುದಿನವೇ ಗಂಡನ ಮನೆಗೆ ಗಾಡಿಬಿಟ್ಟಳು.

"ಇನ್ನೆರಡು ದಿನ ಇದ್ದು ತೇರು ಮಾಡಿಕೊಂಡು ಹೋಗು ಅನ್ನೇ ಅಚ್ಚಿನ್ನ." ಭಾಸ್ಕರಭಟ್ಟರು ಅಂಗಲಾಚಿದರು. ತಾವು ಎಷ್ಟು ಹೇಳಿದರೂ ತಾಯಿ ಹೇಳಿದಂತಾಗುವುದಿಲ್ಲವೆಂದು ಅವರ ಕಕ್ಕುಲತೆ. ಮಗಳಿಗೆ ಹೇಳಿ ಮುಗಿಸಿದ ಮೇಲೆಯೇ ಹೆಂಡತಿಯ ಬಳಿ ಬಂದರು.

"ಮಂಗಳವಾರ ಮಗಳನ್ನು ಕಳಿಸ್ತಾರೇನೇ ಯಾರಾದರೂ? ಬೆಳಗಾದರೆ ಹುಣ್ಣಿಮಿ. ಊರ ತೇರು, ಗಂಡನ ಮನೀಗೆ ಹೋದವರು ಬರುತಾರೆ ತೌರಿಗೆ ತೇರು ಜಾತ್ರಿ ಅಂತ. ಕೂಸೂನು ಇನ್ನೂ ಮೈ ಹಿಡಿದಿಲ್ಲ. ಅಚ್ಚೀನು ಹಸಿ ಬಾಣಂತಿ. ಅವರ ಮನ್ಯಾಗೆ ಯಾರಿದ್ದಾರೆ ಮಾಡಲಿಕ್ಕೆ ಮಟ್ಟಲಿಕ್ಕೆ? ಅಲ್ಲಿ ಹೋದ ಮ್ಯಾಲ ಏನದೆ, ಕಾಸೂ ಇಲ್ಲ, ಕಟ್ಟೂ ಇಲ್ಲ. ಧಡಭಡ ದುಡಿತಕ್ಕೆ ನಿಲ್ಲಬೇಕು ಸೆರಗು ಕಟ್ಟಿ. ನಾನು ಹೇಳಿದರೆ ಕೇಳಲೇವಲ್ಲದು ಹುಚ್ಚುಹುಡುಗಿ, ಒಂದೇ ಹಠ ಹಿಡಿದಿದೆ. ಹಡದ ತಾಯಿ ನೀನು, ನಿನ್ನ ಮಾತು ತೆಗೆದು ಹಾಕೋದಿಲ್ಲ. ತಿಳೀತೇ? ನೀನೇ ಹೇಳು, ಘಟ್ಟಿ ಮಾಡಿ ಊರ ತೇರು ಆಗೋವರೆಗೂ ಕಳಿಸೋದಿಲ್ಲ ಅಂದ್ರೆ ಕಳಿಸೋದಿಲ್ಲ ಅಂತ ."

ಹನುಮನ ಬಾಲದಂತೆ ಭಟ್ಟರ ಪುರಾಣವು ಮಾತ್ರ ಬೆಳೆಯಿತಾಗಲಿ, ಕತ್ತೆಯ ಮುಂದೆ ಕಾಯಿ ಒಡೆದಂತಾಯಿತು ಫಲಿತಾಂಶ. ಬೆಲ್ಲ ಜಜ್ಜಿದ ಕಲ್ಲಿನಂತೆ ಕುಳಿತಿದ್ದ ಗೌರಮ್ಮ, ಕಡೆಗೆ ಕುಳಿತಲ್ಲಿಂದಲೆ ಮಾತಿನ ಬಾಣಗಳನ್ನು ಬಿಡಹತ್ತಿದಳು–

"ಹೋದರೆ ಆಕಿ ಹೋಗ್ತಾಳೆ, ನನಗೇನಂತೆ. ಬೆಣ್ಣಿ ತುಟ್ಟಿ ಆಗೇದ. ಗುಬ್ಬಿ ಅಂಥಾ ಒಂದು ಲಸಿಲಿಸಿ ಹೆಣ್ಣು ಹಡಕೊಂಡಾಕೀಗೆ ಇಷ್ಟು ಸೊಕ್ಕು ಇದ್ರೆ ಹುಲಿ ಅಂಥಾ ಮಗನ ತಾಯಿ ಆದ ನನಗೆ ಇರಬ್ಯಾಡೇ ಅಹಂಕಾರ. ಹೋಗಲಿ, ಅಗತ್ಯ ಹೋಗಲಿ. ಇವತ್ತಿಗೆ ಕಡಿ ಮಾಡಿಕೋತಾಳಂತೇನು? ಎಂದಿಗಾದರೂ ಆಕೇನೆ ಬಂದಾಳು ಮೂವತ್ತೆರಡು ಹಲ್ಲು ಕಿಸಿದು ಕೇಳಲಿಕ್ಕೆ."



'ಅವ್ವಾ, ಬಾಳಗೆ ನನ್ನ ಮಗಳ್ನ ಮಾಡಿಕೊಂಡು ಉದ್ಧಾರ ಮಾಡು' ಅಂತ. ದುಸುಮುಸು ಮಾಡಿ ಧೂರ್ತ ಗೌರಮ್ಮ ಮಾತನ್ನು ಹದಿನಾರು ವರ್ಷಗಳ ದೂರ ಒಯಿದು ಮುಟ್ಟಿಸಿದಳು.

ಮೊದಲು ದೇವರಿಗೆ, ನಂತರ ತಾಯಿಗೆ, ಕೊನೆಗೆ ತಂದೆಗೆ ನಮಸ್ಕರಿಸಿ, ಅಳಬಾರದೆಂದು ತುಟಿ ಕಚ್ಚಿ ಅಚ್ಚಕ್ಕ ಗಾಡಿಯಲ್ಲಿ ಹತ್ತಿದಳು. ಹೆಬ್ಬೆರಳು ಚೀಪುತ್ತ ಸನಿಯದಲ್ಲಿಯೇ ನಿಂತಿದ್ದ ಬಾಳಪ್ಪನ ಕೈಯಲ್ಲಿ ಐದು ರೂಪಾಯಿ ನೋಟನ್ನಿಕ್ಕಿದಳು.

"ಹೋಗಿ ಬರ್ತೀನಪ್ಪಾ."

ಅಚ್ಚಕ್ಕ ಕಣ್ಣೊರಸಿಕೊಂಡಳು.

"ನನ್ನ ಹೆಣ್ತೀನ್ನೂ ಒಯ್ತೀದೇನು?"

ಗಾಡಿಯಲ್ಲಿ ಮಲಗಿದ್ದ ಮಗುವಿನ ಕಡೆ ಬೆರಳು ತೋರಿಸಿ ಬಾಳಪ್ಪ ಕೇಳಿದ. ಗೌರಮ್ಮಳಿಗೆ ಆನಂದದ ಅತಿರೇಕವಾಯಿತು, ಈ ಚಾಣಾಕ್ಷತನದ ಮಾತುಗಳನ್ನು ಕೇಳಿ. ನಡುರಸ್ತೆಯಲ್ಲಿಯೇ ಲೊಚ ಲೊಚ ಮುದ್ದು ಕೊಟ್ಟಳು. ಆ ಕತ್ತೆಕಿರುಬನಂತಹ ಬಾಳಬಹದ್ದೂರನಿಗೆ.

ಮಗಳೊಟ್ಟಿಗೆ ಗಾಡಿಯಲ್ಲಿ ಕುಳಿತ ಭಾಸ್ಕರಭಟ್ಟರು ಪಿಟ್ಟೆನ್ನಲಿಲ್ಲ. ಹಾದಿಯುದ್ದಕ್ಕೂ ಮುಗಿಲನ್ನು ನೋಡುತ್ತ ಕಾಲ ಕಳೆದರು.

ಬಾಳಪ್ಪನ ಲಾಲನೆ–ಪಾಲನೆಗಳು ಯಥಾವತ್ತಾಗಿ ಸಾಗಿದವು. ತೊಲೆಗಟ್ಟಲೆ ತೂಕ ಹೆಚ್ಚಲಿ ಎಂದರೆ ಮಣಗಟ್ಟಲೆ ಹೆಚ್ಚಹತ್ತಿತ್ತು. ಅವರಿವರು ನೋಡಿದರೆ ದೃಷ್ಟಿ ದೋಷವಾದೀತೆಂಬ ಅಂಜಿಕೆಯಿಂದ, ಗೌರಮ್ಮ ಕತ್ತಲಲ್ಲಿ ಕುಳಿತು ತುತ್ತುಮಾಡಿ ಉಣ್ಣಿಸುತ್ತಿದ್ದಳು ಆ ಎಳೆಯ ಬಾಳನಿಗೆ.

ಬಾಳನ ಆಟದ ಪೆಟ್ಟಿಗೆ, ದೇವತೆಗಳು ಸಹ ಭೂಲೋಕಕ್ಕಿಳಿದು ಬಂದು ನೋಡುವಂತಿದ್ದಿತು. ಈಸ್ಟ್ ಇಂಡಿಯಾ ಕಂಪನಿಯ ತೊಲೆತೂಕದ ಗಟ್ಟಿ ಅರ್ಧಾಣೆಯಿಂದ ಹಿಡಿದು ಸ್ವತಂತ್ರ ಭಾರತದ ಉದ್ದಿನವಡೆ ಆಕಾರದ ತೂತಿನ ಕಾಲಾಣೆವರೆಗೂ ಎಲ್ಲ ಬಗೆಯ ನಾಣ್ಯಗಳೂ ಅದರಲ್ಲಿದ್ದವು. ಹಣದ ಕೊಪ್ಪರಿಗೆಯ ಮೇಲೆ ಕುಳಿತ ಸರ್ಪದಂತೆ ಕಾಯುತ್ತಿದ್ದ ಅವನು. ಆ ನಿಧಿಯನ್ನು ಬಾಳಪ್ಪನ ಬೃಹತ್ ಬಾಯಿಯ ಹೊರಗಡೆ ರಾರಾಜಿಸುತ್ತಿದ್ದ ಮುಂದಿನ ಎರಡು ಮಧ್ಯದ ಹಲ್ಲುಗಳನ್ನು ಕೀಳಲು ಸಾಧ್ಯವಿದ್ದಿತಾದರೂ ಅವನ ಪೆಟ್ಟಿಗೆಯಲ್ಲಿದ್ದ ಕುರುಡು ಕಾಸನ್ನು ಕೀಳಲು ಎಂತಹ ಕಸಬುದಾರಿ ದೇಶಸೇವಕನಿಗೂ ಆಗುತ್ತಿರಲಿಲ್ಲ.

"ಎಷ್ಟು ಶಾಣ್ಯಾ ಅಂತ ತಿಳಿದೀರಿ, ನಮ್ಮ ಬಾಳನ್ನ? ಪ್ರಾಣ ಹೋದರೂನೂ ಒಂದು ಬೊಟ್ಟು ಖರ್ಚು ಮಾಡ್ಯಾನೇನು ಭೂಪ?"

ಗೌರಮ್ಮ ತನ್ನ ಮಗನ ಜಿಪುಣತನವನ್ನೆ ಗುಣವಾಗಿ ವರ್ಣಿಸುತ್ತಿದ್ದಳು ಬಂದವರ ಮುಂದೆಲ್ಲ.

ಭಾರತವನ್ನು ರಚಿಸಿದ ಕೋಳೀವಾಡದ ನಾರಣಪ್ಪನದೇನು ಮಹಾದೊಡ್ಡಸ್ತಿಕೆ? ನಾರಣಪ್ಪ ಭಾರತವನ್ನು ಬರೆದ–ಬಾಳಪ್ಪ ಬರೆಯಲಿಲ್ಲ ಅಷ್ಟೇ! ಇವನದೂ ಕೂಡ' ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ'ಯೇ! ಬಾಳಕುಮಾರನಿಗೆ ಅತಿ ಅವಸರದಿಂದ ಅಕ್ಷರಾಭ್ಯಾಸ ಮಾಡಿಸಿದರು– ಅವನಿಗಿನ್ನೂ ಕೇವಲ ಹತ್ತೇ ವರ್ಷಗಳು ಆಗ. ಅವನು ಶಾಲೆಯಲ್ಲಿ ಪ್ರವೇಶಿಸಿದ್ದು ಅಂದೇ. ಘಟಾಸ್ಫೋಟ ಮಾಡಿಕೊಂಡು ಶಾಲೆಗೆ ಶರಣು ಹೊಡೆದು ಹೊರಬಿದ್ದುದೂ ಅಂದೇ. ಬಲಗೈಯಲ್ಲಿದ್ದ ಬೆಳ್ಳಿಯ ಗಟಿಕಡಗದಿಂದ ಅದಾವದೋ ಆಫೀಸರರ ಮಗಳ ತಲೆಯನ್ನು ಜಜ್ಜಿ ರಕ್ತ ಸುರಿಸಿದ. ಅವನ ಪರಾಕ್ರಮಕ್ಕೆ ಮೆಚ್ಚಿ ಮಾಸ್ತರರು ಅವನಿಗೆ ಕೈಮುಗಿದು, ಕಾಲು ಮುರಿದು ಮನೆಗೆ ಅಟ್ಟಿ ಬಿಟ್ಟರು.ಅಂದಿಗೇ ಕಡೆಯಾಯಿತು ಅವನ ಮತ್ತು ಅಕ್ಷರದ ಸಂಬಂಧ.

"ಸಾಲೀ ತಲೀನೆ ಬೋಳಿಸ್ತು. ನನ್ನ ಮಗ ಬಾಳಗೆ ಯಾಕೆ ಬೇಕು ಓದು? ಇದ್ಯಾ ಕಲಿತು ಅವನೇನು ನೌಕರಿ–ಚಾಕರಿ ಮಾಡಬೇಕಾಗ್ಯಾದೆ? ನನ್ನ ಜೀವಮಾನ ಇರೋತನಕ ಮಂದಿಮನ್ಯಾಗೆ ಅಡಿಗಿ ನೀರು ಮಾಡಿ ಜ್ವಾಪನ ಮಾಡ್ತೀನಿ. ಆಮ್ಯಾಲೆ ಸತೇವ ಹೆಂಡತಿ ಕಾಪಾಡ್ತಾಳೆ ಅಷ್ಟೇ......"

ಗೌರಮ್ಮ ಗಟ್ಟಿ ಗಟ್ಟಿಯಾಗಿ ನುಡಿದು ಸಾಕಾಗುವಷ್ಟು ಸಮಾಧಾನವನ್ನು ಹೇಳಿದಳು, ಒಳಗೊಳಗೇ ನಗುತ್ತಿದ್ದ ಭಾಸ್ಕರಭಟ್ಟರಿಗೆ.

ಎಳೆಗರು ಎತ್ತಾಗದೆ? ಬಾಳಪ್ಪ ಬೆಳೆದು ಎತ್ತರವಾದ, ಎತ್ತೂ ಆದ. ವಯೋಧರ್ಮಕ್ಕೆ ತಕ್ಕಂತೆ ಮೆದಳು ಬೆಳೆಯದಿದ್ದರೆ ಮೀಸೆಯದೇನು ತಪ್ಪು? 'ಹೆಚ್ಚು ಬೆಳೆಯಿರಿ' ಚಳುವಳಿಯ ಪರಿಣಾಮವೋ ಎಂಬಂತೆ ನಿರ್ವಂಚನೆ ಬುದ್ಧಿಯಿಂದ ಸಮೃದ್ಧಿಯಾಗಿ ಬೆಳೆದವು ಮೂಗಿನ ಅಡಿಯಲ್ಲಿ, ಮುಖದ ತುಂಬ ಮೊಡವೆ ಒಡೆದವು. ಮೂಗು ಮುಂದೆ ದಪ್ಪವಾಯಿತು. ಗಂಟಲು ಬೇರೆಯಾಗಿ ಒಂದೇ ಬಾರಿಗೆ ಸಪ್ತಸ್ವರಗಳು ಒದರಹತ್ತಿದವು, ಕೈಕಾಲುಗಳು ಲಟ್ಟಣಿಗೆಯಂತೆ ದುಂಡಾದವು. ಭಲ್ಲೂಕನಂತಾದ ಬಾಳಪ್ಪ ಕೇವಲ ಹದಿನೈದನೆಯ ವರ್ಷದಲ್ಲಿಯೆ.



೪

ಅಮೇರಿಕೆಯಿಂದ ಆಹಾರವನ್ನು ಕಳಿಸಲು ಅವರೇ ಒಪ್ಪಲಿಲ್ಲವೋ, ರಷಿಯಾದಿಂದ ತರಿಸಿಕೊಳ್ಳಲು ಇವರೇ ಅಂಜಿದರೋ, ಅಂತೂ ಇಂತೂ ಅನ್ನಕ್ಕೆ ಮಾತ್ರ ಚಕ್ಕರ್ ಬಿದ್ದಿತು ಭಾರತದ ಬಡಮಕ್ಕಳಿಗೆ.

ಎರಡು ಮೂರು ವಾರಗಳ ಹಿಂದೆಯೇ ಮಂತ್ರಿಗಳು ಜನ್ಮವಿತ್ತಿದ್ದ ಮಾನ್ಯ ಮರಗಳಿಂದ ಬತ್ತವಾಗಲಿ, ಗೋದಿಯಾಗಲಿ ಅದೇಕೊ ಬೆಳೆದು ಬರಲೇ ಇಲ್ಲ. ಇದಕ್ಕೆ ತಕ್ಕ ಪರಿಹಾರೋಪಾಯವೆಂದು ಊರ ಮೇಯರರು, ಊರನ್ನು ಮೇಯುವವರು ಮುಂದೆ ಬಂದು ಸೊಂಟಕಟ್ಟಿ ಚಂಡೀಹೋಮವನ್ನು ಹೂಡಿದರು ಊರೂರುಗಳಲ್ಲಿ.

ನಿತ್ಯವೂ ಬಾಯಿ ಬಡಿದುಕೊಳ್ಳುವವನಿಗೆ ಹೋಳೀಹಬ್ಬ ಬಂದರೆ ಕೇಳುವದೇನಿದೆ? ದೇಶಭಕ್ತರು ನಾ ಮುಂದು ನೀ ಮುಂದೆಂದು ಓಡಿಬಂದರು. ಐದಾರು ಸಾವಿರಗಳ ದೇಣಿಗೆ ತಂದು; ಎಂಟು ಹತ್ತು ನೂರುಗಳವರೆಗೂ ವ್ಯಯ ಮಾಡಿದರು. ದಂಪತ್ತೆಂಬುದೇ ಸಂಪತ್ತು! ಜೋಡಿಗಳಿಗೆ ಔತಣವಾಯಿತು. ತಾಳಿಯೆಂಬ ಉರುಲು ಬಿಗಿದಿದ್ದ ಪ್ರತಿಯೊಂದು ಗಂಡಿಗೂ ಸನ್ಮಾನ, ಮೂರು ಎಳೆದಾರವನ್ನು ಆರಕ್ಕೆ ಹೆಚ್ಚಿಸಿದ ಪ್ರತಿಯೊಂದು ಹೆಣ್ಣಿಗೂ ಪೂಜೆ, ಪತಿದೇವ್ರಕ್ಕೊಂದು ಜೊತೆ ಪಂಚೆ, ಸತೀಭೂತಕ್ಕೊಂದು ಸೀರೆ ಕುಬಸದ ಅರಿವೆ ದೊರೆತವು. ತಿಂದೆಷ್ಟು ಮತ್ತು ಕದ್ದಷ್ಟು ಲಾಡುಗಳು–ಡಾಲ್ಡಾ ಘೃತದಲ್ಲಿ ತಯಾರಾದವು. ಕೈಚಾಚಿದವರಿಗೆಲ್ಲ ಬೆಳ್ಳಿಯ ನಾಲ್ಕಾಣೆ ದಕ್ಷಿಣೆ, ಇಡೀ ಊರೇ ಉಂಡಿತು, ಕೊಂಡಾಡಿತು.

ಭಾಸ್ಕರಭಟ್ಟರಿಗೆ ಬಂದಿದ್ದ ಪಂಚೆ. ಅಂಚಿನಲ್ಲಿ ಕೊಂಚ ಹೋಗಿದ್ದಿತೆಂಬ ಅನುಮಾನದಿಂದ ಗೌರಮ್ಮ ಹಂದರದಲ್ಲಿಯೇ ಗಂಟೆಕಾಲ ಸತ್ಯಾಗ್ರಹಿಸಿ ಬೇರೆ ಪಂಚೆ ಪಡೆದೇ ಮನೆಗೆ ಬಂದಳು.

ಏನಾದರೇನು, ಎಷ್ಟು ಉಂಡರೇನು, ಅಷ್ಟೂ ತಂದರೇನು? ಮನೆಗೆ ಬಂದು ಬ್ರಹ್ಮಚಾರಿ ಬಾಳನನ್ನು ಕಂಡಕೂಡಲೆ ಗೌರಮ್ಮಳಿಗೆ ಇಲ್ಲದ ಅಳು ಉಕ್ಕಿಬಂದಿತು. ಸತ್ತವರ ಮನೆಯಲ್ಲಿ ಅತ್ತಂತೆ ಹಾಡಿಕೊಂಡು ಅಳಹತ್ತಿದಳು.

"ಸಾಸಿವಿಹಳ್ಳಿ ರಾಮಾಚಾರ ಮಗ ಕ್ರಿಷ್ಣನೋ ಭ್ರಷ್ಟನೋ ಯಾರು ಅವನು? ಅವನಿಗಿನ್ನೂ ಹದಿನಾಲ್ಕು ತುಂಬಿಲ್ಲಾ.... ಮೂಲಿಮನಿ ನರಸಪ್ಪಾಚಾರ ಕಡೀ ಮಗ ಆ ಹುಲಿಕುಂಟಿ ಅಯ್ಯನ ಕೆರಿವಳಗೆ ಇನ್ನಾ ಆಕಳಕರ ಆಡಿಸ್ತಾನೇ.... ಈ ಕಿ ಇದ್ದಾಳಲ್ಲ.... ಆ ತೆಲುಗರ ನಾಗರತ್ನಮ್ಮನ ತಮ್ಮ .... ಆ ಕಪಿ ಅಂಥಾದು....

ಆ ಹುಡುಗ ಇನ್ನೂ ಅವರಕ್ಕನ ಹಿಂದೆ ಹೂವೀಳ್ಳಕ್ಕೆ ಬರುತಾದೆ.... ರಾಟೀ ರಂಗಮ್ಮನ ಮೈದುನನ ಮಗ ಏನು ಮಹಾ ದೊಡ್ಡದು.... ಅದಕ್ಕಿನ್ನೂ ದೋತರ ಉಡಿಸ್ತಾಳೆ ಆಕಿ.... ಈ ರಂಡೇಗಂಡರಿಗೆಲ್ಲ ಬೆಳ್ಳಿಪಾವಲಿ ಕೊಟ್ಟರು ಮದುವಿ ಆಗ್ಯಾದೆ ಅಂತ ನನ್ನ ಬಾಳ ಒಬ್ಬ ಏನು ಪಾಪ ಮಾಡಿದ್ದಾನೂ ಅಂತೀನಿ, ಅವನಿಗಿನ್ನೂ ಲಗ್ನ ಇಲ್ಲಾ....ನಾಳೆ ಪಕ್ಷಮಾಸಕ್ಕೆ ಹದಿನೈದೂ ಹೋಗ್ತಾವೆ.... ಬಾಳನ ಹೊಟ್ಯಾಗೆ ಒಂದು ಹುಳಾ ಅಂದರೆ, ಅದನ್ನ, ಅದರ ಮದವೀನ ನೋಡಿ ಸತ್ತೇನಂತೀನಿ. ನನಗೇನು ಭಾಳದಿನಾ ಬದುಕೊ ಆಶಾ ಇಲ್ಲ ಅಂದರೆ ಇಲ್ಲಾ ಆಗ ಸಂತೋಷದಿಂದ ಮಾಡುವಂತ್ರಿ ನನ್ನ ಐದೋನೋಮಿ.... ಬಾಳಗೂ ಒಂದು ಬೆಳ್ಳಿಪಾವಲಿ ಬರದಂತೆ ಮಾಡಿದಿರಿ ನೀವೂ..... ನನಗೆ ಕಾಗಿಪಿಂಡ ಆಗೋದಿಲ್ಲಾ ಅಂದರೆ ಆಗೋದಿಲ್ಲ. ನಿಮಗೇನು ಹತ್ಯಾದ್ಯೆ ಈ ಮನೀದೂ.."

ಗೌರಮ್ಮ ಭಾವಕ್ಕೆ ತಕ್ಕ ದನಿಯಿಂದ ಹಾಡಿ ಹಾಡಿ ಅತ್ತಳು.

ಹೇಗೂ ರಾತ್ರಿಗೆ ಅಡುಗೆ ಇಲ್ಲ. ರಾತ್ರಿಯ ಊಟವೂ ಮಧ್ಯಾಹ್ನವೇ ಮುಗಿದಿದ್ದಿತು. ಮೂಲೆಯಲ್ಲಿ ಮಲಗಿದ್ದ ಗೌರಮ್ಮ ಒಂದಂಗುಲವೂ ಕದಲಲಿಲ್ಲ. ಹಾಸುಗೆಯನ್ನೂ ಹಾಕಿಕೊಳ್ಳಲಿಲ್ಲ.

ಬಾಳಪ್ಪನನ್ನು ಕೇಳುವವರೇ ಇಲ್ಲ. ತಂಬಿಗೆಯಲ್ಲಿ ಕದ್ದು ತಂದಿದ್ದ ಹದಿನೇಳೇ ಎಂಜಲ ಲಾಡುಗಳನ್ನು ಮಾತ್ರ ತಿಂದು, ಹಸಿವೆಯಿಂದ ಬಳಲುತ್ತ ಬಾಳಪ್ಪ ಉಪವಾಸ ಮಲಗಿಬಿಟ್ಟ, ಪಾಪ!

ಭಾಸ್ಕರಭಟ್ಟರ ವಿಷಯ ತಿಳಿದೇ ಇದೆಯಲ್ಲ. ಶೃಂಗೇರಿ ಮಠದ ಶಾಲಿನಿಂದ ಮುಸುಗಿಕ್ಕಿ ಮಲಗಿ ತಮ್ಮಲ್ಲಿಯೇ ತಾವು ಅಂದುಕೊಂಡರು ನಸುನಗುತ್ತ–

'ಈ ಹುಚ್ಚಿ ಖೋಡೀಗೆ ಅದ್ಯಾವಾಕಿ ಹಡದು ಇಟಿದ್ದಾಳೂ ಅಂತೀನಿ, ಒಂದು ಕನ್ಯಾದ ಆಹುತಿ ಬ್ಯಾರೆ ಆಗಬೇಕೇ ಇವನಿಗಾಗಿ? ಯಾವ ಸಿಂಹಾಸನ ಖಾಲಿ ಬೀಳೋದದೆ ಈ ಬಾಳನ ವಂಶ ಬೆಳೀದಿದ್ದರೆ? ಈ ಎಬಡನ ಪೀಳಿಗೀನೂ ಬೆಳೀಬೇಕೆನಪಾ; ಪರಮೇಶ್ವರಾ, ಬೂಮಿಮ್ಯಾಲೆ?'

ಇನ್ನೂ ಏನೇನನ್ನೋ ವಟಗುಟ್ಟಿಕೊಂಡು ಸುಖವಾಗಿ ಮಲಗಿ, ಬೆಳ್ಳಂಬೆಳಗೂ ಒಂದೇ ನಿದ್ರೆ ಮಾಡಿದರು ಭಾಸ್ಕರಭಟ್ಟರು.

ಬೆಳಗಾಯಿತು, ಮಡಿಸೀರೆಯನ್ನು ಬಗಲಲ್ಲಿಕ್ಕಿ ತಾಯಿ ಗೌರಮ್ಮ ಪ್ರಯಾಣ ಬೆಳೆಸಿಯೇ ಬಿಟ್ಟಳು.



"ಅಜ್ಜಿನ್ನ ನೋಡ್ಲಾಗೆ ಆಗ್ಯಾದೆ. ಒಂದೆರಡು ದಿನ ಇದ್ದು ಬರತೀನಪಾ ಬಾಳಾ. ಹಟಗಿಟ ಮಾಡಬ್ಯಾಡ. ನೀನು ಇಲ್ಲೇ ಇರು, ಅವರು ಕೂಳು ಕುಚ್ಚಿಗೋತಾರಲ್ಲ ಹ್ಯಾಗೂನು.

ತಂದೆ ತೋಡಿದ್ದ ಅನ್ನದ ರಾಶಿಯ ಮುಂದೆ ಕುಳಿತಿದ್ದ ಬಾಳಪ್ಪ ಪ್ರಶ್ನೆ ಹಾಕಿದ

"ಅವ್ವ ಎಲ್ಲಿಗೆ ಹೋದಳಪ್ಪಾ?"

"ನಿನಗೆ ಕುತ್ಗಿ ಹಿಚಿಗಿ ಭಾವ್ಯಾಗೆ ಹಾಕಲಿಕ್ಕೆ ಒಂದು ಹೆಣ್ತಿನ್ನ ತರಲಿಕ್ಕೆ ಹೋಗ್ಯಾಳಪಾ, ಇರಲಿ, ತೆಪ್ಪಗೆ ತಿನ್ನು."

೫

ಬ್ರಹ್ಮಾನಂದಶಾಸ್ತ್ರಿಗಳೆಂದರೆ ಯಾರಿಗೆ ತಾನೆ ಗೊತ್ತಿಲ್ಲ?

ಅವರಿರುವ ಊರಷ್ಟೆ ಏಕೆ, ಸುತ್ತಮುತ್ತಲಿನ ಹಲವು ಹಳ್ಳಿಗಳಲ್ಲಿ ಕೂಡ ಅವರ ಹೆಸರನ್ನು ಕೇಳದವರೆ ವಿರಳ, ನೆರೆಹೊರೆಯ ಜಿಲ್ಲೆಗಳಲ್ಲಿಯೂ ಸಾಕಷ್ಟು ಪ್ರಸಿದ್ಧರಾಗಿದ್ದರು. ಹಳ್ಳಿಗಳಲ್ಲಿಯಂತೂ ಹೆಂಗಸರು–ಮಕ್ಕಳಲ್ಲಿ ಬ್ರಹ್ಮಪ್ಪ ಮನೆಮಾತಾಗಿದ್ದರು.

ಶಾಸ್ತ್ರಿಗಳ ಪರಿಚಯವಿಲ್ಲದವರೇ ಇಲ್ಲ ಆ ಪ್ರಾಂತದಲ್ಲಿ. ಆದರೂ ಅವರನ್ನು ಪೂರ್ತಿಯಾಗಿ ಅರಿತವರೇನೋ ಒಬ್ಬರೂ ಇಲ್ಲ. ಹುಚ್ಚನೆಂದು ಹಲವು ಪ್ರಾಪಂಚಿಕರು ಭಾವಿಸಿದ್ದರೆ, ದೇವರ ಮಗನೆಂದು ಹಳ್ಳಿಯ ಹೆಂಗಳೆಯರು ತಿಳಿದಿದ್ದರ. ವರಕವಿಯೆಂದು ಕೆಲವರು ಗುರುತಿಸಿದರು. ಮರಪಂಡಿತನೆಂದು ಕೊಂಚ ಜನರು ಆಡಿಕೊಂಡರು. ಅಂತೂ ಏಳು ಕುರುಡರು ಕೈಯಿಂದ ಕಂಡ ಆನೆಯಾಗಿದ್ದರು ಬ್ರಹ್ಮಪ್ಪ. ಎಲ್ಲರ ದೃಷ್ಟಿಯಲ್ಲಿಯೂ ಅವರವರಿಗೆ ತಕ್ಕಷ್ಟೆ ಆಗಿದ್ದರು.

ದೇಹಕ್ಕೆ ವಯಸ್ಸು ಐವತ್ತರ ಸನಿಹಕ್ಕೆ ಸಂದಿದ್ದರೂ, ಮನಸ್ಸು ಮಾತ್ರ ಇನ್ನೂ ಮಕ್ಕಳದೇ ಆಗಿ ಉಳಿದಿದ್ದಿತು.

ಬ್ರಹ್ಮಾನಂದಶಾಸ್ತ್ರಿಗಳನ್ನು ಹೋಲಿಸಿ ನೋಡಬೇಕು, ಬ್ರಹ್ಮಾನಂದ ಶಾಸ್ತ್ರಿಗಳಿಗೇ! ಅವರದು ಅಕ್ಷರಶ: ಸಾರ್ಥಕ ನಾಮಧೇಯ.

ಕರ್ಣನ ಪಾರ್ಟು ಮಾಡುವ ಅಗಸರ ದುರುಗ, ಹಾರುವಯ್ಯನ ಹಾದಿ ಕಾದು ರಾತ್ರಿ ಹನ್ನೆರಡರವರೆಗೂ ಕುಳಿತು, ಕರ್ಣನ ಮಾತು' ಹೇಳಿಸಿಕೊಂಡೇ ಮನೆಗೆ ಹೋಗಬೇಕು. ಗಾಣಿಗರ ಚೆನಬಸ್ಯ ಊರ್ವಸಿಯ ಹಾಡನ್ನೂ,

ಹೆಜ್ಜೆಗಳನ್ನೂ ಕಲಿಯಲು ಬ್ರಹ್ಮಪ್ಪನ ಬಾಗಿಲಲ್ಲೇ ಅನುಗಾಲವೂ, ಹೊಸದಾಗಿ ಗಾಯತ್ರಿಯನ್ನು ಗಳಿಸಿದ ರಾಯರ ಮಕ್ಕಳಿಬ್ಬರಿಗೂ ತ್ರಿಕಾಲ ಸಂಧ್ಯಾವಂದನೆ ಶಾಸ್ತ್ರಿಗಳೇ ಕಲಿಸಬೇಕು. ಬಿತ್ತಲಿಕ್ಕೆ, ಕೊಯ್ಯಲಿಕ್ಕೆ, ಕಣ ಮಾಡಲಿಕ್ಕೆ ವಾರ–ತಿಥಿಗಳನ್ನು ಬ್ರಹ್ಮಪ್ಪನೇ ಹೇಳಬೇಕು ಒಕ್ಕಣ್ಣ ಹನುಮನಿಗೆ, ತಕರಾರಿನ ಗಂಡ–ಹೆಂಡಿರ ಪಂಚಾಯಿತಿಯೂ ಈ ಮುದಕನ ಅಧ್ಯಕ್ಷತೆಯಲ್ಲಿಯೇ! ಇಬ್ಬರನ್ನೂ ಒಂದು ಕೋಣೆಯಲ್ಲಿ ಕೂಡಿಸಿ, ಇಗೋ ಬಂದೆ ಎಂದು ಹೊರಟ ಪುಣ್ಯಾತ್ಮ, ಅವರಿಗೆ ಮಕ್ಕಳಾದ ಮೇಲೆಯೇ ದರ್ಶನ ಕೊಟ್ಟ ಉದಾಹರಣೆಗಳೂ ಇವೆ. ಕೋಲಾಟದ ಕಂದಮ್ಮಗಳಿಗೆ, ಬಯಲಾಟದ ಹುಡುಗರಿಗೆ, ಫಿರ್ತಿಯ ಮೇಲೆ ಹಳ್ಳಿಗೆ ಬರುತ್ತಿದ್ದ ಚಿಕ್ಕಪುಟ್ಟ ಅಧಿಕಾರಿಗಳಿಗೆ, ಚಿಗುರುವ ಕಿರಿಸಾಹಿತಿಗಳಿಗೆ, ಆರು ವರ್ಷದ ಆಡುವ ಮಕ್ಕಳಿಂದ ಹಿಡಿದು ಅರವತ್ತು ವರ್ಷದ ಬಾಗಿದ ವೃದ್ಧರ ವರೆಗೆ ಎಲ್ಲರಿಗೂ ಶಾಸ್ತ್ರಿಗಳು ಸಿಕ್ಕರೆ ಸಕ್ಕರೆ ಸಿಕ್ಕಂತೆ ಯುದ್ಧಕಾಲದಲ್ಲಿ.

ಚೇಳಿನ ಹಾಡು ಹಾಡು ಬ್ರಹ್ಮಪ್ಪಾ ಎಂದು ಕಾಡುವ ಹೆಣ್ಣು ಮಕ್ಕಳು, ಮುಂಡ್ರಿಗಿ ಮೊಂಡಗ್ಗೈ ಭೀಮರಾಯನ ಲಾವಣಿಯನ್ನು ಕೇಳಲು ಕಾದಿದ್ದ ಗರಡಿ ಹುಡುಗರು, ನಾರಣಪ್ಪನ 'ರವಿವಾರದಲಿ ರವಿಸೂನು' ಹಾಡಿಸಲು ಬಂದಿದ್ದ ಶಾಲೆ ಇನ್ಸ್ ಪೆಕ್ಟರರು, ಸಂಗ್ಯಾ ಬಾಳ್ಯಾನ ಕತೆ ಸವಿಯಲು ಹಾತೊರೆಯುತ್ತಿದ್ದ ಬಸಿವೆಯರು, ಜೈಮಿನಿಯಲ್ಲಿಯ ಜಿಗುಟಿನ ಕಾವ್ಯಕ್ಕೆ ತಲೆದೂಗಬಲ್ಲ ತಲೆಯುಳ್ಳ ಹಳ್ಳಿಮಾಸ್ತರರು, ಮಲಹಣ ಮಲಹಣಿಯರ ಪ್ರಣಯದ ಕತೆಗಾಗಿ ಬಾಯಿಬಿಡುತ್ತಿದ್ದ ರಸಿಕ ವಿರಹಿಗಳು, 'ಘಾಂಧೀ ಗೀತೆ'ಗಾಗಿ ಬಾಯಿಬಿಡುತ್ತಿದ್ದ ಬಾಲವಾಲಂಟರಿಗಳೂ ಅನುಗಾಲವೂ ಶಾಸ್ತ್ರಿಗಳಿಗಾಗಿ ಹೊಂಚು ಹಾಕಿಕೊಂಡೇ ಇರುತ್ತಿದ್ದರು.

ಹಾಡಿದಷ್ಟು ಕಂಠವು ಹದವಾಗುತ್ತಿದ್ದಿತು. ಹೃದಯವು ಹಗುರಾಗುತ್ತಿದ್ದಿತು. ಆನಂದಾವೇಶದಲ್ಲಿ ಮೈಮರೆತು ಮಕ್ಕಳೊಟ್ಟಿಗೆ ಕುಣಿದು ಬಿಡುತ್ತಿದ್ದರು ಕೂಡ ಗೆಜ್ಜೆಕಟ್ಟಿ, ಕರ್ಣನಾಗಿ ಆಳುತ್ತಿದ್ದರು. ಕೃಷ್ಣನಾಗಿ ನಗುತ್ತಿದ್ದರು. ಅಶ್ವತ್ಥಾಮನಾಗಿ ಆರ್ಭಟಿಸುತ್ತಿದ್ದರು. ಆಡಿ ದಣಿದ ಮಗುವಾಗಿ ಮಲಗುತ್ತಿದ್ದರು ಆತ್ಮದ ತೊಟ್ಟಿಲಲ್ಲಿ, ತಾವೇ ಜೋಗುಳ ಹಾಡಿಕೊಂಡು.

"ಲಿಂಗಾಯುತರ ಮನ್ಯಾಗೆ ರೊಟ್ಟಿ ತಿಂದನಂತೆ ಮುಂಡೇಮಗ, ಸೂದ್ರಮನ್ಯಾಗೆ ಉಂಡಮ್ಯಾಲೆ ಇನ್ನೇನು ಉಳೀತು ಅವನ ಬ್ರಾಹ್ಮಣಿಕಿ"



ಬಹಿರಂಗವಾಗಿ ಆಡಿಕೊಳ್ಳುತ್ತಿದ್ದರು. ಬ್ರಹ್ಮಾನಂದಶಾಸ್ತ್ರಿಗಳನ್ನು ಕೆಲವು ಜುಟ್ಟುಧಾರಿ ಬ್ರಾಹ್ಮಣೋತ್ತಮರು. ಈ ಅಪವಾದವನ್ನು ಸ್ವಾಮಿಗಳ ಕಿವಿಯವರೆಗೂ ಒಯ್ಯುವ ಕುಹಕವೂ ನಡೆಯಿತು ಒಂದು ಕಾಲಕ್ಕೆ.

"ಬ್ರಹ್ಮಾನಂದ ಶಾಸ್ತ್ರಿಗಳದೂ ಅವಧೂತ ಮಾರ್ಗ" ಎಂದಾರೋ ಒಬ್ಬಿಬ್ಬರು ಅಂದಮಾತ್ರಕ್ಕೆ ಊರೆಲ್ಲ ನಂಬಲು ಸಾಧ್ಯವೇ?

ಹೆಂಡತಿ ಹೆಡ್ಡತಿಯಾದರೆ, ಗಂಡಸು ನಿಸ್ಸೀಮ ಪ್ರಾಪಂಚಿಕನಾಗಿರುವದೂ, ಗಂಡನೇ ಅವ್ಯವಹಾರಿಯಾದರೆ–ಇದೇ ಹೆಚ್ಚು–ಹೆಂಡತಿಯು ಚಿವುಟುಗೈಯ ಲಕ್ಷ್ಮೀಯಾಗಿರುವದು ಅನೇಕ ಮನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸರ್ವೇಸಾಧಾರಣ ಪರಿಸ್ಥಿತಿ. ಆದರೆ ಬ್ರಹ್ಮಪ್ಪನ ಮನೆ ಎರಡಕ್ಕೂ ತಪ್ಪಿದ್ದಿತು. ಅದನ್ನು ಅವರ ಮನೆ ಅನ್ನುವ ಬದಲು, ಧರ್ಮಛತ್ರವೆಂಬುದೇ ಹೆಚ್ಚು ಸೂಕ್ತವಾಗಿತ್ತು.

" ಈ ಮನೆ ನನ್ನದಲ್ಲಪ್ಪಾ, ಅಲ್ಲಿದೆ–ಮೇಲೆ ನನ್ನ ಮನೆ, ಈ ಮನೆ ಸುಮ್ಮನೆ" ಎಂದು ಹೇಳಿ ಬ್ರಹ್ಮಾನಂದಶಾಸ್ತ್ರಿಗಳು ಬ್ರಹ್ಮಾನಂದವನ್ನು ಅನುಭವಿಸಿದುದು ಅದೆಷ್ಟು ಬಾರಿಯೋ

ಶಾಲೆ ಕಲಿಯುವ ಬಡಹುಡುಗರಿಗೆ, ಹೊರಗಿನಿಂದ ಬರುವ ಮೇಲಧಿಕಾರಿಗಳಿಗೆ, ಸಂತೆಗೆಂದು ಬಂದ ರೈತರಿಗೆ ಎಲ್ಲರಿಗೂ ಶಾಸ್ತ್ರಿಗಳ ಮನೆಯೇ ಸ್ವಂತ ಮನೆ.

ಈ ಎಲ್ಲ ಅನ್ನದಾನ–ಆತಿಥ್ಯಗಳಿಗೆ ಸಾಮಗ್ರಿ ಎಲ್ಲಿಂದ ಅಣಿಯಾಗುತ್ತಿದ್ದಿತೆಂಬುದು ಮಾತ್ರ ಯಾರಿಗೂ ತಿಳಿದಿರಲಿಲ್ಲ. ಶಾಸ್ತ್ರಿಗಳಿಗೂ ಹೊಳೆದಿರಲಿಲ್ಲ. ಪಿತ್ರಾರ್ಜಿತ ಆಸ್ತಿಯೇನೋ ಕೊಂಚ ಇದ್ದಿತು ಎಂದು ಅವರಿವರು ಹೇಳುತ್ತಿದ್ದರು. ಆದರೆ ಶಾಸ್ತ್ರಿಗಳು ಯಾವ ಹೊಲವನ್ನೂ ಕಂಡಿರಲಿಲ್ಲ. ಗದ್ದೆಯನ್ನೂ ನೋಡಿರಲಿಲ್ಲ. ಸಾಗುವಳಿ ಪತ್ರವನ್ನು ಬರೆಸಿರಲಿಲ್ಲ. ಸಹಿ ಹಾಕಿರಲಿಲ್ಲ.ಒಬ್ಬಿಬ್ಬ ರೈತರನ್ನು ಗಿಡ್ಡ ಹನುಮಂತ, ದುರ್ಗದ ಫಕೀರ ಮಲ್ಲ ನೋಡಿದ್ದರು. ಅವರು ತಂದುಕೊಟ್ಟಿದ್ದು, ಇವರು ಉಂಡದ್ದು ಅಷ್ಟೆ.

ಬತ್ತ, ಹುಣಸೆಹಣ್ಣು, ಮೆಣಸಿನಕಾಯಿ, ಅಕ್ಕಡಿ ಕಾಳು, ಸುತ್ತುಮುತ್ತಲಿನ ಹಳ್ಳಿಯಿಂದ ಯಾರೋ ತಂದು ತುಂಬುತ್ತಿದ್ದರು ಈ ಹುಚ್ಚು, ಬ್ರಾಹ್ಮಣನ ಮನೆಗೆ. ಬಂದವರಿಗೆಲ್ಲ ಇಲ್ಲ ಅನ್ನದೆ, ಅನ್ನ ಕಾಣಿಸಲು ಹೇಗೋ ಇದ್ದಳು ಅನ್ನಪೂರ್ಣೆಯಂತಹ ಗೃಹಿಣಿ. ಸಾಕ್ಷಾತ್ ಅಕ್ಷಯಪಾತ್ರೆಯಾಗಿ ಶಾಸ್ತ್ರಿಗಳ ಮನೆಗೊಬ್ಬ ಲಕ್ಷ್ಮಿಯಾಗಿದ್ದಳು. ಮೇಲ್ಗೆಲಸಕ್ಕೆ ನೆರವಾಗಲು ಸದಾ ಸಿದ್ದವಾಗಿದ್ದಳು

ಕೈಗೆ ಬಂದ ಮಗಳು. ಹೀಗೆಯೇ ಸಾಗಲಿ ಶಿವನಾಟವೆಂದು ಶಾಸ್ತ್ರಿಗಳು ಆನಂದವಾಗಿ ಇದ್ದು ಬಿಡುತ್ತಿದ್ದರು.

ಕುಹಕ, ಮೋಸ, ಅಸೂಯೆ, ಚಾಡಿ, ನಿಂದೆ ಮತ್ಸರ–ಮುಂತಾದುವು ಜಗತ್ತಿನಲ್ಲಿ ಇವೆ ಎಂಬುವ ಕಲ್ಪನೆಯೂ ಸಹ ಬಾರದಷ್ಟು, ಭೋಳೇಸ್ವಭಾವ ಶಾಸ್ತ್ರಿಗಳದು. ತಮಗೆ ಮೆಚ್ಚುಗೆಯಾದವರ ಬಗ್ಗೆ ಉತ್ಪ್ರೇಕ್ಷೆಮಾಡಿ ಹೇಳುವ ಅಪರಾಧವನ್ನು ಅವರು ಅನೇಕ ಬಾರಿ ಮಾಡಿರಬಹುದಾಗಲಿ, ಜಗತ್ಪ್ರಸಿದ್ಧ ಕೆಟ್ಟವರನ್ನೂ ಅಲ್ಲಗಳೆದ ಪ್ರಾಣಿಯಲ್ಲ ಅದು.

ಶಾಸ್ತ್ರಿಗಳನ್ನು ವಂಚಿಸುವದು ಹಾಲುಗಲ್ಲದ ಕೂಸನ್ನು ಮೋಸಗೊಳಿಸುವಷ್ಟೇ ಸುಲಭದ ಕೆಲಸ. ಅಂಗಡಿಯಲ್ಲಿ ಕೆಲವು ಸಾಮಾನುಗಳನ್ನು ಕೊಂಡು ಮರಳಿ ಹೋಗುವಾಗ ಪರತುಬಂದ ಚಿಲ್ಲರೆಯನ್ನು ಎಣಿಸದೆಯೇ ಸೊಂಟಕ್ಕೆ ಸೇರಿಸಿ ಹೊರಟೇಬಿಟ್ಟರು ಅವರು ಒಂದು ಬಾರಿ.

"ದುಡ್ಡು ನೋಡಿಕೊಳ್ರೀ, ಹುಚ್ಚು ಸ್ವಾಮೇರೆ."

ಸೆಟ್ಟರು ಗದ್ದುಗೆ ಮೇಲೆ ಕುಳಿತೇ ಕೂಗಿ ಹೇಳಿದರು.

"ನೀನು ಯಾಕೆ ಕಡಿಮೆ ಕೊಡ್ತೀದೆಪಾ ಪಾಪ."

ಶಾಸ್ತ್ರಿಗಳು ತಿರುಗಿ ಸಹ ನೋಡದೇ ಹಾದಿ ಹಿಡಿದರು.

ಜಗತ್ತಿನ ಮಾನವತೆಯಲ್ಲಿ ಅವರ ವಿಶ್ವಾಸವು ವಿಶ್ವದಷ್ಟು ವಿಸ್ತಾರವಿದ್ದಿತು. ಕಡಿಮೆ ಕೊಟ್ಟಿದ್ದ ಸೆಟ್ಟಿಯೇ ಮನೆಗೆ ಬಂದು ಒಂದು ರೂಪಾಯಿ ಕೊಟ್ಟು ಹೋದ ಆಮೇಲೆ.

ತಾಯಿಗಿಂತಲೂ ಚೆಲುವೆ ತಂದೆಗಿಂತಲೂ ಚತುರೆ ಸರಸ್ವತಿ. ತಂದೆಯ ವಿಶಾಲವಾದ ಹಣೆ,ತಾಯಿಯ ನಿಡಿದಾದ ಮೂಗು, ತನ್ನದೇ ಆದ ಕಣ್ಣು, ತಂದೆ–ತಾಯಿಗಳೀರ್ವರಲ್ಲಿಯೂ ಸಹಜಗುಣವಾಗಿದ್ದ ಸಹೃದಯತೆ ಸರಸ್ವತಿಯಲ್ಲಿ ಒಟ್ಟುಗೂಡಿದ್ದವು. ಪ್ರಾಯಕ್ಕೆ ಬರುವ ಮುನ್ನೆಯೆ ಸುಂದರಿಯಾಗಿ ಕಾಣುವ ಬೊಂಬೆ ಅವಳು. ಮನಮೋಹಕವಾದ ರೂಪು, ತಕ್ಕಂತೆ ಗುಣ, ಮನೆಗೆ ಬಂದಿದ್ದ ಮುದುಕರೊಬ್ಬರ ಸ್ವಾರಸ್ಯಮಯ ಭಾಷೆಯಲ್ಲಿ ಹೇಳುವದೆಂದರೆ: ಸರಸ್ವತಿಯು ಗಿಳಿಯು ಕಚ್ಚಿಕೊಂಡು ಹೋಗುವಂತಿದ್ದಳು. ಪದ್ಮಿನಿ ಜಾತಿಯ ಪುತ್ಥಳಿ, ಕುರೂಪಿಗಳಿಗೆ ಹೇರಳವಾಗಿರುವಂತೆ ವಸ್ತ್ರಾಭರಣಗಳೂ ಇಲ್ಲ, ಸ್ವರೂಪಿಗಳಿಗಿರುವಂತೆ ಸೊಕ್ಕು–ಸೆಡವುಗಳೂ ಇಲ್ಲ. ಕಲ್ಲುಸಕ್ಕರೆಯಂತೆ ಎತ್ತ ಸವಿದರೂ ಸಿಹಿಯೆ ಸರಸ್ವತಿಯ ಸದ್ಗುಣ. ಬರೀ ಹಳ್ಳಿಯಲ್ಲಿಯೇ ಬೆಳೆದು ದೊಡ್ಡವಳಾಗಿದ್ದ ಕಾರಣ, ಪಟ್ಟಣದ ಚಾಕಚಕ್ಯ ಅಷ್ಟೊಂದು ಬಂದಿರಲಿಲ್ಲ ಅವಳಿಗೆ.



ಉಳಿಮುಟ್ಟಿದ ವಿಗ್ರಹವಾಗಿಯೇ ಉಳಿದಿದ್ದಳು. ಅವಳೊಂದು ಕಾಡಿನಲ್ಲಿ ಒಡಮೂಡಿದ ಮೂರ್ತಿ, ಉದ್ಭವಲಿಂಗ.

ಬ್ರಹ್ಮಾನಂದಶಾಸ್ತ್ರಿಗಳ ಮನದಂಗಳವೇ ಸರಸ್ವತಿಗೆ ವಿಶ್ವವಿದ್ಯಾಲಯ. ಸಂಧ್ಯಾವಂದನೆಯನ್ನು, ಮುಂಜಿಯಾದಂದಿನಿಂದ ಹಿಡಿದು ಮದುವೆಯಾಗುವ ವರೆಗೂ ಹೇಳಿಸಿಕೊಂಡ ಕಜ್ಜಿಸುಬ್ಬ. ಅವನಿಗೆ ಬರಲಿಲ್ಲ. ಬ್ರಹ್ಮಾನಂದಶಾಸ್ತ್ರಿಗಳಿಗೆ ಮರೆಯಲಿಲ್ಲ. ಮನೆಗೆಲಸದಲ್ಲಿ ತೊಡಗಿ ತಾಯಿಗೆ ನೆರವಾಗುತಿದ್ದ ಸರಸ್ವತಿಗೆ ಎಂದೋ ಕಂಠಗತವಾಯಿತು. ಅವಳಿಗಿನ್ನೂ ಎಂಟೇ ವರ್ಷಗಳು–ಶಬ್ದ, ಸಮಾಸ, ಮಣಿಮಂಜರಿ, ತ್ರಿಸರ್ಗ ಅಮರ, ದೇವರಪೂಜೆ ಚಿಕ್ಕ–ಪುಟ್ಟ ಮಂತ್ರಗಳಾದ ಪುರುಷ, ಅಂಬ್ರಣೀ ಸೂಕ್ತಗಳನ್ನು ಸ್ವರಬದ್ಧವಾಗಿ ಗಂಟೆಹೊಡೆದಂತೆ ಅನ್ನುತ್ತಿದ್ದಳು. ಒಂದು ಸಾಯಂಕಾಲ ಮಂಗಳಾರತಿ ಸಮಯದಲ್ಲಿ, ನಗರೇಶ್ವರ ದೇವಾಲಯದಲ್ಲಿ ಅಶ್ವಧಾಟೀ ದಶಾವತಾರ ಸ್ತುತಿಯನ್ನು ಶಾಸ್ತ್ರಿಗಳು ಸರಸ್ವತಿಯ ಬಾಯಿಯಿಂದಲೇ ಹೇಳಿಸಿದರು. ತಲೆಗೆ ಶಾಲು ಸುತ್ತಿದ್ದ ಅನೇಕ ಅವಿವೇಕಿ ಭಟ್ಟರು, ಶರ್ಮಗಳು ಅಸೂಯೆಯಿಂದ ಕಸಿವಿಸಿಪಟ್ಟರು.

ಮುಪ್ಪಿನ ಮುದುಕರಾದ ಶಂಕರದೀಕ್ಷಿತರು ಸರಸ್ವತಿಯನ್ನು ಅಪ್ಪಿಕೊಂಡು ಎತ್ತಿಕೊಂಡಾಗ, ಅವಳ ಜೊತೆಗಾರ್ತಿಯರು ನಕ್ಕು ನಕ್ಕು ಬಿದ್ದರು. ದೀಕ್ಷಿತರ ಕಣ್ಣು ಆನಂದಬಾಷ್ಪಗಳಿಂದ ತುಂಬಿದವು.

"ಶಾಸ್ತ್ರಿಗಳೇ, ಇವಳನ್ನ ಹೆತ್ತ ನೀವಿಬ್ಬರೂ ಧನ್ಯರು. ಪೂರ್ವಾರ್ಜಿತ ಪುಣ್ಯದ ಫಲ, ಈ ರತ್ನ ನಿಮಗೆ ದೊರೆತಿದೆ...."

ಬಾಯಿತುಂಬ ಹೊಗಳಿ, ಕಣ್ಣು ತುಂಬ ನೋಡಿ, ಎದೆತುಂಬ ಆನಂದಿಸಿ ಸರಸ್ವತಿಯನ್ನು ಬೀಳ್ಕೊಟ್ಟರು ಶಂಕರ ದೀಕ್ಷಿತರು.

"ತಾವು ಆಶೀರ್ವದಿಸಬೇಕು."

ಬ್ರಹ್ಮಾನಂದ ಶಾಸ್ತ್ರಿಗಳು ಅಭಿಮಾನದಿಂದ ಕೇಳಿಕೊಂಡರು.

ದೀಕ್ಷಿತರು ನಗರೇಶ್ವರ ಸ್ವಾಮಿಯ ಕಡೆ ಕೈತೋರಿ ಮನೆಯ ಹಾದಿ ಹಿಡಿದರು.

## ೬

ನವರಾತ್ರಿ, ಸಾಯಂಕಾಲ ಊರಿಗೆ ಊರೇ ಹಬ್ಬದ ಸಂಭ್ರಮದಲ್ಲಿ ತೊಡಗಿದೆ. ದಸರೆ ಬೊಂಬೆಗಳಂತೆ ಸಿಂಗರಿಸಿಕೊಂಡು ಹೆಂಗಳೆಯರು–ಮಕ್ಕಳು ಹೊರಬಿದ್ದಿದ್ದಾರೆ ಅರಿಸಿಣ ಕುಂಕುಮಕ್ಕೆ ಆಹ್ವಾನಿಸಲು. ಆಕಳಿಸಿ ಸಾಕಾಗಿ ಸೋಡಾ

ಕುಡಿದು ಅಡ್ಡಾಡಲು ಗಂಡು ಹುಲಿಗಳು ಹೊರಬಿದ್ದಿವೆ. ಊರಿನಲ್ಲಿ ಎಲ್ಲಿ ನೋಡಿದರೂ ಕಾರ್ಯಕ್ರಮಗಳೇ. ಗೋಪಾಲಕೃಷ್ಣನ ಗುಡಿಯಲ್ಲಿ ಕೃಷ್ಣಪ್ಪನ ಸಂಗೀತ ಕಚೇರಿ, ಮರುಳಸಿದ್ಧಯ್ಯನ ಪಿಟೀಲು, ಸನ್ಮಾನ ಮಂದಿರದಲ್ಲಿ ಈಶ್ವರಗೌಡರ ಉಪನ್ಯಾಸ, ವೀರಶೈವ ಪ್ರಾಥಮಿಕ ಶಾಲೆಯಲ್ಲಿ ಶಿವಪುರಾಣ, ಸಾಂಬಮೂರ್ತಿ ಮೈದಾನದಲ್ಲಿ ಸೋಸಿಲಿಸ್ಟರ ಸಭೆ, ಆಜಾದ್ ಕ್ಲಬ್ಬಿನಲ್ಲಿ ಮೂರಲೆ ಇಸ್ಪೀಟು. ಇಷ್ಟು ಕಾರ್ಯಕ್ರಮಗಳಿಗೆ ಜನರು ಇದ್ದು, ರಸ್ತೆಯಲ್ಲಿ ನಿಂತು ಬರಹೋಗುವವರನ್ನು ಹರಿದು ತಿನ್ನುವಂತೆ ನೋಡಲು, ಸಾಧ್ಯವಾದರೆ ಢಿಕ್ಕಿ ಹೊಡೆಯಲು ವಿದ್ಯಾರ್ಥಿಗಳು ಬೇರೆ.

ಕನ್ಯಕಾಪರಮೇಶ್ವರೀ ದೇವಾಲಯದಲ್ಲಿ ಕೀರ್ತನ ಕೇಸರ ಜೂಟೂರು ನಾಗಮಯ್ಯ ಪಂಡಿತರ ಹರಿಕಥಾ ಕಲಾಕ್ಷೇಪವೆಂದು ಮುಂಚಿತವಾಗಿಯೇ ತೆಲುಗು ಕರಪತ್ರಗಳಿಂದ ಪ್ರಕಟಿಸಲ್ಪಟ್ಟಿದ್ದಿತು. ಟ್ರಸ್ಟಿಗಳಾದ ಗುಗ್ಗುಳ್ಳ ಗುರುನಾಥಸೆಟ್ಟರೇ ಸ್ವತ: ನಿಂತು ಎಲ್ಲ ಏರ್ಪಾಟುಗಳನ್ನೂ ಮಾಡಿದ್ದರು. ಪಂಡಿತರ ಊರಿನ ವರೆಗೂ ತಮ್ಮ ಹೆಡ್ ಗುಮಾಸ್ತನನ್ನು ಕಳುಹಿ, ಮಾತುಕತೆ ಮುಗಿಸಿ, ಅವರ ಎಲ್ಲ ಷರತ್ತುಗಳಿಗೂ ಒಪ್ಪಿ, ಅಡ್ವಾನ್ಸ್ ಹಣ ಕಳಿಸಿ, ಒಂದು ಸಪ್ತಾಹವಾದರೂ ಆಗಲೇಬೇಕೆಂದು ಹಟ ಹಿಡಿದಿದ್ದರು. ಇದಕ್ಕೆ ಬೇರೆ ಕಾರಣವೂ ಇದ್ದಿತು.

"ವೈಶ್ಯರು ಮಾಡಿಸುವ ತೆಲುಗು ಹರಿಕಥೆಗೆ ಯಾರು ಬರುತ್ತಾರೆ?" ಎಂದು ಯಾರೋ ಲಿಂಗಾಯಿತರು, ಬ್ರಾಹ್ಮಣರ ಹೋಟೆಲಲ್ಲಿ ಕುಳಿತು ಕಾಫಿ ಕುಡಿಯುತ್ತಿರುವಾಗ, ಒಬ್ಬ ಮುಸಲ್ಮಾನನ ಮುಂದೆ ಅಂದಿದ್ದರೆಂದು ಒಬ್ಬ ಕ್ರಿಶ್ಚಿಯನ್ನರು ಹೇಳಿದ್ದರಂತೆ, ಗುಗ್ಗುಳು ಗುರುನಾಥ ಸೆಟ್ಟರು ಮೀಸೆಯ ಮೇಲೆ ಕೈ ಹಾಕಿ ಹಟ ತೊಟ್ಟರು. ಅಂದುಕೊಂಡಂತೆ ಎಲ್ಲ ಏರ್ಪಾಟುಗಳನ್ನೂ ಮಾಡಿಯೇಬಿಟ್ಟರು.

ನವರಾತ್ರಿಯ ಪ್ರತಿಪದ, ನಾಗಮಯ್ಯ ಪಂಡಿತರ ಬಾಯಿಂದ ತೆಲುಗು ಕನಕಾಂಗಿ ಕಲ್ಯಾಣವನ್ನು ಕೇಳಲು ಊರಿಗೆ ಊರೇ ಬಂದು ಕನ್ಯಕಾಪರಮೇಶ್ವರಿ ಗುಡಿಗೆ ಮುತ್ತಿಗೆ ಹಾಕಿತು. ಅವೇಸರದಲ್ಲಿ ಸಂಜೆ ಅಡುಗೆ ಮುಗಿಸಿ ಓಡುತ್ತ ಬಂದ ಸುಮಂಗಲೆಯರು, ಹಾಕಿ ಆಟವನ್ನು ಅರ್ಧಕ್ಕೆ ಮುಗಿಸಿ ಕೈಬಡಿಗೆಗಳ ಸಮೇತ ಬಂದ ಯುವಕರು, ರಾತ್ರಿ ಊಟದ ಕಾಟವಿಲ್ಲದೆ ಸಾಕಷ್ಟು ನೀರು ಕುಡಿದು ಬಂದ ವಿಧವೆಯರು, ಹರಕು ಬಟ್ಟೆಯ ರಸಿಕರು ಎಲ್ಲರೂ ಪೈಪೋಟಿಯಿಂದ ಜಾಗೆ ಹಿಡಿದು ಗಂಟೆಗಳ ಮುಂಚಿತವಾಗಿಯೇ ಕುಳಿತರು.



ಕರ್ನಾಟಕ ಸಂಘದ ನಾಡಹಬ್ಬದ ಸಭೆಯಲ್ಲಿ "ಚಿಕ್ಕ ಕತೆಗಳ ದೊಡ್ಡತನ"ದ ಮೇಲೆ ಇದ್ದೂರ ದಡ್ಡ ಭಾಷಣಕಾರರೇ ದೊಡ್ಡ ಭಾಷಣ ಸುರು ಮಾಡಿದರು. ಸಭೆ ಆಕಳಿಕೆಗಳಿಂದ ತುಂಬಿಹೋಯಿತು. ಒಬ್ಬೊಬ್ಬರೇ ಹೊರಜಾರಿ, ಮುಂದೆ ಸಿಕ್ಕುಬಿದ್ದಿದ್ದ ಕೆಲವು ಖಟ್ಟಾ ಕನ್ನಡಿಗರು ಕೂಡಾ ಪಾರಾಗಿ, ತೆಲುಗು ಹರಿಕಥೆಯನ್ನು ಕೇಳುವ ಅಧೋಗತಿಗೆ ಬಂದಿಳಿದರು.

ಕನ್ಯಕಾಪರಮೇಶ್ವರೀ ದೇವಾಲಯದ ಓಣಿಯೂ ತುಂಬಿಹೋಗಿದ್ದಿತು.

"ಬೇಕಾದರೆ ಹೋಗಿ ಬಾ ಸರಸ್ವತೀ ಗುಡಿಗೆ."

ಅಚ್ಚಮ್ಮ ಜಡೆ ಹಾಕುವುದನ್ನು ಮುಗಿಸಿ, ಎಡಗೈಯಿಂದ ಗಲ್ಲ ಹಿಡಿದು ಮುಂದೆ ಬಾಚಿ ನುಡಿದರು. ಗುಡಿಗೆ ಹೋಗಬೇಕೆಂಬ ಆಶೆ ಏನೋ ಸಾಕಷ್ಟು ಇದ್ದಿತು ಸರಸ್ವತಿಗೆ, ಆದರೆ ಸದಾಕಾಲವೂ ದುಡಿಯುತ್ತಿರುವ ತಾಯಿಯೊಬ್ಬಳನ್ನೆ ಮನೆಯಲ್ಲಿ ಹೆಣಗಾಡಲು ಬಿಟ್ಟು, ತಾನೊಬ್ಬಳೆ ಹರಿಕಥೆಗೆ ಹೋಗುವುದು ಅವಳ ಮನಸ್ಸಿಗೆ ಸರಿ ಎನಿಸಲಿಲ್ಲ.

"ನೀನೂ ಬಂದರೆ...."

ಸರಸ್ವತಿ ಕೆಳಗೆ ಮುಖಮಾಡಿ ಬಲಗಾಲ ಹೆಬ್ಬೆರಳಿನಿಂದ ನೆಲವನ್ನು ಚಿಮ್ಮಿದಳು.

"ನಾನು ಬಂದ್ರೆ ಅಡುಗಿ ಆಗಬೇಕಲ್ಲಮ್ಮಾ.... ಹೋಗು. ಮುಖ ತೊಳಕೊಂಡು ನಡಿ ನೀನು, ನಾನೆಲ್ಲ ಮಾಡಿಕೋತೀನಿ ಮನಿಕೆಲಸ, ಚಿಕ್ಕಪುಟ್ಟ ಹುಡಿಗೇರು ನೀವು, ನೋಡೋದು, ನುಡುಸೋದು ಇರತದೆ.... ನಂದೇನು."

"ನಾನೂ ಒಲ್ಲೆಬಿಡಮ್ಮ, ಗುಡ್ಡದಷ್ಟಿದೆ ಮನೆಕೆಲಸಾನೆ."

ಅದೆಷ್ಟೂ ನಿರಾಶೆ–ಅಸಂತೋಷಗಳನ್ನು ಹೊರತೋರದೆ ಸರಸ್ವತಿಮನೆ ಕೆಲಸದಲ್ಲಿ ಮುಳುಗಿಬಿಟ್ಟಳು.

"ಹುಚ್ಚು ಹುಡುಗಿ...."

ಏನೇನನ್ನೋ ಮನದಲ್ಲಿಯೇ ಅಂದುಕೊಳ್ಳುತ್ತ ಅಚ್ಚಮ್ಮ ಅಡುಗೆ ಮನೆಗೆ ಧಾವಿಸಿದಳು.

ಜೂಟೂರು ನಾಗಮಯ್ಯ ಪಂಡಿತರನ್ನು ಕರೆಯಲು ಗುಂತಕಲ್ಲಿಗೆ ಹೋಗಿದ್ದ ಜೀಪು–ಕಾರು ಬಹು ಹೊತ್ತಿನ ನಂತರ ಅವರಿಲ್ಲದೆಯೇ ಮರಳಿ ಬಂದಿತು. ಗುಗ್ಗುಳ್ಳ ಗುರುನಾಥಸೆಟ್ಟರ ಮುಖವು ಒಮ್ಮೆಲೆ ಪೆಚ್ಚಾಯಿತು. ಕುಸಿದೇಬಿದ್ದರು ಕುಳಿತಲ್ಲಿಯೇ. ಅವರ ಹೆಡ್ ಗುಮಾಸ್ತನಾದರೂ ಸೆಟ್ಟರನ್ನು ಕಂಡಕೂಡಲೆ ಏನೂ ಹೇಳಲೇ ಇಲ್ಲ.

ಜನಸಂದಣಿಯು ಕಾರಿಗೆ ಮುತ್ತಿಗೆ ಹಾಕಿತು.

"ಏನಂತೆ, ಏನಂತೆ, ಯಾಕೆ ಬರಲಿಲ್ಲ?"

ಗಾಳಿಯ ತುಂಬ ಇದೇ ಪ್ರಶ್ನೆ.

ಹೆಡ್ ಗುಮಾಸ್ತರು ಉಗ್ರಾಣದ ಕೋಣೆಯಲ್ಲಿ ಹೋಗಿ ಕುಳಿತರು. ಗುರುನಾಥಸೆಟ್ಟರೂ ಹಿಂಬಾಲಿಸಿದರು. ಕಾಲುಗಂಟೆ ಕಾಲ ಗುಜುಗುಜು ಸಾಗಿತು. ಸೆಟ್ಟರ ಜಂಘಾಬಲವೇ ಕುಗ್ಗಿ ಹೋಯಿತು ವಾರ್ತೆಯನ್ನು ಕೇಳಿ, ಜ್ವರ ಬಂದಿದೆಯೆಂದು ಹೇಳಿ ಮುಖತಪ್ಪಿಸಿ ಮುಸುಗಿಕ್ಕಿ ಮಲಗಿ ಬಿಟ್ಟರು, ಮೂಗು ಕುಯಿದಂತಾಗಿದ್ದಿತು ಅವರಿಗೆ.

ಹರಿಕಥಾಕಾಲಕ್ಷೇಪಕ್ಕಾಗಿ ಬಂದಿದ್ದವರಿಗೆಲ್ಲ ವ್ಯಥಾಕಾಲಕ್ಷೇಪವಾಗ ಹತ್ತಿತು. ಅಲ್ಲಲ್ಲಿ ಗುಂಪುಗಳಾಗಿ ನಿಂತು ಮಾತನಾಡಹತ್ತಿದರು. ನಾಗಮಯ್ಯ ಪಂಡಿತರು ಬಾರದಿದ್ದ ಬಗ್ಗೆ ಅನೇಕ ಸ್ವಾರಸ್ಯಮಯ ಊಹಾಪೋಹಗಳು ಬಂದವು ಅಲ್ಲಿ ನೆರದವರ ಬಾಯಿಂದ.

"ವೈಶ್ಯರೆಲ್ಲ ಕೈ ಬಿಚ್ಚತಾರೇನೋ? ಇವರು ಹಣ ಕೊಟ್ಟಿಲ್ಲ. ಅವರು ಬಂದಿಲ್ಲ, ಹರಿಕಥೀನೂ ಉದ್ರಿ ಗಿಟ್ಟಸಲಿಕ್ಕೆ ನೋಡ್ಯಾನೆ ಗುಗ್ಗುರಿಸೆಟ್ಟಿ."

ಬೀಡಿಯನ್ನು ಹಲ್ಲಲ್ಲಿ ಕಚ್ಚಿ ತಿಪ್ಪೇರುದ್ರ ನುಡಿದೇ ಬಿಟ್ಟ ಗೇಲಿ ಮಾಡುತ್ತ.

"ಅವನೇನು ಅವನಪ್ಪ ರಾಮಸೆಟ್ಟೀದು ಕೊಡೋದು ಕೆಟ್ಟಾದೆ? ಊರಾಗೆ ಎಬ್ಯಾನೆ ಅಂಗಡೀಗಿಷ್ಟು ಅಂತ, ಹಾವು ಒಡದು ಹದ್ದಿಗೆ ಹಾಕಲಿಕ್ಕೆ ಅವನದೇನಂತೆ ತಕರಾರು?"

ಪುರೋಹಿತ ಲಕ್ಷ್ಮಣಾಚಾರಿ ಚಾಣಾಕ್ಷನಂತೆ ಮಾತುಮುಂದೆಳೆ.

"ಇಲ್ಲೋ, ಅವರದು ಅವರಿಗೆ ಕೊಟ್ರೆ ನನಗೇನು ಉಳಿತು ಅಂತ ಆ ಸೆಟ್ಟೀ ಲೆಖ್ಖಾ."

ಅಕ್ಕಸಾಲಿಗರ ವಿರುಪಾಕ್ಷಿ ತನ್ನ ದೃಷ್ಟಿಕೋನದಿಂದ ಹೇಳಿದ "ಪಂಡಿತರಿಗೇನೋ ಜ್ವರ ಬಂದಿದೆಯಂತೋ."

"ನಿನ್ನ ತಲಿ, ಅವರ ಹೆಂಡತಿಗಂತೋ ಕಾಯಿಲೆ."

ಹೆಂಡತಿ! ನಾಗಮಯ್ಯ ಪಂಡಿತರಿಗೆ ಹೆಂಡತಿ ಎಲ್ಲಿದ್ದಾಳೋ? ಅವರು ರೆಜಿಸ್ಟರ್ಡ್ ಬ್ರಹ್ಮಚಾರಿಗಳು."

"ಹಾಗಾದರೆ ಅವರ ಮಗಳಿಗೆ ಇರಬಹುದು. ಅಂತೂ ಯಾರಿಗೋ ಜಡ್ಡು ಅಂತ ಅಂದ್ರಪಾ?"



"ಜಡ್ಡಿಲ್ಲ ಜಾಪತ್ರಿಲ್ಲ ಬಿಡೋ, ಮದ್ರಾಸಿನಾಗೆ ಯಾರೋ ಮಂತ್ರಿಗಳ ಮನ್ಯಾಗೆ ಲಗ್ನ ಅಂತೆ, ಅದಕ್ಕೆ ಇಲ್ಲಿಗೆ ಚಕ್ರ ಹಾಕಿ ಅಲ್ಲಿಗೆ ಹೋಗ್ಯಾನೆ."

"ದುಡ್ಡಿನ ಆಶೆ ಯಾರಿಗೆ ಇಲ್ಲೋ? ನೀನು ಬಿಡ್ತೀಯಾ ಬರೋದಿದ್ರೆ?"

ಮುತ್ತಿನಂತಹ ಮಾತನ್ನಾಡಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಎಲ್ಲರ ಬಾಯನ್ನೂ ಕಟ್ಟಿಸಿದರು.

ಮರುದಿನವೆ ವರ್ತಮಾನ ಪತ್ರಿಕೆಗಳಿಂದ ಗುಟ್ಟು ರಟ್ಟಾಗಿ ಹೋಯಿತು.

ಕೀರ್ತನಕೇಸರಿ ಸಾಧು ಜೂಟೂರು ನಾಗಮಯ್ಯ ಪಂಡಿತರ ಹೋಳ್ಡ್ ಆಲ್‌ನಲ್ಲಿದ್ದ ಬ್ರಾಂದಿ ಬಾಟ್ಲಿ, ಕೂಲಿಯವನ ಅಜಾಗರೂಕತೆಯಿಂದ ಗುಂತಕಲ್ಲು ರೈಲ್ವೆ ಪ್ಲಾಟ್ ಫಾರ್ಮ್‌ದಲ್ಲಿ ಬಿದ್ದು ಒಡೆಯಿತು. ಅದರ ಪರಿಣಾಮವಾಗಿ ಶ್ರೀಪಂಡಿತರು ಪಾನಪ್ರತಿಬಂಧ ಪೋಲೀಸರ ವಶಕ್ಕೆ ಹೋಗಿ ಆ ರಾತ್ರಿ ಶ್ರೀಕೃಷ್ಣ ಜನ್ಮಸ್ಥಾನದಲ್ಲಿ ಪವಡಿಸಿದರೆಂಬ ವಾರ್ತೆ ಊರಿನಲ್ಲೆಲ್ಲ ಹಬ್ಬಿಬಿಟ್ಟಿತು.

ಹರಿಕಥಾ ಇಲ್ಲವೆಂದು ಹೇಳಿದರೂ ಸೇರಿದ ಜನರೇನೋ ಕನ್ಯಕಾ ಪರಮೇಶ್ವರೀ ದೇವಸ್ಥಾನದಿಂದ ಹೊರಬೀಳಲಿಲ್ಲ.

ಮನೆಯ ಹಾದಿ ಹಿಡಿದಿದ್ದ ಬ್ರಹ್ಮಾನಂದಶಾಸ್ತ್ರಿಗಳಿಗೆ ಕೆಲವು ಹುಡುಗರು ಗಂಟೇ ಬಿದ್ದರು.

"ನೀನೇ ಮಾಡು ತಾತಾ, ಹರಿಕತೀನ."

ಶಾಸ್ತ್ರಿಗಳನ್ನು ಹುಡುಕುತ್ತಾ ಕತ್ತಲಲ್ಲಿಯೇ ಬಂದರು ಭೀಷ್ಮಾಚಾರ್ಯರಂತಹ ಶಂಕರ ದೀಕ್ಷಿತರು.

"ಬ್ರಹ್ಮಪ್ಪಾ, ಎಲ್ಲಿದ್ದಾಳೆಲ್ಲಿ ನಿನ್ನ ಮಗಳು?"

ಹತ್ತೇ ನಿಮಿಷಗಳು ಸಂದವು. ಬಣ್ಣ ಮಾಸಿದ ಹಳೆ ದಟ್ಟಿಯೊಂದನ್ನುಟ್ಟು ಪುಟ್ಟ ಸರಸ್ವತಿ ಆ ಮಹಾಸಭೆಯ ಮುಂದೆ ನಿಂತಿದ್ದಳು.

ವೃದ್ಧ ದೀಕ್ಷಿತರು ಎರಡೇ ಮುತ್ತಿನಂತಹ ಮಾತುಗಳನ್ನು ಪ್ರಾಸ್ತಾವಿಕ ಭಾಷಣವಾಗಿ ಹೇಳಿ, ಬಾಲಸರಸ್ವತಿಯ ಕೊರಳಲ್ಲಿ ಚಿಕ್ಕೊಂದು ಹೂಮಾಲೆಯನ್ನು ಹಾಕಿದರು.

"ಅದೇ ಕನಕಾಂಗಿ ಕಲ್ಯಾಣದ ಕತೆಯನ್ನು ಕನ್ನಡದಲ್ಲಿ ಕೇಳಬೇಕು."

ಸಭೆಗೆ ಕೈ ಮುಗಿದು ಶಂಕರ ದೀಕ್ಷಿತರು ಕುಳಿತರು.

ಸರಸ್ವತಿ ಪ್ರಸನ್ನಳಾದಳು. ವೀಣಾಪಾಣಿಯಾದ ವಾಣಿಯು ಬಹಿರ್ಮುಖಳಾಗಿ ನುಡಿಸಿದಳು. ಪುಟ್ಟದಾದ ಪೀಠಿಕೆಯಿಂದ ಪ್ರಾರಂಭವಾಗಿ ಕ್ಷಣೇಕ್ಷಣೇ ಕಳೆಗಟ್ಟ

ಹತ್ತಿತು. ಇದೇನು ಹುಡುಗಾಟಿಕೆಯೆಂದು ಹಾಸ್ಯ ಮಾಡಿದ ಹಲವರು ತುಸು ಹೊತ್ತಿನಲ್ಲಿಯೇ 'ಮಲಗಿ ಪರವಾದರದಿ ಪಾಡಲು' ಎಂಬುದನ್ನು ಸಾಹಿತ್ಯಲೋಪವಿಲ್ಲದೆ ಶಂಕರಾಭರಣದಲ್ಲಿ ಎತ್ತಿಕೊಂಡು ಪಂಚರಾಗಗಳಲ್ಲಿ ಹಾಡತೊಡಗಿದಳು. ಧನ್ಯಾಸಿ, ಮೋಹನಗಳಲ್ಲಿ ಮೂರ್ಛನ ತೋರಿ, ಐವತ್ತೊಂಬತ್ತನೆಯ ಮೇಳಕರ್ತವಾದ ಧರ್ಮವತಿ ಆಲಾಪನದಲ್ಲಿ ವಿಸ್ತಾರ ತೆಗೆದುಕೊಂಡು, ತಾರಸ್ಥಾಯಿ ಗಾಂಧಾರದಿಂದ ಮಧ್ಯ ಪಂಚಮದ ವರೆಗೂ ಕ್ರಮವಾಗಿ ಒಂದೊಂದೇ ಸ್ವರಸ್ಥಾನವನ್ನು ಜಾರಿನಿಂದ ಇಳಿಸಿದಾಗ, ಕನ್ಯಕಾ ಪರಮೇಶ್ವರೀ ದೇವಾಲಯದ ಕಲ್ಲುಕಂಬಗಳೂ ತಲೆದೂಗಿದವು.

ಶಂಕರ ದೀಕ್ಷಿತರ ಕಣ್ಣಿಂದ ಆನಂದಭಾಷ್ಪಗಳು ಧಾರೆಧಾರೆಯಾಗಿ ಹರಿಯುತ್ತಿದ್ದವು.

ರಾಗಮಾಲಿಕೆಯು ಮಧ್ಯಮಾವತಿಯಲ್ಲಿ ಮುಗಿಯಿತು.

ಕತೆಯು ಪ್ರಾರಂಭವಾಯಿತು. ಕೃಷ್ಣನ ಕುಟಿಲ ತಂತ್ರ, ಬಲರಾಮನ ಕೋಪ ಸಂತಾಪಗಳು, ಘಟೋತ್ಕಜನ ಮಾಯಾಬಜಾರ, ಕನ್ಯಾಮಣಿಯ ಅಪಹರಣ, ಒಂದೊಂದೇ ಮನ:ಚಕ್ಷುವಿಗೆ ಗೋಚರವಾಗಿ, ಸ್ಪಷ್ಟವಾಗಿ ಮೂಡಿದವು ಶ್ರಾವಕರ ಚಿತ್ತಫಲಕದ ಮೇಲೆ, ಕಟ್ಟಕಡೆಗೆ ಕಲ್ಯಾಣವಾಯಿತು. ಮಂಗಳ ಹಾಡಿದಳು ಸರಸ್ವತಿ.

ಸಭೆಗೆ ಸ್ಮೃತಿ ಬಂದಿತು, ಆರತಿ ತಟ್ಟೆಗೆ ಯಾರೋ ದೂರದಿಂದ ರೂಪಾಯಿ ಎಸೆದರು. ಮೂಲೆಮೂಲೆಗಳಿಂದ ಕಾಸುಗಳು ಬೀಸಿಬಂದವು.

ನಿಲ್ಲಿರಿ ನಿಲ್ಲಿರಿ ಎಂದು ಎಲ್ಲಿಂದಲೋ ಕೂಗುತ್ತ ಓಡಿಬಂದರು ಗುರುನಾಥಶೆಟ್ಟರು. ತಮ್ಮ ಮೊಮ್ಮಗಳ ವಯಸ್ಸಿನ ಸರಸ್ವತಿಗೆ ಕೈಮುಗಿದು ಕಲ್ಲಿನಂತೆ ನಿಂತರು. ಏನೋ ಮಾತನಾಡಲು ಹವಣಿಸಿ ಬಾಯಿ ತೆರೆದರು. ರುದ್ಧ ಕಂಠದಿಂದ, ಆನಂದಾಶ್ರುಗಳಿಂದ, ಭಾವಾವೇಶದಿಂದ ತುಂಬಿ ಸೂಸುತ್ತಿದ್ದ ಹೃದಯದಿಂದ, ಸಭೆಯಲ್ಲಿ ಕೈ ಮುಗಿದು ನಿಂತ ಗುರುನಾಥ ಸೆಟ್ಟರನ್ನು ಕಂಡಾಗ ಸಭೆಯಲ್ಲಿ ಎಲ್ಲರಿಗೂ ರೋಮಾಂಚನವಾಯಿತು.

"ತಾ.... ತಾಯೀ, ಬಾಲಸರಸ್ವತೀ....."

ಮುಂದೆ ಮಾತುಗಳು ಬಾರದಾದವು. ಹಸಿರು ಕಾಗದದಲ್ಲಿ ಸುತ್ತಿದ್ದ ಚಿನ್ನದ ಕಂಕಣವೊಂದನ್ನು ಕಿಸೆಯಿಂದ ಹೊರತೆಗೆದರು. ಅದರಲ್ಲಿ ಕೆತ್ತಲ್ಪಟ್ಟಿದ್ದ ಮೂರು ವಜ್ರದ ಹರಳುಗಳು ಮಿಂಚಿನಂತೆ ಹೊಳೆದು ಸಭಿಕರ ಕಣ್ಣು ಕುಕ್ಕಿದವು. ಮುಗ್ಗರಿಸುತ್ತ ಮಾತನಾಡಿದರು ಸೆಟ್ಟರು ಆವೇಶದಿಂದ–



"ಇದು ನನ್ನದಲ್ಲ. ಊರ ಶ್ರೀಮಂತರದೂ ಅಲ್ಲ. ಪ್ರಸನ್ನವದನಳಾಗಿರುವ ಕನ್ಯಕಾಪರಮೇಶ್ವರಿಯು ಸಾಕ್ಷಾತ್ ಸರಸ್ವತಿಗೆ ಸಲ್ಲಿಸಿದ ಉಡುಗೊರೆ; ತೆಗೆದುಕೋ ತಾಯೆ."

ಮಂಗಳಾರತಿ ತಟ್ಟೆಯಲ್ಲಿ ನೂರು ರೂಪಾಯಿಗಳ ಎರಡು ನೋಟುಗಳನ್ನಿಕ್ಕಿ ಸರಸ್ವತಿಯ ಮುಂದೆ ಚಾಚಿ, ಸೆಟ್ಟರು ವೃದ್ದ ದೀಕ್ಷಿತರಿಗೆ ದೀರ್ಘದಂಡ ನಮಸ್ಕಾರ ಮಾಡಿ ಹೊರಟೇಬಿಟ್ಟರು

ಇಡೀ ಸಬೆಗೇ ದಿಗ್ಭ್ರಮೆಯಾಗಿ ಮೋಹನಾಸ್ತ್ರಕ್ಕೆ ಬಲಿಯಾದಂತೆ ಕುಳಿತಿದ್ದಿತು. ಅನೇಕ ಹೆಂಗಳೆಯರಂತೂ ಕಣ್ಣೊರಸಿಗೊಳ್ಳುತ್ತ ಕುಳಿತಲ್ಲಿಂದಲೇ ಕೈಮುಗಿದರು ಸರಸ್ವತಿಗೆ.

ರಾತ್ರಿ ಹತ್ತಾಯಿತು.

ಶಂಕರ ದೀಕ್ಷಿತರು ಎದ್ದು ನಿಂತು ಸಭಾವಿಸರ್ಜನಾ ವಿಧಿಯನ್ನು ಕೈಕೊಂಡರು. ಮಾತಿಗೊಮ್ಮೆ ಕಣ್ಣೊರಿಸಿಕೊಳ್ಳುತ್ತ ವೃದ್ಧ ದೀಕ್ಷಿತರು ಸರಸ್ವತಿಯನ್ನು ಮುಕ್ತಕಂಠದಿಂದ ಹೊಗಳಿ, ಇದು ದೇವದತ್ತವಾಗಿ ಬಂದದ್ದು, ಇದು ವ್ಯಕ್ತಿ ಅಲ್ಲ, ಇದೊಂದು ಅದ್ಭುತಶಕ್ತಿ ಎಂದು ನುಡಿದು ಅವಳ ತಲೆಯ ಮೇಲೆ ಕೈಯಿಕ್ಕಿ ಕಣ್ಣಿಗೆ ಹಚ್ಚಿಗೊಂಡರು.

ಶೃಂಗೇರಿಪೀಠದ ಸ್ವಾಮಿಗಳು ಸಾಕ್ಷಾತ್ ಶಾರದೆಯ ಪೂಜೆ ಮಾಡಿದಂತಿದ್ದಿತು ಆ ದೃಶ್ಯ.

## ೭

ಅವರಿವರ ಬಾಯಿಯಿಂದ ಜರುಗಿದ ಎಲ್ಲ ಸಂಭ್ರಮವನ್ನು ಕೇಳಿದ ನಂತರ ಅಚ್ಚಮ್ಮಳಿಗೆ ಕೊಂಚ ಪೇಚಾಟವಾಯಿತು. ತಾನೂ ನೋಡಬೇಕಿತ್ತು ಆಗ ಸರಸ್ವತಿಯನ್ನು ಎಂದುಕೊಂಡಳು ಮನದಲ್ಲಿಯೆ, ಎಚ್ಚತ್ತಾಗಲೇ ಅಚ್ಚಮ್ಮ ಕನಸು ಕಾಣುತ್ತಿದ್ದಳು.

ಹೊರಬಾಗಿಲಲ್ಲಿ ಗೌರಮ್ಮಳ ಸವಾರಿ ಬಂದೇಬಿಟ್ಟಿತು ಬ್ರಹ್ಮಾನಂದ ಶಾಸ್ತ್ರಿಗಳು ಅತ್ತೆಯವರನ್ನು ಆದರದಿಂದ ಸ್ವಾಗತಿಸಿದರು. ಭಾಸ್ಕರಭಟ್ಟರ ಮತ್ತು ಬಾಳಪ್ಪನ ಕ್ಷೇಮ–ಸಮಾಚಾರವನ್ನು ವಿಚಾರಿಸಿದರು.

ಅಚ್ಚಮ್ಮ ಪುನ: ಸ್ನಾನಮಾಡಿ ಅಡುಗೆಗೆ ಕುಳಿತಳು. ಆ ಮಾತು ಈ ಮಾತು ಆಡುವಳಾಗಿ ಅವಳ ಅಡುಗೆ ಸಿದ್ಧವಾಯಿತು. ತಾಯಿಯನ್ನು ಮಣೆಯ ಮೇಲೆ ಕುಳ್ಳಿರಿಸಿ ಊಟಕ್ಕೆ ಬಡಿಸಿದಳು.

ಶಾಸ್ತ್ರಿಗಳು ಒಳಗೂ ಹೊರಗೂ ಓಡಾಡುತ್ತ ಸಾವಕಾಶವಾಗಿ ಊಟವಾಗಲಿ ಎಂದು ಅತ್ತೆಯವರಿಗೆ ಹೇಳಿದರು.

"ಸರಸಿರಂಡೀಗೆ ಇಷ್ಟು ಅಡಿಗಿ ಕೆಲಸ ಏನಾರೆ ಕಲಿಸೀದೇನೆ ಅಚ್ಚಿ? ಇಲ್ಲಾ ಇನ್ನೂ ಮದಲಿನ್ಹಾಗೆ ಧಡ್ಡ ಖೋಡಿ ಆಗೇ ಅದನೊ?"

ದೊಡ್ಡೊಂದು ತುತ್ತನ್ನು ಬಾಯಲ್ಲಿ ಜಾರಿಸಿ, ಗೌರಮ್ಮ ಮುತ್ತಿನಂತಹ ಈ ಮಾತನ್ನು ಮೊದಲು ಆಡಿದಳು.

"ಸೈಯಮ್ಮ ನೀನು ನಮ್ಮ ಸರಸ್ವತಮ್ಮನ್ನ ಊರಿಗೆ ಊರೇ ಕೊಂಡಾಡ್ತದೆ. ಸಾವಿರಾರು ಜನರ ಸೌಭಾಗ್ಯ, ನಿಂತು ಹರಿಕತೆ ಮಾಡಿ ಬಂದಾಳೆ ಹುಡಿಗಿ...."

ಅಭಿಮಾನದಿಂದ ಇನ್ನೂ ಏನೇನನ್ನೋ ಹೇಳಿಕೊಳ್ಳುವದರಲ್ಲಿ ಇದ್ದಳು ಅಚ್ಚಮ್ಮ.

ಮುಂದಿನ ಮಾತಿಗೆ ಚಕ್ ಎಂದು ಬಿದ್ದಿತು ಗೌರಮ್ಮನ ಚೂರಿ.

"ಅದೇನೆ ಹುಚ್ಚುಚ್ಚೆ, ನಾನೊಲ್ಲೆ. ವಯಸ್ಸಿಗೆ ಬಂದ ಹುಡಿಗಿನ್ನ ಹಾಗೆಲ್ಲ ಕಳಿಸಬಾರದು ಗಂಡಸರ ಗುಂಪಿನ್ಯಾಗೆ. ನಿನಗಿಷ್ಟೂ ತಿಳಿಯಲಿಲ್ಲೇನೆ ಅಚ್ಚಿ? ತೀರಾ ಮೂರೂ ಬಿಟ್ಟೇದಿ ಬಿಡು."

ಮಗಳನ್ನು ಛೀ ಮಾಡಿದರು–ಗೌರಮ್ಮ.

ಸರಸ್ವತಿ ಎಂಟು ವರ್ಷದ ಹಸುಗೂಸು ಆಗಿನ್ನೂ.

ಶಾಸ್ತ್ರಿಗಳು ಮಾತಿನ ಝುರಿಯನ್ನು ಜಾಣತನದಿಂದ ಅತ್ತ ಹೊರಳಿಸಿ ಪುಣ್ಯ ಕಟ್ಟಿಗೊಂಡರು.

ತಾಯಿಗೆ ಮೆತ್ತಗಿನ ಲೇಪವನ್ನು ಹಾಕಿಕೊಟ್ಟು, ಪಡದೆ ಕಟ್ಟಿ, ಕೊಂಚ ಸನಿಯದಲ್ಲಿಯೇ ಚಾಪೆಯ ಮೇಲೆ ಅಡ್ಡಾದಳು ಅಚ್ಚಮ್ಮ.

ಮುಂದಿನ ಅಂಕಣದಲ್ಲಿಯೇ ಅತ್ತೆಯವರ ಹಾಸಿಗೆ ಕಡೆ ತಲೆಮಾಡಿ ಬ್ರಹ್ಮಾನಂದ ಶಾಸ್ತ್ರಿಗಳೂ ಹಾಸಿಕೊಂಡಿದ್ದರು. ಅದರ ಪಕ್ಕದ ಹಾಸಿಗೆ ಸರಸ್ವತಿಯದು.

ರಾತ್ರಿ ಹನ್ನೆರಡಾಯಿತು. ಸರಸ್ವತಿಯ ಹೊರತು ಯಾರಿಗೂ ನಿದ್ದೆ ಬಂದಿರಲಿಲ್ಲ.

"ಬಾಳ ಎಷ್ಟು ಚುರುಕು ಆಗ್ಯಾನ ಈಗ ಅಂತ ತಿಳಿದೀ ಅಚ್ಚಿ?"

ಗೌರಮ್ಮ ಮೆತ್ತಗೆ ಬಾಳಪುರಾಣಕ್ಕೆ ಶ್ರೀಕಾರ ಹಾಕಿದಳು ಮಲಗಿದಲ್ಲಿಯೆ.

"ಹೂಂ."

ಬೇರೇನೂ ಅನ್ನಲು ಗೊತ್ತಿಲ್ಲದೆ ಅಚ್ಚಕ್ಕ ಎಲ್ಲಕ್ಕೂ ಹೂಂಗುಡುತ್ತಿದ್ದಳು.

"ಮದಮದಲಂತೂ ಬಾಳನ್ನ ಎಲ್ಲಾರೂ ಹುಚ್ಚನ್ನೆ ಮಾಡಿದ್ದರು ನೋಡು."



"ಹೂಂ"

"ನೀನೂನು ಹಾಗೇ ತಿಳಿದಿದ್ದಿ ಅಲ್ಲೇ?"

"ಹೂಂ"

"ಈಗೂ ಹಾಗೇ ಇದ್ದಾನೆ ಅಂತ ತಿಳಿದೀ ಏನು?"

"ಹೂಂ"

ನಿದ್ದೇನೆ ಅಚ್ಚಿ ನಿನಗಾಗಲೇ?"

"ಇಲ್ಲವ್ವ, ನಿದ್ದಿ ಎಲ್ಲಿ ಬಂತು?"

ಅಚ್ಚಕ್ಕನಿಗೆ ನಿದೆಯೂ ಇಲ್ಲ ಎಚ್ಚರಿಕೆಯೂ ಇಲ್ಲ. ಅದೆತ್ತಲೋ ಹಾರುತ್ತಿದ್ದಿತು ಅವಳ ಅಂತರಂಗದ ಪಕ್ಷಿ. ಬರೀ ಹೂಂ ಎನ್ನಲು ಮಾತ್ರ ಭೂಲೋಕದಲ್ಲಿದ್ದಿತು ಅವಳ ಜಡದೇಹ.

ತಾಯಿಯ ಪ್ರಶ್ನೆಯಿಂದ ಎಚ್ಚರವಾಗಿ ಪುನ: ಈ ಲೋಕಕ್ಕೆ ಇಳಿದಳು.

"ಅದೆಷ್ಟು ಚಾಲೂಕಿ ಆಗ್ಯಾನೆ ನಮ್ಮವ್ವ? ಆಡಾಡ್ತಾನೆ ಮಂದಿ ಮನ್ಯಾಗಿಂದ ಏನಾದರೂ ತಂದೇ ತರತಾನೆ ನೋಡು, ಕಣ್ಣು ಚಿತ್ರ ಕಣ್ಣು ಮಾಯ. ಮನ್ನೆ ಭಾವೀಶಾರದಮ್ಮನ ಮನೀಗೆ ಹೋಗಿದ್ದನವ್ವ. ಕಡ್ಡಿ ಕಡಿಯೋ ಅಷ್ಟು ಹೊತ್ತು ಸುದಾ ಕೂತಿಲ್ಲ ನಾನು, ಯಾವ ಮಾಯದಲೆ ತಂದನೊ ತಂದೆ ಬಿಟ್ಟ, ವಳಗ ದೇವರ ಕಟ್ಟೀ ಮ್ಯಾಲಿಟ್ಟ ಬೆಳ್ಳಿಗಿಂಡೀನ. ನಾನು ಗಪ್‌ಚೂಪ್ ಪೆಟಿಗೆಗಾ ಸೇರಿಸಿ ಬಿಟ್ಟೆ ಅನ್ನು....

"ಹೂಂ"

"ಬಾಳ ತಂದಿರೋವೆ ಎಷ್ಟೊಂದು ಸಾಮಾನು ಆಗ್ಯಾವೆ ಮನ್ಯಾಗೆ ಅಂತಿ? ಜೋಯಿಸರ ಮನಿ ಬೆಳ್ಳಿಬಟ್ಲು, ರುದ್ರವ್ವನ ಮನಿ ಅಡ್ಡಣಗಿ, ಯಂಕಪ್ಪನದು ಜರ್ಮನ್ ಸಿಲ್ವರ್ ಥಾಲಿ, ಅದಾರದೋ ಒಂದು ಝಾಲಿಸವುಟು, ಹುಲ್ಲು ಕಸಬರಗಿ, ಅಯ್ಯಯ್ಯಯ್ಯ! ಒಂದೇ ಎರಡೇ ಹೇಳಲಿಕ್ಕೆ. ಅವೆಷ್ಟೋ ಬಿಡು ಸಾಮಾನುಗಳು."

"ಇನ್ನೂ ಏನೂ ಅಂದಿ ಅಚ್ಚಿ ಬಾಳನ ಆಟ!"

"ಮುಂಜಾನೆದ್ದು ಹೋಟಲ ಹೊರಗೆ ನಿಂತ ಅಂದರೆ ಆತು, ಊಟಕ್ಕೆ ಬರೋದರಾಗೆ ಎರಡು ಮೂರು ಆಣೆ ರೊಕ್ಕ ಹ್ಯಾಗಾದರು ತರುತಾನೆ. ಹಾಗೆ ಜನರನ್ನು ನೋಡಿ ಅವರಂಗೀನೆ ಹಿಡಿದು ಬಿಡ್ತಾನೆ. ಬೊಟ್ಟು ಕೊಡೋವರೆಗೂ ಪ್ರಾಣ ಹೋದರಾರೆ ಬಿಟ್ಟಾನೇನು ಭೂಪ? ಹುಚ್ಚು ಹುಡುಗ ಅದು, ಕೊಟ್ಟು

ಬಿಡ್ರಿ ಅಂತ ಯಾರಾದರೂ ಹತ್ತಿರ ಇದ್ದವರು ಅಂದೇ ಅನ್ನುತ್ತಾರೆ. ವಸೂಲಿ ಮಾಡದೇ ಬಿಟ್ರೆ ಅವನು ನನ್ನ ಮಗನೇ ಅಲ್ಲ ನೋಡು ಅಚ್ಚಿ. ನಿದ್ದೇನೆ ಅಚ್ಚಿ?"

"ಇಲ್ಲಮ್ಮ, ಕೇಳಿತಾನೆ ಇದ್ದೀನಿ."

ಅಚ್ಚಕ್ಕಳ ದನಿ ಕೇಳುವ ಮುನ್ನವೆ ಅವಳ ಭಾವವನ್ನು ಬ್ರಹ್ಮಾನಂದ ಶಾಸ್ತ್ರಿಗಳು ಗ್ರಹಿಸಿದ್ದರು.

ಪುಟ ದೊರೆತಂತಾಯಿತು ಗೌರಮ್ಮನವರ ನಾಲುಗೆಗೆ. ಮುಂದುವರಿಸಿದರು, ಶ್ರೀಬಾಳ ಮಹಾತ್ಮೆಯ ಕಥಾಸಾರಾಂಶವನ್ನು.

"ನೀ ಏನಾದರೂ ಅನ್ನು ಅಚ್ಚಿ, ನಮ್ಮ ಬಾಳನ ಕೈ ಹಿಡಿಯೋ ಹುಡುಗಿ ಭಾಳಾ ಪುಣ್ಯ ಮಾಡಿರಬೇಕು ನೋಡು."

ಹದ ಸಿಕ್ಕಾಗಲೇ ಹೊಡೆಯಬೇಕೆಂಬ ಗುಟ್ಟು ಅರಿತಿದ್ದ ಗೌರಮ್ಮ, ಸಾಕಷ್ಟು ಹಿನ್ನೆಲೆಯನ್ನೂ ಹಿತವಾದ ವಾತಾವರಣವನ್ನೂ ಸೃಷ್ಟಿಸಿ, ಮುತ್ತಿನಂತಹ ಮಾತನ್ನು ಮಗಳ ಕಿವಿಯಲ್ಲಿ ಬಿತ್ತಿಯೇ ಬಿಟ್ಟಳು.

"ಯಾಕೆ ಅಂತೀಯಾ, ನೋಡು ಹಿರೇರ ಕಾಲದ್ದು ಸ್ವಂತ ಮನಿ ಅದೆ– ಹರಕೋ ಮುರುಕೋ ಎಂಥಾದಾರೆ ಯಾಕೆ ಆಗವಲ್ಲದು. ಮನೀನು ತೀರ ಸಣ್ಣದು ಅಂಬೋ ಹಾಗೂ ಇಲ್ಲ. ಯಾಕೆಂದರೆ ಎಡಗಡೆ ಬಲಗಡೆ ಇರೋ ಜಾಗ ಕೊಂಡು ಕಟ್ಟಿಸಿಕೊಂಡ್ರೆ ದೆವ್ವನಂಥ ಮನಿ ಆಗ್ತದೆ. ಕೆರಿ ಹಿಂದಿನ ಗದ್ದಿಯಿಂದ ಆ ಮಿಸೀನೆಲ್ಲೂ ಇಷ್ಟು ಬಂದು  ಬೀಳ್ತದೆ. ಅವರು ಇವರು ಕೊಟ್ಟೇಕೊಡ್ತಾರೆ. ಇಲ್ಲಾ ಅನದಂತೆ ಅಷ್ಟು ಕರೇ ಬೆಲ್ಲಾನ, ಏನವ್ವಾ, ಮನ್ಯಾಗಿನ ಚೂರೂ ಚಾರೂ ಚಾಟೀ ಚೀಟಿ ನಿನಗೆ ಗೊತ್ತಿಲ್ಲದೇನದೆ ಅಚ್ಚೀ? ಬಿಳೇ ಬಂಗಾರದ್ದು ಒಂದು ನಾಗರಂತೂ ನೋಡೀಯಲ್ಲ ನಮ್ಮತ್ತಿ ಕಾಲದ್ದು, ಮೊನ್ನೆ ಯಾರೋ ಗೌಳೇರ ಮನ್ಯಾಗಿಂದು ಒಂದು ಬೆಳ್ಳಿ ಡಾಬು ಬ್ಯಾರೆ ಹೊಡಕೊಂಡು ಬಂದಾನೆ ಬಾಳಪ್ಪ. ನ್ನ ಸೊಸಿಗೇನು ಕಡಿಮೀನೆ ಅಚ್ಚೀ...."

"ಹೂಂ"

"ಮುನ್ನಿನನಾಗರ ಚೌತೀಗೆ ಹತ್ತು ತುಂಬಿತಲ್ಲೆ ಸರಸೀಗೆ?"

"ಹೂಂ"

ಏನು ಒಂಭತ್ತು ತುಂಬಿ ಹತ್ತರಾಗೆ ಬಿತ್ತೋ?"

"ಹೂಂ"

"ಮೈ ಕೈ ತುಂಬಿಕೊಂಡಾಳೇಳು, ಜೋಡು ಎಲುಬಿನ ಹುಡುಗಿ ಸರಸಿ ಭಡಾನೆ ಬರ್ತಾಳೆ ಮನಿಗೆ... ಬರೋ ಪಕ್ಷ ಮಾಸಕ್ಕೆ ಬಾಳಗೂ ಹದಿನಾರು



ತುಂಬಿ ಹದಿನೇಳರಾಗೆ ಬೀಳಲಿದೆ. ಇನ್ನೆಷ್ಟು ದಿವಸ ಬಿಡಲಿಕ್ಕೆ ಬಂದೀತು ಗಂಡು ಹುಡುಗರನ್ನ....?"

"ಅದೂ ಅಲ್ಲದೆ ನಾನೂ ಸೋತುಬಿಟ್ಟೀನವ್ವ ನಂತಾಯಿ, ಹಿಂದೆ ಇದ್ದಷ್ಟು ದಿನ ಮುಂದೆ ಇದ್ದೇನೇನೆ ಅಚ್ಚಿ?"

ಅಳುವ ದನಿ ಆರಂಭವಾಯಿತು ಮಧ್ಯೆ.

"ಬಾಳಂದೂ ಒಂದು ಮನಿ ಆದದ್ದು ನೋಡಿ ಕಣ್ಣು ಮುಚ್ಚಿದರೆ, ನನಗೆ ಕಾಗಿಪಿಂಡ ಆಗ್ತದೆ..." ಇಲ್ಲದಿದ್ದರೆ ಪಿಶಾಚಿಯಾಗಿ ಕೂಡ್ತೀನಿ ನೋಡು, ಅಚ್ಚಿ ನಿನ್ನ ಮನಿ ಬಾಗಿಲ್ದಾಗೆ."

ಅಚ್ಚಮ್ಮ ಜೀವವಿದೆಯೋ ಇಲ್ಲವೋ ಎಂಬುವಂತೆ ಮಲಗಿದ್ದಳು. ಬ್ರಹ್ಮಾನಂದ ಭಟ್ಟರು ಮೈಯೆಲ್ಲವೂ ಕಿವಿಯಾಗಿದ್ದರು.

ಎಲ್ಲವೂ ನಿಶ್ಶಬ್ದ!

ಸರಸ್ವತಿಯ ಶ್ವಾಸೋಚ್ಛಾಸದ ಸದ್ದಿನ ಹೊರತು ಬೇರೊಂದೂ ಕೇಳಿ ಬರುತ್ತಿರಲಿಲ್ಲ ಇಡೀ ಮನೆಯಲ್ಲಿ.

ಇದ್ದಕ್ಕಿದ್ದಂತೆ ಗೂಬೆಯೊಂದು ದನಿಗೊಟ್ಟಿತು ಗೌರಮ್ಮಳ ಈ ಮಾತಿಗೆ.

"ಒಪ್ತಾನೆ, ಒಪ್ತಾನೆ, ಒಪ್ಪದೆ ಇನ್ನೇನು ಮಾಡ್ತಾನೆ. ಎಲ್ಲಾರೂ ಹೇಳಿದರೆ ಸತೇವ ಒಪ್ತನೆ. ಸ್ವಾದರಿಕಿ ಹೆಣ್ಣು ಅದು ಹ್ಯಾಗೆ ಬಿಡ್ತದೆ? ಅವನೂ ಒಲ್ಲೆ ಅಂದ್ರೆ ಇನ್ನಾರು ಮಾಡಿಕೋಬೇಕು. ಪಾಪ!.... ಇನ್ನೇನು ಹುಡಿಗೀನೆ, ಇದ್ದಾಳೆ ಸರ್ವ ಸಾಧಾರಣ, ಇದೊಳ್ಳೆ ಸೈ ಅಲ್ಲ. ಇರತಾರೆ ದೇವರು ಮಾಡಿಧಾಗೆ, ಎಲ್ಲಾರಿಗೂ ತಕ್ಕ ಕನ್ಯಾನೆ ಸಿಗಬೇಕು ಅಂದರೆ ಹ್ಯಾಗೆ ಆದೀತು ಹೇಳು.... ಹಾಂಗ ನೋಡಿಕೋತ ಕೂತರೆ ಎಲ್ಲಿಗೆ ದರಿ? ನಾನು ಮಾಡಿಕೊಳ್ಳಲಿಲ್ಲೇನು ಇವರನ್ನ, ವರಹೀನ ಆಗ್ತದೋ ಅಂತ ಊರಿಗೆ ಊರೇ ಕೂಗಿತು. ಏನಾದರೂ ಮಾಡಿ ಬಾಳನ್ನ ಒಪ್ಪಿಸತೀನಿ.... ಅಚ್ಚೀ."

"ಎದ್ದೀನವ್ವಾ"

ಅಚ್ಚಕ್ಕನಳ ಅಂತರಂಗದಲ್ಲಿ ಆಗುತ್ತಿದ್ದ ಕುರುಕ್ಷೇತ್ರ, ಪ್ರಳಯ, ವಿಪ್ಲವಗಳ ಅರಿವು ಹೋರಿಕರುವಿಗೆ ಜೋಡಿ ಹುಡುಕಲು ಬಂದಿದ್ದ ಗೌರಮ್ಮಳಿಗೆ ಹೇಗೆ ಆಗಬೇಕು? ಪಾಪ!

"ಬಾಳನ್ನ ಒಪ್ಪಿಸೋದು ನನ್ನ ಕಲಿತು ಬಿಡು, ಯೋಚಿಸಬ್ಯಾಡ"

ಚಿಂತೆಯ ಬೇಗೆಯಲ್ಲಿ ದಹಿಸುತ್ತಿದ್ದ ಮಗಳಿಗೆ ಧೈರ್ಯ ಕೊಟ್ಟಳು ಹೆತ್ತಾಯಿ.

"ನಿನ ಗಂಡಗೆ ನಿದ್ದಿ ಹತ್ತೀತೇನೆ?"

ಅಚ್ಚಮ್ಮನ ಉಸಿರೂ ನಿಂತುಹೋದಂತಿದ್ದಿತು.

"ಹೂಂ"

ಬ್ರಹ್ಮಾನಂದ ಶಾಸ್ತ್ರಿಗಳೇ ಈ ಬಾರಿ ಹೊಂಗುಟ್ಟಿದ್ದರು.

ಯಾರಾದರೇನು, ಹೊಂಗುಟ್ಟಿದೆಲ್ಲ ಒಂದು ಕತೆ ಹೇಳುವವರಿಗೆ, ಶುರುವಾಯಿತು–ಪುನ: ಸೂತ ಉವಾಚ–

"ನಿನ್ನ ಗಂಡ ಈ ಪ್ರಪಂಚದ ಮನಿಶಾನೇ ಅಲ್ಲ, ಏನವ್ವ ಅಚ್ಚಿ, ಬರೀ ವಯಸ್ಸೊಂದು ಬುಡಕೆ ಹಾಕಿಕೊಂಡಾನೆ ಅಷ್ಟೆ. ಆಮ್ಯಾಲೆ ಏನಾರೆ ಅಡಾವುಡಿ ಮಾಡಿ ಹುಡಿಗಿನ್ನ ಯಾವನರ ಎಬಡಗ ಕಟ್ಟಿಬಿಟ್ಟಾನೆ ಮತ್ತೆ, ಆ ಗಿಳೀ ಅಂಥ ಹುಡುಗಿ ಕಷ್ಟಬಡೋದು ನೋಡಲಾರೆ ನಾನು, ಹೌದಲ್ಲೊ....?"

"....ಆ ನಿಮ್ಮ ಅಪ್ಪಗಂತೂ ದುಡ್ಡಿನ ಪಿಶಾಚಿ ಬಡದೆಬಿಟ್ಟಿದೆ. ಮದುವಿ ಮಾತು ಎತ್ತಿದರೆ ಆತು, ಮೊದಲು ವರದಕ್ಷಿಣೆ ಎಷ್ಟು ಅಂತಾರವರು. ಹಿಟ್ಟಿನ ಹಾಳದಿಂದ, ಹಾವೇರಿಯಿಂದ ಅದಾರೋ ಬಂದು ಜಾತಕ ಬ್ಯಾರೆ ಕೇಳಿದರು ಬಾಳಂದು, ಇವರ ಕಣ್ಣು ನೆತ್ತಿಗೆ ಹೋಗಿಬಿಟ್ಟವು. ಹೊರಗಿನ ಹೆಣ್ಣು ಬ್ಯಾಡಬಾಳಗೆ ಅಂತ ಸಾಪಸಾಪ ಹೇಳೀನಿ ಅವರಿಗೆ.

"..... ಸಾಲೋಸೂಲೋ ಮಾಡಿ ತಂದುಕೊಡು ಅನ್ನು ನಿನಗಂಡನ್ನ. ಛಲೋ

ಮನೀನೂ ಬೇಕು, ಬಂಗಾರದಂಥ ಅಳಿಯಾನೂ ಬೇಕು, ಗಂಟು ಮಾತ್ರ ಬಿಚ್ಚೋದಿಲ್ಲ ಅಂದರೆ ಹ್ಯಾಗಾದೀತವ್ವ, ವರಕ್ಕೆ ತಕ್ಕಷ್ಟು ವರದಕ್ಷಿಣೆ, ವರೋಪಚಾರ ಕೊಡೋದು ಕೊಸಿಯೋದು ಇದ್ದೇ ಇರತಾದೆ ಮತ್ತೆ...." ಅದಾವಾಗಲೋ ಭೂಲೋಕಕ್ಕೆ ಬಂದಿಳಿದಿದ್ದ ಅಚ್ಚಕ್ಕಳಿಗೆ ತಲೆ ಚಿಟುಗಟ್ಟಿತ್ತೇನೋ, ಮಧ್ಯದಲ್ಲಿಯೇ ಮಾತನ್ನು ತುಂಡರಿಸಿದಳು–

"ಅಮ್ಮಾ"

"ಏನವ್ವಾ ಅಚ್ಚೆ?"

"ಹೊತ್ತು ಭಾಳ ಆತು ಮಲಗಮ್ಮ ಇನ್ನ"

ಯಾರಿಗೂ ನಿದ್ರೆ ಬಂದಿರಲಿಲ್ಲ. ಬರುವಂತೆಯೂ ಇರಲಿಲ್ಲ. ಅಚ್ಚಕ್ಕನ ಎದೆಯಲ್ಲಿ ಮೂಡಿಕಾಡಿದ ಸರಸ್ವತಿಯ ಭವಿಷ್ಯದ ಚಿತ್ರವು ನಿದ್ರೆಯ ಜಾಡನ್ನೇ ತಪ್ಪಿಸಿತು. ಬಾಳಪುರಾಣವನ್ನು ಸಾಂಗೋಪಾಂಗವಾಗಿ ಕೇಳಿಸಿಕೊಂಡ ಬ್ರಹ್ಮಾನಂದ ಶಾಸ್ತ್ರಿಗಳಂತೂ ಬೆಳ್ಳಂಬೆಳಗೂ ಕಣ್ಣು ತೆರೆದೇ ಮಲಗಿದ್ದರು. ಗೌರಮ್ಮನವರು ತಮ್ಮ ಜಗತ್ತಿನಲ್ಲಿಯೇ ತಾವಿದ್ದು, ಮಗ, ಸೊಸೆ, ಮೊಮ್ಮಗ, ಹಾಲಿನ ಬಟ್ಟಲು, ಸವುಟು, ಬೆಳ್ಳಿಯ ನಡುದಾರ ಇನ್ನೂ ಏನೇನನ್ನೋ ಕಾಣುತ್ತ ಮನಸ್ಸಿಗೆ ಮಂಡಗಿ ಉಣಿಸಿದರು.



ಇದೆಲ್ಲವನ್ನು ಕಟ್ಟಿಗೊಂಡು ಪ್ರಕೃತಿಗೆ ಮಾಡುವುದೇನಿದೆ? ಬೆಳಗಾಯಿತು.

೮

ಗಂಟೆ ಆರಾದರೂ ಅಂದೇಕೋ ಸರಸ್ವತಿ ಇನ್ನೂ ಎದ್ದಿರಲಿಲ್ಲ. ಸೊಸೆಯ ಈ ಅಭ್ಯಾಸ ಗೌರಮ್ಮನವರಿಗೆ ಅದೆಷ್ಟೂ ಸರಿ ಬರಲಿಲ್ಲ. ಹೆಣ್ಣು ಹುಡುಗಿಯರು ಬೆಳಗಾದ ಮೇಲೆಯೂ ಮಲಗುವದೆ?

"ಇದೇನು ಸುಡುಗಾಡು ಅಭ್ಯಾಸ ಕಲಿಸಿದೆ ಅಚ್ಚಿ, ಮಗಳಿಗೆ? ಬಿಸಿಲೇರಿದ ಮ್ಯಾಲೆ ಹುಡಿಗೇರು ಮಲಗಿದರೆ ಮನಿಗೆ ಅರಿಷ್ಟ ಬಡಿತಾದೆ, ಅರಿಷ್ಟ. ಎಬ್ಬಿಸು ಆ ಕತ್ತಿ ಮುಂಡಿನ್ನ, ಎಲ್ಲಿ ಮಲಗ್ಯಾಳೆ ಎಲ್ಲಿ?"

ಸರಸ್ವತಿಯ ಹಾಸಿಗೆಯ ಬಳಿಯೇ ಬಂದರು ಗೌರಮ್ಮನವರು.

ಬ್ರಹ್ಮಾನಂದ ಶಾಸ್ತ್ರಿಗಳು ತಾವು ಹೊದ್ದಿದ್ದ ಶಾಲನ್ನು ಮಗಳಿಗೆ ಹೊದಿಸಿ ಸರಿಪಡಿಸುತ್ತಿದ್ದರು.

ಆ ಎಳೆ ಬೆಳಕಿನಲ್ಲಿ ಅವಳ ತುಂಬು ಮುಖದ ಕಾಂತಿಯನ್ನು ಕಣ್ತುಂಬ ನೋಡಿದರು. ಮುಖದ ಮೇಲೊಂದು ಸಂತೃಪ್ತಿಯ ಹುಸಿನಗು ಸುಳಿದು ಓಡಿತು.

ಗೌರಮ್ಮನವರು ಗರ್‍ರನೆ ತಿರುಗಿದರು ಹಾವಿನಂತೆ, ಇದನ್ನೆಲ್ಲ ಕಂಡು, ನೀರ ಮನೆಗೆ ಹೋಗಿ ಅಚ್ಚಕ್ಕಳನ್ನು ಚೆನ್ನಾಗಿ ಕೈ ತೆಗೆದುಕೊಂಡರು

"ಹೀಗೆಲ್ಲ ತಿರಕಚ್ಚಾ ಕಲಿಸಿದರೆ ಹೆಣ್ಣು ಹುಡಿಗೇರು ಏನು ಬಾಳವಿ ಮಾಡ್ತಾವೆ ಅತ್ತೀಮನ್ಯಾಗೆ? ನಿನ ಗಂಡ ಇನ್ನ ಶಾಲು ಹೊದುಸ್ತಾರೆ ಶಾಲು ಆ ಸರಸೀಗೆ ಎಡಗಾಲಿಲೆ ಒದ್ದು ಎಬ್ಬಿಸೋದು ಬಿಟ್ಟು."

ಅಚ್ಚಕ್ಕನ ಮನಸ್ಸಿಗೆ ಬಹು ಖೇದೆನಿಸಿತು ಕಾಲಿನಿಂದ ಒದೆದು ಎಬ್ಬಿಸುವದೇ, ತನ್ನ ಮುದ್ದು ಸರಸ್ವತಿಯನ್ನು!

"ಛೆ ಛೆ! ಇಲ್ಲಮ್ಮ. ನಿತ್ಯ ಅವಳೇ ಎದ್ದು ನೀರೊಲಿಗೆ ಬೆಂಕಿ ಹಾಕೋದು ಇವತ್ತು ಏನೋ ಮಲದ್ಯಾದೆ ಪಾಪ! ನಿನ್ನೆ ತುಂಬ ದಣುವಾಗಿತ್ತು...."

"ನಾನೇನು ಬಲ್ಲೆ ನನ್ತಾಯಿ? ನಮ್ಮನ್ಯಾಗಂತೂ ಇವೆಲ್ಲ ಸಾಗೋದಿಲ್ಲ ನೋಡು."

ಗೌರಮ್ಮನವರು ತಮ್ಮದೇ ಕಡೆಯ ಮಾತೆಂಬುವಂತೆ ನಿಷ್ಠುರವಾಗಿ ನುಡಿದು ಅಡುಗೆ ಮನೆ ಹೊಕ್ಕರು.

ತುಸುಹೊತ್ತಿನ ನಂತರ ಹೊರಕೋಣೆಯಲ್ಲಿ ತಂದೆ–ಮಗಳು ಕುಳಿತು ಮಾತಿನಲ್ಲಿ ಮಗ್ನರಾಗಿದ್ದರು.

"ನಿನ್ನೆ ಅದಾವುದೋ ಹೊಸರಾಗದಲ್ಲಿ ಹಾಡಿದಿಯಲ್ಲ, ಅದಾವ ರಾಗ ಸರಸ್ವತಿ?"

"ಯಾವ ರಾಗಪ್ಪ ಅದು?

"ಮಲಗಿ ಪರಮಾದರದಿ ಹಾಡಲಿಲ್ಲೇನಮ್ಮ, ಪಂಚರಾಗದಲ್ಲಿ? ಮಧ್ಯಮಾವತಿ ಹೇಳಿ ಮುಗಿಸುವ ಮುಂಚೆ ಹಾಡಿದಿ ನೋಡು, ಬಹಳ ಚೆನ್ನಾಗಿತ್ತು ಅದು...."

"ನನಗೇನು ಗೊತ್ತಪ್ಪ ರಾಗಗಳ ಹೆಸರು?"

ನಕ್ಕು ಉತ್ತರಿಸಿದಳು ಮರುಪ್ರಶ್ನೆಯಿಂದ ಸರಸ್ವತಿ.

"ಹಾಡಿದಿಯಲ್ಲಮ್ಮ ಹಾಗಾದರೆ?"

"ನನಗೊಂದೂ ತಿಳಿಯದಪ್ಪ, ಹಾಡುವಾಗ ಮಾತ್ರ ಎಂದೋ ಕಲಿತು ಮರೆತದ್ದು ಪುನಃ ನೆನಪಾದಂತಾಗುತಿತ್ತು ಅಷ್ಟೇ."

ಬ್ರಹ್ಮಾನಂದ ಶಾಸ್ತ್ರಿಗಳು ಸುಮ್ಮನಾದರು. ಶಂಕರ ದೀಕ್ಷಿತರು ಹಿಂದಿನ ರಾತ್ರಿ ಹೇಳಿದ್ದ ಪ್ರತಿಯೊಂದು ಮಾತೂ ಶಾಸ್ತ್ರಿಗಳ ಕಿವಿಯಲ್ಲಿ ಮರುದ್ದನಿಸಹತ್ತಿತು–

"ಬ್ರಹ್ಮಪ್ಪಾ, ನಿನ್ನ ಮಗಳು ನಿನ್ನ ಮಗಳಲ್ಲೋ ಹುಚ್ಚಾ, ಭ್ರಾಂತಿ ಪಡಬ್ಯಾಡ. ಶಾಪಗ್ರಸ್ತಳಾದ ಸಾಕ್ಷಾತ್ ಸರಸ್ವತಿ ಭೂಲೋಕಕ್ಕೆ ಬಿದ್ದಾಳೆ. ಆ ಪರಬ್ರಹ್ಮನ ಇಚ್ಛೆ...."

ಉಸ್ಸೆಂದು ಉಸಿರು ಹಾಕಿ ಮನೆಗೆ ಹೋಗಿದ್ದರು ಆ ವೃದ್ಧ ದೀಕ್ಷಿತರು. ತಂದೆಯ ಮೌನವು ಅರ್ಥವಾಗಲಿಲ್ಲ ಸರಸ್ವತಿಗೆ.

"ಅದೇನಪ್ಪ ಅಷ್ಟು ಯೋಚನೆ ನನ್ನ ಹಾಡಿನ ಬಗ್ಗೆ, ಎಲ್ಲಿಯಾದರೂ ತಪ್ಪಿದೆನೆ?"

ಶಾಸ್ತ್ರಿಗಳಿಗೆ ಕೂಡಲೆ ವ್ಯಾಮೋಹವು ಮುಸುಕಿತು.

"ಅಲ್ಲಾ ಸರಸ್ವತಿ, ನೀನು ಸಂಗೀತವನ್ನು ಎಂದು ಕಲಿತೆ? ಯಾರು ಕಲಿಸಿದರು? ಅಷ್ಟು ಸ್ವರಬದ್ಧವಾಗಿ ಲಯಪೂರ್ಣವಾಗಿ ಹಾಡಿದೆಯಲ್ಲಾ."

"ನಾನೆಲ್ಲಿ ಕಲಿತೆನಪ್ಪ?"

ದೀಕ್ಷಿತರ ವಾಣಿಯು ಪುನ: ಕೇಳಿತು ಶಾಸ್ತ್ರಿಗಳ ಕಿವಿಯಲ್ಲಿ.



ಸರಸ್ವತಿ ಸರಿಯಾಗಿ ಉತ್ತರವನ್ನು ಹೇಳಲು ಬರಲಿಲ್ಲ. ಆದರೂ ಬ್ರಹ್ಮಾನಂದ ಶಾಸ್ತ್ರಿಗಳಿಗೇನೋ ಎಲ್ಲವೂ ಅರ್ಥವಾಯಿತು.

"ಒಳಗೆ ಹೋಗಮ್ಮ, ನಿಮ್ಮಜ್ಜಿ ಬಂದಿದ್ದಾರೆ."

ಗಿಳಿಯಂತಹ ಮಗಳನ್ನು ಆ ಅಡವಿಬೆಕ್ಕಿನ ಮುಂದೆಬಿಟ್ಟು ಶಾಸ್ತ್ರಿಗಳು ಕೆಲಸದ ಮೇಲೆ ಹೊರ ಹೊರಟರು.

## ೬

ಮಾತು ಕೊಡುವವರೆಗೂ ಅನ್ನವನ್ನು ಸಹ ಮುಟ್ಟುವದಿಲ್ಲವೆಂದು ಸತ್ಯಾಗ್ರಹ ಹೂಡಿ, ಅಡಿಗೆ ಮನೆಯಲ್ಲಿ ಅಡ್ಡ ಮಲಗೇ ಬಿಟ್ಟಳು ಗೌರಮ್ಮ. ಅಕ್ಕಸದ ಮಾತುಗಳಂತೂ ಎಷ್ಟೋ ಆ ತಾಯಿ ಆಡಿದುದು.

"ನಮ್ಮ ವಂಶ ನಿರ್ವಂಶ ಆದದ್ದು ನೋಡಬೇಕು ಅಂತ ಆಶೇನೆ ನಿನಗೆ ಅಚ್ಚಿ?"

ಈ ಮಾತು ಕೂಡ ಬಂದುಹೋಯಿತು ಗಠಾಣಿ ಗೌರಮ್ಮಳ ಬಾಯಿಂದ.

ಬಹು ನಮ್ರತೆಯಿಂದ ಆದರಿಸಿ ನುಡಿದಳು ಅಚ್ಚಮ್ಮ,

"ಬ್ರಹ್ಮ ಹಾಕಿದ ಗಂಟು ಯಾರೂ ತಪ್ಪಿಸಲಾರರು, ಇಲ್ಲದ್ದನ್ನು ಯಾರೂ ಹಾಕಲಾರರು. ಆತನ ಇಚ್ಛೆಯತೆ ಎಲ್ಲಾನೂ ಆಗೇ ಆಗ್ತದೆ. ಏಳಮ್ಮ, ಮೈ ತೊಳೆದು ಊಟ ಮಾಡು. ಮೂರು ಗಂಟೆ ಆತು, ಮಾಡಿದ ಅಡಿಗಿ ಆರಿ ಅಂಗಾರ ಆತು."

"ಈ ಬಣ್ಣಗಿತ್ತಿ ಮಾತಾಡಿ ನನ್ನ ಮೋಸ ಮಾಡ್ತೀಯಾ ಅಚ್ಚಿ? ನಿನ್ನ ಅಷ್ಟು ಇದ್ದಾಕಿನ್ನ ಇಷ್ಟು ಮಾಡಿದ್ದಕ್ಕೆ ಇದೇ ಏನೇ ಫಲ? ಏಳು ಅರಿಬಿ ಹಾಸಿ ಬೆಳೆಸಿದನಲ್ಲೇ ಪಾಪಿ...."

ಇನ್ನೂ ಏನೇನು ಅನ್ನುತ್ತಿದ್ದಳೋ ಗೌರಮ್ಮ ! ಅಚ್ಚಮ್ಮ ನಡುವೇ ಬಾಯಿ ಹಾಕಿದಳು

"ನಾನು ಯಾವ ಜನ್ಮದಲ್ಲಿಯೂ ತಾಯಿಯ ಋಣವನ್ನು ತೀರಿಸಲಾರೆ," ಅಮ್ಮಾ, ನಿನ್ನ ಮಾತಿಗೆ ನಾನು ಸ್ವಪ್ನದಾಗೂ ಎರಡು ಬಗೆದಿಲ್ಲ. ಆದರೆ ಇದು ನನ್ನೊಬ್ಬಳ

ಮಾತೊಂದೇ ಅಲ್ಲ. ಅವರು ಒಪ್ಪಬೇಕು."

ಗಢಗ್ ಎಂದು ಒಮ್ಮೆಲೆ ಗದರಿಸಿದಳು ಗೌರಮ್ಮ ಮಗಳನ್ನು

“ಸಾಕು ಮುಚ್ಚೇ ಅಚ್ಚಿ ಬಾಯಿ, ನೀನೋಬ್ಬಾಕೀನೆ ನೋಡು ಈ ಭೂಲೋಕದಾಗ ಪತಿವ್ರತಿ. ಮಾತಿಗೊಮ್ಮೆ ಅವರು ಅವರು, ಅದು ಏನು ಜಾಣದ್ದೂ ಅಲ್ಲ. ಅತ್ತ ಹುಚ್ಚದ್ದೂ ಅಲ್ಲ....?

ನೊಂದ ದನಿಯಲಿ ಅಚ್ಚಮ್ಮ ಆಕ್ಷೇಪಿಸಿದಳು.

“ಅವರನ್ನ ಮಾತ್ರ ಅಲ್ಲಗಳೆದು ಆಡಬ್ಯಾಡಮ್ಮಾ, ಇಡೀ ಲೋಕದ ಕಣ್ಣಾಗ ಅವರು ಹುಚ್ಚಾರೂ ಆಗಲಿ, ನನಗಂತೂ ಸ್ವಾಮಿ ಅವರು. ಅವರ ಮಾತು ಮೀರಿ ನಾನು

ಏನೂ ಮಾಡಲಿಕ್ಕೆ ಸಾಧ್ಯ ಇಲ್ಲ.”

ಅಣಕಿಸುವ ದನಿಯಲ್ಲಿ ಗೌರಮ್ಮ ಆಡಿದರು.

“ಹೂಂ, ಅಲ್ಲೆ ಪಾಪ! ಗಂಡನ ನಾಲಿಗೀ ಮ್ಯಾಲೆ ನಡೆಯೊ ಪತಿವ್ರತಿ ನೀನು, ನಾವೆಲ್ಲ...

“ಹಾಗಲ್ಲಮ್ಮಾ, ಅದೂ ಇಂಥ ವಿಷಯಗಳಲ್ಲಿ ನಾನು ಹೇಗೆ ಸ್ವತಂತ್ರಳಾಗಬಲ್ಲೆ ನಿನೇ ಹೇಳು, ಮುಖ್ಯವಾಗಿ, ಮಾಡಿಕೊಳ್ಳುವ ಹುಡುಗಿಯನ್ನು ಒಪ್ಪಿಸಬೇಕು.

“ಯಾರನ್ನ, ಸರಸಿನ್ನ? ಅವ್ವಯ್ಯ! ಇದೇನು ಹೊಸ ಹೊಸದೆಲ್ಲ ಹೇಳ್ತೀಯಲ್ಲೆ ಅಚ್ಚಿ? ಆ ಮಂಕು ಮುಂಡೇದನ್ನ ಒಪ್ಪಿಸ್ತಾಳಂತೆ, ಎರಡು ತಗದು ಕೆನ್ನೆಗೆ ಕೊಟ್ರೆ ಕುಣಕೋತ ಒಪ್ಪುತ್ತಾಳೆ. ಇದೆಲ್ಲ ಪುರಾಣ ಬಿಚ್ಚಬ್ಯಾಡೆ ನನ್ನ ಮುಂದೆ ಬಾಳಗೆ ಸರಸಿನ್ನ ಕೊಡ್ತಿಯೋ ಇಲ್ಲೋ ಹೇಳಿ ಬಿಡು, ಕೊಡ್ತೀನಿ ಅಂತ ಮಾತು ಕೊಡು, ಎದ್ದು ಎರಡು ತಂಬಿಗೆ ನೀರು ಹಾಕ್ಕೊಂಡು ಅನ್ನ ತಿನ್ತೀನಿ; ನನಗೂ ಒಂದೇ ಸವನೆ ಕರುಳು ಕತ್ತರಸ್ತಾವೆ ಹಸಿವಿಯಿಂದ, ಇಲ್ಲಾ ಕೊಡೋದಿಲ್ಲ ಅನ್ನು. ಅಚ್ಚೀ ಸರಸೀ ಇಬ್ಬರೂ ಸತ್ತರು ಅಂತ ನೀರು ಹಕ್ಕೊಂಡು....”

“ಅಮ್ಮಾ, ಆಡಬಾರದಮ್ಮಾ ಅಂಥಾ ಮಾತುಗಳು ನೀನು.”

“ಮುಚ್ಚೇ ಬಾಯಿ, ನನಗೆ ಧರ್ಮೋಪದೇಶ ಮಾಡ್ತೀಯಾ?”

ಎಲ್ಲಿಂದಲೋ ಬಂದರು ಬ್ರಹ್ಮಾನಂದ ಭಟ್ಟರು.

“ಏಳ್ರೆವ್ವ, ಊಟ ಮಾಡಿರಿ, ಮನಃಪೂರ್ವಕ ನಾ ಕೊಡ್ತೀನಿ ಸರಸ್ವತಿನ್ನ ನಿಮ್ಮ ಬಾಳಗೆ. ಈ ಮಾತು ದೇವರ ಮನೆಯಲ್ಲಿ ನಿಂತು ಆಡೀನಿ, ಏಳ್ರೀ, ಕಾಯಾವಾಚಾ– ಮನಸಾ ಕೊಟ್ಟೀನಿ, ಏಳ್ರೀ, ಸ್ನಾನ ಮುಗಿಸಿ ತೀರ್ಥ ತೊಗೊಳ್ಳರಿ.”

ಸಿಡಿಲು ಬಡಿದಂತಾಯಿತು ಅಚ್ಚಮ್ಮಳಿಗೆ.



ಕಾತರ, ಭಯ, ವಿಸ್ಮಯಗಳಿಂದ ತುಂಬಿದ ಕಣ್ಣಗಳನ್ನು ಹೊರಳಿಸಿ ನೋಡಿದಳು ತನ್ನ ಗಂಡನ ಮುಖವನ್ನು, ಅಚ್ಚಮ್ಮಳಿಗೆ ಪರಮಾಶ್ಚರ್ಯವಾಯಿತು. ತಾನು ಊಹಿಸಿದ ಯಾವ ಭಾವಗಳೂ ಇರಲಿಲ್ಲ ಆ ದಿವ್ಯ ಮುಖದಲ್ಲಿ. ಬ್ರಹ್ಮಾನಂದ ಶಾಸ್ತ್ರಿಗಳ ಮುಖವು ಇನ್ನೂ ಹೆಚ್ಚು ಪ್ರಫುಲ್ಲಿತವಾಗಿದ್ದಿತು. ನಿತ್ಯಾನಂದವು ನೆಲೆಸಿದ್ದಿತು ಅಲ್ಲಿ. ಮಾತಿನಂತೆ ನಡೆಯುವ ದೃಢನಿಶ್ಚಯವು ಮುಖದಲ್ಲಿ ಮೂಡಿ ಮನೆ ಮಾಡಿದ್ದಿತು. ಅದಾವ ಅತೃಪ್ತಿ ಅಶಾಂತಿಗಳೂ ಸುಳಿದಿರಲಿಲ್ಲ ಸಹ.

“ನಾನು ಆಗಲೆ ಅನ್ಲಿಲ್ಲೇನೆ ಅಚ್ಚಿ, ನಿನ್ನ ಗಂಡ ದೇವರಂಥಾ ಮನುಷ್ಯ ಅಂತ. ವ್ಯವಹಾರ ಪ್ರಪಂಚ ಬಲ್ಲ ಬ್ರಾಹ್ಮಣ ಆತನ ಅಭಿಪ್ರಾಯ ಕೇಳಿ, ಆತ ಹೇಳಿದಂತೆ ಮಾಡೋಣ ಅಂದೆ ನಾನು. ಆತಗೇನು ತಿಳೀತಾದೆ ಅಂದಿ ನೀನು. ಹಾಗೆಲ್ಲ ಆಡಬಾರದು ಗಂಡ ಅಂದರೆ ದೇವರು ಇದ್ದಾಗೆ....”

ಸ್ನಾನ ಮಾಡುತ್ತ ಗೌರಮ್ಮ ಮಗಳಿಗೆ ಸತೀಧರ್ಮದ ಮೇಲೆ ದೀರ್ಘ ಉಪನ್ಯಾಸವನ್ನೇ ಮಾಡಿದಳು.

ಗೌರಮ್ಮನ ಮತ್ತು ಶಾಸ್ತ್ರಿಗಳ ಊಟವಾಯಿತು.

ಅಚ್ಚಕ್ಕ ಬಾಯಿ ಎಂಜಲ ಮಾಡಿ ಊಟದ ಶಾಸ್ತ್ರ ಮುಗಿಸಿದಳು. ಕಲಸಿದ ಅನ್ನದಲ್ಲಿ ಎರಡು ಹನಿ ಕಣ್ಣೀರುಯಿದ್ದುದನ್ನು ಕಂಡ ಬ್ರಹ್ಮಾನಂದ ಶಾಸ್ತ್ರಿಗಳು ನಿಂತಲ್ಲಿಂದಲೆ ನುಡಿದರು

“ಛೆ ಹುಚ್ಚಿ! ಆತನ ಇಚ್ಛಾ”

ಮರುದಿನ ಬೆಳಗಾಗುವ ಮುನ್ನವೇ ಗೌರಮ್ಮ ಗಾಡಿ ಬಿಟ್ಟಳು.

“ಯಾಕೆ ಅಷ್ಟು ಅವಸರ? ಇನ್ನೆರಡು ದಿನ ಇದ್ದು ಹೋಗಿರಿ. ಮಾವಿನಹಣ್ಣಿನ ಸುಗ್ಗಿ ಬಂತು ಹೇಗೂ, ಸೀಕರಣೆ ತಿಂದು ಹೋದರಾಯಿತು.

ಶಾಸ್ತ್ರಿಗಳು ಆಗ್ರಹ ಮಾಡಿದು ಅತ್ತೆಯವರಿಗೆ. ಕೇವಲ ಔಪಚಾರಿಕವಾಗಿ ಎಂದೂ ಅಂದವರಲ್ಲ ಬ್ರಹ್ಮಪ್ಪ.

ಇಲ್ಲ ಬರುತೀನಿ. ಬಾಲನ್ನ ನೋಡದೆ ಆಗಲೆ ಒಂದು ದಿನ ಆಯ್ತು”

“ಭಾಸ್ಕರಭಟ್ಟರೇ ಕೈ ಬಾಯಿ ಸುಟ್ಟುಗೊಳ್ಳುತ್ತಿರುತ್ತಾರೆ ಪಾಪ, ಹೋಗಿ ಬನ್ನಿ.”

ಗೌರಮ್ಮಳಿಗೆ ಗಂಡನ ನೆನಪನ್ನು ಮಾಡಿಕೊಟ್ಟರು ಶಾಸ್ತ್ರಿಗಳು.

ಆ ತಾಯಿ ಊರಿಗೆ ಹೋದಳು. ಗ್ರಹಣ ಬಿಟ್ಟ ಚಂದ್ರನಂತಾಯಿತು. ಸರಸ್ವತಿಯ ಮನೆ. ಆದರೆ ಅಚ್ಚಕ್ಕಳ ಮುಖದ ಮೇಲೆ ಮಾತ್ರ ಚಿಂತೆಯ ಗೆರೆಯೊಂದು ಮೂಡಿ ಸ್ಥಿರವಾಗಿ ಮನೆ ಮಾಡಿತು.

ಊರ ತುಂಬ ಬಾಳಪ್ಪನ ಮದುವೆಯ ಮಾತೇ! ಗೌರಮ್ಮ ಮನೆ ಮನೆ ಬೀದಿ ಬೀದಿ ಅಲೆದು ಪ್ರಚಾರದ ಕೆಲಸವನ್ನು ಪೂರೈಸಿ ಬಂದಳು. ರಸ್ತೆ ಬಳೆಯುತ್ತಿದ್ದ ಮಾದಿಗರ ದುರಗನಿಗೂ ಹೇಳಿದಳು. ಮೂರು ಸಾವಿರ ವರದಕ್ಷಿಣೆ, ಮೂರು ನೂರು ವರೋಪಚಾರ, ಮೇಲೆ ಕೈಗಡಿಯಾರ, ಚಿನ್ನದ ಸರಪಣಿಯದೆಂದು. ಪಾತ್ರೆಗಳನ್ನು ಕಲಾಯ ಮಾಡುವ ಗೌಸುಸಾಬಿಗೂ ಹೇಳಿದಳು. ಈ ಆಷಾಢ ಹೋದ ಮೇಲೆಯೇ ಮುಂದಿನ ಮುಹೂರ್ತದಲ್ಲಿ ಲಗ್ನ ಎಂದು.

ರಾತ್ರಿ ಹೊರಗೆ ಕಟ್ಟೆಯ ಮೇಲೆ ಮಲಗಿದ್ದ ಭಾಸ್ಕರಭಟ್ಟರು ಬೆಳಗಾದ ಮೇಲೆ ನೋಡಿದರೆ ಇರಲಿಲ್ಲ. ಯಾವುದೋ ಹೊಲಕ್ಕೆ ಹೋಗಿರಬೇಕೆಂದು ಗೌರಮ್ಮ ಸುಮ್ಮನಾದಳು.

ಕೈಯಲ್ಲೊಂದು ನೀರಪಂಚೆ ಹಿಡಿದು ನೇರವಾಗಿ ಮಗಳ ಊರಿಗೇ ನಡೆದು ಬಂದರು ಮಧ್ಯಾಹ್ನದ ಹೊತ್ತಿಗೆ. ತಲಬಾಗಿಲಲ್ಲಿಯೇ ಕಂಡ ಸರಸ್ವತಿ 'ತಾತ ತಾತ' ಎಂದು ಕುಣಿಯುತ್ತ ಓಡಿ ಬಂದಳು. ಅಡುಗೆ ಸವುಟು ಹಿಡಿದಿದ್ದ ಅಚ್ಚಕ್ಕ ನಡುಮನೆಗೆ ಬಂದಳು. ದೇವರ ಪೂಜೆಗೆ ಕುಳಿತಿದ್ದ ಬ್ರಹ್ಮಾನಂದ ಶಾಸ್ತ್ರಿಗಳು ಗಡಿಬಿಡಿಯಲ್ಲಿ ಕೆಳಗಿಳಿದು ಬಂದು ಮಾವನವರಿಗೆ ನಮಸ್ಕರಿಸಿದರು.

"ತಾವು ನನಗೆ ನಮಸ್ಕಾರ ಮಾಡಬಾರದು ಇದು ತಪ್ಪು."

ಭಾಸ್ಕರಭಟ್ಟರು ಹಿಂದೆ ಸರಿದರು.

"ತಾವು ಹಿರಿಯರು."

"ವಯಸ್ಸಿನಲ್ಲಿ ಮಾತ್ರ. ತಾವು ಜ್ಞಾನವೃದ್ಧರು, ತಪೋನಿಷ್ಠರು, ನಾನು ನಿಮಗೆ ನಮಸ್ಕರಿಸಬೇಕು."

"ಈ ಪಂಚಾಯಿತಿ ದೇವರ ಹತ್ತರ ಬಗೆಹರಿಯಲಿ. ಇಬ್ಬರೂ ದೇವರಿಗೇ ನಮಸ್ಕರಿಸಿಬಿಡಿ"

ಅಚ್ಚಕ್ಕ ಆತ್ಮಾನಂದದಿಂದ ನುಡಿದಳು.

ಸರಸ್ವತಿ ಕಿಲಕಿಲನೆ ನಕ್ಕಳು.

ಭಾಸ್ಕರ ಭಟ್ಟರ ಸ್ನಾನವಾಯಿತು. ಆಹ್ನಿಕವೂ ಸಾಂಗೋಪಾಂಗವಾಗಿ ಸಾಗಿತು.

ಮಧ್ಯೆ ಸರಸ್ವತಿಯನ್ನು ಕುಳ್ಳಿರಿಸಿಗೊಂಡು ಇಬ್ಬರೂ ಊಟ ಮಾಡಿದರು. ಋಷಿಗಳಂತಹ ಬ್ರಾಹ್ಮಣರೀರ್ವರು ಕುಳಿತದ್ದನ್ನು ಕಣ್ತುಂಬ ನೋಡಿ ಅಚ್ಚಕ್ಕಳಿಗೆ ಅದೊಂದು ಬಗೆಯ ಆನಂದಾತಿರೇಕವಾಯಿತು.



ಸ್ವತಃ ಎದುರಿಗೆ ಕುಳಿತು ಮಗಳಿಗೆ ಬಡಿಸಿದರು ಭಾಸ್ಕರಭಟ್ಟರು. ಕೊಂಚ ದೂರದಲ್ಲಿಯೆ ಶಾಸ್ತ್ರಿಗಳೂ ನಿಂತಿದ್ದರು ಎಲೆಗೆ ಸುಣ್ಣ ಹಚ್ಚಿಕೊಳ್ಳುತ್ತ.

"ಹೊಟ್ಟೆತುಂಬ ಉಣ್ಣಮ್ಮ ಅಚ್ಚಾ, ನಿಮಗೊಂದು ಉಪಕಾರ ಮಾಡಲು ಬಂದಿದ್ದೇನೆ ನಾನು"

ಎಲೆ ಬಳೆಯುತ್ತಿದ್ದ ಸರಸ್ವತಿಯ ಕಡೆ ಒಂದು ಬಾರಿ ನೋಡಿ ನುಡಿದರು ಭಾಸ್ಕರಭಟ್ಟರು.

"ಅಪ್ಪಣೆ ಕೊಡಿಸಬೇಕು."

ಗೌರವಾದರಗಳಿಂದ ನುಡಿದರು ಶಾಸ್ತ್ರಿಗಳು.

ಅಚ್ಚಕ್ಕಳಿಗೆ ಕೈಯಲ್ಲಿನ ತುತ್ತು ಕೈಯಲ್ಲಿಯೇ ಉಳಿಯಿತು, ಬಾಯಿ ಹಾಗೆಯೇ ತೆರೆದೇ ಇದ್ದಿತು, ತಾಯಿ ಹಾಕಿ ಹೋಗಿದ್ದ ಉರಲನ್ನು ತಂದೆ ಬಿಗಿಯಾಗಿ ಎಳೆಯಲು ಬಂದಿದ್ದಾರೆ ಎಂದುಕೊಂಡಳೋ ಏನೋ?

"ಸರಸ್ವತಿಗೆ ಉತ್ತಮವಾದ ವರನನ್ನು ತಂದಿದ್ದೇನೆ."

ಅಚ್ಚಕ್ಕಳ ಎದೆಯಲ್ಲಿನ ಡಬಡಬದ ವೇಗ ಇನ್ನೂ ಹೆಚ್ಚಿತು.

ಬ್ರಹ್ಮನಂದ ಶಾಸ್ತ್ರಿಗಳು ಬಾಯಿ ತೆಗೆಯುವುದರಲ್ಲಿದ್ದರು. ನಡುವೇ ಅಚ್ಚಕ್ಕ ಬಾಯಿ ಹಾಕಿದಳು ಅನಿರೀಕ್ಷಿತವಾಗಿ

"ಯಾವ ಊರಿನದಪ್ಪ ವರ?"

"ಊರು ಯಾವದಾದರೇನು? ಸದ್ಯ ಕಾಶಿಯಲ್ಲಿ ಸಂಸ್ಕೃತಾಭ್ಯಾಸಕ್ಕೆ ಇದ್ದಾನೆ. ಚಿಕ್ಕ ವಯಸ್ಸು, ಮಹಾ ಪ್ರತಿಭಾಶಾಲಿ, ಆ ಬ್ರಹ್ಮವರ್ಚಸ್ಸು, ಆ ಜ್ಞಾನ ತೇಜಸ್ಸು ವರ್ಣಿಸಲು ಸಾದ್ಯವಿಲ್ಲ. ಗಣಪತಿ ದೀಕ್ಷಿತ, ಆ ಹುಡುಗನ ಹೆಸರು. ಬೇರೆ ಯಾರೂ ಅಲ್ಲಮ್ಮಾ, ಇದೇ ಊರ ಶಂಕರ ದೀಕ್ಷಿತರ ಮಗ."

ಅಚ್ಚಕ್ಕಳಿಗೆ ಆಕಾಶ ಅರ್ಧ ಅಂಗುಲವೇ ಬಿಟ್ಟಿತ್ತು.

"ಇಲ್ಲ. ಅದು ಸಾಧ್ಯವಿಲ್ಲ. ನಿಮ್ಮ ಮಗ ಬಾಳಪ್ಪನಿಗೆ ಎಂದು ಮಾತು ಕೊಟ್ಟಾಗಿದೆಯಲ್ಲ ಗೌಮ್ಮನವರಿಗೆ"

ಬ್ರಹ್ಮಾನಂದಶಾಸ್ತ್ರಿಗಳ ದನಿಯಲ್ಲಿ ನಿರ್ಧಾರವಿದ್ದಿತು; ಅದಕ್ಕೆ ಅವಶ್ಯವಾದ ಕೊಂಚ ಕಾಠಿಣ್ಯವೂ ಇದ್ದಂತೆ ಕಂಡಿತು ಭಾಸ್ಕರ ಭಟ್ಟರಿಗೆ.

"ಅದು ಬೇಡ ಎಂದು ಹೇಳಲಿಕ್ಕೇ ನಾನು ಈಗ ಬಂದಿದ್ದೇನೆ."

"ನೀವು ಸ್ವತಃ ಮಗನಿಗೇ ದ್ರೋಹ ಮಾಡುತ್ತೀರಾ, ಭಾಸ್ಕರಭಟ್ಟರೇ?"

"ನೀವು ಸ್ವತಃ ಮಗಳಿಗೇ ದ್ರೋಹ ಮಾಡುತ್ತೀರಾ ಬ್ರಹ್ಮಾನಂದಶಾಸ್ತ್ರಿಗಳೇ?"

ಎರಡು ಸಿಂಹಗಳು ಕಾದಾಡಿದಂತೆ ಕಂಡಿತು ಭೀರುವಾಗಿದ್ದ ಅಚ್ಚಮ್ಮಳಿಗೆ.

"ಬಾಳ ಶುದ್ಧ ಹುಚ್ಚ, ಅವಿವೇಕಿ....?"

ಕೊಂಚ ವಿಸ್ತರಿಸಿ ಹೇಳಿದರು ಬಾಳನ ತಂದೆಯವರು.

ಶಾಸ್ತ್ರಿಗಳ ಉತ್ತರವು ಹಿಂದೆಯೇ ಬಂದಿತು.

"ನಿಮ್ಮ ಅಭಿಪ್ರಾಯದಲ್ಲಿ, ನಿಮ್ಮ ಮಗಳ ಅಭಿಪ್ರಾಯದಲ್ಲಿ, ಪ್ರಾಯಶ: ನನ್ನ ಅಭಿಪ್ರಾಯದಲ್ಲಿ ಕೂಡ.... ಆದರೆ..."

"ಮತ್ತೇನು? ಸರಸ್ವತಿ, ಸಾಕ್ಷಾತ್ ಸರಸ್ವತಿ."

ಪುನ: ವಾದವನ್ನು ಮುಂದುವರಿಸಿದರು ಭಾಸ್ಕರಭಟ್ಟರು.

ಶಾಸ್ತ್ರಿಗಳು ಉತ್ತರಿಸಿದರು.

"ಅದೇ ಸರಸ್ವತಿ ಗೌರಮ್ಮನವರ ಅಭಿಪ್ರಾಯದಲ್ಲಿ ನಿರುಪಯುಕ್ತ ಹುಡುಗಿ. ಬಾಳಪ್ಪ ಸಾಕ್ಷಾತ್ ಬೃಹಸ್ಪತಿ."

"ಅಭಿಪ್ರಾಯಗಳೇನೆ ಇರಲಿ, ಸತ್ಯ ಅನ್ನೋದೂ ಒಂದು ಇರುತ್ತದಲ್ಲ ಸೂರ್ಯಪ್ರಕಾಶದಂತೆ."

"ಮೇಘ ಕೂಡಾ ಸೂರ್ಯ ಪ್ರಕಾಶದಷ್ಟೇ ಸತ್ಯ ಯಜಮಾನರೇ. ವಾದಕ್ಕೆ ಸಿಗುವದೊಂದೆ ಸತ್ಯ ಅಲ್ಲ ಅನ್ನುವದನ್ನು ನೀವೂ ಬಲ್ಲಿರಿ. ಸತ್ಯಂ, ಶಿವಂ, ಸುಂದರ."

ಭಸ್ಕರಭಟ್ಟರು ದಿಙ್ಮೂಢರಾದರು. ತುಸು ಹೊತ್ತಿನ ನಂತರ ಬೇರೆ ಶ್ರುತಿ ಹಿಡಿದರು

"ಅಲ್ಲಾ ಶಾಸ್ತ್ರಿಗಳೇ, ತಮಗೆ ಮಗಳು ಅನ್ನುವ ಮೋಹವಾದರೂ ಇಲ್ಲವೇ?"

"ಮಗಳು ಮಾತ್ರ ಮೋಹಕ್ಕೆ ಅರ್ಹಳು. ಭಾವಮೈದುನ ಬಾಳಪ್ಪಮಾತ್ರ ಅಲ್ಲವೇನು ಮಾವನವರೇ?"

ಇಷ್ಟು ಹೊತ್ತು ತೆಪ್ಪಗೆ ಕುಳಿತು, ಧರ್ಮ ಕರ್ತವ್ಯಗಳ ಮಧ್ಯೆ ಜರುಗುತ್ತಿದ್ದ ಕಾಳಗವನ್ನು ನೋಡುತ್ತಿದ್ದ ಅಚ್ಚಕ್ಕಳಿಗೆ ತನ್ನ ತಂದೆಗೆ ಜಯವಿಲ್ಲವೆಂಬುದು ಅರ್ಥವಾಯಿತು. ಮುಳುಗುವವನು ಹಂಚಿಕಡ್ಡಿಯನ್ನು ಹಿಡಿಯುವಂತೆ ತಾನೂ ಒಂದು ಮಾತನಾಡಿದಳು ತಾಗಿದರೆ ತಾಗಲಿ ಎಂದು,

"ನನಗಂತೂ ಎಷ್ಟೂ ಇಷ್ಟವಿಲ್ಲ–ಸರಸ್ವತಿಯನ್ನು ಬಾಳನಿಗೆ ಕೊಡುವುದು."

"ನಿನ್ನ ತಂದೆಯ ಪೀಳಿಗೆ ಇಲ್ಲಿಗೇ ನಿಂತು ಹೋಗಲಿ ಎಂದು ನಿನ್ನ ಇಚ್ಛೆ ಏನು ಹಾಗಾದರೆ?"

ಶಾಸ್ತ್ರಿಗಳು ನೇರವಾದ ಪ್ರಶ್ನೆಯನ್ನು ಬಾಣ ಬಿಟ್ಟರು.

"ಯಾವುದಾದರೂ ಒಂದು ಕನ್ಯೆಯನ್ನು ತಂದು...."



ಅಚ್ಚಕ್ಕನ ಮಾತು ಅಚಕ್ಕನ ಬಾಯಿಯಲ್ಲಿಯೇ ಇದ್ದಿತು ಇನ್ನೂ,

"ನಿನ್ನ ತಮ್ಮನಿಗೆ ನೀನೇ ಕೊಡದಿದ್ದರೆ ಬೇರೆ ಯಾರಾದರೂ ಏಕೇ ಕೊಡ್ತಾರೆ? ಅವರಿಗೆ ಮಾತ್ರ ಮಕ್ಕಳು ಬೀದಿಯಲ್ಲಿ ಸಿಕ್ಕಿರುತ್ತವೆಯೇ?"

ಬ್ರಹ್ಮಾನಂದ ಶಾಸ್ತ್ರಿಗಳ ಪ್ರಶ್ನೆಗೆ ಉತ್ತರವಿಲ್ಲದಾಯಿತು. ಅವರು ಮೆಲ್ಲನೆ ಹೊರಬಂದು ಹೊರಾಂಗಣದಲ್ಲಿ ಶತಪಥ ಮಾಡಹತ್ತಿದರು.

ಅರ್ಧ ಗಂಟೆಯಲಿಯೇ ಭಾಸ್ಕರಭಟ್ಟರು ಊರಿಗೆ ಹೊರಡಲು ಅನುವಾದರು.

"ಒಂದೆರಡು ದಿನ ಇದ್ದು ಹೋಗಬಾರದೇನಪ್ಪಾ? ಇಷ್ಟು ಯಾಕೆ ಅವಸರ?"

ಅಚ್ಚಮ್ಮ ಕಣ್ತುಂಬ ನೀರು ತಂದು ಕೇಳಿದಳು.

"ಇದ್ದು ಮಾಡುವದಾದರೂ ಏನದಮ್ಮ? ಸರಸ್ವತಿನ್ನ ದೇವರೇ ಕಾಪಾಡಬೇಕು."

ಭಾಸ್ಕರಭಟ್ಟರು ಕಂಕುಳಲ್ಲಿ ಮಡಿ ಪಂಚೆ ಇಟುಗೊಂಡು ಹೊರಗೆ ಬಂದರು.

"ನಾನೂ.... ಬರಲಾ ಶಾಸ್ತ್ರಿಗಳೇ?"

"ಇದೇನು ಇಷ್ಟು ಅವಸರ? ನನ್ನ ಮಾತಿನಿಂದ ತಮ್ಮ ಮನಸ್ಸಿಗೆ ನೋವಾಯಿತೇನೋ? ಕ್ಷಮಾ ಬೇಡುತ್ತೇನೆ." ಬ್ರಹ್ಮಾನಂದ ಶಾಸ್ತ್ರಿಗಳು ಮಾವನವರಿಗೆ ಬಾಗಿ ನಮಸ್ಕರಿಸಿದರು.

ಭಾಸ್ಕರಭಟ್ಟರು ಹಿಂದಕ್ಕೆ ಸರಿದರು.

"ಅವನ ಇಚ್ಛೆ ಇದ್ದಂತೆ ಆಗಲಿ."

ಇಬ್ಬರೂ ಒಂದೇ ಬಾರಿಗೆ ಅದೇ ಮಾತನ್ನೇ ನುಡಿದರು.

"ಹೋಗಿ ಬರ್ತೀನಮ್ಮಾ, ಸರಸ್ವತೀ"

ಸರಸ್ವತಿ ಸ್ವಯಂ ಪ್ರೇರಣೆಯಿಂದ ತಾತಯ್ಯನಿಗೆ ನಮಸ್ಕರಿಸಿದಳು.

"ಜೈ ಶಿವೇ"

ಕಣ್ಣು ಮುಚ್ಚಿ ಅವಳ ತಲೆಯ ಮೇಲೆ ಕೈಯಿಟ್ಟರು. ಅಚ್ಚಕ್ಕ ನಮಸ್ಕರಿಸಿದಳು. ಅಲ್ಲಿ ನಿಲ್ಲಲು ಧೈರ್ಯ ಸಾಲದೆ ಉಬ್ಬಿದ ಗಂಟಲಿಂದ ಭಾಸ್ಕರಭಟ್ಟರು ಅವಸರವಸರದಲ್ಲಿ ಹೊರಬಿದ್ದರು.

## ೧೦

ಮನಸ್ಸಿನಲ್ಲಿ ನೆಮ್ಮದಿ ಇಲ್ಲದಿದ್ದರೂ ಮನೆಯನ್ನು ನೆಮ್ಮದಿಯಲ್ಲಿ ಇಡುವ ಸ್ವಭಾವ ಅಚ್ಚಕ್ಕಳದು.

ಬ್ರಹ್ಮಾನಂದಶಾಸ್ತ್ರಿಗಳಿಗೆ ಮತ್ತು ಸರಸ್ವತಿಗೆ ಮಾತ್ರವೇ ಅಲ್ಲ, ಮನೆಗೆ ಬರಹೋಗುತ್ತಿದ್ದ ಯಾರಿಗೂ ಲವಲೇಶಲೋಪವಾಗದಂತೆ ನಡೆಯಿಸಿಕೊಂಡು ಹೋಗುತ್ತಿದ್ದಳು ಅಚ್ಚಕ್ಕ. ಏನೂ ಆಗಿಯೇ ಇಲ್ಲವೇನೊ ಎನ್ನುವಂತೆ ಮನ:ಪೂರ್ತಿ ನಿತ್ಯಕರ್ಮದಲ್ಲಿ ನಿರತಳಾದಳು.

ಬೇವನ್ನು ತಿಂದೂ ಜೇನನ್ನು ಮೆದ್ದವರಂತೆ ಬಾಳುವದು ಹೆಣ್ಣಿಗೂ ಸಾಧಿಸದಿದ್ದರೆ, ಇಷ್ಟು ಗಂಡುಗಳು ಉಳಿಯುತ್ತಿದ್ದವಾದರೂ ಹೇಗೆ ಭೂಮಿಯ ಮೇಲೆ?

ವೈಶಾಖ ಶುದ್ಧ ಪೌರ್ಣಿಮೆ.

ಯಾವ ದೇವರ ಅನುಗ್ರಹವೋ? ಬ್ರಹ್ಮಾನಂದಾಶಾಸ್ತ್ರಿಗಳು ಅಂದು ಗೋಧೂಳಿ ಸಮಯಕ್ಕೇ ಮನೆಗೆ ಬಂದರು.

ಇನ್ನೂ ಅಚ್ಚಕ್ಕಳ ಅಡುಗೆ ಕೂಡ ಆರಂಭವಾಗಿರಲಿಲ್ಲ.

ಸಲುಗೆಯಿಂದ ಕೇಳಿದಳು ಶಾಸ್ತ್ರಿಗಳನ್ನು ಅಚ್ಚಕ್ಕ

"ಏನೂ, ಹಾದಿ ತಪ್ಪಿ ಬಂದೀರೇನು?"

ನಗುತ್ತಲೇ ಉತ್ತರವಿತ್ತರು ಬ್ರಹ್ಮಾನಂದಶಾಸ್ತ್ರಿಗಳು

"ಹಾದಿಸಿಕ್ಕಿದರಲ್ಲವೆ ವಶ್ಯೆ, ತಪ್ಪಲಿಕ್ಕೆ? ಆ ಹಾದಿ ಸಿಗುವದು ಇನ್ನೂ ಯಾವ ಜನ್ಮದಲ್ಲಿಯೊ?"

ಕೈಕಾಲು ಮುಖ ತೊಳೆದು ನೀರಮನೆಯಿಂದ ಹೊರಬಂದವರೆ ಕೇಳಿದರು

"ಸರಸ್ವತಿ ಎಲ್ಲಿ?"

"ಪಕ್ಕದ ಮನೆಯಲ್ಲಿ ಕುಳಿತಿರಬೇಕು, ಅಜ್ಜಿಯ ಹತ್ತಿರ ಕತೆ ಕೇಳುತ್ತ."

ಶಾಸ್ತ್ರಿಗಳು ಚಿಕ್ಕದೊಂದು ಏಣಿಯನ್ನು ತಂದು ಅಟ್ಟದ ಮೇಲೆ ಹತ್ತಿದರು. ಬಟ್ಟೆ ಸುತ್ತಿಟ್ಟಿದ್ದ ಏಕನಾದವನ್ನು ಕೆಳಗಿಳಿಸಿ ತಂದರು.

ಅಂಗಳದ ಕಡೆ ಕಣ್ಣು ಹೊರಳಿಸಿ ನೋಡಿದರು ಒಂದು ಬಾರಿ. ಬೇಸಿಗೆಯ ಬೆಳದಿಂಗಳು. ತಾವು ನಿಂತಿದ್ದ ಭೂಮಿ ಎಲ್ಲವೂ ಅವರಿಗೆ ಒಂದು ಬೆಳ್ಳಿಯ ಬೆಟ್ಟವಾಗಿ ಕಂಡಿತು. ಅಹುದು. ಇದೇ ಆ ಕೈಲಾಸ ಪರ್ವತ ಎಂದು ಅವರ ಕಿವಿಯಲ್ಲಿ ಉಸಿರಿತು ಅವರ ಅಂತರಾತ್ಮ.



ದೇವರ ಕಟ್ಟೆಯ ಮೇಲಿದ್ದ ವಿಭೂತಿಯನ್ನು ಮೂರು ಬೆರಳಿನಿಂದ ಧರಿಸಿ ಕೈಲಿದ್ದ ನಾದಬ್ರಹ್ಮನಿಗೆ ಕುಂಕುಮವನ್ನೇರಿಸಿದರು. ಹೊರ ಅಂಗಣದಲ್ಲಿದ್ದ ಒಂದು ಹಾಸುಬಂಡೆಯ ಮೇಲೆ ಕುಳಿತರು–ಚಂದ್ರನಿಗೆ ಇದಿರಾಗಿ.

ಚಂದ್ರಮನು ಮುಗುಳು ನಗೆಯೊಂದನ್ನು ಬೀರಿದಂತೆ ಭಾಸವಾಯಿತು ಶಾಸ್ತ್ರಿಗಳಿಗೆ. ಪ್ರಶಸ್ತವೂ–ಪ್ರಶಾಂತವೂ ಆಗಿದ್ದ ಆ ವಾತಾವರಣದಲ್ಲಿ ಏಕನಾದವನ್ನು ನುಡಿಸಿದರು.

"ಓಂ!" ಎಂದಿತು ಅದೂ.

ಜಡವಸ್ತುವಾದ ಮಾತ್ರಕ್ಕೆ ಏನಾಯಿತು? ಬ್ರಹ್ಮಾನಂದ ಶಾಸ್ತ್ರಿಗಳ ಕೈಯಲ್ಲಿ ತಾನೆ ಇತ್ತು.

ಓಂಕಾರದ ಸ್ವರವು ಎದ್ದಿತು. ಪುನ: ಪುನ: ಗಾಳಿಯಲ್ಲೆಲ್ಲ ತುಂಬಿತು. ಗಗನದಲ್ಲೆಲ್ಲ ಹಬ್ಬಿತು. ಓಂಕಾರಮಯ ಜಗತ್ ಆಯಿತು.

ಏಕನಾದದ ಶ್ರುತಿಗೆ ಇನ್ನೊಂದು ದನಿ ಸೇರಿತು.

"ಓಂಕಾರ ರೂಪಿಣಿ ಕಲ್ಯಾಣಿ...."

.....ಹಾಡು ಮುಗಿಯುತ್ತ ಬಂದಿತು ಶಾಸ್ತ್ರಿಗಳ ಮುಚ್ಚಿದ ಕಂಗಳಿಗೆ ಸಾಕ್ಷಾತ್ ಕಲ್ಯಾಣಿ ಕಂಡಳು. ಹಾಡು ಮುಗಿಯಿತು. ಕಣ್ತೆರೆದರು, ಸರಸ್ವತಿ ಕಂಡಳು.

ಮಗಳನ್ನು ಬಿಗಿದಪ್ಪಿಕೊಂಡರು.

ಕೈಯಲ್ಲಿ ಸವುಟು ಹಿಡಿದು ಒಳಬಾಗಿಲಲ್ಲಿ ನಿಂತು ನೋಡುತ್ತಿದ್ದ ಅಚ್ಚಮ್ಮಳ ಕಣ್ಣುಗಳು ಪಳಪಳ ಹನಿಗರೆದವು.

ಬ್ರಹ್ಮಾನಂದ ಶಾಸ್ತ್ರಿಗಳು ಮೆಲ್ಲಮೆಲ್ಲನೆ ಭೂಲೋಕಕ್ಕಿಳಿದರು.

ಮದುವೆಯಾಗುವ ಮುಂಚೆಯೇ ಸರಸ್ವತಿ ಸಾಯಬಾರದೇಕೆ? ಎಂದುಕೊಂಡಳು ಅಚ್ಚಕ್ಕ ಒಂದೇ ಬಾರಿ ಥೂ ಇದೆಂತಹ ಹಾಳು ವಿಚಾರ ಎಂದುಕೊಂಡು, ಕಣ್ಣೊರೆಸಿಕೊಳ್ಳುತ್ತ ಅಡುಗೆಮನೆಗೆ ದುಡುದುಡು ನಡೆದಳು.

ತಂದೆ ಮಗಳು ಕುಳಿತು ಊಟ ಮುಗಿಸಿದರು. ಇಬ್ಬರೂ ಎದುರು ಕುಳಿತರು ಅಚ್ಚಕ್ಕಳ ಊಟವಾಗುವವರೆಗೂ, ಸರಸ್ವತಿ ಪುಟುಪುಟು ಓಡಾಡುತ್ತ ತೊಳೆಯುವುದು ಬಳೆಯುವುದು–ಮುಂತಾದವುಗಳಲ್ಲಿ ತಾಯಿಗೆ ನೆರವಾದಳು.

ತಂದೆ ಸಿದ್ಧಮಾಡಿದ್ದ ಹಾಸುಗೆಯಲ್ಲಿ ಮಲಗಿ, ಆ ಮಾತು ಈ ಮಾತು ಆಡುತ್ತಿರುವಾಗಲೇ ನಿದ್ರೆಗೆ ಆರಂಭಿಸಿಬಿಟ್ಟಳು.

"ನಿದ್ದಿ ಬಂತೇನಮ್ಮಾ, ಸರಸ್ವತಿ?"

ಶಾಸ್ತ್ರಿಗಳು ಉತ್ತರ ತಿಳಿದಿದ್ದ ಪ್ರಶ್ನೆಯನ್ನು ಹಾಕುತ್ತ ತಲೆದಿಂಬಿಗೆ ತಲೆ ಇಕ್ಕಿದರು. ಒಂದೆರಡು ತಾಸುಗಳು ಹೊರಳಾಡಿ ನಿದ್ರೆಗೆ ಆರಂಭಿಸಿದರು.

ಸಂನ್ಯಾಸಿನಿಯಂತಿದ್ದ ಅಚ್ಚಕ್ಕ ಚಾಪೆಯೊಂದನ್ನು ಹಾಸಿ ಎಡಗೈಯನ್ನು ತಲೆಗಿಕ್ಕಿಕೊಂಡು ಮಲಗಿದಳು.

ಮೂರನೆಯ ಯಾಮವು ಅದೇ ಆರಂಭವಾಗಿರಬೇಕು. ಪ್ರಾಯಶ: ಮೊದಲ ಕೋಳಿಯು ಕೂಡ ಇನ್ನೂ ಕೂಗಿರಲಿಕ್ಕಿಲ್ಲ. ಸಾಕ್ಷಾತ್ ಶಬ್ದ ದೇವತೆಯೇ ನಿದ್ರೆಯಲ್ಲಿಳಿದು ವಿಶ್ರಾಂತಿ ಹೊಂದಿರುವಳೇನೋ ಅನ್ನಿಸುವಷ್ಟು ನಿಶ್ಯಬ್ದ,ನೀರವ.

ಇದ್ದಕ್ಕಿದ್ದಂತೆ ಧಿಡಿಲ್ ಎಂದು ಎದ್ದು ನಿಂತಳು ಸರಸ್ವತಿ ಹಾಸಿಗೆಯ ಮೇಲೆ.

"ಒಳಗೆ ಕರಿಯಿರಪ್ಪಾ, ಬಂದಿದ್ದಾರೆ ನೋಡು,"

ಗಂಟೆ ಹೊಡೆದಂತೆ ನುಡಿದಳು.

ಬೆಚ್ಚಿಬಿದ್ದು ಒಮ್ಮೆಲೆ ಎದ್ದರು ಇಬ್ಬರೂ.

"ಏನಮ್ಮಾ ಅದು ಸರಸ್ವತಿ? ಮಲಗು, ಮಲಗು"

ಶಾಸ್ತ್ರಿಗಳು ಕೈ ಹಿಡಿದು ಮಲಗಿಸಲು ಯತ್ನಿಸಿದರು.

"ಮತ್ತೆ, ಬಂದರಲ್ಲ. ಅವರು ಬಂದರಲ್ಲ"

"ಏನೋ ಕನಸು ಕಂಡಿರಬೇಕು, ಹುಡುಗಿ."

ಅಚ್ಚಕ್ಕ ಹತ್ತಿರ ಬಂದು ಸರಸ್ವತಿಯ ಬೆನ್ನ ಮೇಲೆ, ತಲೆಯ ಮೇಲೆ ಕೈಯಾಡಿಸಿದಳು, ಮೈದಡವಿ ಮಗಳನ್ನು ಮಲಗಿಸಿದಳು.

ನಿಮಿಷಾರ್ಧದಲ್ಲಿಯೇ ಸರಸ್ವತಿ ಸುಖವಾಗಿ ನಿದ್ರಿಸುತ್ತಿದ್ದಳು.

ಮರುದಿನವೇ ಸೋಮವಾರ, ದೀಪ ಮುಟ್ಟಿಸುವ ಸಮಯ. ಬ್ರಹ್ಮಾನಂದ ಶಾಸ್ತ್ರಿಗಳು ಶಾಲು ಹೊದ್ದು ಹೊರಬಿದ್ದರು. ಹೊರ ಹೊಸ್ತಿಲವರೆಗೂ ಹೋದವರು ಏನನ್ನೋ ಜ್ಞಾಪಿಸಿಕೊಂಡವರಂತೆ ಪುನ: ಒಳಬಂದರು.

"ನೀನೂ ಬರುತ್ತೀ ಏನಮ್ಮಾ ಸರಸ್ವತಿ?"

"ಎಲ್ಲಗೆ ಅಪ್ಪಾ?"

"ಬಾ ಹೋಗಿ ಬರೋಣ, ನಗರೇಶ್ವರ ದೇವಾಲಯಕ್ಕೆ, ಮಂಗಳಾರತಿ ನೋಡಿಕೊಂಡು ಬಂದರಾಯಿತು. ಆರತಿ ಸಮಯದಲ್ಲಿ ಒಂದೆರಡು ಶ್ಲೋಕಗಳನ್ನೂ ಕೂಡ ಹೇಳುವವರಿಲ್ಲದಂತಾಗಿದೆ ಈ ಊರಲ್ಲಿ"

"ಹೋಗಿ ಬಾಮ್ಮಾ, ಸರಸಾ"

ತಾಯಿಯೂ ಕಣ್ಣಸನ್ನೆಯಿಂದಲೇ ನುಡಿದಳು.



ತಂದೆ–ಮಗಳು ಇಬ್ಬರೂ ಜೊತೆಯಲ್ಲಿ ಹೊರಟು ಮಂಗಳಾರತಿ ಸಮಯಕ್ಕೆ ಸರಿಯಾಗಿ ದೇವಾಲಯದ ಮಹಾದ್ವಾರದಲ್ಲಿ ಕಾಲಿಟ್ಟರು. ಪ್ರದಕ್ಷಿಣೆ ಮಾಡಿಕೊಂಡು ಬಂದು ನಗರೇಶ್ವರ ಸ್ವಾಮಿಯ ಮುಂದೆ ಕೈಮುಗಿದು ನಿಂತರು.

ಎಂದೂ ಇಲ್ಲದ ಕಳೆ ಬಂದಿದ್ದಿತು ಅಂದು ಅಲ್ಲಿ. ಅದೇಕೋ ಅನಿರೀಕ್ಷಿತವಾಗಿ ಜನರೂ ಹೆಚ್ಚು ಸೇರಿದ್ದರು. ಹೊಸದಾಗಿ ನಗರೇಶ್ವರ ಸ್ವಾಮಿಗೆ ಮಾಡಿಸಿಟ್ಟಿದ್ದ ಚಿನ್ನದ ಕಿರೀಟ, ಮೀಸೆ, ಹುಬ್ಬುಗಳು ಥಳಥಳಿಸುತ್ತಿದ್ದವು. ಮಂಗಳಾರತಿ ಮುಗಿದ ನಂತರ ಎಲ್ಲರೂ ಅಲ್ಲಲ್ಲಿಯೇ ಕುಳಿತರು.

ಕಂಚಿನ ಗಂಟೆ ಬಾರಿಸಿದಂತೆ ಸುಶ್ರಾವ್ಯವಾಗಿದ್ದಿತು ಕಂಠ, ಗಂಭೀರವಾದ ದನಿ ಸ್ಪಷ್ಟವಾದ ಉಚ್ಚಾರ, ಗಂಗಾನದಿಯ ಪ್ರವಾಹದಂತೆ ಹರಿಯಿತು ವಾಣಿ, "ಅಥಾತೋ ಬ್ರಹ್ಮಜಿಜ್ಞಾಸ:" ಎಂದು ಆರಂಭಿಸಿ ಹದಿನೈದು ನಿಮಿಷಗಳು ಪಂಡಿತರಿಗೂ, ಪಾಮರರಿಗೂ ಕೂಡ ಆನಂದವಾಗುವಂತೆ ಅಥರ್ವಣ ವೇದ ಶ್ರವಣವಾಯಿತು. ಮೂಲೆಯಲ್ಲಿ ಕೈಮುಗಿದು, ಅರೆಗಣ್ಣು ಮುಚ್ಚಿ ನಿಂತ ಕಿರಿ ಪ್ರಾಯದ ಯುವಕನ ಮುಖದ ಮೇಲೆ ಉಕ್ಕುತ್ತಿತ್ತು ಬ್ರಹ್ಮತೇಜಸ್ಸು, ವಾಣಿ ಉನಾದಳಾಗಿ ಹೊರಸೂಸುತ್ತಿದ್ದಳು.

ಆಳು ಅತ್ತ ಅತಿ ಎತ್ತರವೂ ಅಲ್ಲ, ಇತ್ತ ಕಳ್ಳವೂ ಅಲ್ಲ. ಮೈಬಣ್ಣ ಲಿಂಬೆಯ ಹಣ್ಣು, ವಿಶಾಲವಾದ ಹಣೆ, ವಿಭೂತಿ ಮಧ್ಯೆ ಕುಂಕುಮ ಬೊಟ್ಟು, ಕಣ್ಣು, ಮೂಗು, ಬಾಯಿ ಒಪ್ಪುವಂತಿದ್ದವು. ಮೀಸೆಯೊಡೆಯುತ್ತಿದ್ದವು ಮುಖದ ಮೇಲೆ, ಬಲ ಮುಂಗೈಯಲ್ಲಿ ಚಿನ್ನದ ಕಂಕಣ ಥಳಥಳಿಸಿತು.

"ಇವರೇ ನಾನು ಹೇಳಿದ್ದು."

ಆರಂಭದಲ್ಲಿಯೇ ಬೆರಳು ತೋರಿಸಿ ಸರಸ್ವತಿ ತಂದೆಗೆ ಹೇಳಿದ್ದಳು.

"ಯಾರಮ್ಮ ಇವರು?"

ಆಶ್ಚರ್ಯದಿಂದ ವಿಚಾರಿಸಿದ್ದರು ಶಾಸ್ತ್ರಿಗಳು.

"ನಿನ್ನೆ ರಾತ್ರಿ ನಾನು ಹೇಳಲಿಲ್ಲವೇನಪ್ಪಾ, ಒಳಗೆ ಕರಿಯಪ್ಪಾ, ಬಂದಿದ್ದಾರೆ ನೋಡು ಎಂದು, ಇವರೇ ಆಗ ಬಂದವರು."

ಶಾಸ್ತ್ರಿಗಳಿಗೆ ಅತ್ಯಾಶ್ಚರ್ಯವಾಯಿತು. ಈ ಯುವಕ ಊರಿಗೇ ಹೊಸಬ, ತಾವು ಇವನನ್ನು ನೋಡುವದು ಇದೇ ಮೊದಲಬಾರಿ, ಇವನನ್ನು ಸರಸ್ವತಿ ಸ್ವಪ್ನದಲ್ಲಿ ಕಂಡುದಾದರೂ ಹೇಗೆ? ಈಗ ಗುರುತಿಸಿ ಹೇಳುವದಾದರೂ ಎಂತು? ಈ ಯುವಕನ ವರ್ಚಸ್ಸು, ಮುಖಕಾಂತಿ, ಪಾಂಡಿತ್ಯಪೂರ್ಣ ವೇದಶ್ರವಣ, ಮನಮೋಹಕವಾಗಿದ್ದವು.

ಪ್ರಸಾದ ವಿನಿಯೋಗವಾಗಬೇಕು.

ಆ ಅಪರಿಚಿತ ಯುವಕರು ತಂದಿದ್ದ ತೆಂಗಿನಕಾಯಿಯ ಎರಡೂ ಬಟ್ಟಲುಗಳನ್ನು ತಟ್ಟೆಯಲ್ಲಿ ಮಡಗಿಕೊಂಡು ಅರ್ಚಕರು ಗರ್ಭಗುಡಿಯಿಂದ ಹೊರಬಂದರು. ಒಂದು ಬಟ್ಟಲನ್ನು ಅವರಿಗೆ ಕೊಟ್ಟು ಈ ಬದಿ ನೋಡಿದರು

"ನಾನು ಕಾಯಿ ತಂದಿಲ್ಲ."

ಬ್ರಹ್ಮಾನಂದ ಶಾಸ್ತ್ರಿಗಳು ಬಹು ಸಹಜವಾಗಿ ನುಡಿದರು.

"ಪರವಾಯಿಲ್ಲ, ಸ್ವೀಕರಿಸಿ"

ಅರ್ಚಕರು ಆಹ್ವಾನಿಸಿದರು.

"ನಾನು ತೆಗೆದುಕೊಳ್ಳುತೇನೆ."

ಸರಸ್ವತಿ ನೀರಿನ ಮೇಲೆ ತೇಲುವ ಕಮಲದಂತೆ ಬಂದಳು. ಕೈಯೊಡ್ಡಿದಳು, ಫಲವನ್ನು ಸ್ವೀಕರಿಸಿದಳು.

ಗುಡಿಗೆ ಬಂದಿದ್ದ ಭಕ್ತಾದಿಗಳೆಲ್ಲರೂ ಮನೆಗಳಿಗೆ ಹೊರಟರು. ಗುಂಪು ಕಡಿಮೆಯಾಯಿತು.

ಸರಸ್ವತಿಯ ಮನದಲ್ಲಿದ್ದ ಕುತೂಹಲದ ಪ್ರತಿಕ್ರಿಯೆಯೋ ಅಥವಾ ಸ್ವಯಂ ಪ್ರೇರಣೆಯೋ ನಗರೇಶ್ವರ ಸ್ವಾಮಿಯೇ ಬಲ್ಲ. ಅಪರಿಚಿತ ಯುವಕನೂ ಎರಡು ಹೆಜ್ಜೆ ಮುಂದೆ ಬಂದ, ತಂದೆ-ಮಗಳು ಇಬ್ಬರೂ ಎರಡು ಪಥ ಮುಂದಿಕ್ಕಿದರು.

"ಕ್ಷಮಿಸಬೇಕು, ಹಿರಿಯರ ಸಾನ್ನಿಧ್ಯದಲ್ಲಿ ಪಾಂಡಿತ್ಯ ಪ್ರದರ್ಶನ ಮಹಾ ಅಪರಾಧ."

ವಿನಯ, ನಮ್ರತೆ ಪಾಂಡಿತ್ಯಕ್ಕೆ ಭೂಷಣವಾಗಿ ಕಂಡವು, ಚಿನ್ನಕ್ಕೆ ಕುಂದಣವಿಕ್ಕಿದಂತೆ.

"ಪರಮಾನಂದವಾಯಿತು. ಸ್ವಾಮಿಯ ಸಾನ್ನಿಧ್ಯದಲ್ಲಿ ಎಲ್ಲರೂ ಕಿರಿಯರೇ" ಆನಂದದ ನಗುವೊಂದನ್ನು ಬ್ರಹ್ಮಾನಂದಶಾಸ್ತ್ರಿಗಳು ನಕ್ಕು, ಕಿರಿಯನ ಬೆನ್ನ ಮೇಲೆ ಅಭಿಮಾನದಿಂದ ಕೈಯಿಟ್ಟರು, ಮಾತು ಮುಂದುವರಿಸಿದರು.

"ಪರಿಚಯವಾಗಲಿಲ್ಲ"

"ನನ್ನನ್ನು ಗಣಪತಿ ಎಂದು ಕರೆಯುತ್ತಾರೆ ಸ್ವಾಮೀ."

"ಸ್ವಸ್ಥಾನ?"

"ಒಂದು ಕಾಲಕ್ಕೆ ನಮ್ಮದು ಹರಿಹರ, ಕಾರಣಾಂತರದಿಂದ ನನ್ನ ತಂದೆಯವರು ಎರಡು ಮೂರು ವರ್ಷಗಳ ಹಿಂದೆ ಈ ಊರಿಗೆ ಬಂದರು. ಆಗಿನಿಂದಲೂ ಇಲ್ಲಿಯೇ ಇದ್ದಾರೆ."



ಬ್ರಹ್ಮಾನಂದ ಶಾಸ್ತ್ರಿಗಳು ಬಾಯಿ ತೆರೆಯುವ ಮುಂಚೆಯೇ ಸರಸ್ವತಿ ಗುರುತಿಸಿಯೇ ಬಿಟ್ಟಳು.

"ಶಂಕರದೀಕ್ಷಿತರ ಮಕ್ಕಳೇನಪ್ಪಾ ಇವರು?"

ಗಣಪತಿ ಅವಾಕ್ಕಾದ. ಸರಸ್ವತಿಯನ್ನು ನೋಡಿದ

"ಅಹುದಮ್ಮ"

ಸ್ವಾಭಿಮಾನಪೂರ್ಣವಾಗಿ ನುಡಿದ ಗಣಪತಿ.

ಅವನ ಎರಡೂ ಕೈಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು ಶಾಸ್ತ್ರಿಗಳು ಅತ್ಯಂತಾದರೆ ಅಭಿಮಾನಗಳಿಂದ.

"ಕಾಶಿಯಿಂದ ಬಂದಿ ಏನಪ್ಪಾ?"

ಶಾಸ್ತ್ರಿಗಳ ಮುಖದ ಮೇಲೆ ಅದೊಂದು ತಪ್ಪುಗೆರೆ ಮೂಡಿ ಕೂಡಲೆ ಮಾಯವಾಯಿತು.

"ಅಹುದು ಸ್ವಾಮೀ, ತಮ್ಮ ನಾಮಧೇಯವನ್ನು ತಿಳಿಬಹುದೋ?"

ಬ್ರಹ್ಮಾನಂದಶಾಸ್ತ್ರಿಗಳು ಅತಿ ಉದಾಸೀನತೆಯಿಂದ ಮಾತು ತೇಲಿಸಿದರು.

"ಇವನನ್ನು ಬ್ರಹ್ಮಾನಂದ ಎಂದು ಕರೆಯುತ್ತಾರೆ."

ಕೂಡಲೆ ಗಣಪತಿ ಅವರ ಕಾಲಿಗೆ ಎರಗಿದ.

"ತಾವೇನೋ ಬ್ರಹ್ಮಾನಂದಶಾಸ್ತ್ರಿಗಳು ಎಂದರೆ? ನನ್ನ ತಂದೆಯವರು ಇಂದೇ ಹೇಳಿದರು ತಮ್ಮ ವಿಷಯ."

"ಓ! ಈಕೆಯ ಸರಸ್ವತಿ."

"ದೀಕ್ಷಿತರು ಏಕೆ ಬರಲಿಲ್ಲ ದೇವಾಲಯಕ್ಕೆ?"

ಸರಸ್ವತಿ ಪ್ರಶ್ನೆ ಕೇಳಿದ ದನಿಯಲ್ಲಿ ಸೌಜನ್ಯದಿಂದ ಕೂಡಿದ ಅಧಿಕಾರವಿದ್ದಿತು.

"ತುಂಬ ಕಾಹಿಲೆ ತಂದೆ ಅವರಿಗೆ, ಅಗಾಗ್ಗೆ ಪ್ರಜ್ಞೆ ಸಹ ತಪ್ಪುತ್ತದೆ."

ದೀಕ್ಷಿತರನ್ನು ನೋಡಿ ಬರೋಣ, ಬಾಪ್ಪಾ"

ಸರಸ್ವತಿ ಶಾಸ್ತ್ರಿಗಳನ್ನು ಜೈಹಿಡಿದೆಳೆದು ಕೂಡಲೆ ಹೊರಡಿಸೇಬಿಟ್ಟಳು. ಗಣಪತಿ ಮತ್ತು ಶಾಸ್ತ್ರಿಗಳು ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕಬೇಕಾಯಿತು, ಸರಸ್ವತಿಯ ಪುಟುಪುಟು ಓಟದೊಂದಿಗೆ ಬರಲು.

ಗುಡಿಯಿಂದ ಹೊರಡುವ ಮುನ್ನ, ಶಾಸ್ತ್ರಿಗಳ ವಿನಂತಿಯ ಮೇರೆಗೆ ಇನ್ನೊಂದು ಬಾರಿ ಮಂಗಳಾರತಿಯಾಯಿತು, ನಗರೇಶ್ವರಸ್ವಾಮಿಗೆ, ದೀಕ್ಷಿತರ ಆಯುರಾರೋಗ್ಯಕ್ಕಾಗಿ ಎಂಬುದು ಹೇಳದಲೆ ಎಲ್ಲರಿಗೂ ಅರ್ಥವಾಯಿತು.

"ಏನು ಕಾಯಿಲೆಯಪ್ಪಾ ದೀಕ್ಷಿತರಿಗೆ?"

ಶಾಸ್ತ್ರಿಗಳು ವಿಚಾರಿಸಿದರು ದಾರಿಯಲ್ಲಿ.

“ಸಿಹಿಮೂತ್ರವಂತೆ.”

ಶಂಕರ ದೀಕ್ಷಿತರ ಹರಕು–ಮುರಕು ಗುಡಿಸಲ ಬಾಗಿಲಿಗೆ ರಲು ಬಹಳ ಹೊತ್ತು ಬೇಕಾಗಲಿಲ್ಲ.

ಸರಸ್ವತಿಯೇ ಆ ದಂಟಿನ ಬಾಗಿಲನ್ನು ದೂಡಿ ಒಳ ನುಗ್ಗಿದಳು. ಶಂಕರ ದೀಕ್ಷಿತರ ದೃಷ್ಟಿ ನೇರವಾಗಿ ಅವಳ ಮುಖದ ಮೇಲೆಯೇ ಬಿದ್ದಿತು.

“ಸರಸ್ವತೀ”

ಗಟ್ಟಿಯಾಗಿ ಕಿರಿಚಿದರು.

“ತಾತಾ.”

ಅವರ ಮೇಲೆ ಬಿದ್ದು ಅಪ್ಪಿಕೊಂಡಳು. ಬಾಡುತ್ತಿದ್ದ ಮುಖದ ಮೇಲೆಲ್ಲ ಕೈ ಸವರಿದಳು ಸರಸ್ವತಿ. ಆದರೆ ದೀಕ್ಷಿತರಿಗೆ ಸರಸ್ವತಿ ‘ತಾತಾ’ ಎಂದುದೇ ಕೇಳಿಸಲಿಲ್ಲ. ‘ಸರಸ್ವತೀ’ ಎಂದು ಕೂಗಿದ ಕೂಡಲೆ ಮೂರ್ಛೆ ಹೋಗಿದ್ದರು.

ಬಿಕ್ಕಿ ಬಿಕ್ಕಿ ಅಳುತ್ತಿದ್ದ ಮಗಳನ್ನು ಬ್ರಹ್ಮಾನಂದಶಾಸ್ತ್ರಿಗಳು ಹತ್ತಿರ ಕರೆದುಕೊಂಡರು. “ಪುನ: ಎಚ್ಚರಿಕೆಯಾಗಲು ಕಾಲುಗಂಟೆ ಬೇಕು”

ಖಿನ್ನವದನವಾಗಿ ನುಡಿದ ಗಣಪತಿ.

ಪ್ರತಿ ನಿಮಿಷವನ್ನೂ ಯುಗದಂತೆ ಕಳೆಯುತ್ತ ಮೂವರೂ ಕಾದು ಕುಳಿತರು.

“ಔಷಧಿ?”

ಶಾಸ್ತ್ರಿಗಳು ಕೇಳಿದರು.

“ಅವರೇ ತೆಗೆದುಕೊಳ್ಳುತ್ತಾರೆ, ಒಳ್ಳೆಯ ಧನ್ವಂತರಿ ಅವರು, ಅತ್ಯುತ್ತಮ ಮಾತ್ರೆ, ರಸಾಯನ ಎಲ್ಲವೂ ಇವೆ ಅವರ ಬಳಿ, ಸಾಕ್ಷಾತ್ ಸಂಜೀವಿನಿ ಅಂತಹವು ಇವೆ.”

ತುಸು ಹೊತ್ತಿನಲ್ಲಿಯೇ ಶಂಕರದೀಕ್ಷಿತರು ಕಣ್ಣು ತೆರೆದರು. ಸರಸ್ವತಿಯನ್ನು ನೋಡಿದರು. ಹತ್ತಿರ ಕುಳ್ಳಿರಿಸಿಕೊಂಡು ಆಪಾದ–ಮಸ್ತಕ ಕೈಯಾಡಿ ಕಣ್ಣಿಗೆ ಹಚ್ಚಿಕೊಂಡರು.

“ಬ್ರಹ್ಮಪ್ಪಾ”

ಧ್ವನಿಯು ಬಹಳ ಕ್ಷೀಣವಾಗಿದ್ದಿತು. ಕೊನೆಯ ಗಳಿಗೆ ದೂರವಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಿತು.

“ಸ್ವಾಮೀ, ಅಪ್ಪಣೆಯಾಗಲಿ.”

ಬ್ರಹ್ಮಾನಂದ ಶಾಸ್ತ್ರಿಗಳು ಹತ್ತಿರ ಬಂದು ಕೈ ಚಾಚಿದರು.



“ಸಂತೋಷದಿಂದ ಬಾಳಿದೆ ಇಷ್ಟು ದಿನ, ಈಗ ಜಗನ್ಮಾತೆಯ ಆಜ್ಞೆಯಾಗಿದೆ. ಸಂತೋಷದಿಂದ ಸಾಯುತ್ತೇನೆ, ಇಗೋ, ಈ ಗಣಪತಿಯ ಕೈಯನ್ನು ನಿನ್ನ ಕೈಯಲ್ಲಿ ತೆಗೆದುಕೋ, ಇವನೊಬ್ಬ ಸಾಧಕ–ಇವಳು ಸಾಕ್ಷಾತ್ ಸರಸ್ವತಿ, ಜೈ ಶಿವೇ.”

ಶಂಕರ ದೀಕ್ಷಿತರ ಭೂಲೋಕ ಪ್ರಯಾಣ ಸಮಾಪ್ತಿಯಾಯಿತು.

## ೧೧

ನಾಲಿಗೆ ತೇವದಲ್ಲಿ ಓಡಾಡುವ ಕಾರಣ, ಅದಕ್ಕೆ ಒಮ್ಮೊಮ್ಮೆ ಜಾರುವ ಸಂಭವವಿದೆ ಅಂದ ಮಾತ್ರಕ್ಕೆ ಬರೀ ಜಾರುವದೇ ಅದರ ಕೆಲಸವಾಗಿ ಬಿಟ್ಟರೆ ಹೇಗೆ? ನಾಲಿಗೆಗೆ ಎಮಿಕೆ ಇಲ್ಲ ನಿಜ, ಅದನ್ನು ನುಡಿಸುವ ಮುನ್ನ ಬುದ್ಧಿಯ ಬಾಗಿಲನ್ನು ತೆರೆಯುವದೇ ಬೇಡವೆ? ಈ ಎಲ್ಲ ಲಂಪಟ ಯಾರಿಗೆ ಬೇಕು? ನಾಲಗೆಯನ್ನು ಹೋದಂತೆಲ್ಲ ಹರಿಬಿಡುವದೊಂದೇ ಲೋಕದ ಕೆಲಸ, ಕೇಳಿದ್ದನ್ನೆಲ್ಲ ನಂಬುವದು ಮೂರ್ಖರ ಕೆಲಸ.

ಗಣಪತಿ–ಸರಸ್ವತಿ ಗಂಡ–ಹೆಂಡಿರಾಗಿಬಿಟ್ಟರು. ಎಂದೋ ತಾಳಿ ಕಟ್ಟಿಯೂ ಆಯಿತು. ಶೀಘ್ರದಲ್ಲಿಯೇ ಗಣಪತಿ ಸರಸ್ವತಿಯನ್ನೂ ಕರೆದುಕೊಂಡು ತನ್ನ ಸ್ವಸ್ಥಳವಾದ  ಹರಿಹರಕ್ಕೆ ಹೊರಡುವವನಿದ್ದಾನೆ. ಇತ್ಯಾದಿ ಇತ್ಯಾದಿ ವಾರ್ತೆಗಳು ಊರೆಲ್ಲ ಹಬ್ಬಿ, ಕಾಲಿಲ್ಲದೆ ಬೇರೆ ಊರುಗಳಿಗೂ ಉರುಳಿ, ಕೊನೆಗೆ ಗೌರಮ್ಮನ ಕಿವಿಯಲ್ಲಿ ಬಿದ್ದವು.

ಹೆಡೆ ತುಳಿಸಿಕೊಂಡ ಹಾವಿನಂತಾದಳು ಗಂಡುಬೀರಿ ಗೌರಮ್ಮ.

“ಮಣ್ಣು ತೂರಿ ಬರತೀನಿ ಮಣ್ಣು, ಆ ಅಚ್ಚೆರಂಡೀ ಮನಿಮುಂದೆ, ಅಳಿಯ ಅಂಬೋ ಆಷಾಢಭೂತಿ ಆ ಬ್ರಹ್ಮಪ್ಪನ ಮಾನ ಕಾಸಿಗೆ ಪಂಥೇರು ಮಾಡಿ, ಅವನ ತೇರು ಎಳಿಸಿದವನ ಮಾರಿಸಿ ಬರದಿದ್ರೆ ನಾನು ಗೌರಮ್ಮನೇ ಅಲ್ಲ. ಅವನದೇನು ನಾಲಿಗೇ, ಇಲ್ಲಾ ಎದರದಾದರು ಅಟ್ಟೀನೋ? ಏನು ತಿಳಿದಾನೋ ಗೌರಮ್ಮ ಅಂದ್ರೆ,

ಆ ಬೂಟಾಟಿಕೆ ದಾಸಯ್ಯ......”

ಲಗಾಮು ಇಲ್ಲದ ಗೌರಮ್ಮನ ನಾಲಿಗೆ ಬ್ರೇಕು ಇಲ್ಲದ ಜೀಪು ಗಾಡಿಯಂತೆ ಹುಚ್ಚೆದ್ದು ದಿಕ್ಕುತಪ್ಪಿ ಓಡಹತ್ತಿತು. ಅಡ್ಡಸೆರಗು ಕಟ್ಟಿ ಕೈಯಲ್ಲಿದ್ದ ತಂಬಿಗೆಯನ್ನು ಠಪ್ಪೆಂದು ತುದಿಗಟ್ಟೆಗೆ ಗಟ್ಟಿಸಿ, ಪ್ರೇಮ ಪುತ್ಥಳಿ ಬಾಳನಿಗೂ ಹೇಳದೆ, ನಡದೇ ಬಿಟ್ಟಳು ನಡುಮಧ್ಯಾಹ್ನದ ಉರಿಬಿಸಿಲಲ್ಲಿ.

ಸಾಯಂಕಾಲ ತುದಿಗಟ್ಟೆಯ ಮೇಲೆ ಕುಳಿತಿದ್ದಭಾಸ್ಕರಭಟ್ಟರನ್ನೂ ಯಾರೋ ಅಣಕದ ದನಿಯಲ್ಲಿ ಕೆಣಕಿದರು

"ಏನು ಭಟ್ಟರೇ, ನಿಮ್ಮ ಬಾಳನಿಗೆ ಗೊತ್ತು ಮಾಡಿದ ಹುಡುಗಿನ ನಿಮ್ಮ ಅಳಿಯಂದರು ಬ್ಯಾರೆ ಯಾರಿಗೋ ಕೊಟ್ಟು ಲಗ್ನ ಮಾಡಿಬಿಟ್ಟರಂತೆ?"

"ನನ್ನ ಮೊಮ್ಮಗಳು ಅಷ್ಟು ಪುಣ್ಯ ಮಾಡಿಲ್ಲಪ್ಪಾ"

ಭಾಸ್ಕರಭಟ್ಟರ ಉತ್ತರವು ಬಂದಿದ್ದ ಖಿಲಾಡಿಗಳನ್ನು ಮೂಕರನ್ನಾಗಿ ಮಾಡಿತು.

ಬೆಳಕು ಅಂಜಂಜುತ್ತ ಓಡುತ್ತಿದ್ದಿತು. ಕತ್ತಲು ಚಿಕ್ಕ ಚಿಕ್ಕ ಹೆಜ್ಜೆಗಳಿಂದ ಮುಂದುವರಿಯುತ್ತಿತ್ತು. ಕತ್ತಲು ಬೆಳಕುಗಳ ಕಣ್ಣು ಮುಚ್ಚಾಲೆ ಸಾಗಿತ್ತು.

ಗಣಪತಿಯ ಅದೇ ಸಾಯಂ ಸಂಧ್ಯಾವಂದನೆ ಮುಗಿಸಿ ಅರ್ಘ್ಯ ಪಾತ್ರೆಯಲ್ಲಿದ್ದ ನೀರನ್ನು ಅಂಗಳದಲ್ಲಿದ್ದ ತುಳಸಿಯ ಗಿಡಕ್ಕೆ ಎರೆದನು.

"ನನ್ನಿಂದಂತೂ ತಡವಿಲ್ಲ."

ಸರಸ್ವತಿ ದೀಪದ ಮುಂದೆ ಕುಳಿತಳು. ಅಡ್ಡ ಓಲೆಯ ಗ್ರಂಥವೊಂದನ್ನು ಮುಂದಿಕ್ಕಿಕೊಂಡು.

ಸರಸ್ವತಿ ಹತ್ತನೆ ವರ್ಷದ ಮೆಟ್ಟಲನ್ನು ಹತ್ತುತ್ತಿದ್ದಳು ಆಗಿನ್ನೂ ಸೌಂದರ್ಯಕ್ಕಿಂತಲೂ ಹೆಚ್ಚಾಗಿ ಸ್ಪಷ್ಟವಾಗಿದ್ದ ಸಾತ್ವಿಕತೆ, ಅಮಾಯಕತ್ವ ಅವಳ ಮುಖಕ್ಕೆ ಕಾಂತಿಯನ್ನು ಇಮ್ಮಡಿಯಾಗಿ ಬೀರುತ್ತಿದ್ದವು. ನಕ್ಕಾಗ ಅವಳ ಆ ಎಳೆ ಕೆನ್ನಗಳ ಮೇಲೆ ಮೂಡಿ ಮಾಯವಾಗುತ್ತಿದ್ದ ಚಿಕ್ಕ ಚಿಕ್ಕೆಗಳೋ, ಆ ವಿಶಾಲವಾದ ಹಣೆಯಲ್ಲಿ ಕುಣಿಕುಣಿದು ತಣಿಯುವ ಅವಳ ಆಮುಂಗುರುಳೋ?

ಗಣಪತಿ ಗಮನಿಸಿದ್ದರೆ ತಾನೆ ಯಾವುದನ್ನಾದರೂ? ಕರ್ತವ್ಯನಿಷ್ಠನಾದ ಮಿಲಿಟರಿ ಸಾರ್ಜಂಟನು ಸಿಪಾಯಿಗಳಿಗೆ ಕವಾಯತು ಕಲಿಸಿದಂತೆ, ಗಣಪತಿ ಬ್ರಹ್ಮಾನಂದ ಶಾಸ್ತ್ರಿಗಳ ಅಪ್ಪಣೆಯಂತೆ ಸರಸ್ವತಿಗೆ ಪಾಠವನ್ನು ಹೇಳಿಕೊಡುತ್ತಿದ್ದ, ಒಂದು ದಿನ ಅವಳು ತಲೆನೋವೆಂದು ಮೂಲೆಯಲ್ಲಿ ಮಲಗಿದಾಗ, ಅವಳನ್ನು ಹೊತ್ತುಗೊಂಡೇ ಹೋಗಿದ್ದರು. ತಂದು ದೀಪದ ಮುಂದು ಕುಳ್ಳಿರಿಸಿದ್ದ. ಅಚ್ಚಮ್ಮ ಬಂದು ಕೇಳಿಕೊಂಡು ಬಿಡಿಸಿಗೊಂಡು ಹೋಗಿದ್ದರು. ಮಗಳನ್ನು, ಈ ಕವರ್ಾರ್ಥಿಯ ಕೈಯಿಂದ. ಆದಕಾರಣ ಸರಸ್ವತಿಯು ಸಮಯಕ್ಕೆ ಮುಂಚಿತವಾಗಿಯೇ ಬಂದು ಕುಳಿತುಬಿಡುತ್ತಿದ್ದಳು.

"ನನ್ನಿಂದಲೂ ತಡವಿಲ್ಲ. ಇಗೋ ಬಂದೆ?"



ಗಣಪತಿ ಬಂದು ಇದಿರಿನಲ್ಲಿ ಕುಳಿತ. 'ಪಾರ್ವತೀ ಪರಿಣಯವನ್ನು' ಆರಂಭಿಸಿದ. ಪುಸ್ತಕವು ಸರಸ್ವತಿಯ ಕೈಯಲ್ಲಿ, ಪಾಠ ಹೇಳಿಕೊಡುವವನು ಗಣಪತಿ. ಅವನಿಗೆ ಪುಸ್ತಕದ ಅವಸರವೇ ಇಲ್ಲ –ಚಿಕ್ಕಂದಿನಲ್ಲಿಯೇ ಕಂಠಗತವಾದ ಗ್ರಂಥವದು.

ಬ್ರಹ್ಮಾನಂದಶಾಸ್ತ್ರಿಗಳು ಸುತ್ತಾಡಿಕೊಂಡು ಮನೆಗೆ ಬಂದರು. ನೀರ ಮನೆಗೆ ಹೋಗಿ ಕೈಕಾಲು ತೊಳೆದು ಅವರೂ ಒಳಂಗಳಕ್ಕೆ ಬಂದು ನಿಂತರು.

ಕೂಡಲೆ ಗಣಪತಿ ಎದ್ದು ಹೋಗಿ ಕೃಷ್ಣಾಜಿನವನ್ನು ತಂದು ಹಾಕಿದ ಶಾಸ್ತ್ರಿಗಳ ಮುಂದೆ. ಸ್ವಸ್ಥ ಚಿತ್ತದಿಂದ ಕುಳಿತು ಪಾಠ–ಪ್ರವಚನವನ್ನು ಆಲಿಸಿದರು.

ಗಣಪತಿಯ ವಾಗ್ಝರಿ, ಕಂಠದ ಗಾಂಭೀರ್ಯ, ಅಸ್ಖಲಿತವಾಣಿ, ಸ್ಪಷ್ಟ ಉಚ್ಚಾರ ಅವರನ್ನು ಮುಗ್ಧರನ್ನಾಗಿ ಮಾಡಿದವು. ಸರಸ್ವತಿಯಾದರೂ ಯಾವ ಅಂಶದಲ್ಲಿಯೂ ಲವಲೇಶವೂ ಗಣಪತಿಗೆ ಕಡಿಮೆ ಎನಿಸಲಿಲ್ಲ. ಹಿಂದಿನ ರಾತ್ರಿ ಹೇಳಿಕೊಟ್ಟುದೆಲ್ಲವನ್ನೂ ಚಾಚೂ ತಪ್ಪದೆ ಒಪ್ಪಿಸಿಬಿಟ್ಟಳು. ಮುಂದಿನ ಅಧ್ಯಾಯವು ಆರಂಭವಾಯಿತು. ಅಚ್ಚಮ್ಮ ಅದಾವಾಗಲೋ ಅಡುಗೆಮನೆಯಿಂದ ಬಂದು ಒಳ ಬಾಗಿಲಲ್ಲಿ ನಿಂತು ನೋಡುತ್ತಿದ್ದಳು, ಕೇಳುತ್ತಿದ್ದಳು.

ಬ್ರಹ್ಮಾನಂದ ಶಾಸ್ತ್ರಿಗಳಿಗೆ ಒಂದೇ ನೋವು–ಅಯ್ಯೋ! ಶಂಕರ ದೀಕ್ಷಿತರು ಇಲ್ಲವಲ್ಲಾ ಇದನ್ನು ನೋಡಿ ಆನಂದಿಸಲಿಕ್ಕೆ ಎಂಬುದೊಂದೇ.

ಪಾಠವು ಸಾಗಿತ್ತು. ಗಣಪತಿಯ ಗಾಂಭೀರ್ಯದ ದನಿ, ಹಿಂದೆಯೇ ಸರಸ್ವತಿಯ ಮಂಜುಳ ವಾಣಿ.

ಅಡಕಲ ಕೋಣೆಯಲ್ಲಿ ಗೂಳಿ ನುಗ್ಗಿದಂತೆ ಧಿಡಿಲ್ ಎಂದು ತಲ ಬಾಗಿಲನ್ನು ದೂಡಿ ಒಳ ನುಗ್ಗಿದ್ದಳು ಗೌರಮ್ಮ, ಅವಾಕ್ಕಾದರು ಎಲ್ಲರೂ. ಶಾಸ್ತ್ರಿಗಳು ಎದ್ದು ಬಂದರು ಬಾಗಿಲ ಬಳಿ, ಅಚ್ಚಮ್ಮ ಬೇಗ ಬಂದಳು ಪಡಸಾಲೆಗೆ.

ಪಾಠವು ನಿಂತಿತು.

"ಬರ್ರಿ, ಒಳಗೆ ಬರ್ರಿ ನಿಮ್ಮ ಮಗಳು ಇದ್ದಾಳೆ. ಅಡುಗೆ ಮನಿ ಒಳಗೆ" ಶಾಸ್ತ್ರಿಗಳು ಗೌರಮ್ಮನವರಿಗೆ ಸ್ವಾಗತವಿತ್ತರು.

"ಬಾಮ್ಮ, ಇದೇನು ಇದ್ದಕ್ಕಿಂದ್ದಂತೆ ಬಂದುಬಿಟ್ಟೆ? ಮನೆಯಲ್ಲಿ...."

ಇನ್ನೂ ಏನೇನನೋ ಕೇಳಿ ಕ್ಷೇಮಸಮಾಚಾರವನ್ನೂ ವಿಚಾರಿಸುವವಳಿದ್ದಳು ಅಚ್ಚಮ್ಮ. ನಡುವೇ ಬಾಯಿ ಹಾಕಿದರು ಗೌರಮ್ಮನವರು, ಸರಸ್ವತಿಯ ಕೊರಳನ್ನು ದಿಟ್ಟಿಸಿ ನೋಡುತ್ತ, ತಾಳಿ ಇಲ್ಲದುದು ಅವರಿಗೆ ಕೊಂಚ ಉಸಿರು ಕೊಟ್ಟಿತು.

"ಯಾಕವ್ವಾ ಮಾಟಗಾತಿ, ಬರಬಾರದಿತ್ತೇನು? ಇವನು ಯಾರು? ಇವನು ಜುಟ್ಲ್ಯಾ?"

ಗಣಪತಿಯನ್ನು ಸುಟ್ಟುಬೂದಿಯಾಗುವಂತೆ ದುರದುರನೆ ನೋಡಿದಳು ಗೌರಮ್ಮ.

ಗಣಪತಿಗೆ ಅಷ್ಟಕ್ಕೆ ಮುಖ ಕೆಂಪಗಾಯಿತು, ಕಿವಿಗೆ ರಕ್ತವೇರಿತು. ಅಪಮಾನ, ಅಣುಕು, ಅಲಕ್ಷ್ಯಗಳು ಗಣಪತಿಗೆ ಅಭ್ಯಾಸವಾಗಿರಲಿಲ್ಲ. ಎದ್ದು ನಿಂತ ಪರಶುರಾಮನಂತೆ.

"ನಮಸ್ಕಾರ ಮಾಡಿರಿ ಅಜ್ಜೀಗೆ"

ಬ್ರಹ್ಮಾನಂದ ಶಾಸ್ತ್ರಿಗಳು ಇಬ್ಬರಿಗೂ ಹೇಳಿದರು.

ಈರ್ವರೂ ನಮಸ್ಕರಿಸಿದರು. ಹರಸುವದು ಗೌರಮ್ಮಳಿಗೆ ಅರಿಯದ ವಿಷಯ, ಪಾಪ! ಪುನ: ಕೇಳಿದಳು ಕೊಂಚ ಗಡುಸಾಗಿಯೇ,

"ಯಾರಿವನು?"

ಬ್ರಹ್ಮಾನಂದಶಾಸ್ತ್ರಿಗಳು ಇನ್ನೂ ಪ್ರಸ್ತಾವನೆಯಲ್ಲಿರುವಾಗಲೇ ಗಣಪತಿ ನುಡಿದು ಕುಳಿತ

"ಗಣಪತಿ, ಶಂಕರ ದೀಕ್ಷಿತರ ಮಗ ನಾನು."

ಯಾರೆಂದು ತಿಳಿದಿರಿ ನನ್ನನ್ನು? ಎನ್ನುವ ದನಿ ಇದ್ದಿತು ಆ ಸ್ವಾಭಿಮಾನಿ ಯುವಕನ ಮಾತಿನಲ್ಲಿ.

ಗೌರಮ್ಮ ಒಳಗೆ ಸಾಗುತ್ತಲೇ ನುಡಿದರು.

"ಏ ಮುತ್ಯಾಳ, ಆ ಪಂಚಾಂಗದ ಮುದುಕನ ಮಗನಿಗೆ ಇಷ್ಟು ಪಡೆಸು ಏನು? ಇಲ್ಲಿ ಯಾಕೆ ಇದ್ದಾನೆ ಇವನು? ಸರಸೀ ಗಂಡ ಆಗೋ ಅವನು ಇವನೇ ಏನವ್ವಾ, ಅಚ್ಚಿ?"

ಮುಂದೆ ನಿಂತಿದ್ದ ಅಚ್ಚಮ್ಮಳ ಮುಖವನ್ನೊಮ್ಮೆ, ಹಿಂದಿರುಗಿ ಶಾಸ್ತ್ರಿಗಳ ಮುಖವನ್ನೊಮ್ಮೆ ಅರ್ಥಗರ್ಭಿತವಾಗಿ ನೋಡಿದಳು ಗೌರಮ್ಮ.

ಸರಸ್ವತಿ ಈ ಅಜ್ಜಿಯ ಮಾತಿನತ್ತ ಲಕ್ಷ್ಯಗೊಡಲಿಲ್ಲ. ಗಣಪತಿಗೆ ಕೇಳಿಸಲೇ ಇಲ್ಲ.

"ಛೆ ಛೆ ಇಲ್ಲರೆಮ್ಮ."

ಸಹ್ಯವೆನಿಸಲಿಲ್ಲ ಶಾಸ್ತ್ರಿಗಳಿಗೆ ಈ ಪ್ರಶ್ನೆ, ಸರಸ್ವತಿಯ ಲಗ್ನವು ಬಾಳಪ್ಪನೊಡನೆ ತಾವು ಮಾತು ಕೊಟ್ಟ ದಿನವೇ ಆಗಿ ಹೋಗಿದ್ದಿತು ಶಾಸ್ತ್ರಿಗಳ ದೃಷ್ಟಿಯಲ್ಲಿ.

ಬಾಳಪ್ಪಗೆ ಎಂದು ನಿರ್ಣಯ ಆಗಿದೆಯಲ್ಲ ಆಗಲೆ?"



ಗೌರಮ್ಮಳಿಗೆ ಧೈರ್ಯವಾಗುವಂತೆ ಮಾತನಾಡಿದರು ಬ್ರಹ್ಮಾನಂದ ಶಾಸ್ತ್ರಿಗಳು.

"ಹೂಂ...... ನಾನೂ..... ಬ್ಯಾರೆ ಕೇಳಿದ್ದೆ...."

ಗೌರಮ್ಮ ಅನುಮಾನಿಸುತ್ತ ನುಡಿದು, ಮಾತು ಮುಂದುವರಿಸಿದಳು. ಮುಖದ ಮೇಲೆ ಮನೆಮಾಡಿದ್ದ ರೌದ್ರಕ್ಕೆ ತಕ್ಕಂತೆಯೇ ಇದ್ದಿತು ಮಾತೂ ಕೂಡ.

"ಯಾಕಂದ್ರೆ.... ನಾನೂ ಕೇಳಿದ ಹಾಗೆ ಹಾರಿಕಿ ಸುದ್ದೀನ.... ಸರಸಿನ್ನ ಆ ಜುಟ್ಲ್ಯಾಗೆ ಅಂತ.... ಹಾಗೇನಾದರೂ ಗಂಡ-ಹೆಂಡ್ತಿ ಒಳಚಂಚು ಮಾಡಿ...."

"ಛೆ!ಛೆ! ಉಂಟೆ ಎಲ್ಲಾದರೂ".

ಶಾಸ್ತ್ರಿಗಳು ಎರಡೆರಡು ಬಾರಿ ನುಡಿದು ಅತ್ತೆಯವರಿಗೆ ಸಾಕಷ್ಟು ಧೈರ್ಯ ತಂದುಕೊಟ್ಟರು.

ಆದರೂ ಗೌರಮ್ಮ ಮನಸ್ಸಿನಲ್ಲಿ ಮಾಡಿಕೊಂಡು ಬಂದಿದ್ದ ಮಾತುಗಳನ್ನು ಆಡದೆ ಮರಳಿಹೋಗಲು ಸಿದ್ಧವಿರಲಿಲ್ಲ.

"ಆ ಹಸುಗೂಸಿನಂಥ ಬಾಳಪ್ಪಗೆ ದ್ರೋಹ ಮಾಡಿದರೆ ಮನೀನಾರೆ ಉಳಿದೀತೇನು? ಮಾತು ಕೊಟ್ಟೀರಿ ನೀವೂನು.... ನಾನು ಹೇಳಿದ ಇವರಿಗೆ.... ಅವರು ಶಾಸ್ತ್ರಿಗಳು ಒಂದೇ ನಾಲಗಿಯವರೂ ಅಂತ.... ಇದೆಲ್ಲ ಬ್ಯಾಡೇ ಬ್ಯಾಡ, ನಿಶ್ಚಿತಾರ್ಥ ಮಾಡಿಕೊಂಡೇ ಬಾ ಹೋಗು ಅಂತ ಒಂದೇ ಸವನೆ ಬೆನ್ನು ಹತ್ತಿ ಓಡಿಸಿದರು ನನ್ನ.... ಈ ಇವರು .... ಜಡ್ಡಿನಾಕಿನ್ನ...."

ಆಡಿದ ಮಾತಿಗೆ ಸರಿ ಇರಲೆಂದು ಗೌರಮ್ಮ ಗಟ್ಟಿಗಟ್ಟಿಯಾಗಿ' ಮುನುಗಹತ್ತಿದಳು.

"ಲಗ್ನದ ತನಕಾದರೂ ಬದುಕಿರುತೀನೋ ಇಲ್ಲೋ, ಯಾರು ಬಲ್ಲರು? ಈಗೇನು, ಇವತ್ತಿದ್ದವರು ನಾಳಿಗಿಲ್ಲ. ನಿಶ್ಚಿತಾರ್ಥದ ಶಾಸ್ತ್ರನಂತೂ ಮಾಡಿ, ಲಗ್ನ ಪತ್ರಿಕೆ ಬರೆಸಿಬಿಡ್ರಿ, ನಾಲ್ಕು ಮಂದಿ ದೊಡ್ಡ ಮನೆಶ್ಯಾರನ್ನ ಕರಿಸಿ....ಯಾಕೆಂದರೇ......"

"ಐದು ಮಂದಿ ಅನ್ನವ್ವ, ನಾಲ್ಕು ಮಂದಿ ನಾಲ್ಕು ಮಂದಿ ಅನಬ್ಯಾಡ."

ಅಚ್ಚಮ್ಮಳಿಗೆ ಬಹಳ ವಾಗತ್ಯವೆನಸಿತು.

"ಅಗತ್ಯ ಆಗಲ್ರೆವ್ವಾ. ಅದಕ್ಕೆ ಯಾಕೆ ತಡ? ನಾಳೆ ವಾರ, ತಿಥಿ ಎಲ್ಲಾನೂ ಚೆನ್ನಾಗಿ ಅದೆ, ನಾಳೆ ಮುಗಿಸೇ ಬಿಡೋಣ-ಆ ಕಾರ್ಯ."

ಗೌರಮ್ಮ ಕೊಟ್ಟ ಮಾತಿಗೆ ನಿಲ್ಲುವ ಹೆಂಗಸು-ಇತರರು ಕೊಟ್ಟ ಮಾತಿಗೆ?

ಬೆಳಗಾದ ಕೂಡಲೆ ಸುತ್ತಮುತ್ತಲಿನ ಐದು ಜನರನ್ನುಸೇರಿಸಿ, ಕೊಡತೊಗೊಳ್ಳುವುದೆಲ್ಲವನ್ನು ತನ್ನ ಇಚ್ಛೆಯಂತೆ ಬರೆಯಿಸಿ, ಲಗ್ನಪತ್ರಿಕೆಯನ್ನು

ಸಿದ್ದ ಮಾಡಿಸಿಕೊಂಡು, ಉಡಿಯಲ್ಲಿ ಸಿಗಿಸಿಕೊಂಡು ನಡೆದೇ ಬಿಟ್ಟಳು ಗೌರಮ್ಮ ತನ್ನೂರಿಗೆ.

ಒಂದು ಮುಹೂರ್ತವೂ ದೊರೆಯಿತು ಎರಡು ತಿಂಗಳುಗಳಲ್ಲಿಯೆ.

## ೧೨

"ಈ ಎರಡು ತಿಂಗಳಾಗೆ ಹುಡಿಗಿನ್ನ ಅಧ್ವಾನ ಮಾಡಿಡಬ್ಯಾಡವ್ವಾ ಅಚ್ಚಿ. ಸಿಕ್ಕ ಸಿಕ್ಕ ಗಂಡು ಹುಡುಗರ ಜತೀಗೆಲ್ಲ ಕಳಿಸಿ, ಈ ಗಣಪತೀನೋ ಆ ಹೆಣಪತೀನೋ ಯಾರು ಅವನು? ಅವನು ಯಾಕೆ ಮನ್ಯಾಗೆ? ಮಗಳಿಗೆ ಮಂತ್ರ ಕಲಿಸಿ ಏನು ಮಾಡ್ತಾನಂತೆ ನಿನ್ನ ಗಂಡ? ಆಕಿ ಏನು ಶ್ರಾದ್ಧಾ ಮಾಡಿಸಿ ಭೂರಿ ಕೂಳು ತಿಂದು, ಬೆಳ್ಳಿಪಾವಲಿ ದಕ್ಷಿಣೆ ತರೋದೂ ಅಷ್ಟರಾಗೇ ಅದೆ. ಇನ್ನು ಸಾಕು, ಇವೆಲ್ಲ ಹುಚ್ಚು. ಇದುವರೆಗೂ ಅಂದ್ರೆ ಬ್ಯಾರೆನೇ ಇತ್ತು. ಎಂಥಾವರ ಮಗಳಾರೆ ಯಾಕೆ ಆಗಿರವಲ್ಲಳು. ಇನ್ನಮ್ಯಾಲೆ ಮರ್‍ಯಾದಸ್ತ ಗೌರಮ್ಮನ ಸೂಸಿ ಅಂತಾರೆ ಆಕೀಗೆ. ಬಾಳನೂ ಭಾಳಾ ಖಟ್ಟುನಿಟ್ಟಿನ ಹುಡುಗ, ಮಹಾ ಸಿಟ್ಟಿನವನು. ಮತ್ತೆ ಏನಾರೆ ಪ್ರಮಾದ ಆದೀತು. ಆಕೋಣ್ಯಾ ಗಣಪ್ಪನ್ನ ಮೊದಲು ಮನಿಯಿಂದ ಹೊರಗೊಡುಸು...."

ಊರಿಗೆ ಹೊರಡುವ ಮುನ್ನ ಮಗಳಿಗೆರಡು ಮಾತುಗಳನ್ನು ಹೇಳಿದರು. ಮಾತೋಶ್ರೀಯವರು.

ನೀರ ಮನೆಯಲ್ಲಿ ಸ್ನಾನಕ್ಕಿಳಿದಿದ್ದ ಗಣಪತಿ. ತನ್ನ ತಾಯಿಯ ಮಾತನ್ನು ಎಲ್ಲಿ ಕೇಳಿಸಿಗೊಂಡು ಬಿಡುವನೋ ಎಂಬ ಅಂಜಿಕೆ ಕಾಡುತ್ತಿತ್ತು ಅಚ್ಚಕ್ಕಳನ್ನು. ಮಾತೃದೇವಿಯ ಧೀರ್ಘ ಉಪದೇಶವು ಮುಗಿಯುವವರೆಗೂ ಅಚ್ಚಮ್ಮ ಒಂದಲ್ಲ ಒಂದು ಪಾತ್ರೆಯಿಂದ ಸಪ್ಪಳವನ್ನು ಮಾಡುತ್ತಲೇ ಇದ್ದಳು ಅಡುಗೆ ಮನೆಯಲ್ಲಿ, ಈ ಪಾತ್ರೆಗಳ ಢಿಕ್ಕಿಯಿಂದ ಅವು ನುಗ್ಗು ಬಿದ್ದವಾಗಲಿ ಗೌರಮ್ಮಳ 'ತಾಯಿಯ ಕರ್ತವ್ಯ'ದ ಮೇಲಿನ ಉಪನ್ಯಾಸವೇನೂ ಪರಿಸಮಾಪ್ತಿಯಾಗಲಿಲ್ಲ.

ಗಣಪತಿ ಸ್ನಾನ ಮುಗಿಸಿ ದೇವರ ಮನೆಗೆ ಬಂದ. ಸರಸ್ವತಿ ನಿತ್ಯದಂತೆ ದೀಪಾರಾಧನೆಗೆ ಬತ್ತಿ ಎಣ್ಣೆ ಹಾಕಿಕೊಂಡು, ತುಳಸಿ–ಹೂ ತಂದು ಪೂಜೆಗೆ ಅಣಿ ಮಾಡುತ್ತ ಕುಳಿತಳು.

ಈ ದೃಶ್ಯಕ್ಕಿಂತ ಬೇರಿನ್ನೇನು ಬೇಕು ಗೌರಮ್ಮನವರ ಮನದಲ್ಲಿ ಮನೆ ಮಾಡಿದ್ದ ಪಡೆಂಭೂತವನ್ನು ಕೆಣಕಲು? ಮಹಾಕಾಳಿಯ ಅವತಾರವೆತ್ತಿದರು ಸರಸ್ವತಿಯ ಭಾವೀ ಅತ್ತೆಯವರು. ತುಟಿ ಅದುರಿದವು ಸಿಟ್ಟಿನಿಂದ. ಕಣ್ಣಿಂದ ಕಿಡಿ



ಹಾರಿಸಿದರು. ಸಿಡಿಲಿನಂತೆ ಬಿದ್ದಿತು ಅವರ ಕೂಗು ಆ ಶಾಂತತೆಯ ವಾತಾವರಣದಲ್ಲಿ.

"ಏ ಸರಸೀ ಅಂಬೋಳೆ."

ಗಣಪತಿ, ಸರಸ್ವತಿ ಒಮ್ಮೆಲೇ ಬೆಚ್ಚಿಬಿದ್ದರು.

ಇದು ಆಗಬಾರದೆಂದು ಅದೆಷ್ಟೊ ಮುಂಜಾಗ್ರತೆ ವಹಿಸಿದ್ದ ಅಚ್ಚಕ್ಕ ತಾಯಿತ ಅನವಶ್ಯಕ ಆರ್ಭಟಕ್ಕೆ ಗಡಗಡ ನಡುಗಿಬಿಟ್ಟಳು. ಮರುಕ್ಷಣದಲ್ಲಿಯೇ ಧೈರ್ಯವನ್ನು ತಂದುಕೊಂಡು ತಾಯಿಯನ್ನು ಕೆಣಕಿದಳು

"ಅಮ್ಮಾ, ಸ್ವಲ್ಪ ಹೊರಗೆ ಬಾ ನೀನು."

ಅಚ್ಚಮ್ಮನ ದನಿಯಲ್ಲಿ ದರ್ಪವಿದ್ದಿತು. ದೈನ್ಯಾಸವಿದ್ದಿತು. ಅವಿವೇಕಿಗಳಾದ ಹಿರಿಯರಿಗೆ ಬುದ್ಧಿ ಹೇಳುವ ದೃಢ ನಿಶ್ಚಯವೂ ಇದ್ದಿತು. ಎಂದೂ ಯಾರಿಗೂ ಎಷ್ಟೂ ಅಂಜದ ಆ ಗೌರಮ್ಮನನ್ನು ಒಂದೇ ಮಾತಿನಲ್ಲಿ ಹೊರ ತರುವ ಗಡಸೂ ಇದ್ದಿತು.

ಬೊಂಬೆಯಂತೆ ನಡುಮನೆಗೆ ನಡೆದು ಬಂದಳು ಗೌರಮ್ಮ, ದುಸುಮುಸು ಮಾಡುತ್ತ. ಅಡುಗೆ ಸವುಟು ಕೈಯಲ್ಲಿ ಹಿಡಿದು ನಿಂತಿದ್ದ ಮಗಳ ಮುಖವನ್ನು ನೋಡಿದಳು. ಕಣ್ಣನ್ನು ನೋಡಿದಳು. ಅಚ್ಚಮ್ಮಳ ಕಣ್ಣಲ್ಲಿ ಈ ಶಕ್ತಿಯೂ ಇದ್ದಿತೆಂಬುದನ್ನು ಗೌರಮ್ಮ ಕನಸಿನಲ್ಲಿಯೂ ಎಣಿಸಿರಲಿಲ್ಲ.

"ನಾಳೆ ನಿನ್ನ ಮನಿಗೆ ಬಂದಮ್ಯಾಲೆ ನಿನ್ನ ಸೊಸಿನ್ನ ಹ್ಯಾಗೆ ಬೇಕೋ ಹಾಗೆ ನಡಿಸಿಕೊ.ನಮ್ಮ ಮನೆಯಲ್ಲಿ ನಾವು ಹೀಗೇ ಇಡೋದು ಮಕ್ಕಳನ್ನ, ತಿಳಿತೇ."

ಅದೇಕೊ ಗೌರಮ್ಮನವರು ಒಂದೇ ಬಾರಿಗೆ ಜರ್‍ರೆಂದು ಇಳಿದೇ ಹೋದರು. ಆದರೂ ಬಿಡಲಿಲ್ಲ ತಮ್ಮ ಕಸಬನ್ನು

"ಅಯ್ಯ ನಮ್ಮವ್ವ, ನನಗೇ ತಿರಿಗಿ ವಾದಸೋ ಅಷ್ಟು ಬಲಿತೇನು ನೀನು? ನಿನ್ನಂಥ ಅಯೋಗ್ಯಳು ಹ್ಯಾಗೆ ಹುಟ್ಟಿದೇ ನನ್ನ ಹೊಟ್ಯಾಗೆ, ಹುಣ್ಣು ಹುಟ್ಟಿಧಾಗೆ. ಆಕಿದಾರೆ ಇನ್ನೇನು, ನಿನ್ನ ಗುಣಾನ ಅರೆದು ಹೊಯ್ದೀದಿ ಮಗಳಿಗೆ. ಮುಖ್ಯ ನನ್ನ ಬಾಳನ ಪುಣ್ಯ ನೆಟ್ಟಗಿಲ್ಲ, ಅಷ್ಟೆ. ನೋಡಿ ನೋಡಿ ಗಯ್ಯಾಳಿ ಮಗಳನ್ನ ಮಾಡಿಕೊಂಡು ಬಾಳಿವಿ ಮಾಡಬೇಕಾತು ಆ ಕೂಸು.... ಈಗ್ಯಾಕೆ ಬಿಡು ಆ ಮಾತು, ಬಂದೇ ಬಂತಲ್ಲ ಅಕ್ಕನ ಆಟ ಅಂಗಳದಾಗೆ ಅಂತ. ನಾಳೆ ತಾಳೀ ಬಿಗಿಸಿಕೊಂಡು ಮನೀಗೆ ಬರಲಿ, ನಾನೇನು ಅಂಬೋದನ್ನ ತೋರಿಸ್ತೀನಿ.

ನಮ್ಮೂರ ಅಗಸಿಬಾಗಲಾಗಾರೆ ಕಾಲಿಡ್ತೀ ಏನೇ ಅಚ್ಚಿ ನೀನು? ಮಾರಿ ಮಾರಿ ಕೆರಕೊಂಡ್ತಾರೆ ನೋಡ್ತೀ ಏನು ಮಗಳ ಮಾರೀನ?"

"ನಿನ್ನ ಮಗಳ ಗತಿ ಅಲ್ಲಿ ನೋಡುವಂತಿ ಬಾಳನ ಕೈಯಾಗೆ ಕುದುರೀ ಹೊಡಿಯೂ ಛಬಕು ಕೊಡ್ತೀನಿ. ಚರ್ಮ ಸುಲಿಸಿ ಚಪ್ಪಲಿ ಮಾಡಿಸದಿದ್ದರೆ ಈ ಬಹದ್ದೂರ ಮಗಳು ಗೌರಮ್ಮನೇ ಅಲ್ಲ...."

ಪ್ರಾಯಶ: ಪೂರ್ತಿ ಬೆಳೆದಿರಲಿಲ್ಲವೆಂಬ ಕಾರಣದಿಂದಲೇ ಏನೋ ಗೌರಮ್ಮ ಮೀಸೆಯನ್ನು ತಿರುವಲಿಲ್ಲ, ಅಷ್ಟೆ. ಕೈ ಬೀಸುತ್ತ ನಡೆದೇ ಬಿಟ್ಟಳು ತನ್ನ ಊರಿಗೆ.

"ಊಟ ಮಾಡಿಕೊಂಡು ಹೋಗಮ್ಮ...."

ಅಚ್ಚಮ್ಮಳ ಮಾತು ಅರ್ಧಕ್ಕೇ ನಿಂತವು.

ತಲಬಾಗಿಲಲ್ಲಿದ್ದಳು ಆಗಲೇ ಗೌರಮ್ಮ. ಗಂಟಲು ಮಾತ್ರ ಬಾನುಲಿ ಕೇಂದ್ರದಕ್ಕಿಂತಲೂ ಹೆಚ್ಚು ಬಲಶಾಲಿಯಾಗಿದ್ದಿತು. ದಾರಿಯುದ್ದಕ್ಕೂ ಮಂತ್ರಪುಷ್ಪ ಸಾಗಿತು. ನಿರಂಕುಶ ದುರ್ಮತಿಯಾದ ಗೌರಮ್ಮಳ ಬಾಯಿಂದ

"ಉಣಬೇಕಾದ್ದೇ, ಎರಡೆರಡೂ ಕೈಲೆ ಸುರಕೊಂಡು, ಮಾಡಿದ ಫಲ ಭೋಗಾನ. ಮಗಳೂ ಅಂತ ಮಮತೀ ಇಟ್ಟು ನಾನು ಕೆಟ್ಟೆ. ಮುಖ್ಯ ನನ್ನ ಮಗ ಬಾಳ ಕೆಟ್ಟ. ಬಾಳಪ್ಪಗೇನು ಕಡಿಮಿ ಇದ್ದವು ಕನ್ಯಾಗಳು? ಮಾಲಿ ಮಾಡಿ ಹಾಕತಿದ್ದೆ. ಮಾಲಿ, ಕನ್ಯಾಗಳದು. ಮಾತು ಕೊಟ್ಟೇನಿ ಅಂತ ಮಾಡಿಕೋಬೇಕು. ಮೊಮ್ಮಗಳು ಅಂತ ಅಭಿಮಾನ ಇಲ್ಲದಿದ್ರೂನು, ನಾಳೆ ಲೋಕ ಆದರೂ ಏನಂದೀತು? ಎಲ್ಲೀಗೆ ತಯಾರು ಮಾಡ್ಯಾಳೆ ಆಗಲೆ ಮಗಳನ್ನ? ಅದೇನು ಆ ಹುಡುಗನ ಸರಿ ಕಿಸಿಕಿಸಿ ನಗು, ಪಿಸಿಪಿಸಿ ಮಾತು! ಮಂತ್ರ ಯಾಕಂತೆ ಆ ಸರಸೀರಂಡೀಗೆ ಸಾಯಲಿಕ್ಕೆ? ಅವನೆಂಥ ಭಂಡ ಅವನು, ಆ ಅಳಿಯ ಅಂಬೋ ಬ್ರಹ್ಮಪ್ಪ ವಯಸ್ಸಿಗೆ ಬಂದ ಮಗಳನ್ನು ಆ ಒನಿಕಿ ಮೊಂಡನಂಥಾ ಹುಡುಗನ ಜತೀಲೆ ಬಿಟ್ಟು ಬಿಟ್ಟು ಅಡ್ಡಾಡ್ತಾನೆ.... ಬರಲಿ ಬರಲಿ.... ನನ್ನ ಮನೀ ಹೊಸ್ತಿಲದಾಗ ಕಾಲು ಇಟ್ಟಮ್ಯಾಲೆ ಅದು ನನ್ನ ವಸ್ತು, ಈ ಸರಸೀ ಹೆಣಾನಾರೆ ಸಿಕ್ಕೀತೇನು ಅವರಿಗೆ ನೋಡಲಿಕ್ಕೆ? ನನ್ನ–ನನ್ನೇ–ದಂಡಿಸಲಿಕ್ಕೆ ಬರತಾಳೆ ಈ ಅಚ್ಚಿ. ಇವಳ ಹೊಟ್ಟ್ಯಾಗೆ ಬೆಂಕಿ ಹಾಕದಿದ್ದರೆ ನಾನು ಒಂಟಿಗಣ್ಣು ಬವಾನೆವ್ವನ ಮಗಳೇ ಅಲ್ಲ.... ಮಾಡ್ತೀನಿ. ಬಾಳನ್ನ ತಯಾರು ಮಾಡ್ತೀನಿ ಈಗಿಲಿಂದ, ಆ ಸರಸೀಗೆ ಚಿತ್ರಹಿಂಸೆ ಕೊಟ್ಟು ಏಳು ಕೆರಿ ನೀರು ಕುಡಿಸಿ, ಅವಳೆದುರಿಗೆ ಇನ್ನೊಂದು ಹೆಣ್ಣು ತಂದು ಬಾಳಗೆ ಮದುವಿ ಮಾಡ್ತೀನಿ. ಆಳೋ ಗಂಡಿಗೇನಂತೆ ಹೆಣ್ಣಿಗೆ ಕಡಿಮಿ? ದಿಮ್ಮಿರಂಗ ದೀಪಾವಳಿ ಅಂತ ಇರಲಿ ನನ್ನ ಮಗ. ಇಬ್ಬರು ಹೆಂಡ್ರು ಇರಲಿ,



ಮ್ಯಾಲೆ ಹಾಗೇ ಇನ್ನೊಬ್ಬಾಕೀನೂ ಇರಲಿ. ಅವನು ಬೇಕೂ ಅಂದ್ರೆ, ನನ್ನ ಮಗ್ಗೆ ಏನು ಕಡಿಮಿ...."

ಊರು ಮುಟ್ಟುವವರೆಗೂ ಹರಿಯಿತು ನಿರರ್ಗಳವಾಗಿ ಬೈಗಳ ಪ್ರವಾಹ, ಮೂರನೆ ದರ್ಜೆಯ ಮಾತುಗಳೆಷ್ಟೋ, ಮಗಳೆ ಬಗ್ಗೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಕಂಡು ಹಿಡಿದ ಹೊಸ ಹೊಸ ರೀತಿಗಳೆಷ್ಟೋ!

"ಸರಿಸೀ ಬೆನ್ನಿನ ಕೆಳಗೆ ಬರೀ ಹಾಕಸ್ತೀನಿ, ಬಾಳನ ಕೈಯಿಂದ."

ಗೌರಮ್ಮಳ ವಿಷವು ದಾರಿಯುದ್ದಕ್ಕೂ ಬಳಸಿದಂತೆಲ್ಲ ವೃದ್ಧಿಯಾಗುತ್ತಲೇ ಸಾಗಿತ್ತಾಗಲಿ ಕಿಂಚಿತ್ತಾದರೂ ಕಡಿಮೆಯಾಗುವ ಅಪಾಯವಿರಲಿಲ್ಲ ಅದಕ್ಕೆ.

ಮನೆಗೆ ಬಂದವಳೆ, ದೇವರ ಮನೆಯಲ್ಲಿ ಕುಳಿತಿದ್ದ ಗಂಡನೆದುರಿಗೆ ಬೀಸಿ ಎಸೆದಳು ಕುಂಕುಮ ಹಚ್ಚಿದ ಕಾಗದವನ್ನು, ಮಾತಿಲ್ಲದೆ ನೀರ ಮನೆಗೆ ಸಾಗಿದಳು, ನಡುಮನೆಯಲ್ಲಿ ಅದಾವುದೋ ಹುಳುವಿನ ರೆಕ್ಕೆ ಕೀಳುವುದರಲ್ಲಿ ಮಗ್ನನಾಗಿದ್ದ ಬಾಳಪ್ಪನ ತಲೆಯ ಮೇಲೆ ಒಂದು ಬಾರಿ ಕೈಯಾಡಿ.

ಭಾಸ್ಕರಭಟ್ಟರು ದೇವರ ಕಟ್ಟೆಯ ಮೇಲೆ ಬಿದ್ದಿದ್ದ ಕಾಗದವನ್ನು ನೋಡಿದರು ಕಣ್ಣಿಂದ. ಅದೇನೆಂಬುದು ತಿಳಿಯಿತು ಅವರಿಗೆ. ಕೂಡಲೆ ಕೈಯಿಂದ ಮುಟ್ಟಲಿಲ್ಲ. ಬಿಚ್ಚಿ ಓದಲಿಲ್ಲ.

"ಎಲ್ಲರನ್ನು ಕಾಪಾಡುವ ಆ ಜಗನ್ಮಾತೆ ಸರಸ್ವತಿಯನ್ನೂ ಕಾಪಾಡಲಿ."

ಬಾಯಂಗಳದಲ್ಲಿಯೇ ಅಂದುಕೊಂಡು ಪೂಜೆಯನ್ನು ಮುಂದುವರೆಸಿದರು.

ಹಸಿದ ತೋಳನಂತೆ ತಿಂದು ಮುಗಿಸಿದಳು ಗೌರಮ್ಮ, ಗಂಡ ಮಾಡಿಟ್ಟಿದ್ದ ಅನ್ನವನ್ನು ಅವಸರವಸರದಲ್ಲಿ, ಮುದ್ದು ಬಾಳನನ್ನು ಮೂಲೆಯಲ್ಲಿ ಕೂಡಿಸಿಕೊಂಡು ಶಾಂತಿಪಾಠ ಹಾಕಿದಳು ಅದೇ ಮಧ್ಯಾಹ್ನವೇ. ಅಚ್ಚಕ್ಕಳ ಗಯ್ಯಾಳಿತನ, ಬಾಳನ ಹೆಂಡತಿಯಾದ ಸರಸಿಯ ಸ್ವೇಚ್ಛಾಚಾರ ಗಣಪತಿಯೊಂದಿಗೆ, ಇದೆಲ್ಲಕ್ಕೂ ಬ್ರಹ್ಮಾನಂದಭಟ್ಟರ ಒಪ್ಪಿಗೆ, ಇನ್ನೆಷ್ಟೋ ವಿಷಯಗಳನ್ನು ಒಂದೊಂದಾಗಿ ಬಾಳನ ಬರೀ ತಲೆಯಲ್ಲಿ ಭದ್ರವಾಗಿ ಬಿತ್ತಿದಳು. ಬಾಯಿ ತೆರೆದು ಕುಳಿತು ಕೇಳುತ್ತಿದ್ದ ಬಾಳಪ್ಪ ಕಡೆಗೊಂದು ಮುತ್ತಿನಂತಹ ಮಾತನ್ನಾಡಿದ

"ಅವ್ವ, ನನಗೆ ಲಗ್ನನೆ ಬ್ಯಾಡ ಬಿಡವ್ವ."

"ಥೂ, ನಿನ್ನ ಹೆಣ ಹೋಗ. ಇನ್ನೊಮ್ಮೆ ಅಂದಿಗಿಂದಿ ಈ ಮಾತು, ಬಾಯಿಮ್ಯಾಲೆ ಬರಿ ಹಾಕ್ತೀನಿ ಚುಚ್ಚಗ ಕಾಸಿ...."

ಹದಿನಾರು ವರ್ಷದ ಬಾಳಪ್ಪ ದೊಡ್ಡ ದನಿ ತೆಗೆದು ಅಳಹತ್ತಿದ ಅವ್ವ ಹಾಕಿದ ಅಂಜಿಕೆಗೆ.

"ಯಾರು ಸತ್ತರೋ ಬಾಳಾ?"

ಶಾಲಿನ ಮುಸುಕು ಹಾರಿಸಿ ಸಿಟ್ಟಿನಲ್ಲಿ ಎದ್ದು ಕೇಳಿದರು ಉಂಡು ಅಡಕಲ ಕೋಣೆಯಲ್ಲಿ ಮಲಗಿದ್ದ ಭಾಸ್ಕರಭಟ್ಟರು.

"ಸುಮ್ಮನೆ ಮಲಗರಿ ನೀವು, ಅಕಳಾಸಕಳಾ ಆಡಬ್ಯಾಡ್ರಿ ಮದುವಿ ಮನ್ಯಾಗೆ, ಬೂರಿಕೂಳು ತಿಂದ ಆ ಸುಡುಗಾಡು ಬಾಯಿಂದ ಸಾವು, ಶ್ರಾದ್ಧ ಅಲ್ಲದೆ ಇನ್ನೇನು ಒಳ್ಳೆ ಮಾತು ಬಂದಾವು.?"

ಗೌರಮ್ಮ ಪತಿದೇವನ್ನು ಗದರಿಸಿಕೊಂಡಳು.

"ಮದುಮಗನ್ನೆ ನೀನು ಅಂದೆಲ್ಲ ಈಗ ಹೆಣ ಹೋಗ ಅಂತ."

ಭಟ್ಟರು ಬಮ್ಮನೆ ಶಾಲಿನ ಮುಸುಗಿಕ್ಕಿ ಮುಸುಗಿನಲ್ಲಯೆ ಮುಸಿಮುಸಿ ನಕ್ಕರು

ಇತ್ತ ಅಚ್ಚಮ್ಮಳ ಜೀವವು ನೊಂದು ಬೆಂದುಹೋಯಿತು. ತನ್ನಿಂದಾದ ಮಹಾಪರಾಧಕ್ಕಾಗಿ ನೂರು ಬಾರಿ ಶಪಿಸಿಕೊಂಡಳು. ಇಡೀ ದಿನವೆಲ್ಲ ಕಂಬನಿ ತೆರವಿಲ್ಲದೆ ಹರಿಯಿತು. ಯಾರಿಗೂ ಎದುರಾಡಿದ ಪ್ರಾಣಿ ಅಲ್ಲ ಅದು; ತತ್ರಾಪಿ ಹೆತ್ತ ತಾಯಿಗೆ!

ರಾತ್ರಿ ಹನ್ನೆರಡು ದಾಟಿರಬೇಕು. ಸರಸ್ವತಿ, ಗಣಪತಿ ನಿದ್ರೆಯ ಆಳದಲ್ಲಿ ಇಳಿದಿದ್ದರು. ಬ್ರಹ್ಮಾನಂದಶಾಸ್ತ್ರಿಗಳು ಗೊರಕೆ ಕೊರೆಯುತ್ತಿದ್ದರು.

ಅಚ್ಚಮ್ಮ ಮೆಲ್ಲನೆ ಗಂಡನ ಹಾಸಿಗೆಯ ಬಳಿ ಬಂದು ಕಾಲ ಬದಿ ಕುಳಿತಳು. ಪಾದಗಳ ಮೇಲೆ ಮುಖವನ್ನಿಟ್ಟು ಬಿಕ್ಕಿ ಬಿಕ್ಕಿ ಅಳಹತ್ತಿದಳು. ಕಣ್ಣೀರಿನ ಕಾಲುವೆ ಶಾಸ್ತ್ರಿಗಳ ಕಾಲ ಮೇಲೆ ಹರಿಯಿತು. ಶಾಸ್ತ್ರಿಗಳಿಗೆ ಎಚ್ಚರವಾಯಿತು.

"ಏನಾಯಿತು?"

ಶಾಸ್ತ್ರಿಗಳು ಹೆಂಡತಿಯನ್ನು ಸಮಾಧಾನಗೊಳಿಸಲು ಮೈದಡವಿ, ತಲೆಯ ಮೇಲೆ ಕೈಯಾಡಿ, ಕೆನ್ನೆ ಹಿಡಿದು ರಮಿಸಿ ಕೇಳಲಿಲ್ಲ. ಸರಸ್ವತಿಯ ಹುಟ್ಟಿನ ನಂತರ ದೀಕ್ಷಾಬದ್ಧವಾದ ಬ್ರಹ್ಮಚಾರ್ಯ ಬಂದಿದ್ದಿತು ಅವರಿಬ್ಬರ ಜೀವನದಲ್ಲಿಯೂ.

"ಏನಾಯಿತು, ಏಕೆ? ನಿನ್ನ ತಾಯಿಯವರು ಏನಾದರೂ ಅಂದರೇ?"

"ಇಲ್ಲ, ಆಕಿಗೆ ನಾನೇ ಅಂದೆ."



ಈ ಮಾತನ್ನು ಒಪ್ಪಿಗೊಳ್ಳುವಾಗ ಅಚ್ಚಕ್ಕಳ ಆತ್ಮಕ್ಕೆ ಸಹಸ್ರ ಚೇಳುಗಳು ಒಂದೇ ಬಾರಿಗೆ ಕುಟುಕಿದಂತಾಯಿತು.

"ಅದು ಮಹಾಪರಾಧ, ಶಿಕ್ಷೆ ಇದೆ–ಕ್ಷಮೆ ಇಲ್ಲ."

ಮರಣ ದಂಡನೆಯ ತೀರ್ಪು ಕೊಟ್ಟ ನ್ಯಾಯಾಧೀಶನು ಕೂಡಲೆ ಎದ್ದು ಹೊರಡುವಂತೆ ಕಠಿಣವಾಗಿ ನುಡಿದು ಶಾಸ್ತ್ರಿಗಳು ತಲೆದಿಂಬಿಗೆ ತಲೆ ಇಟ್ಟರು.

ಹಾಗೆಯೇ ಕುಳಿತು ಅಳುತ್ತಿದ್ದ ಅಚ್ಚಮ್ಮ ಏನೋ ಹೇಳಲು ಹವಣಿಸಿದಳು.

"ಸರಸ್ವತಿ...."

"ಸರಸ್ವತಿ ನಮ್ಮ ಮಗಳಲ್ಲ. ಶಾಪಗ್ರಸ್ತಳಾದ ಸಾಕ್ಷಾತ್ ಸರಸ್ವತಿ ಅವಳು. ಬಾಳಪ್ಪನನ್ನು ಲಗ್ನವಾಗದೆ ಗತ್ಯಂತರವಿಲ್ಲ. ಶಾಪವಿಮೋಚನೆ ಆಗದು."

ಮಲಗಿದಲ್ಲಿಯೆ ನಿರಾವೇಶದ ದನಿಯಲ್ಲಿ ನುಡಿದು ಕೂಡಲೆ ನಿದ್ರೆಗೆ ಆರಂಭಿಸಿದರು. ಶಾಸ್ತ್ರೀಗಳ ಮುಖದಿಂದ ಶಂಕರದೀಕ್ಷಿತರ ವಾಣಿ!

ಅಚ್ಚಮ್ಮ ಕಾಲ್ತೆಗೆದಳು. ತನ್ನ ಚಾಪೆಗೆ ಸಾಗಿದಳು. ಮನಸ್ಸು ಅದೇಕೋ ಸ್ತಿಮಿತಕ್ಕೆ ಬಾರದೆಂದಿತು. ಶಬ್ದಕ್ಕೆ ಸಿಕ್ಕಿದ ರೀತಿಯಲ್ಲಿ ತವಕಪಡುತ್ತಿದ್ದಿತು ಪುನ: ಎದ್ದು ಸರಸ್ವತಿಯ ಹಾಸಿಗೆಗೆ ಬಂದಳು.

ನಿದ್ರೆಯಲ್ಲಿದ್ದ ಮುದ್ದು ಮಗಳನ್ನು ಕಣ್ತುಂಬ ನೋಡಿದಳು.

"ಸರಸ್ವತಿ ನಮ್ಮ ಮಗಳಲ್ಲ!"

ಗಂಡನು ಆಡಿದ ಮಾತು ನೆನೆಪಾಯಿತು. ತಂದೆಗೆ ಮಾತ್ರವೇ ಹೀಗೆ ಅಂದುಕೊಳ್ಳಲು ಸಾಧ್ಯ. ತಾಯಿ....

## ೧೩

ಹೆಣಕ್ಕೆ ಸಿದಿಗೆ, ಹೆಣ್ಣಿಗೆ ತಾಳಿ ಬಿಗಿಯದಿದ್ದರೆ ಹೇಗೆ?

ಭೂಮಿಗೆ ಬಿದ್ದ ನಂತರ ಭವವು ಬೇಡೆನ್ನಲು ಬಿಡುವದೇ? ಹುಟ್ಟುವಾಗ ನಾವು ಅಳಬೇಕು. ಸಾಯುವಾಗ ಇತರರು ಅಳಬೇಕು. ತನ್ಮಧ್ಯೆ ಸವುಡು ದೊರೆತಾಗಲೆಲ್ಲ, ಕಾರ್ಮೋಡವು ದೂರವಾಗಿ, ಸೂರ್ಯದೇವನ ಕಿರಣವು ಕರುಣಿಸಿದಾಗಲೆಲ್ಲ ಕಿಲಕಿಲನೆ ನಗಬೇಕು. ಅಳು, ನಗು ಎರಡೂ ಒಂದೇ ನಾಣ್ಯದ ಎರಡು ಮುಖಗಳು.

ಎಷ್ಟೂ ಬೇಡವಾದರೂ ನಿಷ್ಠೆಯಿಂದ ಮಾಡಲೇಬೇಕಾದ ಕಾರ್ಯಗಳು ಅವೆಷ್ಟೋ ಜೀವನದಲ್ಲಿ ದೇಹವನ್ನು ಧರಿಸಿ ಬಂದು ದೇಹದ ಕೊಳೆ ತೊಳೆಯಲಾರೆ ಎಂದರೆ ಹೇಗೆ? ಬೇಕು–ಬೇಡಗಳ ಪ್ರಶ್ನೆ ನಮ್ಮದಲ್ಲ. ಮಾಡಬೇಕಾದುದನ್ನು

ಮಾಡಲೇಬೇಕು. ಭುಜವು ನೊಗವನ್ನು ಹೊತ್ತಿದೆಯಲ್ಲ! ಮಾಡುವವನೂ ನೀನೆ, ಮಾಡಿಸುವವನೂ ನೀನೆ, ಮಾಡಿಸಿಕೊಳ್ಳುವವನೂ ನೀನೆ, ನಾನೇನು ಮಾಡಲೋ ಶ್ರೀಹರೀ.....

ಹೀಗೆಯೇ ಅವಿಚ್ಛಿನ್ನವಾಗಿ ಹರಿದಿತ್ತು ಭಾಸ್ಕರಭಟ್ಟರ ವಿಚಾರ ಲಹರಿ, ಮಗನ ಮದುವೆಯ ದಿನ ಪುಣ್ಯಾಹ ಯೋಚನೆಗಾಗಿ ಕುಳಿತಾಗ.

ಸಂಪೂರ್ಣವಾಗಿ ಜೀರ್ಣವಾಗಿದ್ದರೂ, ಅಲ್ಲಲ್ಲಿ ಹಣ್ಣು ಹಣ್ಣಾಗಿದ್ದರೂ ಅಂಚಿನಲ್ಲಿ ಹರಿದು ನಾಯಿಯ ಕಿವಿಯಂತೆ ನೇತಾಡುತ್ತಿದ್ದರೂ ಬೀಗಿತ್ತಿ ಗೌರಮ್ಮ ಉಟ್ಟ ಪೀತಾಂಬರದ ಬಣ್ಣವು ಮಾತ್ರ ಅದೇಷ್ಟೂ ಮಾಸಿರಲಿಲ್ಲ. ಸೀರೆಯಕ್ಕಿಂತಲೂ ಹಳೆಯದಾದ ಜರತಾರೀ ಅಂಚಿನ ಖಣದ ಕುಪ್ಪಸವನ್ನೊಂದು ತೊಟ್ಟಿದ್ದಳು ಬಹಳ ಉತ್ಸಾಹದಿಂದ ಮೂಗಿನಲ್ಲಿ ಮುತ್ತಿಲ್ಲದ ಒಂದು ನತ್ತು ಬಂಡಿಗಾಲಿಯಂತೆ ರಾರಾಜಿಸುತ್ತಿದ್ದಿತು. ನಿಮಿಷಕ್ಕೆ ಮೂರು ಬಾರಿ ಮದುಮಗನನ್ನು ಮುಟ್ಟಿ ಮುಟ್ಟಿ ಮಾತನಾಡಿಸುತ್ತಿದ್ದಳು.

ಮಣೆಯ ಮೇಲೆ ಕುಳಿತಿದ್ದ ಮದುಮಗ ಬಾಳಪ್ಪನಿಗೋ ಬರೀ ಆಕಳಿಕೆ ತೂಕಡಿಕೆ, ನಿದ್ರೆ, ಎಲ್ಲರ ಪಾಲಿನ ಸಿಹಿ ಅವಲಕ್ಕಿ, ರವೆ ಉಂಡೆ, ಬೇಸನ್ನು, ಅತಿರಸ ಗಿಲಗಂಚಿಗಳನ್ನು ಚೆನ್ನಾಗಿ ಮೆದ್ದು ಅರ್ಧ ಗಂಟೆ ಅಳುತ್ತ ಕುಳಿತಿದ್ದ ಕಾಲು ತಿಕ್ಕುತ್ತ ಎಳ್ಳಿನ ಏಳು ಉಂಡೆಗಳನ್ನೂ ನೆಲಗಡಲೆಯ ಹತ್ತು ಉಂಡೆಗಳನ್ನೂ ಕೊಡುವವರೆಗೂ ಲಗ್ನವನ್ನೇ ಮಾಡಿಕೊಳ್ಳುವದಿಲ್ಲ ಎಂದು ಹಠಹಿಡಿದು ಅಳುತ್ತಿದ್ದ ಅಳಿಯದೇವರನ್ನು ಸಂತೈಸುವ ಹೊಣೆ ಬ್ರಹ್ಮಾನಂದಶಾಸ್ತ್ರಿಗಳ ಮೇಲೆಯೇ ಬಿದ್ದಿತು. ಅಚ್ಚಕ್ಕ ಅವನ ಗೋಜಿಗೇ ಬರಲಿಲ್ಲ. ಅದೇಕೋ ಶಾಸ್ತ್ರಿಗಳು ಸ್ವಸಂತೋಷದಿಂದ ಕಾರ್ಯೋನ್ಮುಖರಾದರು. ಅವನು ಬೇಡಿದ್ದ ಬಾಗಿನವನ್ನು ತಂದು ಮುಂದಿಕ್ಕಿ ಬಾಳಪ್ಪನನ್ನು ಸಮಾಧಾನ ಮಾಡುವದು ಅದೇಷ್ಟೂ ಕಷ್ಟದ ಕೆಲಸವಾಗಲಿಲ್ಲ. ಒಳಗಿನಿಂದ ಕುಡಿಯುವ ನೀರು ತರುವ ಒಳಗಾಗಿ ಉಂಡೆಗಳು ಮಾಯವಾದವು–ಪರಮಾತ್ಮನ ಅದ್ಭುತ ಮಾಯೆ! ತಂಬಿಗೆಯೂ ಬರಿದಾಯಿತು.

ಇಷ್ಟೆಲ್ಲವನ್ನೂ ತಿಂದ, ಹೊಟ್ಟೆ ಭಾರವಾಯಿತು. ಹಾವು ಕಡಿದವರಿಗೆ ಆಗಾಗ್ಗೆ ಬರುವಂತೆ ಬಾಲಪ್ಪನ ಕಣ್ಣಿಗೆ ಮಬ್ಬು ಕವಿಯುತ್ತಿತ್ತು. ಮದುವೆಗಾಗಿ ಮಣೆಯ ಮೇಲೆ ಕುಳಿತಾಗ ತೂಕಡಿಸಿ ಒಂದು ಸಲ ಪಕ್ಕದಲ್ಲಿ ಕುಳಿತಿದ್ದ ಸರಸ್ವತಿಯ ಮೇಲೆ ಬಿದ್ದ.

ಕಕ್ಕಾಬಿಕ್ಕಿಯಾದಳು ಅಚ್ಚಕ್ಕ.



ಶಾಪವಿಮೋಚನೆಗೆ ಮೊದಲ ಹೆಜ್ಜೆ ಎಂದು ಮನದಲ್ಲಿಯೇ ಸಂತಸಗೊಂಡರು ಬ್ರಹ್ಮಾನಂದಶಾಸ್ತ್ರಿಗಳು.

ಮುಹೂರ್ತದ ಗಳಿಗೆ ಸಮೀಪಿಸಿತು, ಪುರೋಹಿತರು ಅವಸರ ಮಾಡಿದರು.

'ತದೇವ ಲಗ್ನಂ' ಘೋಷಣೆ ಆಯಿತು. ಹೂಂ ಹೂಂ ಎಂದು ಸಂಜ್ಞೆ ಮಾಡಿದರು ಪುರೋಹಿತರು ಮೇಳದವನಿಗೆ.

ಬಾಳಪ್ಪ ಸರಸ್ವತಿಯ ಕತ್ತಿನಲ್ಲಿ ತಾಳಿಯನ್ನು ಬಿಗಿದ.

ತೆಲುಗು ಕ್ಷೌರಿಕನಾದ ಮೇಳದವನು ಒಂದೇ ಸಮನೆ ಊದಿದ 'ಇದಿ ನ್ಯಾಯಾಮಾ, ಓ ರಾಮಚಂದ್ರಾ' ಎಂಬ ಹಾಡನ್ನು.

ಯಾರು ಕೇಳಬೇಕು ಮೇಳದವನ ಗೋಳನ್ನು.

ಸಂಕಷ್ಟದಲ್ಲಿಯೂ ನಗಬಲ್ಲ ಸಿದ್ಧಿಯನ್ನು ಕೈಯಲ್ಲಿ ಹಿಡಿದುಕೊಂಡೇ ಹುಟ್ಟಿ ಬಂದಿದ್ದ ಭಾಸ್ಕರಭಟ್ಟರೊಬ್ಬರು ಅವನು ಊದುತ್ತಿದ್ದ ಹಾಡಿನ ಅರ್ಥವನ್ನು ಸಂಪೂರ್ಣವಾಗಿ ಗ್ರಹಿಸಿದರು.

'ಭೇಷ್, ಕಾಲೋಚಿತವಾಗಿಯೇ ಇದೆ.'

ಎಂದುಕೊಂಡು ಮುಸಿಮುಸಿ ನಕ್ಕರು ತಮ್ಮಲ್ಲಿಯೇ ತಾವು.

ಬಾಳಪ್ಪ, ಸರಸ್ವತಿಯರ ತಲೆಯ ಮೇಲೆ ಅಕ್ಕಿಕಾಳು ಬಿದ್ದವು. ಮದುವೆ ಎಂಬ ಶ್ರಾದ್ಧನಿಯಮವು ಆಗಿ ಹೋಯಿತು.

ಸಂಜೆಗೆ ನಾಗವಲ್ಲಿ, ಅದೂ ಆಯಿತು. ಮದುವೆಯಿಂದಲೇ ಪಾರು ಮಾಡದ ದೇವನು ನಾಗವಲ್ಲಿ ಪಾರು ಮಾಡುತ್ತಾನೆಯೆ? ನಾಗವಲ್ಲಿ ಮುಗಿಯುವ ವರೆಗೂ ಲಗ್ನವಾದಂತಲ್ಲವಲ್ಲ ಎಂದು ಅದೆಂತಹದೋ ಒಂದು ಸುಳ್ಳು ಸಮಾಧಾನವನ್ನು ಹಚ್ಚಿಕೊಂಡಿದ್ದಳು ಅಚ್ಚಕ್ಕ. ಮುಗಿಯಿತು ಅಚ್ಚಕ್ಕಳ ಕತೆ. ಹಾಸಿಗೆ ಹಿಡಿದಳು.

ಹೆಣ್ಣು ಒಪ್ಪಿಸಿಕೊಳ್ಳುವ ಶಾಸ್ತ್ರವೂ ಆಗಬೇಕಲ್ಲ!

ಸಮಯಕ್ಕೆ ಸರಿಯಾಗಿ ಮುಖ ತಪ್ಪಿಸಿ ಮಾಯವಾಗಿಬಿಟ್ಟರು ಭಾಸ್ಕರಭಟ್ಟರು.

ಒಪ್ಪಿಸಿಕೊಡುವ ಬ್ರಹ್ಮಾನಂದಶಾಸ್ತ್ರಿಗಳು ಬ್ರಹ್ಮನಂದದಿಂದಲೇ ಈ ಕೆಲಸವನ್ನು ನಿರ್ವಹಿಸಿದರು. ಮಾಡಿದರು, ತೊಟ್ಟು ಹನಿಯೂ ಹೊರಡಲಿಲ್ಲ ಅವರ ಕಣ್ಣಿಂದ. ಪ್ರತಿವರ್ಷವೂ ದೇವರ ವಿಗ್ರಹಗಳ ಲಗ್ನ ಮಾಡುವ ಅರ್ಚಕನ ಸ್ಥಾನ ಅವರದು, ಅಂತಃಕರುಣ, ಕರುಳು, ಕಂಬನಿ, ವೇದನೆಗಳಿಗೆ ಅವಶ್ಯಕತೆ ಎಲ್ಲಿದೆ?

ಬಾಳಪ್ಪನ ತೊಡೆಯ ಮೇಲೆ ಮುದ್ದುಮಗಳಾದ ಸರಸ್ವತಿಯನ್ನು ಕುಳ್ಳಿರಿಸಿದ ದೃಶ್ಯವನ್ನು ಕಂಡ ಕೂಡಲೇ ಅಚ್ಚಕ್ಕಳಿಗೆ ಮೂರ್ಛೆ ಬಂದಿತು. ಅಳುವ ಹಂತವನ್ನು ದಾಟಿದ್ದಿತು ಅವಳ ಮನೋಯಾತನೆ.

"ಹೊರಗೆ ಕರೆದೊಯ್ದು ಗಾಳಿ ಹಾಕಿರಿ ಅವಳಿಗೆ."

ಶಾಸ್ತ್ರಿಗಳು ಬಹು ಸಹಜವಾಗಿ ನುಡಿದು ಕೆಲಸವನ್ನು ಸಾಗಿಸಿದರು.

ಗೌರಮ್ಮ ಕನ್ಯೆಯನ್ನು ಒಪ್ಪಿಸಿಗೊಂಡಳು. ಎಲ್ಲರನ್ನೂ ಅಳಿಸಲು ಅಡ್ಡ ಸೆರಗು ಕಟ್ಟಿ ನಿಂತಿದ್ದ ಆಕೆಗೆ ಅಳುವೆಲ್ಲಿಂದ ಬರಬೇಕು?

ಸರಸ್ವತಿ ಪಿಳಿಪಿಳಿ ಕಣ್ಣು ಮಾತ್ರ ಬಿಡುತ್ತಿದ್ದಳು.

ಅಂತೂ ಹೆಣ್ಣು ಒಪ್ಪಿಸುವ ಕಾರ್ಯವು ಯಾರೂ ಅಳದೆ ಮುಗಿದು, ಹೊಸ ಮಾದರಿಯ ರೀತಿಯಲ್ಲಿ ಮುಕ್ತಾಯವಾಯಿತು.

ಬಾಳಪ್ಪನೇ ಒಂದು ಬಾರಿ ಕಿರಿಚಿಕೊಂಡ, ತೊಡೆಯ ಮೇಲೆ ಸರಸ್ವತಿ ಕುಳಿತಿದ್ದಾಗ.

"ಅವ್ವಾ, ಭಾಳ ಭಾರ ಹಾಕ್ತಾಳೆ ಸರಸಿ."

ಕಣ್ಣ ಸನ್ನೆಯಿಂದಲೆ ಗೌರಮ್ಮ ಬಾಳಪ್ಪನನ್ನು ಸುಮ್ಮನೆ ಮಾಡಿ, ಸಿಡಿಪಿಡಿ ಮಾಡುತ್ತ ಸೊಸೆಯನ್ನು ಕೆಳಗಿಳಿಸಿದ್ದಳು.

ಗೌರಮ್ಮ ರಾತ್ರಿ ಮಲಗುವ ಹೊತ್ತಿಗೆ ಪಕ್ಕಾ ಬೀಗಿತ್ತಿಯಾದಳು. ಗೌಜು, ಕಲಹ, ಬೈದಾಟ, ದೂರು, ರಾದ್ಧಾಂತ, ರಂಪೆ ಎಲ್ಲವೂ ಆದವು, ತನಗೆ ಸರಿಯಾಗಿ ಬೀಗರು ಮರ್ಯಾದೆ ಮಾಡಲಿಲ್ಲ. ಮದುಮಗನಿಗೇ ಅರೆಹೊಟ್ಟೆ ಕೂಳೂ ಹಾಕಿದರು. ಎರಡನೇ ತಪ್ಪಲಿಯಲ್ಲಿಯ ಅನ್ನ ಕೊಂಚ ಗಂಡು ಇದ್ದಿತು. ಅಳಿಯನಿಗೆ ಕೊಟ್ಟಿದ್ದ ಮಕುಟ ಅಗಲ ಕಡಿಮೆ, ತಾನು ಹಲ್ಲುಜ್ಜುವಾಗ ಮೇಳದವನು ಮೇಳ ಊದಲಿಲ್ಲ. ಕನ್ನೆಯ ತಂದೆ ಕೇವಲ ಜಾತಿಭ್ರಷ್ಟ–ಇನ್ನೂ ಏನೇನೊ ಅಪವಾದಗಳ ಸುರಿಮಳೆ ಆಯಿತು.

ಉತ್ತರ ಕೊಡಲು ಪ್ರತಿಪಕ್ಷದಲ್ಲಿ ಸರಿಯಾದ ಅಸಾಮಿ ಇಲ್ಲದ ಕಾರಣ ಗೌರಮ್ಮಳು ಸುರುಮಾಡಿದ ಜಗಳವು ಕಳೆಗೊಳ್ಳದೆ ಹೋಯಿತು.

ಅಚ್ಚಕ್ಕ ಯಾವುದಕ್ಕೂ ಬರಲಿಲ್ಲ. ಬ್ರಹ್ಮಾನಂದಶಾಸ್ತ್ರಿಗಳು ಎಲ್ಲವನ್ನೂ ಸಮರ್ಪಕವಾಗಿ ಮಾಡಿಕೊಟ್ಟರು. ಕೇಳಿದುದನ್ನೆಲ್ಲ ತಂದುಕೊಟ್ಟರು. ಯಾವ ವಿಷಯದಲ್ಲಿಯೂ ಬೀಗರಿಗೆ ಕೊರತೆಯಾಗದಂತೆ ಸ್ವತ: ನಿಂತು ನೋಡಿಕೊಂಡು, ಅವರು ಊರಿಗೆ ಹೊರಡುವವರೆಗೂ ರಾಮನ ಮುಂದೆ ಬಾಗಿನಿಂತ ಹನುಮಂತನಂತಾಗಿದ್ದರು.



ಗೌರಮ್ಮ ಸಂಪೂರ್ಣವಾಗಿಯೂ ಸಂಪ್ರದಾಯ ಶರಣಳು–ಸಂಪ್ರದಾವು ಅನುಕೂಲವಾದದ್ದು ಇರುವಾಗ, ಬೀಗರ ಮನೆಯಿಂದ ಏನಾದರೂ ಚಿಕ್ಕ ಬೆಲೆಯ ವಸ್ತವನ್ನು ಹೇಳದೆ ತರುವುದೂ ಗಂಡಿನವರ ಒಂದು ಸಂಪ್ರದಾಯ, ಕನ್ಯೆ ಎಣ್ಣೆ ಸ್ನಾನಕ್ಕೆ ಮುಂಚೆ ತೆಗೆದಿಕ್ಕಿದ್ದ ಚಿನ್ನದ ಮೂರೆಳಿ ಚೈನನ್ನು ಗೌರಮ್ಮ ಮಾಯ ಮಾಡಿದಳು. ಕಸುಬುದಾರೀ ಬಾಳಪ್ಪನ ವಿಷಯದಲ್ಲಿ ಹೊಸದಾಗಿ ಹೇಳುವುದೇನಿದೆ? ಬೆಳ್ಳಿಲೋಟ, ತಾಂಬ್ರದ ತಂಬಿಗೆ, ಕಂಚಿನ ಗಂಟೆ, ಹಿತ್ತಾಳಿ ತಾಬಾಣ, ಕಬ್ಬಿಣದ ಸವುಟು, ರುಬ್ಬುಗುಂಡು, ಒರಳು ಎಲ್ಲವನ್ನು ಜೇಬಿಗೆ ತುಂಬಿದ್ದ ಊರಿಗೆ ಹೊರಡುವ ಹೊತ್ತಿಗೆ.

ಅಂತೂ ಬೀಗರು ಊರು ಬಿಟ್ಟರು. ಗಣಪತಿಯೂ ಹರಿಹರದಿಂದ ಮರಳಿ ಬಂದ; ದೇವನು ನಿಜವಾಗಿಯೂ ದಯಾಮಯ.

## ೧೪

ಎಲ್ಲಿ ನೋಡಿದರೂ ಅದೇ ಲಿಖಿತ, ಊರಿನ ತುಂಬ ಅದೇ ಅದು, ಮನೆ ಗೋಡೆಯ ಮೇಲೆ, ಗುಡಿಸಲ ಬಾಗಿಲ ಮೇಲೆ, ಹಾಳು ಗುಡಿಯಲ್ಲಿ, ಬೀಳುಗೋಪುರದಲ್ಲಿ, ಜನರು ಅಲೆದಾಡುವ ಹೆದ್ದಾರಿಯ ಮೇಲೆ ಕೂಡ ದೊಡ್ಡ ದೊಡ್ಡ ಅಕ್ಷರಗಳಲ್ಲಿ "ಗೋಬ್ರಾಹ್ಮಣ" ಎಂದು ಅದಾರೊ ಕಿಡಿಗೇಡಿಗಳು ಬರೆದು ಬಿಟ್ಟಿದ್ದರು.

ಬೆಳಿಗ್ಗೆ ಸೂರ್ಯೋದಯದ ಮುಂಚೆಯೇ ಮಾಮೂಲಿನಂತೆ ಗೌರಮ್ಮ ಬಾಗಿಲು ತೆರೆದಳು. ಕೀಲೆಣ್ಣೆಯಿಂದ ಬಾಗಿಲ ಮೇಲೆ ಅದೇನನ್ನೊ ದಪ್ಪವಾಗಿ ಬರೆದಿದ್ದರು. ಸಾಕ್ಷಾತ್ ಸರಸ್ವತೀ ಶತ್ರುವಾಗಿದ್ದ ಅವಳಿಗೆ ಹೇಗೆ ಗೊತ್ತಾಗಬೇಕು ಅದೇನೆಂಬುದು? ಅದೇ ಎದ್ದು ಅಂಗೈ ನೋಡಿಕೊಳ್ಳುತ್ತ "ಕರಾಗ್ರೇ ವಸತೇ ಲಕ್ಷ್ಮೀ, ಕರಮಧ್ಯೇ ಸರಸ್ವತಿ...." ಎಂದು ಹೇಳಿಕೊಳ್ಳುತ್ತಿದ್ದ ಭಾಸ್ಕರಭಟ್ಟರನ್ನು ಒಂದೇ ಉಸುರಿನಿಂದ ಕೂಗಿಕೊಂಡಳು.

"ಇಲ್ಲಿ ಬರ್ರಿ, ಇಲ್ಲೆ ಭಡಾನೆ, ಬಂದಿರಾ? ಭಡಾನೆ ಬರ್ರಿ ಅಂದ್ರೆ, ಇನ್ನ ಬೆಕ್ಕಿನ ಹಾಗೆ ಆಕಳಿಸಿಗೋತ ಹಾಸಿಗೆ ಮ್ಯಾಲೆ ಕೂತೀರೇನು? ಇದು ಯಾರದಿದು ಕೆಲಸ? ಬಂದಿರಾ...."

ಅಲಾರಾಂ ಗಡಿಯಾರದಂತೆ ಒಂದೇ ಸವನೆ ಹೊಡೆದುಕೊಳ್ಳುತ್ತಿದ್ದ ಶನಿಯಂತಹ ಗೌರಮ್ಮನ ಬಾಯಿ ಮುಚ್ಚಿಸಲು ಬೇರಾವ ಮಾರ್ಗವಿದೆ?

ಗೌರಮ್ಮಳ ಗಂಟಲು ಒತ್ತಿದ ಸೂಲಗಿತ್ತಿಯ ಮನೆ ಹಾಳಾಗಲಿ ಎಂದು ಬಾಯಂಗಳದಲ್ಲಿಯೇ ಶಪಿಸುತ್ತ ಭಾಸ್ಕರಭಟ್ಟರು ಹೊರಬಂದರು.

ಬಾಗಿಲಮೇಲೆ ಭವ್ಯವಾಗಿ ಬರೆಯಲ್ಪಟ್ಟಿದ್ದ ಮುತ್ತಿನಂತಹ ಅಕ್ಷರಗಳನ್ನು ತೋರಿಸಿದಳು ಗೌರಮ್ಮ ತನ್ನ ಗಂಡನಿಗೆ.

"ಏನಂತಿದು? ಸ್ವಲ್ಪ ಓದಿರಿ. ಇದರ ಅರ್ಥ ಏನು ನನಗೆ ಹೇಳಿರಿ. ಯಾವ ರಂಡೇ ಗಂಡರದು ಇದ್ದೀತು ಈ ಕೆಲಸ ಅಂತೀನಿ."

ಮೊದಲು ಭಾಸ್ಕರಭಟ್ಟರಿಗೂ ತಿಳಿಯಲಿಲ್ಲ ಇದರ ಗೂಢಾರ್ಥ. ಒಂದು ಮಟ್ಟದ ಸಂಸ್ಕೃತಿಯಲ್ಲಿ ಬಾಳಿದವನಿಗೆ, ಬಹು ಕೀಳು ಮಟ್ಟಕ್ಕೆ ಇಳಿದು ನೋಡುವುದು ಅಷ್ಟು ಸುಲಭದ ಕೆಲಸವಲ್ಲ.

"ನಿಮಗೂ ಅಕ್ಷರಗಳೇ ಮರೆತು ಹೋದವೋ ಏನು ಮಣ್ಣು? ಮಿಕಿಮಿಕಿ ನೋಡಕೋತ ಕೂತುಬಿಟ್ಟಿರಲ್ಲ. ಈರಣ್ಣನ ಮುಂದೆ ಬಸವಣ್ಣ ಕೂತ ಹಾಗೆ. ಏನು ಬರದಾರೆ?"

ಈ ಬರವಣಿಗೆಯ ಮತಿತಾರ್ಥವು ಮೆಲ್ಲಮೆಲ್ಲನೆ ಹೊಳೆಯಹತ್ತಿತ್ತು ಭಾಸ್ಕರಭಟ್ಟರಿಗೆ, ಮೊನ್ನಿನ ಘಟನೆಯೊಂದಿಗೆ ಇದನ್ನು ಹೊಂದಿಸಿಕೊಂಡು ಓದಿದಂತೆಲ್ಲ.

"ನಿನ್ನ ಮಗಂದೆ....."

"ಸಾಕು ಬಾಯಿಮುಚ್ಚರಿ, ಯಾರಾದರೂ ನಕ್ಕಾರು. ಆ ಕೂಸು ಮೈಮ್ಯಾಲೆ ಎಚ್ಚರ ಇಲ್ಲದೆ ಮಲಗ್ಯಾದೆ, ಎರಡು ದಿನದ ಹೊತ್ತಾತು. ಅದು ಯಾವಾಗೆ ಬರೆದಿದ್ದೀತು, ನೀವಂತು. ಅದೂ ಅಲ್ಲದೆ ಅವನಿಗೆ ಅಕ್ಷರ ಬರಿಲಿಕ್ಕೆ...."

"ಅಲ್ಲೆ, ನಿನ್ನ ಮಗಂದೆ ಚರಿತ್ರೆ ಅಂದೆ."

"ಅಂದ್ರೆ? ಏನಾದರೂ ಸುಟ್ಟು ಸುಡುಗಾಡು ಬರದಾರೋ? ಏನು ಮಣ್ಣು? ಬಾಗಲ ತುಂಬ?"

"ಹೌದೇ, ಅದೇ ಮಾತೇ ಬರದಾರೆ, ಗೋ ಬ್ರಾಹ್ಮಣ ಅಂತ."

ಗೌರಮ್ಮ ಸಿಡಿದೇ ಬಿದ್ದಳು ಸಿಟ್ಟಿನಿಂದ

"ಯಾವ ರಂಡೇಗಂಡ ಬರದಿದ್ದಾನೂ ಅಂತೀನಿ, ಅವನ ಹೆಂಡತಿ ರಂಡಿ ಆಗ. ಬರದವನ ಕೈಗೆ ಕರೆ ನಾಗರಹಾವು ಕಡಿಯ. ಅಕ್ಷರ ಕಲಿತ ಮುಂಗಡೇಗಂಡರದೇ ಈ ಕೆಲಸ, ಅದಕ್ಕೇ ನನ್ನ ಕೂಸಿಗೆ ಇದ್ಯಾ ಇಲ್ಲದಿದ್ದರೆ ಪೀಡಾನೆ ಹೋತು ಅಂತ ಸಾಲೀಗೆ ಕಳಿಸಲಿಲ್ಲ ನಾನು, ಇದನ್ನ ಬರದಾತನ ತಾಯೀ ಬಸಿರು ಸೀಳಿ ಬೀಳಬಾರದಾಗಿತ್ತೆ, ಅವನ ಹೆಣ ಹೋಗ, ಅವನ್ನ



ಸುಟ್ಟು ಬರೀ ಕೈಲಿ ಬರ. ನನ ಕೈಯಾಗೇನಾದರೂ ಅವನು ಸಿಕ್ಕಿಗಿಕ್ಕಿದ್ದ ಅವನ ವಂಶ ಉದ್ಧಾರ ಮಾಡ್ತಿದ್ದೆ...."

ಹೊಸದಾಗಿ ಕನ್ನಡದಲ್ಲಿಯೂ ಹೊರಟಿರುವ ಅಗ್ಗದ ಕೈಹೊತ್ತಿಗೆ ಪುಸ್ತಕಗಳು ನಾಲ್ಕು ಆಗುವಷ್ಟು ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಿ ಬೈದು ಬೈದು ತೃಪ್ತಿ ಹೊಂದಿ ತಣಿದಳು ಗೌರಮ್ಮ.

ಹಿತ್ತಲಲ್ಲಿದ್ದ ಸುಣ್ಣದ ಚಟಿಗೆ, ಕಸಬರಿಗೆಯನ್ನು ತಂದು ದಪ್ಪವಾಗಿ ಬಾಗಿಲಿಗೆ ಬಳಿದು ಒಳಹೊರಟಳು. ಅಕಸ್ಮಾತ್ ಅತ್ತ ತಿರುಗಿದಾಗ ಎಡಗಡೆ ಗೋಡೆಯ ಮೇಲೂ ಅದೇ ಮಂತ್ರವೇ ಕಂಡಿತು. ಅದಕ್ಕೆ ಸುಣ್ಣ ಬಳಿದಳು. ಬಲಗೋಡೆಗೂ ಇದ್ದಿತು. ನಂತರ ಇದುರು ಗೋಡೆಗೆ, ಆಮೇಲೆ ಪಕ್ಕದ ಮನೆ ಬಾಗಿಲಿಗೆ. ಮುಂದಿನ ಬೀದಿಯಲ್ಲಿಯೂ ಇದೇ ಕತೆ. ಹಿಂದಿನ ರಸ್ತೆಯಲ್ಲಿಯೂ ಇದೇ ಕತೆ. ಎತ್ತ ನೋಡಿದರೂ ಇದೇ. ರಸ್ತೆಯ ತುಂಬ ಇದೇ ಇದು.

ಅಂದು ಗೌರಮ್ಮಳಿಗೆ, ಅದೇ ಕೆಲಸವಾಯಿತು. ಇಡೀ ಊರಿನ ಎಲ್ಲ ಗೋಡೆ ಬಾಗಿಲು, ರಸ್ತೆಗಳಿಗೆ ಸುಣ್ಣ ಬಳಿದು ಮುಗಿಸಿದಳು. ಕಟ್ಟಿಸಿದ ದಿನದಿಂದ ಅಂದಿನ ವರೆಗೂ ಒಂದು ಬಾರಿಯೂ ಸುಣ್ಣ-ಬಣ್ಣ ಕಾಣದ ಅನೇಕ ಬಡವರ ಮನೆಯ ಗೋಡೆಗಳೂ ಅಂದು ಸುಂದರವಾದವು ಅದಾವ ಕಿಡಿಗೇಡಿಗಳ ಪುಣ್ಯದಿಂದಲೊ.

"ಮತ್ತೆ ಯಾರಾದರೂ ಬರೆದರೆ ಏನು ಮಾಡ್ತಾಳಂತೆ.?"

ಮನದಲ್ಲಿಯೆ ಅಂದುಕೊಂಡು ಮುಸಿಮುಸಿ ನಕ್ಕರು ಮಲಗಿದಲ್ಲಿಯೆ ಭಾಸ್ಕರಭಟ್ಟರು.

ಬಾಳಪ್ಪನ ಬಾಳಿನಲ್ಲಿ ಮೂರು ದಿನಗಳ ಹಿಂದೆ ಜರುಗಿದ ಘಟನೆಯೊಂದು ಈ ಹೊರಗಡೆ ಸಾಹಿತ್ಯಕ್ಕೆ ಕಾರಣವಾಗಿದ್ದಿತು.

ಅಮಾವಾಸ್ಯೆಯ ಕಗ್ಗತ್ತಲು, ಸಾಲದುದಕ್ಕೆ ಗಾಳಿ, ಮಳೆ, ಮಿಂಚು, ಗುಡುಗು, ಸಿಡಿಲು, ಊರ ಹೊರಗಿನ ಹಾಳು ಗೋಕರ್ಣೇಶ್ವರ ಗುಡಿ-ಅಲ್ಲ, ಗೋಕರ್ಣೇಶ್ವರನ ಹಾಳುಗುಡಿ, ದೀಪ ಮುಟ್ಟಿಸಿದ ನಂತರ ಅಲ್ಲಿ ಎಂದೂ ನರಪ್ರಾಣಿಯ ಸಂಚಾರವೇ ಇಲ್ಲ. ದೇವರಿಗೆ ಪೂಜೆ ಇಲ್ಲದೆ ಎರಡು ದಶಕಗಳಾಗಿದ್ದವು ಆಗಲೆ, ಗುಡಿಯ ಹಿಂದಿನ ದೊಡ್ಡ ಬಾವಿಯಲ್ಲಿ ಪೂಜಾರಿಯೇ ಬಿದ್ದು ಸತ್ತಿದ್ದ ಅವನ ಹೆಂಡತಿಯ ದುರ್ನಡತೆಯಿಂದ ತನಗಾಗಿದ್ದ ಮಾನವನ್ನು ಸಹಿಸಲಾರದೆ, ಅವನೇ ದೆವ್ವ ಆಗಿದ್ದಾನೆ ಎಂಬ ಸುದ್ದಿ ಊರೆಲ್ಲ ದಟ್ಟವಾಗಿ ಹಬ್ಬಿಬಿಟ್ಟಿದ್ದಿತು. ನಡುರಾತ್ರಿಯಲ್ಲಿ ಗಂಟೆ ಬಾರಿಸಿದುದನ್ನು ಕೇಳಿದ ಸಾಕ್ಷಿಗಳು

ಎಷ್ಟೋ! ಸತ್ತ ಪೂಜಾರಪ್ಪ ಸ್ವರಬದ್ಧವಾಗಿ ಮಂತ್ರ ಹೇಳುತ್ತ ಗುಡಿಯಲ್ಲಿ ಪ್ರದಕ್ಷಿಣೆ ನಮಸ್ಕಾರ ಮಾಡುತ್ತಿದ್ದುದನ್ನು ಮಟಮಟ ಮಧ್ಯಾಹ್ನ ನೋಡಿದ ದನಕಾಯುವ ಹುಡುಗರು ಅವೆಷ್ಟೋ! ಸ್ಮಶಾನಕ್ಕೆ ಹೋಗಿ ಶವಸಂಸ್ಕಾರ ಮುಗಿಸಿ ಮರಳಿ ಮನೆಗೆ ಬರುತ್ತಿರುವಾಗ ಎಷ್ಟೋ ಜನರನ್ನು ಸತ್ತ ಪೂಜಾರಪ್ಪ ಅಡ್ಡಗಟ್ಟಿ ತೀರ್ಥ ಹಿಡಿಯಿರಿ ಎಂದುದು ಅದೆಷ್ಟು ಸಲವೋ! ಅಂತೂ ಜೀವದ ಮೇಲೆ ಆಶೆ ಇದ್ದವರಾರೂ ಕತ್ತಲಾದ ಮೇಲೆ ಅತ ಹೋಗುತ್ತಿರಲಿಲ್ಲ. ಆ ರಾತ್ರಿ ತಲೆ, ಮೈತುಂಬ ಗಾಯಗೊಂಡು ಎಚ್ಚರತಪ್ಪಿ ಬಿದ್ದಿದ್ದ ಗುಡಿಯ ಮುಂದೆ ಬಾಳಪ್ಪ!

ಮನೆ ಸೋರುತ್ತದೆಂಬ ಕಾರಣದಿಂದ ಬಾಳಪ್ಪ ಹೊರಕಟ್ಟೆಗೆ ಹಾಸಿಗೆ ಹಾಕಿದ ಅಂದು, ಗೌರಮ್ಮ ಬೇಡಬೇಡ ಅಂದರೂ.

"ನೋಡೀ ನೋಡೀ ಖಟ್ಟು ಅಮಾವಾಸಿ, ಬಾಳಾ, ಒಬ್ಬನೇ ಯಾಕೆ ಹೊರಗೆ ಮಲಗತೀದಿ? ಹಾಗೆಲ್ಲ, ವಿಷಪರೀಕ್ಷೆ ಮಾಡಬಾರದು ನನ್ನ ಕಂದಾ."

ಗೌರಮ್ಮ ಮುದ್ದು ಮಾಡಿ ನುಡಿದಳು.

"ನನ್ನೇನು ಕೂಸು ಅಂತ ತಿಳಿದೇನು?" ಮೊದಲೇ ಸೊಟ್ಟ ಇದ್ದ ಮುಖವನ್ನು ಹೆಚ್ಚು ಸೊಟ್ಟಮಾಡಿ ಗದರಿಸಿದ ಬಾಳಪ್ಪ. ಮದುವೆಯಾದ ಮೇಲೆ ಬಹಳ ಬದಲಾಗಿದ್ದೇನೆ, ಎಂಬ ಕಲ್ಪನೆ ಅವನಲ್ಲಿ ಮೂಡಹತ್ತಿತ್ತು.

"ಮಲಗಲಿ ಬಿಡೇ, ನಿನ್ನ ಮಗನ್ನೇನು ಬೂಚಿ ಕಚ್ಚಿಗೊಂಡು ಹೋಗೋದಿಲ್ಲ.

ಭಾಸ್ಕರಭಟ್ಟರೂ ಬಾಳಪ್ಪನನ್ನೇ ಅನುಮೋದಿಸಿ ಆಡಿದ್ದರು.

"ಏನು ಸುಡುಗಾಡರೆ ಮಾಡಿಕೋ."

ಧಡಲ್ ಎಂದು ಕೋಪದಿಂದ ಕದವಿಕ್ಕಿ ಒಳನಡೆದಿದ್ದಳು ಗೌರಮ್ಮ.

ಮಳೆ ನಿಂತು ಅರ್ಧ ಗಂಟೆಯಾಗಿರಬಹು. ರಾತ್ರಿ ಎರಡನೇ ಯಾಮವು ದಾಟಿ ಮೂರನೆಯ ಯಾಮವು ಕಾಳಿಡುತ್ತಿದ್ದಿತು.

ಯಾರೋ ಬಾಗಿಲ ಬಡಿದು ಭಟ್ಟರೇ ಎಂದು ಕೂಗಿದಂತಾಯಿತು.

ಅರನಿದ್ರೆಯಲ್ಲಿ ಕಣ್ಣಜ್ಜುತ್ತ ಗೌರಮ್ಮ ಗದರಿಕೊಂಡ.

"ಯಾರದು?"

"ಇನ್ಯಾರು, ಅವನೇ ಇರತಾನೆ ಕೊಮಾರಾಮ, ಛಳಿ ಅಡ್ರಿತಾದೆ. ಇನ್ನೊಂದು ಕಂಬಳೀ ಬೇಕೇನೋ ಕೊಡು."

ಭಾಸ್ಕರಭಟ್ಟರು ಮುಸುಕಿನಲ್ಲಿಯೇ ನುಡಿದರು.

ಪುನ: ಭಟ್ಟರೇ ಎಂದು ಕೂಗಿದುದು ಕೇಳಿಬಂದಿತು.

"ನೀವಂತು.... ಯಾರೋ ನಿಮ್ಮ ಹೆಸರು ಹಿಡಿದು ಕೂಗುತಾರೆ."



ಹಾಸಿಗೆಯಿಂದೆದ್ದು ವಟಗುಟ್ಟುತ್ತ ಬಾಗಿಲು ತೆರೆಯಲು ಬಂದಳು ಗೌರಮ್ಮ.

"ಅದ್ಯಾಕರೆಪ್ಪ, ಇಷ್ಟು ಹೊತ್ತಿನಾಗೆ ಭಟ್ಟರು ಬೇಕಾತು? ಇನ್ನೇನು ಸುಡುಗಾಡು ಇರತದೆ ಇವರ ಹತ್ತಿರ ಕೆಲಸ. ಯಾವುದಾರ ಬೇವಾರ್ಸಿ ಹೆಣ ಹೊರಲಿಕ್ಕೆ ಕರೀತಾರೆ, ಅಷ್ಟೆ, ಬೆಳಗಾದ ಮ್ಯಾಲೆ ಸಾಗಿಸಿದ್ದರೆ ಆಗ್ತಿದ್ದಿಲ್ಲೇನು? ಈ ಮಳ್ಯಾಗೆ ಹೆಣಾನೂ ಬ್ಯಾಗ ಸುಡೋದಿಲ್ಲ ಕಟಿಗೀನೂ ವದ್ದಿ ಆಗಿರತಾವೆ. ಯಾವ ಪುಣ್ಯಾತ್ಮ ಆತ, ಇಂಥಾ ಹೊತ್ತಿನಾಗೆ ಸತ್ತಾತ?......"

ಗೊಣಗುತ್ತ ಗೌರಮ್ಮ ಬಾಗಿಲು ತೆರೆದಳು ಕೈಯಲ್ಲಿದ್ದ ದೀಪವನ್ನು ಕೊಂಚ ದೊಡ್ಡದು ಮಾಡಿ.

ನಾಲ್ಕೈದು ಜನರು ನಿಂತಿದ್ದರು. ಕಟ್ಟೆಯ ಮೇಲೆ ಆ ಉದ್ದಕ್ಕೂ ಬಾಳಪ್ಪ ನಿಶ್ಚೇಷನಾಗಿ ಬಿದ್ದಿದ್ದ. ಬಾಯಿ, ಮೂಗಿನಿಂದ ಇನ್ನೂ ರಕ್ತವು ತೊಟಕಿಕ್ಕಿದ್ದಿತು. ತಲೆಯ ಮೇಲೊಂದು ಗಾಯವು ಬಾಯಿ ತೆರೆದಿತ್ತು. ಬಟ್ಟೆ ಎಲ್ಲ ರಕ್ತ!

"ಅಯ್ಯಯ್ಯೊ, ಬಾಳಪ್ಪ, ಬಾಳಪ್ಪ, ನನ್ನ ಬಾಳ...."

ಅರ್ಧ ಊರಿಗೇ ಕೇಳುಷ್ಟು ಗಟ್ಟಿಯಾಗಿ ಆರ್ಭಟಿಸಿ ಚೀರಿದಳು ಗೌರಮ್ಮ.

ಬಾಗಿಲಿಗೆ ಓಡಿ ಬಂದರು ಭಾಸ್ಕರಭಟ್ಟರು. ಬಾಳನ ಮೂಗಿನ ಹತ್ತಿರ ಬೆರಳಿಟ್ಟು ನೋಡಿದರು, ಉಸಿರಾಡುತ್ತಿತ್ತು.

ನಾಡಿ ಹಿಡಿದು ನೋಡಿದರು, ಸಮಾಧಾನಕರವಾಗಿತ್ತು.

ಒಂದೇ ಸಮನೆ ಹೆಣ್ಣು ಹುಲಿಯಂತೆ ಆರ್ಭಟಿಸುತ್ತಿದ್ದ ಗೌರಮ್ಮಳಿಗೆ ಐದು ನಿಮಿಷ ಸುಮ್ಮನಿರಲು ಕೇಳಿಕೊಂಡರು. ನಂತರ ಬಾಳನನ್ನು ಹೊತ್ತು ತಂದವರನ್ನು ವಿಚಾರಿಸಿದರು.

"ಯಾರು ಹೊಡೆದರಪಾ ತಮ್ಮಾ, ಇವನ್ನ? ಯಾಕೆ ಹೊಡೆದರು?"

ಇಬ್ಬಿಬ್ಬರು ಒಂದೇ ಬಾರಿಗೆ ಹೇಳಹತ್ತಿದರು ಬುಸುಗುಟ್ಟುತ್ತ, ಮೂರು ರೇಲ್ವೆ ಮಣ ತೂಕದ ಬಾಳನನ್ನು ಹೊತ್ತು ತಂದ ದಣಿವು ಏನು ಸಾಮನ್ಯವಲ್ಲ

"ಗೋಕರ್ಣೇಶ್ವರ ಗುಡೀತಾಗೇ ಹಾಕಿಬಿಟ್ಟಿದ್ದೀ ಈ ಹುಡುಗನ್ನ, ಬೇಸು ಹೊಡದು...."

"ಯಾರು ಯಾರು?"

"ನಾವೇನು ಬಲಿವಿರಿ?"

ಇನ್ನಿಬ್ಬರು ಮುಂದುವರಿಸಿದರು:

"ನಮ್ಮ ಆಕಳು ತೆಪ್ಪಿಸಿಗೊಂಡಿತ್ರಿ, ಎಲ್ಲಾದರೂ ತುಡುಗು ಹೋಗಿ ಬಂದೀದಡ್ಡಿ ಕೊಡ್ಯಾರೇನೋ ಅಂತ ಗೌಡ್ರನ್ನ ಕೇಳಿದಿವ್ರೀ, ಅಲ್ಲಿನೂ ಇಲ್ಲ ಅಂದಮ್ಯಾಗೆ. ಆ

ಪೂಜಾರಪ್ಪನ ದೆವ್ವದ ಬಾವೀತಾಗೆ ಹೋದಿವ್ರಿ, ಇವರನ್ನು ಬಿಡಲೆ ಅಂದ ನಮ್ಮಾವ, ಎರಡು ಹೆಜ್ಜೆ ಮುಂದೆ ನಡೆದಿವ್ರಿ, ಕೈಯಾಗೆ ಕುಡುಗೋಲು ಹಗ್ಗ ಹಿಡಿದು, ಅಲ್ಲೆ ನೋಡಿದರೆ ಈ ಸ್ವಾಮಿ ಬಿದ್ದಿತ್ತು ಗಾಯಗೊಮಡು. ಅವರಿವರು ಹೇಳಿದರ್‍ರೀ ಭಟ್ರ ಮಗ ಹುಚ್ಚ ಇವನೂ ಅಂತ, ಅಲ್ಲಿ ಯಾಕೆ ಹೋಗಿತ್ತೊ ಮೂಳ ಅಮವಾಶಿ ಕಾಳದಾಗೆ. ಬರ್‍ತೀವಿ ಸ್ವಾಮಿ, ನಮ್ಮ ಆಕಳಾನೆ ಅಲ್ಲೆ ಗಿಡಕ್ಕೆ ಕಟ್ಟಿ ಬಂದೀವಿ.

ಭಾಸ್ಕರಭಟ್ಟರಿಗೆ ಸಂದರ್ಭವೇನೂ ಹೊಳೆಯಲಿಲ್ಲ. ಕಟ್ಟೆಯ ಮೇಲೆ ಮಲಗಿದ್ದ ಬಾಳಪ್ಪ ಗೋಕರ್ಣೇಶ್ವರನ ಗುಡಿಯ ಬಳಿ ಹೋದುದೇಕೆ ಎಂಬುದಂತೂ ಬಿಡಿಸಲು ಬಾರದ ಒಗಟಾಯಿತು.

"ಹಿಡಿಯೇ ಕಾಲಬದಿ."

ಹೆಂಡತಿಗೆ ಹೇಳಿದರು. ಬಾಳನನ್ನು ಹೊತ್ತು ತಂದು ಒಳಗೆ ಮಲಗಿಸಿದರು. ಬಟ್ಟೆ ಬದಲಿಸಿ ಗಾಯಗಳನ್ನು ಚೆನ್ನಾಗಿ ತೊಳೆದು ಕುಂಕುಮ ಉದುರಿಸಿದರು. ಗಲ್ಲಕ್ಕೆ ಕೈಯಿಕ್ಕಿ ತಲೆಯ ಬದಿ ಕುಳಿತು. ಗೌರಮ್ಮ ಹಣ್ಣು ಮೆಣಸಿನಕಾಯಿ, ಕಸಬರಿಗೆ, ಕಡ್ಡಿಗಳಿಂದ ಬಾಳಪ್ಪನಿಗೆ ದೃಷ್ಟಿ ತೆಗೆದು, ಹುಲಿಗೆಮ್ಮನ ಭಂಡಾರವನ್ನು ಹಣೆಗೆ ಹಚ್ಚಿ ಮಗನ ಮುಖವನ್ನು ದಿಟ್ಟಿಸುತ್ತ ಕುಳಿತಳು ಇದ್ದಕ್ಕಿದ್ದಂತೆ ಬೆಚ್ಚಿ ಬಿದ್ದು ಚೀರಿದ ಬಾಳಪ್ಪ ಕೀರಲು ದನಿಯಲ್ಲಿ.

"ಪೊಲೀಸರು, ಪೊಲೀಸರು! ಅಯ್ಯಯ್ಯ, ಹೊಡಿಬ್ಯಾಡಿರಿ, ಹೊಡಿಬ್ಯಾಡಿರಿ.... ತಪ್ಪಾತುರೀ.... ಇನ್ನೊಮ್ಮೆ ಮಾಡೋದಿಲ್ಲರೀ...."

ಭಾಸ್ಕರಭಟ್ಟರ ಮನಸ್ಸಿಗೆ ಕೊಂಚ ಸಮಾಧಾನವಾಯಿತು.

'ಪೋಲೀಸು ರಂಡೇಗಂಡ್ರು, ಹೊಡೆದಾರೇನು ನನ್ನ ಕೂಸಿನ್ನ, ಹಾಗಾದರೆ, ಕೀಳು ಜಾತಿ ಮುಂಡಾಗಂಡ್ರು ಕೂಳಿಲ್ಲದ ಸಾಯ್ತಾರವರು ನಾನು ಶಾಪಾ ಹಾಗಾದರೆ...."

ಗೌರಮ್ಮಳ ಧಬೆಧಬೆಗೆ ಶ್ರೀಕಾರ ಬಿದ್ದಿತು.

ಭಾಸ್ಕರಭಟ್ಟರು ಒಂದೇ ಮಾತಿನಲ್ಲಿಯೆ ಗದರಿಸಿ ಸುಮ್ಮನೆ ಮಾಡಿದರು ಅದೇ ತಾನೆ ಬಾಯಿ ತೆರೆದಿದ್ದ ಗೌರಮ್ಮಳನ್ನು.

"ಸುಮ್ಮನೆ ಇರೆ ಸಾಕು, ಸನ್ನಿ ಬಡದವರ ಹಾಗೆ ಬಡಬಡಿಸಬ್ಯಾಡ. ಕಟ್ಟೀಮ್ಯಾಲೆ ಮಲಗಿದ್ದ ನಿನ್ನ ಮಗನ್ನ ಊರಹೊರಗೆ ಹೊತಗೊಂಡು ಒಯ್ದು ಹೊಡಿಲಿಕ್ಕೆ ಅವರಿಗೇನು ಹೆಚ್ಚಿಗೆ ಸಂಬಳ ಕೊಡೋದಿಲ್ಲ ಸರ್ಕಾರ. ಪೂರ್ತಿ ತಿಳಿದಮ್ಯಾಲೆ ಮಾತಾಡು."



ಪುನಃ ಬಹಳ ಹೊತ್ತು ನಿಶ್ಚೇಷ್ಟನಾಗಿಯೇ ಬಿದ್ದಿದ್ದ ಬಾಳಪ್ಪ, ಗೌರಮ್ಮ ಮೇಲಿಂದ ಮೇಲೆ ಹುಲಿಗೆಮ್ಮನ ಸಹಾಯವನ್ನು ಮಾತ್ರ ಪಡೆಯುತ್ತಲೇ ಇದ್ದಳು. ಗಂಟೆಗಳ ನಂತರ ಬಾಳಪ್ಪನಿಗೆ ಪೂರ್ಣ ಎಚ್ಚರವಾಯಿತು ಮೈಯೆಲ್ಲ ನೋವೆಂದು ಅಳುವ ಒಡಲು ಅಭ್ಯಾಸದ ಮೂಲಕ 'ಅವ್ವಾ ಹಸಿವೇ' ಎಂದು ಅಳಹತ್ತಿದ.

ಕೊಂಚ ಕಸ್ತೂರಿಯನ್ನು ಹಾಕಿದರು ಭಾಸ್ಕರಭಟ್ಟರು. ಮೇಲೆ ಹಾಲನ್ನು ಬಿಸಿಮಾಡಿ ಕುಡಿಯಲು ಕೊಟ್ಟರು. ಬೆಳಗಾದಂತೆಲ್ಲ ಬಾಳಪ್ಪನಿಗೆ ಪೂರ್ಣ ಎಚ್ಚರವಾಗಿ ನೋವು ಹೆಚ್ಚಾಗಹತ್ತಿತು,

ಮಧ್ಯೆ ಮಧ್ಯೆ ಬೆಚ್ಚಿ ಬಿದ್ದು, 'ಹೊಡಿಬ್ಯಾಡರೀ ಪೊಲೀಸರೇ, ಇನ್ನೊಮ್ಮೆ ಮಾಡೋದಿಲ್ರಿ' ಎಂಬ ಮಂತ್ರವನ್ನು ಮಾತ್ರ ತಪ್ಪದೇ ಪಠಿಸುತ್ತಿದ್ದ. ಮಧ್ಯಾಹ್ನದ ಹೊತ್ತಿಗೆ ಬಾಳನ ಭ್ರಮೆ ಎಲ್ಲವೂ ಹರಿದು, ಹಿಂದಿನ ರಾತ್ರಿಯ ಘಟನೆಗಳೆಲ್ಲವೂ ಸ್ಪಷ್ಟವಾಗಿ ಒಂದೊಂದೇ ಸ್ಮರಣೆಗೆ ಬರಹತ್ತಿದವು.

ತಲೆಯ ಬದಿ ಕುಳಿತಿದ್ದ ತಾಯಿ ರಮಿಸಿ ರಮಿಸಿ ಕೇಳಿದಳು.

"ಏನಾತೆಪ್ಪಾ, ನನ ಕಂದಾ ನಿನಗೆ? ಕಟ್ಟಿಮ್ಯಾಲೆ ಮಲಗಿದ್ದ ನಿನ್ನ ಆ ಗುಡಿ ಹತ್ತಿರ ಯಾರು ಹೊತಕೊಂಡು ಹೋದರು ಹೇಳು. ಅವರು ಯಾರೇ ಇರಲಿ ಹೇಳು, ಅವರಿಗೆ ಮದುವೀ ಮಾಡ್ತೀನಿ ನಾನೆಲ್ಲ. ಯಾರ ಅವರು ನೆನಪಾಗವಲ್ಲದೇ....?"

"ನೆನಪ್ಯಾಕಿಲ್ಲವ್ವಾ, ಯಾರೂ ಇಲ್ಲ. ನಾನೇ ಹೋಗಿದ್ದೆ."

"ನೀನೇ ಹೋಗಿದ್ದಿ! ಆ ಸುರುಹೊತ್ತಿನಾಗೆ!! ಆ ದೆವ್ವದ ಗುಡಿ ಹತ್ತರ!!!"

ಭಾಸ್ಕರ ಭಟ್ಟರು ಮೆಲ್ಲನೆ ಬಂದು ಬಾಗಿಲ ಬಳಿ ನಿಂತು, ತಾಯಿ–ಮಗನ ಸಂಭಾಷಣೆಯನ್ನು ಬಹು ಆಸ್ಥೆಯಿಂದ ಕೇಳಿದರು.

"ಅಲ್ಲೆ ಯಾಕೆ ಸಾಯಲಿಕ್ಕೆ ಹೋಗಿದ್ಯೊ ಬಾಳ? ಊರೇ, ಕೇರೀನೆ, ಹೊತ್ತೆ, ಗೊತ್ತೆ, ಮನಿಶಾರೆ, ಮಕ್ಕಳೆ, ಅಲ್ಲೇನಿತ್ತು ನಿನ್ನಪ್ಪನ ಗಂಟು ಅಂತ ಹೋಗಿದ್ದಿ ಆ ಸರುಹೊತ್ತಿನಾಗೆ ಅಂತೀನಿ. ಯಾಕೆ ಹೋಗಿದ್ದಿ ಹೇಳೊ ಬಾಳ."

"ಸುಮ್ಮನೆ ಹೋಗಿದ್ದೆನವ್ವಾ ಅಡ್ಡಾಡಕೋತ, ನೀನಂತೂ...."

ಗೌರಮ್ಮಳೇ ಕೊಂಚ ಸಮಾಧಾ ತಂದುಕೊಂಡು ಮಾತು ಮುಂದುವರೆಸಿದಳು.

"ಹೂಂ, ಅಲ್ಲಿಂದ ಮುಂದೇನಾತು?"

"ಪೊಲೀಸರು ಬಡಗಿಯಿಂದ ಹೊಡೆದರು."

ಮಧ್ಯೆ ಏನೇನನ್ನೋ ನುಂಗಿ ಒಮ್ಮೆಲೆ ಕತೆಯನ್ನು ಮುಗಿಸಿಬಿಟ್ಟ ಬಾಳಪ್ಪ ಎಂಬುದು ಚಿಕ್ಕ ಮಗುವಿಗೂ ತಿಳಿಯುವಷ್ಟು ಸ್ಪಷ್ಟವಾಗಿದ್ದಿತು.

"ಅಲ್ಲೋ ಬಾಳ, ಸುಮ್ಮ ಸುಮ್ಮನೆ ಯಾಕೆ ಹೊಡೆದರೋ ಅವರು ನಿನ್ನ? ಕಳ್ಳ ಅಂತ ತಿದರೇನು ಅವರೇನಾರೆ?"

"ಛೆ ಛೆ ಇಲ್ಲಮ್ಮಾ, ಇಬ್ಬರ ಪೈಕಿ ಒಬ್ಬ ಪೊಲೀಸ ನನ್ನ ಗುರುತಿನ ಕೂಡ, ಭಟ್ಟರ ಮಗ ಹುಚ್ಚ ಇವನು ಅಂತ ಅಂದ...."

"ಹಾಗಾದರೆ ಯಾಕೆ ಹೊಡೆದನಂತೆ? ನೀ ಏನಾರೆ ಬೈದುಗಿಯ್ದೇನು ಅವರನ್ನ?"

"ಇಲ್ಲವ್ವ, ನಾನ್ಯಾಕೆ ಬಯ್ಯಲಿ ಅವರನ್ನ, ಸುಮ್ಮ ಸುಮ್ಮನೆ ಹೊಡೆದ"

"ಸುಮ್ಮ ಸುಮ್ಮನೆ ನಿನ್ನ ಯಾಕೆ ಹೊಡಿತಾನೊ ಬಾಳಾ, ಅವನು? ನೀ ಏನು ಮಾಡತಿದ್ದಿ ಅವರು ಬಂದಾ?"

ಪ್ರಶ್ನೆಗಳು ಹೀಗೆ ತೀಕ್ಷ್ಣವಾಗಿ ಮಳೆಗರೆದಾಗ ಬಾಳಪ್ಪನಿಗೆ ಸುಳ್ಳನ್ನು ದಕ್ಕಿಸಿಕೊಳ್ಳುವುದು ಸುಲಭವಾಗಲಿಲ್ಲ.

"ನಾ ಏನೂ ಮಾಡ್ತಿದ್ದಿಲ್ಲವ್ವಾ.... ಅಲ್ಲೆ ಒಂದು.... ಒಂದು ಆಕಳ.... ನಿಂತಿತ್ತು.... ಸುಮ್ಮ ಸುಮ್ಮನೆ ಹೊಡೆದರು ಪೊಲೀಸರು."

ಬಾಳಪ್ಪ ಅಳಲು ಸುರು ಮಾಡಿದ.

ಗೌರಮ್ಮಳಿಗೆ ಏನೂ ಅರ್ಥವಾಗಲಿಲ್ಲ.

"ಆಕಳ ನಿಂತಿತ್ತು.... ನಿನ್ನ ಪೊಲೀಸರು ಹೊಡೆದರು. ಅಂದರೇನೋ ಬಾಳ? ನೀನು ಆಕಳು ಕಳವು ಮಾಡಿದ್ದ ಅಂತ ಹೊಡೆದರೇನು?"

ಅಳುತ್ತಲೇ ಹೇಳಿದ ಬಾಳಪ್ಪ

"ಹೋಗವ್ವ, ನಿನಗ್ಯಾರು ಹೇಳಬೇಕು? ಆಕಳ ಕಳ್ಳತನ ಅಲ್ಲವ್ವಾ"

ತನಗೇ ನಾಚಿಗೆಯಾಯಿತು, ಮಾತು ನಿಲ್ಲಿಸಿ ಅಳಲು ಸುರು ಮಾಡಿದ,

"ಅದಕ್ಕೇ ಹೊಡೆದರು ಪೊಲೀಸರು"

ಮಾತನ್ನು ಅಂತೂ ಮುಗಿಸಿದ ಬಾಳಪ್ಪ.

"ಅನ್ಯಾಯ ಮಾಡಿದರು ಪೊಲೀಸರು, ಅರೆಜೀವ ಮಾಡಿ ನಿನ್ನ, ಪೂರ್ತಿ ಕೊಂದು ಆ ಭಾವ್ಯಾಗೆ ಹಾಕಿದ್ದರೆ ಜಗತ್ತಿಗೇ ಕಲ್ಯಾಣ ಆಗುತ್ತಿತ್ತು ಅಯ್ಯೋ, ಪಶುವೇ!"

ಭಾಸ್ಕರಭಟ್ಟರು ಬಾಗಿಲಸಂದಿನಿಂದ ಹೊರಬಂದು ಆ ಹೇಸಿಮಗನ ಮುಖವನ್ನು ಸುಟ್ಟು ಬೂದಿಯಾಗುವಂತೆ ನೋಡಿದರು.



"ಹೀಗ್ಯಾಕೆ ಬೈತೀರಿ ಕೂಸಿನ್ನ, ಅದು ಏನ ಮಾಡ್ಯದೆ?"

ಗೌರಮ್ಮಳ ಬುದ್ಧಿವಂತಿಕೆ ಅಲ್ಲಿಗೇ ಮುಗಿಯಿತು. ಮುಂದಿನ ಸಂಗತಿ ತಿಳಿಯಲಿಲ್ಲ ಅವಳಿಗೆ.

ಭಾಸ್ಕರ ಕೋಪ ಆಟೋಪ ಮೀರಿತು.

"ನಿನ್ನ ಕೂಸಿನ್ನ ಕುಳ್ಳಗಿಟ್ಟು ಬರಿಗೈಲಿ ಬರ, ಎದ್ದು ಬಾ ಹೊರಗೆ, ಬೊಗಳ್ತೀನಿ ನಿನ್ನ ಕೂಸಿನ ಲೀಲಾನ, ಅವನ ಎದುರಿಗೆ ಇನ್ನೇನು ಹೇಳಲಿ?"

ಬಾಳಕುಮಾರನು ಎಂತಹ ಮನುಷ್ಯನೆಂಬುದನ್ನು ಎರಡೇ ಮಾತಿನಲ್ಲಿ ಹೇಳಿದರು ಭಾಸ್ಕರಭಟ್ಟರು ಗೌರಮ್ಮಳನ್ನು ಪ್ರತ್ಯೇಕವಾಗಿ ಕರೆದು. ಇಬ್ಬರೂ ಹಣೆಹಣೆ ಬಡಿದುಕೊಂಡರು.

"ಇವನು ಸತ್ತರೆ ಸಕ್ಕರಿ ಹಂಚತೀನಿ ನೋಡೆ, ಸಂತೋಷದಿಂದ."

ಶಾಲಿನ ಮುಸುಕಿನಲ್ಲಿಯೂ ಶಾಂತಿ ದೊರೆಯಲಾರದಷ್ಟು ಆವೇಶಯುತರಾಗಿದ್ದ ಭಾಸ್ಕರಭಟ್ಟರು ಮನೆಯಿಂದ ಹೊರಬಿದ್ದು ಎತ್ತಲೋ ಹೊರಟರು ಹುಚ್ಚರಂತೆ.

ಮರುದಿನ ಬೆಳಗಾಗುತ್ತಲೇ ಈ ಹೊರಗೋಡೆ ಸಾಹಿತ್ಯವನ್ನು ಕಂಡರು.

## ೧೫

ಆಡುವ ಮಗುವಿಗೆ ತಾಳಿಯನ್ನು ಕಟ್ಟಿದ ಮಾತ್ರಕ್ಕೆ ಅವಳಲ್ಲಿ ಅದಾವ ಬದಲಾವಣೆ ಆಗಲು ಸಾಧ್ಯ? ಮದುವೆಯಿಂದ ಸರಸ್ವತಿಗೆ ಬಂದಿದ್ದ ಒಂದು ಹೊಸತು ಎಂದರೆ ಕೊರಳಲ್ಲಿ ಮಂಗಳಸೂತ್ರ ಮಾತ್ರ, ಬೇರಾವ ಪರಿವರ್ತನೆಯೂ ಆಗಿರಲಿಲ್ಲ. ಆಗಲು ಯಾವ ಕಾರಣಗಳೂ ಇರಲಿಲ್ಲ.

ಮೊದಲಿನಂತೆಯೆ ಸಾಗಿದ್ದವು ಅವಳ ಆಟ, ಅಭ್ಯಾಸ, ಪಕ್ಕದ ಮನೆ ಅಜ್ಜಿಯ ಕತೆ, ಮನೆಗೆಲಸ ಮತ್ತು ಗಣಪತಿಯೊಡನೆ ಪಾಠ, ಪ್ರವಚನ.

ಒಂದು ದಿನ ತಾನು ಗಣಪತಿ ಇಬ್ಬರೇ ಇದ್ದಾಗ ನೆನಪಿಗೆ ಬಂದ ಮಾತನ್ನು ಅಂದಳು

"ನೀನು ಇರಲೇ ಇಲ್ಲ ಗಣಪತಿ ನನ್ನ ಲಗ್ನಕ್ಕೆ."

"ಅಹುದು ಸರಸ್ವತಿ, ನಾನು ಹರಿಹರಕ್ಕೆ ಹೋಗಲೇಬೇಕಾಗಿತ್ತಲ್ಲ ಆಗ; ಹೋಗಲಿ ಬಿಡು, ನಿನ್ನ ಗಂಡ ಹೇಗಿದ್ದಾನೆ ಹೇಳು."

ಬಹುಶಃ ಸರಸ್ವತಿ ನಾಚಿ ಒಳಗೆ ಓಡುತ್ತಾಳೆ ಎಂದು ಭಾವಿಸಿದ್ದನೇನೋ ಗಣಪತಿ. ನಗುನಗುತ್ತಲೆ ವರ್ಣಿಸಿದಳು ಗಂಡನನ್ನು

"ಎಲ್ಲ ಮನುಷ್ಯರಂತೆ ಇದ್ದಾನೆ. ಎರಡೆರಡು ಕಣ್ಣು, ಕೈ ಕಾಲು, ಒಂದು ಮೂಗು...."

"ಬಾಲ?"

ಗಣಪತಿ ನೆಗೆಯಾಡಿದ. "ನನ್ನ ಗಂಡನ್ನೇನು ಪಶು ಎಂದು ತಿಳಿದೀ ಏನು?"

ನಸುಗೋಪದಿಂದ ನಕ್ಕಳು ಸರಸ್ವತಿ.

"ದ್ವಿಪಾದ".

ಗಣಪತಿ ಗುಣವಾಚಕವನ್ನು ಸೇರಿಸಿದ ಹಿಂದಿನಿಂದ.

ಸರಸ್ವತಿಗೆ ಸರಿ ಬೀಳಲಿಲ್ಲ ಗಣಪತಿಯ ಚೇಷ್ಟೆ. ತನ್ನ ಗಂಡನನ್ನು ಅವನು ಕಡೆಗಾಣಿಸಿ ನುಡಿದುದು ಅವಳ ಆತ್ಮಾಭಿಮಾನಕ್ಕೆ ಚಿಕ್ಕ ಗಾಯವಾದಂತಾಯಿತು. ಕೂಡಲೆ ಗಣಪತಿಗೆ ಸಂಧರ್ಭವು ಅರ್ಥವಾಯಿತು. ತನ್ನಿಂದಾದ ಅಚಾತುರ್ಯಕ್ಕಾಗಿ ದು:ಖಿತನಾದ. ಸರಸ್ವತಿಯ ಎರಡೂ ಪುಟ್ಟ ಕೈಗಳನ್ನು ತನ್ನ ಎಡಗೈಯಲ್ಲಿ ಹಿಡಿದು, ಬಲಗೈಯಿಂದ ಅವಳ ಮುಂದಲೆಯನ್ನು ನೆವರಿಸುತ್ತ ನುಡಿದ

"ತಪ್ಪಾಯಿತು, ಸರಸ್ವತಿ ನನ್ನಿಂದ, ಇನ್ನೊಂದು ಬಾರಿ ನಾನು ಇಂತಹ ಅಚಾತುರ್ಯವನ್ನು ಮಾಡುವದಿಲ್ಲ...."

ಸರಸ್ವತಿ 'ಕ್ಷಮಿಸಿದೆ' ಎನ್ನುವ ರೀತಿಯಲ್ಲಿ ನಗುತ್ತಿದ್ದಳು. ಚಿಕ್ಕ ಗುಳಿಗಳು ಅವಳ ಕೆನ್ನೆ ಮೇಲೆ ಮೂಡಿದ್ದವು.

ಎಡಗೈಯಿಂದ ಅವಳೆರಡೂ ಕೈಗಳನ್ನು ಹಿಡಿದೇ ಇದ್ದ ಗಣಪತಿ, ಬಲಗೈ ತೋರುಬೆರಳಿನಿಂದ ಅವಳ ಕೆನ್ನೆಗೆ ಪುಟ್ಟ ಏಟನ್ನು ಇಕ್ಕಿದ.

ತಲೆಬಾಗಿಲಲ್ಲಿ ಕಾಲಿಟ್ಟು ಗೌರಮ್ಮ ಹಸಿದ ಹುಲಿಯಂತೆ ನೋಡುತ್ತ ನಿಂತಳು ಈ ದೃಶ್ಯವನ್ನು.

"ಅವ್ವ ಬಂದಳು ಅವ್ವ ಬಂದಳು."

ಕೈಕೊಸರಿಸಿಗೊಂಡು ಒಳಓಡಿದಳು. ಸರಸ್ವತಿ ತನ್ನ ತಾಯಿಗೆ ಹೇಳಲು ಅಚ್ಚಮ್ಮ ಒಳಗಿರಲಿಲ್ಲ. ಹೂವೀಳ್ಯೆಗೆ ಹೊರಗೆ ಹೋಗಿದ್ದ ಅಚ್ಚಮ್ಮ ಆಗ ತಾನೆ ತಲೆಬಾಗಿಲಲ್ಲಿ ಬಂದಳು. ಎದುರು ನಿಂತಿದ್ದ ತಾಯಿಯನ್ನು ಕಂಡು ಅವಾಕ್ಕಾದಳು.

ಅಂದು ತಾನು ತಾಯಿಗೆ ಆಡಿದ ದುಡುಕು ಮಾತಿಗಾಗಿ ಸಾಕಷ್ಟು ನೊಂದಿದ್ದಳು ಮನದಲ್ಲಿಯೇ, ಗಂಡನ ಮುಂದೆಯೂ ಹೇಳಿಕೊಂಡು ಅತ್ತಿದ್ದಳು.



ಅದು ಅಕ್ಷಮ್ಯ ಅಪರಾಧವೆಂದೂ ಅನಿಸಿಗೊಂಡಿದ್ದಳು. ಇದೆಲ್ಲದುದರ ಕಹಿ ನೆನಪು ಮೃದುಸ್ವಭಾದ ಅವಳ ಸ್ಮರಣೆಯಿಂದ ಹೋಗಲು ಸಾದ್ಯವೇ ಇರಲಿಲ್ಲ. ಅಂದಿನಿಂದಂತೂ ತಾಯಿಯನ್ನು ಸಾಕ್ಷಾತ್ ಪರದೈವವೆಂದೇ ಕಾಣುತ್ತಿದ್ದಳು.

"ಒಳಗೆ ನಡೆಯಮ್ಮ, ಇಲ್ಲಿ ಯಾಕೆ ನಿಂತಿ? ಬಾಳಪ್ಪ ಚೆನ್ನಾಗಿದ್ದಾನೆಯೇ?"

ಅಳಿಯನ ಕ್ಷೇಮ ಸಮಾಚಾರವನ್ನು ವಿಚಾರಿಸಿದಳು. ತಾಯಿಯನ್ನು ಸ್ವಾಗತಿಸುತ್ತ.

"ಇನ್ಯಾಕೆ ಬೇಕವ್ವ ನಿನಗೆ ಬಾಳನ ಕ್ಷೇಮ ಸಮಾಚಾರ?"

ತಾಯಿಯ ಮಾತಿನ ಮತಿತಾರ್ಥವಾಗಲಿಲ್ಲ ಸರಳ ಸ್ವಭಾವದ ಮಗಳಿಗೆ.

ಗೌರಮ್ಮ ತನ್ನ ದುಷ್ಟ ಅಭಿಪ್ರಾಯವನ್ನು ಸ್ಪಷ್ಟಮಾಡಿದಳು ಮುಂದಿನ ಮಾತಿನಿಂದ

"ಸರಸಿನ್ನ ಬಾಳಗೆ ಲಗ್ನ ಮಾಡಿಕೊಟ್ಟಿ. ಈ ಗಣಪ್ಪಗೆ ನಿಷೇಕ ಮಾಡಿಕೊಂಡು."

ಸಿಡಿಲು ಬಡಿದಂತಾಗಿ ಕಮರಿಹೋದ ಬಳ್ಳಿಯಂತಾಯಿತು ಅಚ್ಚಕ್ಕಳ ಕೋಮಲವಾದ ಮನಸ್ಸು. ನಾಲಗೆಯ ತೇವವೂ ಹೋಯಿತು. ನಿಲ್ಲಲು ಚೈತನ್ಯವಿಲ್ಲದಾಗಿ ಕಾಲುಗಳು ನಡುಗಹತ್ತಿದವು. ಮೆಲ್ಲನೆ ಗೋಡೆ ಹಿಡಿದುಕೊಂಡು ಅಚ್ಚಕ್ಕ ಒಳಹೊರಟು ಬೀಳದೆ ಅಡುಗೆಮನೆ ಸೇರಿದಳು. ದೇವರ ಮನೆಯ ಕಡೆತಲೆಮಾಡಿ ಅಡ್ಡಾದಳು.

"ಹೂಂ, ತೆಗೆದುಕೊ ಗಣಪತಿ ಪುಸ್ತಕವನ್ನು, ಬೇಗ ಪಾಠ ಮುಗಿಸು."

ಏನೂ ಅರಿಯದ ಸರಸ್ವತಿ ಗಣಪತಿಗೆ ಅವಸರ ಮಾಡಿದಳು.

"ಇಗೊ ಬಂದೆ."

ಗಣಪತಿ ಏನೋ ನೆವದಿಂದ ಹೊರಬಿದ್ದವನು ಊಟಕ್ಕೂ ಇರಲಿಲ್ಲ.

ಮಲಗುವ ಹೊತ್ತಾದರೂ ಮನೆಗೆ ಬರಲಿಲ್ಲ.

ಬ್ರಹ್ಮಾನಂದ ಶಾಸ್ತ್ರಿಗಳು ಮನೆಗೆ ಬಂದಾಗ ಮಸಣದಂತೆ ಕಂಡಿತು ಎಲ್ಲವೂ

"ಮೊದಲು ಊಟ ಮುಗಿಸಿರು ಎಲ್ಲರೂ, ಆಮೇಲೆ ಮಾತು"

ಅತ್ತೆಯವರನ್ನು ಆದರಿಸಿದರು ಶಾಸ್ತ್ರಿಗಳು.

ಎಲ್ಲ ದೇವರುಗಳನ್ನೂ ಕಾಲಿಂದ ಒದೆಯುವವರು ಎಲ್ಲಿ ಯಾದರೂ ದೊರೆಯಬಹುದು. ಆದರೆ ಅನ್ಯದೇವರನ್ನು?

ಊಟಕ್ಕೆ ಕುಳಿತಾಗಲೆ ಸೂಕ್ಷ್ಮವಾಗಿ ಸೂಚಿಸಿದಳು ಗೌರಮ್ಮ ತಾನು ಬಂದುದು ಏಕೆ ಎಂಬುದನ್ನು, ರಾತ್ರಿ ಮಲಗಿದಲ್ಲಿಯೇ ಮಗಳೊಡನೆ ಮಾತು ಬೆಳೆಸಿದಳು.

"ಗಂಡೇ ಆಗಲಿ ಹೆಣ್ಣೇ ಆಗಲಿ. ವಯಸ್ಸಿಗೆ ಬಂದಮ್ಯಾಲೆ ಆ ಮಾತೇ ಬ್ಯಾರೆ ನೋಡು ಅಚ್ಚಿ. ಯಾಕೆ ಅಂತಿ? ನೀನು ಬ್ಯಾಗನೆ ಮನಿಗೆ ಬಂದೆವ್ವ ಹನ್ನೆರಡು ತುಂಬತಾನೆ, ನಿನಗಂಡನೂ ಅಟೋಪದಾಗೆ ಉಳಿದ, ಹೌದಂತೀಯ ಇಲ್ಲೊ. ನೀನೆ ಹೇಳು. ಗಂಡರಂಡೇವು, ಏನಾರೆ ಒಂದ ಮಾಡಿಕೊಂಡು ಕೊಡ್ತಾವೆ ಇಗ್ಗೆಲಸಾನ, ಹೌದಲ್ಲೊ– ಏನಂತಿ ನೀನು? ಈಗ ಬಾಲನೆ ಇದ್ದಾನೆ ಅನ್ನು....

ಅಚ್ಚಮ್ಮಳಿಗೆ ಮೈಯಲ್ಲವೂ ಜುಂ ಎಂದಿತ. ಮುಂದಿನ ಮಾತುಗಳು ಏನಿವೆಯೋ ಎಂದು.

ಗೌರಮ್ಮಳಿಗೆ ಮಾತುಗಾರಿಕೆ ಕಲಿಸಬೇಕೆ? ಸುಳ್ಳನ್ನೂ ಆಡಿರಬಾರದು. ನಿಜವೂ ಹೊರಬಿದ್ದಿರಬಾರದು. ಅನುವಾನವಾಗಿರಬೇಕು. ಅಭಿಪ್ರಾಯವಾಗಿಬಾರದು. ಅರ್ಥ ತಿಳಿದಿರಬೇಕು. ಉತ್ತರ ಕೊಡಲು ಬಂದಿರಬಾರದು. ನುರಿತ ಕಸಬುದಾರೀ ರಾಜಕಾರಣಿಯಂತೆ ಬರೀ ಚೆಕ್ಕಬಂದಿಯಲ್ಲಿಯೇ ಮಾತನ್ನು ಸುತ್ತಾಡಿಸುತ್ತಿದ್ದಳು ಅರ್ಧಗಂಟೆಯಾದರೂ.

"ಹಸಿವಿ ಆದಾಗ ಅನ್ನ ಹಾಕದಿದ್ದರೆ ಏನದೆ ಹೇಳು? ಹೊಟ್ಟೆಯೊಂದು ಅದಲ್ಲ, ಏನಂತಿ? ಬಾಳ ಏನು ಅಂಥವನಲ್ಲ. ನಾನೂ ಅಂಕ್ಯಾಗೆ ಇಟುಗೊಂಡೀನಿ ಸೈ ಅನ್ನು. ನಾನೇನು ಚಿರಂಜೀವಿ ಏನೆ ಅಚ್ಚಿ? ನಾಳೆ ಸತ್ತೆ ಅಂತ ಅಂದಕೋ, ಆಗ ಸರಸಿ ಬಾಳಿವಿ ಮೂರಾಬಟ್ಟೆ ಅಹುದೋ ಅಲ್ಲೊ, ನೀನೆ ಹೇಳು, ಎಷ್ಟು ನಿಗಾ ಇದ್ರೂನು ಏನದೆ ಅಚ್ಚಿ? ಮೊನ್ನೆ ಬಾಳ.... ಎಲ್ಲಿ ತನಕ ಕಾದುಕೊಂಡು ಕೂಡಲಿಕ್ಕೆ ಆಗೀತೆ ನಮ್ಮವ್ವ, ನೀ ಏನಾರೆ ಅನ್ನು ಈ ಗಂಡು ಜ್ಯಾತಿಮ್ಯಾಲೇ ಇಲ್ಲ ಭರವಸೆ ನನಗೆ.....ಸುಮ್ಮನೆ ಮಲಗಿ ಬಿಟ್ಟೆಲ್ಲ ನಿನ್ನದೇನು ಅಭಿಪ್ರಾಯ ಅಚ್ಚಿ?"

ಮೂಕಳಂತೆ ಮಲಗಿದ್ದ ಅಚ್ಚಕ್ಕಳನ್ನು ಮೂಲೆಯಿಂದ ಮಾತಿಗೆಳೆದಳು ಗೌರಮ್ಮ ತಾಯಿ.

"ಯಾವುದಕ್ಕೆ ಅನ್ತಿ ನನ್ನ ಅಭಿಪ್ರಾಯ?"

"ನಿನಗೆ ಹೋಳೀಲೇ ಇಲ್ಲೆ ನಮ್ಮವ್ವ ಇನ್ನೂ, ಬಾಳನ ಶೋಬನ ಎಂದಿಗೆ ಇಡೋಣ ಅಂದೆ."

"ಈಗಲೆ ಎಲ್ಲೀ ಶೋಬನಮ್ಮ ನೀನು, ಇನ್ನೂ, ಸರಸ್ವತಿ ದೊಡ್ಡಾಕೀನೆ ಆಗಿಲ್ಲವ್ವ. ದೇವರೇ ಅಂತ ಹದಿಮೂರು ತುಂಬಿತು ಮನ್ನೆ ಮನ್ನೆ."



"ಹದಿಮೂರು ಅಂದರೇನು ಕಡಿಮೀ ಆತೇನೇ ಅಚ್ಚಿ ವಯಸ್ಸು, ಆ ವಯಸ್ಸಿಗೆ ನಾನಾಗಲೆ ನಿಮ್ಮಪ್ಪನ ಮನೀಗೆ ಬಂದು ಆರುತಿಂಗಳಾಗಿತ್ತು. ಹದಿನಾಲ್ಕು ತುಂಬೋದರಾಗೆ ನೀನು ಹೊಟ್ಯಾಗೆ ಇದ್ದೆವ್ವ, ಸರಸಿ ಇನ್ನಾ ದೊಡ್ಡಾಕಿ ಆಗಿಲ್ಲ ಖರೆವಂದ್ರು?"

ಆಶ್ಚರ್ಯ ಸಂಶಯಗಳಿಂದ ಕೂಡಿದ ದನಿಯಲ್ಲಿ ಕೇಳಿದಳು ಗೌರಮ್ಮ.

"ಸುಳ್ಯಾಕೆ ಬೇಕಮ್ಮ, ನೀನು? ದೊಡ್ಡಾಕಿ ಆಗಿದ್ದರೆ ನಾನು ಯಾಕೆ ಮುಚ್ಚಿಡಲಿ ನಿನ್ನ ಮುಂದೆ."

ಗೌರಮ್ಮಳಿಗೆ ಅತೀವ ನಿರಾಶೆಯಾಯಿತು.

"ಇದೇನೆ ನಮ್ಮವ್ವ, ಅನ್ಯಾಯ? ಹದಿಮೂರು ತುಂಬಿ ಹದಿನಾಲ್ಕು ಬಂದರೂ ಇನ್ನೂ ಆಗಲಿಲ್ಲ ಅಂದ್ರೆ ಏನಂಬೋ ಮಾತು? ಒಳ್ಳೆ ಲೋಕದಾಗಿಲ್ಲದ ಸೊಸಿ ಸಿಕ್ಕಳು ಬಿಡು ನನಗೂನು. ಹೆಣ್ಣಾರೆ ಹೌದೆ ಅಲ್ಲೆ ಸರಸಿ?"

ಇದುವರೆಗೆ ಆಡಿದ ಮಾತುಗಳೇ ಸಾಕಷ್ಟು ಅಸಹ್ಯವೆನಿಸಿದ್ದವು ಅಚ್ಚಮ್ಮಳಿಗೆ. ಈ ಮಾತಂತೂ ಅವಳ ಹೃದಯದಲ್ಲಿ ಮುಳ್ಳಿನಂತೆ ಮುರಿಯಿತು.

ಗೌರಮ್ಮಳಿಗೇನು ಸಂಬಂಧ ಇತರರ ನೋವು ಸಾವುಗಳು? ಕಟ್ಟಿಗೆಯ ಬಾಯಿಯಾಗಿದ್ದರೆ ಎಂದೋ ಒಡೆದು ಹೋಗಬೇಕಿತ್ತು? ಮುಂದುವರೆಸಿದಳು ಮಾತನ್ನು ಆ ಊ ಎನ್ನದೆ.

"ಯಾರಿಗಾರೆ ತೋರಿಸ್ಯಾರೆ ತೋರಿಸು ಅವಳನ್ನು, ಎಷ್ಟೋ ಹೆಣ್ಣುಗಳು. ನಡುವಯಸ್ಸಿನಲ್ಲಿ ಗಂಡು ಆಗುತ್ತವಂತೆ."

ಆ ಪುಣ್ಯ ನನಗೆಲ್ಲಿದೆ ಅಂದುಕೊಂಡಳು ಅಚ್ಚಮ್ಮ.

"ಇಲ್ಲಿ ನೋಡು ಅಚ್ಚೀ, ನಿನ್ನ ಮಗಳ ಹಿತಕ್ಕೆ ನಾನು ಹೇಳೋದು, ಆದಷ್ಟು ಬ್ಯಾಗ ಒಂದು ವಗತನ ಮಾಡಿದರೆ ಆಕೀಗೆ ಒಳ್ಳೇದು, ಬಾಳಪ್ಪನೂ ಒಂದಿಷ್ಟು ಅಡ್ಡ ದಾರಿ ಬೀಳದಂತೆ ಇರತಾನೆ. ಇಲ್ಲಾ ಅಂದರೆ.... ಗಂಡು ರಂಡೇವು ಹೇಳಿ ಕೇಳಿ.... ಅನಕಾ ಒಂದು ವಾರ ಎಳ್ಳು ಕುಟ್ಟಿ ಚಿಗಳೆ ಮಾಡಿ ಆದರೂ ತಿನಸೇ ನಮ್ಮವ್ವ, ಅದ್ಯಾಕೆ ಆಗೋದಿಲ್ಲೊ ನೋಡೇಬಿಡ್ತೀನಿ.... ಏನಂತಿ?"

"ಹಾಗೇ ಆಗಲಮ್ಮ."

ಈ ಮಾತು ಅಚ್ಚಕ್ಕಳ ಬಾಯಿಂದ ಹೊರಟ ಕಾರಣ ಸಧ್ಯಕ್ಕೆ ಗೌರಮ್ಮಳ ಬಾಯಿ ಮುಚ್ಚಿತು. ಅಚ್ಚಮ್ಮಳಿಗೆ ಮಲಗಲು ಸಾಧ್ಯವಾಯಿತು.

## ೧೬

ಗೌರಮ್ಮನವರು ಬಂದ ಕೆಲಸವಾಯಿತಲ್ಲ?

ಕತ್ತೆಯಂತೆ ಕಾಲು ಜಾಡಿಸಿರು ಮಗಳ ಸುಕೋಮಲ ಹೃದಯಕ್ಕೆ. ಕಾಲ್ತೆಗೆದರು ಊರಿಗೆ. ಹೆತ್ತ ತಾಯಿ ಇದಕ್ಕೂ ಹೆಚ್ಚಿನ ಅದಾವ ಉಪಕಾರವನ್ನು ಮಾಡಬೇಕು?

ಅಚ್ಚಮ್ಮ ಆಳಲಿಲ್ಲ ಈ ಬಾರಿ; ಅವಳ ಗೋಳು ಅಳುವಿನ ಆಳವನ್ನು ಮೀರಿ ಅವಳ ಮನದ ಪಕ್ವತೆಯನ್ನು ಅದೆಷ್ಟೊ ಬೆಳೆಸಿಕೊಟ್ಟು, ಬರಲಿರುವ ಎಲ್ಲ ಆಘಾತಗಳನ್ನೂ ಎದೆಗುಂದದೆ ಇದುರಿಸುವಷ್ಟು ಪಳಗಿಸಿ, ಸಹಿಷ್ಣುತೆಯನ್ನು ಬುತ್ತಿಯಂತೆ ಕಟ್ಟಿಕೊಟ್ಟಿತು. ಸರಸ್ವತಿಯ ಭಾವೀ ಜೀವನದ ಸಲುವಾಗಿ ಅವಳಿನ್ನು ಯೋಚಿಸಲು, ದುಃಖಿಸಲು ಏನೂ ಉಳಿದಿರಲಿಲ್ಲ. ಅದು ಅಷ್ಟೇ ಎಂದು ತನ್ನ ಮನಕ್ಕೆ ನೂರು ಬಾರಿ ಹೇಳಿಕೊಂಡು ಸಮಾಧಾನ ಮಾಡಿಕೊಂಡಳು.

ಆದರೆ ಆಗಾಗ್ಗೆ ಮಾತೃದೇವತೆಯು ಕರುಣಿಸುತ್ತಿದ್ದ ಕರ್ಣಕಠೋರ ಕೊಂಕುಗಳನ್ನು ಕೇಳಲು ಅಚ್ಚಮ್ಮಳಿಗೆ ಅಸಹ್ಯವೆನಿಸುತ್ತಿತ್ತು.

ಬೆಳಗಾದರೂ ಮನೆಯಲ್ಲಿ ಗಣಪತಿಯ ಸುಳಿವೇ ಇಲ್ಲ; ಅಚ್ಚಮ್ಮ ಚಿಂತೆಗೀಡಾದಳು. ರಾತ್ರಿಯೇ ಹೇಳಿದ್ದಳು ಗಂಡನಿಗೆ ಸೂಕ್ಷ್ಮವಾಗಿ. ಗೌರಮ್ಮ ತನ್ನೂರಿಗೆ ಹೊರಟ ಕೂಡಲೆ ಬ್ರಹ್ಮಾನಂದಶಾಸ್ತ್ರಿಗಳಿಗೆ ದುಂಬಾಲು ಬಿದ್ದಳು.

"ನೀವು ಮೊದಲು ಹೋಗಿ ಗಣಪತಿನ್ನ ಹುಡಿಕಿಕೊಂಡು ಬರ್ರಿ. ನನಗ್ಯಾಕೋ ಅಂಜಿಕಿ ಆಗಲಿಕ್ಕೆ ಹತ್ತೇದ ಅವನ ಬಗ್ಗೆ, ಪ್ರಾಯದ ಹುಡುಗ , ಅಪಮಾನ ಆಯಿತು ಅಂತ ಪ್ರಾಣಕ್ಕೆ ಏನಾದರೂ ಮಾಡಿಕೊಂಡರೆ ಏನು ಗತಿ? ನೀವು ಮೊದಲು ಹೊರಡ್ರಿ. ನಾನಂತೂ ಇವತ್ತು ಗಣಪತಿ ಮುಖ ನೋಡುವವರೆಗೂ ಸ್ನಾನ ಮಾಡುವುದಿಲ್ಲ. ಅಡಿಗೆಗೆ ಒಲಿ ಹೊತ್ತಿಸುವದಿಲ್ಲ."

ಕಣ್ಣೊರಸಿಗೊಳ್ಳುತ್ತ ಅಡುಗೆಮನೆಯಲ್ಲಿ ಅಡ್ಡಾಗಿ ಬಿಟ್ಟಳು ಅಚ್ಚಕ್ಕ.

"ಗಣಪತಿಯನ್ನು ಎಲ್ಲಿಗಪ್ಪಾ ಕಳಿಸಿದಿ? ನಿನ್ನೆ ಕೂಡ ನನಗೆ ಪಾಠವನ್ನು ಹೇಳಿಕೊಟ್ಟಿಲ್ಲ. ಅವನು ಊಟಕ್ಕೇ ಬರಲಿಲ್ಲ ರಾತ್ರಿ."

ಸರಸ್ವತಿ ಸಣ್ಣ ಮುಖಮಾಡಿ, ತಾಯಿಯ ಕಡೆ ನೋಡುತ್ತ ಮಂಕಾಗಿ ಕುಳಿತಳು.

"ಈಗ ಬರುತ್ತೀನಿ."

ಬ್ರಹ್ಮಾನಂದಶಾಸ್ತ್ರಿಗಳು ಮೇಲೆ ವಸ್ತ್ರ ಸಹ ಇಲ್ಲದೆ ಹೊರಟೇ ಬಿಟ್ಟರು.

ಮನೆಯಿಂದ ಹೊರಟರಾಗಲಿ, ಎಲ್ಲಿಗೆ ಹೋಗಬೇಕು? ಎಲ್ಲಿ ಹುಡುಕಬೇಕು? ಎಂಬುದೇ ತೋಚಲಿಲ್ಲ ಅವರಿಗೆ. ಅತ್ತ ಇತ್ತ ಸುತ್ತುತ್ತ ನಗರೇಶ್ವರ ದೇವಾಲಯಕ್ಕೆ ಬಂದರು. ಇಲ್ಲಿ ಏನಾದರೂ ಬರಬಹುದೇ ಗಣಪತಿ ಎಂದುಕೊಳ್ಳುತ್ತ ಮಹಾದ್ವಾರದಲ್ಲಿ ಹೊಕ್ಕರು. ಆಗಲೆ ಮಧ್ಯಾಹ್ನ ಹನ್ನೆರಡು ಆಗಿತ್ತು. ಪ್ರದಕ್ಷಿಣೆ, ನಮಸ್ಕಾರ ಮುಗಿಸಿ ನಗರೇಶ್ವರ ಸ್ವಾಮಿಯ ಮುಂದೆ ಕರಜೋಡಿಸಿ ನಿಂತವರು. ಎಷ್ಟು ಹೊತ್ತು ನಿಂತರೋ ಅವರಿಗೇ ತಿಳಿಯದಾಯಿತು.



ಎದುರಿಗೇ ನಿಂತು ಅಥರ್ವಣ ವೇದವನ್ನು ಪಠಿಸುತ್ತಿದ್ದ ಗಣಪತಿ!

ಅವಾಕ್ಕಾಗಿ ಕಣ್ಣು ತೆರೆದರು. ಮನೋಭ್ರಮೆ ಎಂಬುದು ಹೊಳೆಯಿತು. ವಿಸ್ಮಯಕ್ಕೀಡಾಯಿತು ಶಾಸ್ತ್ರಿಗಳ ಮನಸ್ಸು. ಆವೇಶವಶರಾಗಿಬಿಟ್ಟರು. ಕಣ್ಣಿಂದ ನೀರು ಸುರಿಯಿತು.

ಶುದ್ಧ ಕಂಠದಿಂದ ಕೂಗಿ ಬಿಟ್ಟರುಬ್ರಹ್ಮಾನಂದಶಾಸ್ತ್ರಿಗಳು

"ಎಲ್ಲಿ ಬಚ್ಚಿಟ್ಟೀಯಪ್ಪಾ ಸ್ವಾಮೀ, ನನ್ನ ಗಣಪತಿನ್ನ?"

ಗೋಡೆ, ಕಂಬ, ಮಂಟಪ, ಮಾಳಿಗೆ ನಡುಗಿಹೋದವು ಶಾಸ್ತ್ರಿಗಳ ಘರ್ಜನೆಗೆ.

ಕದಲದೆ ಕಲ್ಲಾಗಿ ನಿಂತುಬಿಟ್ಟಿದ್ದ ನಗರೇಶ್ವರ ಸ್ವಾಮಿ.

ನಿರುತರಾಗಿದ್ದ ಶಾಸ್ತ್ರಿಗಳಿಗೆ ಸಹಿಸಲಾರದಷ್ಟು ವೇದನೆಯಾಯಿತು. ಅದರ ಫಲವಾಗಿ ರೋಷವು ತಲೆದೋರಿತು. ಪಥತಪ್ಪಿ ಕೂಗಹತ್ತಿದರು. ಸ್ವಾಮಿಯನ್ನೂ ಮನದಣಿಯೆ ನಿಂದಿಸಿದರು.

"ವಂಚಕಾ! ಭಕ್ತದ್ರೋಹೀ! ಸ್ಮಶಾನದಲ್ಲಿರಬೇಕಾದ ನಿನ್ನನ್ನು ನಗರದಲ್ಲಿ ತಂದುದಕ್ಕೆ ಬೇರಿನ್ನಾವ ಉಪಕಾರವಾದೀತು ನಿನ್ನನ್ನು ನಂಬಿದವರಿಗೆ? ಕೊಡು, ಕೊಡು ನನ್ನ ಗಣಪತಿಯನ್ನು, ಪ್ರಳಯತಾಂಡವಾ, ನಿನ್ನ ಉರಿಗಣ್ಣಿಗೂ ಅಂಜುವದಿಲ್ಲ. ಬೇಕಾದರೆ ನನ್ನನ್ನು ಈ ಕ್ಷಣದಲ್ಲಿಯೇ ದಹಿಸು, ಆದರೆ ನನ್ನ ಎಳೆಬಾಳೆಯಂತಹ ಗಣಪತಿಯನ್ನು ಮಾತ್ರ ನಿನಗೆ ಭಕ್ಷಿಸಲು ಬಿಡಲಾರೆ. ಭೀಷ್ಮಾಚಾರ್ಯರಂತಹ ಶಂಕರದೀಕ್ಷಿತರನ್ನು ತಿಂದು ತೃಪ್ತಿಯಾಗಲಿಲ್ಲವೇ? ಈಗ ಗಣಪತಿಯನ್ನು ತಿನ್ನುತ್ತೀಯಾ? ಕೊಡು ಕೊಡು, ನನ್ನ ಗಣಪತಿ.... ಗಣ...."

ಮೂರ್ಛೆಯಿಂದ ನೆಲಕ್ಕುರುಳಿಬಿಟ್ಟರು ಬ್ರಹ್ಮಾನಂದಶಾಸ್ತ್ರಿಗಳು.

ನಗರೇಶ್ವರಸ್ವಾಮಿಯ ಪೂಜೆಗೆಂದು ಹೂ–ಪತ್ರಿಗಳಿಂದ ಬಂದಿದ್ದ ಅರ್ಚಕರು ಗಾಬರಿಗೊಂಡರು ನಿಶ್ಚೇಷ್ಟರಾಗಿ ಬಿದ್ದಿದ್ದ ಬ್ರಹ್ಮಾನಂದಶಾಸ್ತ್ರಿಗಳನ್ನು ಕಂಡು. ಉಟ್ಟಿದ್ದ ಪಂಚೆ ಅಸ್ತವ್ಯಸ್ತವಾಗಿದ್ದಿತು. ಮೊಳಕಾಲ ಮೇಲೆ ಚಿಕ್ಕ ಗಾಯವಾಗಿ ರಕ್ತ ಕಚ್ಚಿದ್ದಿತು. ಮುಂದಲೆಗೆ ಬುಗುಟಿಯಾಗಿದ್ದಿತು.

ಕೈಲಿದ್ದ ತಂಬಿಗೆಯಿಂದ ಅರ್ಚಕರು ಕೊಂಚ ನೀರನ್ನು ಕೈಯಲ್ಲಿ ಹಾಕಿಕೊಂಡು ಮುಖಕ್ಕೆ ಉಗ್ಗಿದರು ಎರಡೆರಡು ಬಾರಿ.

“ಶಾಸ್ತ್ರಿಗಳೇ, ಶಾಸ್ತ್ರಿಗಳೇ.”

ಒಂದೇ ಉಸಿರಿನಲ್ಲಿ ಕೂಗಿದರು ಅರ್ಚಕರು.

ಬ್ರಹ್ಮಾನಂದಶಾಸ್ತ್ರಿಗಳಿಗೆ ಕೊಂಚ ಕೊಂಚ ಎಚ್ಚರವಾಯಿತು. ಕಣ್ತೆರೆದರು. ಸುತ್ತಲೂ ನೋಡಿದರು. ಅರ್ಚಕರನ್ನು ಕಾಲಿಂದ ತಲೇವರೆಗೂ ಎರೆಡೆರಡು ಬಾರಿ

ನೋಡಿದರು.

“ಆಂ.... ಎಲ್ಲಿದ್ದೀನಿ.... ಎಲ್ಲಿದ್ದೀನಿ.... ನನ್ನ ಯಾಕೆ ಪುನ: ಈ ಲೋಕಕ್ಕೆ ತಂದಿರಿ ಸ್ವಾಮೀ, ಅಲ್ಲಿ ಆನಂದವಾಗಿ ಇದ್ದೆನಲ್ಲ. ಅವನ ಪಾದಾರವಿಂದದಲ್ಲಿ.”

ಅರ್ಚಕರು ಪೂಜಾಸಾಮಗ್ರಿಗಳನ್ನು ಬದಿಗಿರಿಸಿ ಶಾಸ್ತ್ರಿಗಳ ಹತ್ತಿರ ಬಂದರು. ಕೈಹಿಡಿದು ಮೆಲ್ಲ ಮೆಲ್ಲನೆ ಎಬ್ಬಿಸಿದರು.

“ನನ್ನ ಯಾಕೆ ಮುಟ್ಟಿದಿರಿ ಸ್ವಾಮೀ, ನೀವು ಮಡಿಯಲ್ಲಿ ಇದ್ದಿರಿ.....”

ಅರ್ಚಕರು ನಸುನಗುತ್ತ ಸಮಧಾನ ಹೇಳಿದರು.

“ನನ್ನ ಮಡಿ ಏನು ಸುಡ್ತು ಶಾಸ್ತ್ರಿಗಳೇ? ಮೈಲಿಗೆ ಇದ್ದವರು ತಮ್ಮನ್ನು

ಮುಟ್ಟಿದರೆ ಮಡಿ ಆಗ್ತಾರೆ.... ಏಳ್ರಿ, ಮೆಲ್ಲನೆ ಎದ್ದು ಕೂಡಿರು.... ಇಲ್ಲಿಗೆ ಯಾವಾಗ ಬಂದಿರಿ? ಏನಾತು....? ವಯಸ್ಸು ಆದ ಮೇಲೆ ಹೀಗೆಲ್ಲ ಒಬ್ಬೊಬ್ಬರೇ....”

ಅರ್ಧಅರ್ಧ ಆಡುತ ಅರ್ಧಅರ್ಧ ನುಂಗುತ್ತ ಅರ್ಚಕರು ಶಾಸ್ತ್ರಿಗಳಿಗೆ ತಮ್ಮದೇ ಆದ ರೀತಿಯಲ್ಲಿ ಸಮಾಧಾನ ಹೇಳುತ್ತ ಮೆತ್ತಗೆ ಮನೆಯವರೆಗೂ ಕರತಂದರು.

ಶಾಸ್ತ್ರಿಗಳು ಮನೆಗೆ ಬಂದ ರೀತಿಯನ್ನು ನೋಡಿಯೇ ಅಚ್ಚಕ್ಕಳ ಎದೆ ಒಡೆದು ನೂರು ನುಚ್ಚಾಯಿತು. ಓಡೋಡುತ್ತ ಬಂದು ಚಾಪೆಯನ್ನು ಹಾಸಿ ಕೈ ಹಿಡಿದು ಕರೆತಂದಳು ತನ್ನ ಪಾಲಿನ ದೇವರನ್ನು, ಸರಸ್ವತಿ ತಲೆ ದಿಂಬನ್ನು ಇಟ್ಟಳು.

“ಕಾಲಿಗೆ ಪೆಟ್ಟು ಬಡದದೆ, ತಲೀಗೂ ಗಾಯ ಆಗೇದ...

ಅರ್ಚಕರು ಅಚ್ಚಮ್ಮಳಿಗೆ ವಿವರಿಸಿ ಹೇಳುತ್ತಿದ್ದರು.

ತಲೆ, ಕಾಲುಗಳಿಗೆ ತಾಗಿದ ಪೆಟ್ಟೆಲ್ಲ ಏನು ಪೆಟ್ಟು? ಬ್ರಹ್ಮಾನಂದಶಾಸ್ತ್ರಿಗಳ ಆತ್ಮಕ್ಕೆ ಬಲವಾದ ಗಾಯವಾಗಿದ್ದಿತು. ಮಾಯಲಾರದ ಗಾಯ, ಮರೆಯಲಾರದ ನೋವು!

“ಗಣಪತಿ ಎಲ್ಲೂ ಕಾಣಲಿಲ್ಲವೇನ್ರೆಪ್ಪಾ?”



ಉತ್ತರ ಗೊತ್ತಿದ್ದರೂ ಪ್ರಶ್ನೆಯನ್ನೂ ಕೇಳಿದಳು ಅಚ್ಚಕ್ಕ ಕೇವಲ ತಡೆಯಲಾರದೆ.

“ನಿಮ್ಮ ಮನೆಯಲ್ಲಿ ಇದ್ದರಲ್ಲಮ್ಮ ಗಣಪತಿ ದೀಕ್ಷಿತರು, ಹೋದ ಸೋಮವಾರ ಬಂದಿದ್ದರು ದೇವರ ದರ್ಶನಕ್ಕೆ.”

ನಿರುಪಾಯರಾಗಿ ಉತ್ತರವಿತ್ತರು ಅರ್ಚಕರು.

“ಆ ದೇವರೇ ಮಾಡಿರುವ ಕೆಲಸ ಇದು, ವಂಚಕ, ನಗರೇಶ್ವರಸ್ವಾಮಿ ಭಕ್ತದ್ರೋಹಿ....”

ಓಡಿಬಂದು ಅಚ್ಚಕ್ಕ ಪತಿದೇವನ ಬಾಯಿಗೆ ಕೈ ಇಟ್ಟಳು. ಕಣ್ಣಿಂದ ನೀರು ಪಳಪಳ ಸುರಿದು ಶಾಸ್ತ್ರಿಗಳ ಹಣೆಯ ಮೇಲೆ ತೊಟಕಿಕ್ಕಿತು.

“ಸ್ವಾಮೀ, ಯಾವ ಬಾಯಿಂದ ಯಾವ ಮಾತುಗಳನ್ನು ಆಡಿಸುತ್ತೀಯಲ್ಲಪ್ಪಾ? ಹಾಗನಬೇಡಿ ನನ್ನೊಡೆಯಾ, ನಗರೇಶ್ವರಸ್ವಾಮೀ ಇಚ್ಛಾ ಇದ್ದಂತೆ ಆಗಲಿ. ಗಣಪತಿ ಎಲ್ಲಿಗೂ ಹೋಗಿಲ್ಲ, ಬರುತಾನೆ.”

ಚತುರ್ವೇದ, ಷಟ್‌ಶಾಸ್ತ್ರ, ಅಷ್ಟಾದಶ ಪುರಾಣ, ಪಂಚಕಾವ್ಯ, ಆರು ಆಗಮ, ಆರುಣೋಪನಿಷತ್ತು–ಮುಂತಾದವುಗಳನ್ನೆಲ್ಲ ಪಠಿಸಿದ ಆ ಪವಿತ್ರ ಮುಖದಿಂದ ಈಶನ ನಿಂದೆಯೇ! ಅಚ್ಚಮ್ಮಳ ಆತ್ಮವು ನೀರಿನಲ್ಲಿ ಬೆರೆತ ಹೊಸ ಸುಣ್ಣದಂತೆ ಕತಕತ ಕುದಿಯಹತ್ತಿತು.

“ಕೊಂಚ ಏನಾದರೂ ತೆಗೆದುಕೊಳ್ಳಿ. ಮಧ್ಯಾಹ್ನವಾಯಿತು. ಹೊಟ್ಟೆಗೆ ಆಹಾರವಿಲ್ಲದಿದ್ದರೆ ಹೇಗೆ?”

ಅಂಗಲಾಚಿದಳು ಅಚ್ಚಮ್ಮ, ಆಗ್ರಹ ಮಾಡಿದಳು ಅಚ್ಚಮ್ಮ, ಶಿಲಾ ಪ್ರತಿಮೆಯ ಮುಖದಂತಿತ್ತು ಶಾಸ್ತ್ರೀಗಳ ಮುಖ. ಉಕ್ಕಿ ಬರುತ್ತಿದ್ದ ಎಲ್ಲ ಭಾವಗಳನ್ನೂ ಹುದುಗಿಸಿಕೊಂಡಿದ್ದರು ಅಂತರಂಗದಲ್ಲಿ, ಭೂಮಾತೆಯು ಜ್ವಾಲಾಮುಖಿ, ಲಾವಾರಸಗಳನ್ನು ಗರ್ಭದಲ್ಲಿ ಧರಿಸಿಯೂ ಮೇಲೆ ಪ್ರಶಾಂತಳಾಗಿರುವಂತೆ, ಶಾಸ್ತ್ರಿಗಳ ಮನದಲ್ಲಿ ನಡೆದಿದ್ದ ತುಮುಲ, ವಿಪ್ಲವವನ್ನು ಆ ಸ್ವಾಮಿಯೊಬ್ಬನೇ ಅರಿಯಲು ಸಾಧ್ಯವಿದ್ದಿತು. ಆಗಾಗ್ಗೆ ಉಶ್ ಎಂದು ಉಸಿರುಹಾಕಿ ಒಂದೊಂದೇ ಭಾವವನ್ನು ಓಡಿಸಲು ಯತ್ನಿಸುತ್ತಿದ್ದರು. ಹೃದಯದ ಬುಡದಲ್ಲಿ ಭದ್ರವಾಗಿ ಮನೆಮಾಡಿದ್ದ ಕೊರಗು, ಬಾಯಿಂದ ಹೊರಬರುವ ಉಸಿರಿಗೆ ಹೇಗೆ ಹಾರಿಹೊಗಬಲ್ಲದು?

“ಸರಸ್ವತೀ.”

ಕ್ಷೀಣವಾದ ಸ್ವರದಲ್ಲಿ ಆಗಾಗ್ಗೆ ಅನ್ನುತ್ತಿದ್ದರು.

"ಇಲ್ಲಿಯೇ ಇದ್ದೇನಪ್ಪಾ."

ಸುಕ್ಕಿಹೋದ ಚರ್ಮದ ಕೆನ್ನೆಗಳ ಮೇಲೆ ಕೈಯಾಡಿ ಕಣ್ಣೊರೆಸಿಕೊಳ್ಳುತ್ತಿದ್ದಳು ಸರಸ್ವತಿ.

"ಗಣಪತಿ ಬರುತ್ತಾನಪ್ಪಾ. ಇಷ್ಟೇಕೆ ಚಿಂತಿಸುತ್ತೀರಿ? ಎಲ್ಲಿಗೋ ಹೋಗಿದ್ದಾನೆ, ಬರುತ್ತಾನೆ.

"ಇಲ್ಲ ಸರಸ್ವತೀ, ಬರುವದಿಲ್ಲ ಗಣಪತಿ ಇಲ್ಲಿಗೆ. ನಾನೇ ಅಲ್ಲಿಗೆ ಹೋಗುತ್ತೇನೆ...."

"ಹಾಗನ್ನಬೇಡಿ ಪ್ರಭುವೇ, ಗಣಪತಿಯ ಸ್ವಭಾವವನ್ನು ನೀವು ಅರಿಯಿರಾ? ಹೇಯವಾದ ಕೆಲಸವನ್ನು ಎಂದಿಗೂ ಮಾಡುವದಿಲ್ಲ ಅವನು. ನನ್ನ ಆತ್ಮವು ಹೇಳುತ್ತಿದೆ, ಗಣಪತಿ ಜೀವಂತವಾಗಿದ್ದಾನೆ."

ಬ್ರಹ್ಮಾನಂದಶಾಸ್ತ್ರಿಗಳ ಕಣ್ಣಲ್ಲಿ ಅದೊಂದು ಬಗೆಯ ಕಾಂತಿ ಹೊಳೆಯಿತು.

"ಅಹುದು ವಶ್ಯೆ, ನೀನೇ ನಿಜವಾದ ಸತಿ. ಸಮಯೋಚಿತವಾಗಿ ಆಡಿದಿ. ಸತ್ಯವನ್ನೇ ಆಡಿದಿ. ಗಣಪತಿ ನಿಜವಾಗಿಯೂ ಹೀನ ಕೆಲಸವನ್ನು ಮಾಡಲಾರ. ಆತ್ಮಹತ್ಯದಂತಹ ಆತ್ಮಪತನಕ್ಕೆ ಎಂದೂ ಒಪ್ಪಲಾರ. ಏಕೆ ಹೇಳು, ಏಕೆ ಹೇಳು.... ಅದು ಸ್ವಾಮಿ ಶಂಕರದೀಕ್ಷಿತರ ಪಿಂಡ."

ಈ ಮಾತಿನಿಂದ ಹೊಸ ಚೈತನ್ಯವೇ ಬಂದಂತಾಯಿತು. ಶಾಸ್ತ್ರಿಗಳ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಎದ್ದು ಕುಳಿತು ತಾವೇ.

"ಏನಪ್ಪಾ ಎದ್ದಿರಿ? ಏನು ಬೇಕು, ನೀರಮನೆಗೆ ಹೋಗುತ್ತೀರಾ?"

ಸರಸ್ವತಿ ಕೈ ಹಿಡಿದು ಆದರಿಸಿದಳು.

ಆಗಲೆ ಶಾಸ್ತ್ರಿಗಳ ದೃಷ್ಟಿ ಬೇರೆಯಾಗಿದ್ದಿತು. ಕಣ್ಣಲ್ಲಿಯ ಹೊಳಪು ಕಾಣದಾಗಿದ್ದಿತು. ಧೂಪ್ಪೆಂದು ತಲೆದಿಂಬಿಗೆ ತಲೆ ಬಿದ್ದಿತು.

ಅಚ್ಚಕ್ಕ ಗಲ್ಲಕ್ಕೆ ಕೈ ಇಕ್ಕಿ ಕಂಬಕ್ಕೆ ಕುಳಿತವಳು, ಗಂಟೆಗಳ ಕಾಲ ಹಾಗೆಯೇ ಕುಳಿತಳು ಕಲ್ಲಿನ ಬೊಂಬೆಯಂತೆ. ಸಾಕ್ಷಾತ್ ಪರದೈವವೆಂದು ತಾನು ಈ ಮೂರು ದಶಕಗಳಿಂದ ಪೂಜಿಸುತ್ತಿದ್ದ ಈ ಆರಾಧನಾ ದೇವತೆ ಅನುಭವಿಸುತ್ತಿದ್ದ ಯಾತನೆ ಅವಳನ್ನು ಕಂಬಕ್ಕೆ ಕಟ್ಟಿ ಬಿಗಿದಿದ್ದಿತು. ಬಾಯಲ್ಲಿ ನೀರು ಹಾಕಲಿಲ್ಲ, ಅಡುಗೆಮನೆಯ ಕಡೆ ತಿರುಗಿ ನೋಡಲಿಲ್ಲ. ಸಾಕ್ಷಾತ್ ಅನ್ನಪೂರ್ಣಳಾಗಿದ್ದ ಅಚ್ಚಮ್ಮಳ ಅಡುಗೆ ಒಲೆಯಲ್ಲಿ ಸಾಲಾಗಿ ಮೂರು ದಿನಗಳು ಬೆಕ್ಕು ಮಲಗಿ ನಿದ್ರಿಸಿತು.



ಶಾಸ್ತ್ರಿಗಳು ಗುಟುಕು ಹಾಲನ್ನೂ ನಿರಾಕರಿಸಿದರು. ತೊಟ್ಟು ತೀರ್ಥವನ್ನೂ ಬೇಡೆಂದರು.

ಸರಸ್ವತಿಗೆ ಹಸಿವೆಯ ನೆನಪೇ ಹಾರಿಹೋಯಿತು. ಸದಾ ತಂದೆಯ ಬಳಿಯಲ್ಲಿ ಕುಳಿತಿರುವದೇ ಅವಳಿಗೆ ಹಿತವೆನಿಸಿತು.

ಊರವರೆಲ್ಲ ಬಂದು ಹೋದರು. ಶಾಸ್ತ್ರಿಗಳನ್ನು ಕೈಮುಗಿದು ಕೇಳಿಕೊಂಡರು

"ಋಷಿಗಳು ತಾವು, ಜ್ಞಾನಿಗಳು ತಾವು, ಹೋಮ-ಯಾಗಾದಿಗಳನ್ನು ಮಾಡಿ ಅಗ್ನಿದೇವರಿಗೆ ಆನಂದ-ತೃಪ್ತಿಗಳನ್ನು ಕೊಟ್ಟ ವಂಶ ತಮ್ಮದು. ನಾನು ತಮ್ಮ ಕಿಂಕರ, ಚಿಕ್ಕ ಬಾಯಿಂದ ದೊಡ್ಡ ಮಾತನ್ನು ಆಡುತ್ತಿದ್ದೇನೆ ಕ್ಷಮಿಸಬೇಕು, ಮಹಾಸ್ವಾಮಿ, ಬ್ರಹ್ಮಾನಂದಶಾಸ್ತ್ರಿಗಳೇ! ತಮ್ಮಿಂದ ಅನುಚಿತ ಕಾರ್ಯವಾಗಬಾರದು. ತಾವು ಲೋಕಕಲ್ಯಾಣ ಮಾಡುವವರು. ಈ ರೀತಿ ಹಟಯೋಗಕ್ಕೆ ಕುಳಿತರೆ ಹೇಗೆ? ಸ್ವಾಮಿನ್! ದಯವಿಟ್ಟು ಎದ್ದು ಸ್ನಾನ ಮುಗಿಸಿ, ಅಗನಿನಾರಾಯಣನಿಗೆ ಅನ್ನ ಕೊಡಬೇಕು. ಇದು ನನ್ನ ವಿನಂತಿ ಮಾತ್ರವಲ್ಲ, ಇಡೀ ಊರೇ ಬಂದಿದೆ. ಹೊರಬಾಗಿಲಲ್ಲಿ ನಿಂತಿದೆ. ಸರ್ವ ಜಾತಿಯವರಿಗೂ ಅರೆಜೀವವಾಗಿದೆ. ಇದರ ಮೇಲೆ ಸ್ವಾಮಿಯ ಚಿತ್ತ."

ಧೈರ್ಯದಿಂದ ಅನುಕಂಪ, ಅಂತಃಕರುಣ, ಗೌರವಗಳಿಂದ ನುಡಿದು ದೀರ್ಘದಂಡ ನಮಸ್ಕಾರ ಹಾಕಿ ಬಿನ್ನವಿಸಿದರು ಅನಂತಪದ್ಮನಾಭಾಚಾರ್ಯರು. ಮಧ್ವಮತಾಭಿಮಾನಿಗಳೂ, ಸಮಕಾಲೀನ ಪಂಡಿತರೂ, ವಿದ್ವಾಂಸರೂ, ನಿಷ್ಠಾವಂತರೂ ಆದ ಅನಂತಪದ್ಮನಾಭಾಚಾರ್ಯರೇ ಶಾಸ್ತ್ರಿಗಳಿಗೆ ನಮಸ್ಕರಿಸಿದುದನ್ನು ಕಂಡು ಸುತ್ತು ನಿಂತವರಿಗೆಲ್ಲ ರೋಮಾಂಚನವಾಯಿತು.

ಶಾಸ್ತ್ರಿಗಳು ಆಚಾರ್ಯರನ್ನು ಹತ್ತಿರ ಕರೆದರು ಕೈಸನ್ನೆಯಿಂದ, ಕೈಸವರಾಡಿ ಅವರ ಪಾದಗಳನ್ನು ಮುಟ್ಟಿ ಕಣ್ಣಿಗೆ ಹಚ್ಚಿಕೊಂಡರು.

"ತಮ್ಮ ದರ್ಶನವು ಸಕಾಲಕ್ಕೆ ಆಯಿತು."

ಶಾಸ್ತ್ರಿಗಳು ಪ್ರಯಾಸದಿಂದ ಮಾತನಾಡಿದರು.

"ಅವನ ಅಪ್ಪಣೆ ಆಗಿದೆ. ಹೋಗುತ್ತೇನೆ. ನನ್ನ ಅನ್ನ ಅಲ್ಲಿದೆ, ಆಗ್ರಹ ಮಾಡಬೇಡಿ ಆಚಾರ್ಯ, ನಿಮ್ಮ ಆಜ್ಞೆಯನ್ನು ಮೀರುವ ಶಕ್ತಿ ನನಗಿಲ್ಲ. ನನಗೆ ಅಪ್ಪಣೆ....."

ಸ್ವತಃ ಮಗನನ್ನು ಕಳೆದುಕೊಂಡಿದ್ದಾಗಲೂ ಕಣ್ಣು ತೇವವಾಗಿರಲಿಲ್ಲ ಹರಿಭಕ್ತ ಅನಂತ ಪದ್ಮನಾಭಾಚಾರ್ಯರಿಗೆ. ಮಗನ ಮದುವೆಯನ್ನು ಮಾಡಿದಷ್ಟು ಕರ್ಮನಿಷ್ಠೆಯಿಂದಲೇ ಮಗನ ಶವವನ್ನೂ ದಾಟಿಸಿದ್ದರು ಸ್ವತಃ ಮುಂದೆ

ಭುಜಕೊಟ್ಟು. ಕಲಲಿನಂತೆ ಇರುವ ಹೃದಯವು ಮಂಜಿನಂತೆ ಕರಗಿ ನೀರಾಗಿ ನಯನದ್ವಯಗಳಿಂದ ಹೊರಚಿಮ್ಮಿತು. ಬ್ರಹ್ಮಾನಂದ ಶಾಸ್ತ್ರಿಗಳ ಬಲಗೈಯನ್ನು ತೆಗೆದುಕೊಂಡು, ತಮ್ಮ ಪುಸ್ತಕದ ಮೇಲಿಟ್ಟಗೊಂಡರು. ಗಂಟಲುಬ್ಬಿ ಬಂದಿತು. ಚಿಕ್ಕ ಮಗುವಿನಂತೆ ಅತ್ತುಬಿಟ್ಟರು.

"ಏತಕ್ಕಾಗಿ ಅಳುತ್ತೀರಿ?"

ಕೈಸನ್ನೆಯಿಂದಲೆ ಕೇಳಿದರು ಸಪ್ಪೆ ಮುಖದಿಂದ ಶಾಸ್ತ್ರಿಗಳು.

"ನಿಮಗಾಗಿ ಸರ್ವಥಾ ಅಲ್ಲ ಗುರುವರ್ಯಾ, ನಿಮ್ಮ ಆಪ್ತೇಷ್ಟರಿಗಾಗಿಯೂ ಅಲ್ಲ. ನಿಮ್ಮನ್ನು ಕಳೆದುಕೊಳ್ಳುವ ಈ ದುರ್ದೈವ ಭೂಲೋಕಕ್ಕಾಗಿ ಪರಿತಪಿಸುತ್ತೇನೆ."

ಸನಿಹ ಕರೆದು ಆಚಾರ್ಯರ ಕಿವಿಯಲ್ಲಿ ಕ್ಷೀಣವಾಗುತ್ತಿದ್ದ ಕಂಠದಿಂದ ಶಾಸ್ತ್ರಿಗಳು ಉಸಿರಿದರು

"ಬಹುರತ್ನಾ ವಸುಂಧರಾ"

ಇಬ್ಬರ ಮುಖಗಳಲ್ಲಿಯೂ ಹೊಸಗೆರೆ ಮೂಡಿತು, ಹುಸಿ ನಗು ಹಾಸಿ ಹೋದಂತಾಯಿತು.

ಆಚಾರ್ಯರು ದುಡುದುಡು ನಡೆದು ಹೊರಸಾಗಿದರು. ತಲೆಬಾಗಿಲಲ್ಲಿ ಬಂದಾಗ ತಮ್ಮಲ್ಲಿ ತಾವೇ ಅಂದುಕೊಂಡರು–

"ಹರಿಸರ್ವೋತ್ತಮ, ವಾಯುಜೀವೋತ್ತಮ, ಶ್ರೀ ಹರೇ, ನಿನ್ನ ಮಾಯಾ."

ಪರಿಚಿತರು, ಅಪರಿಚಿತರು, ರೈತರು, ಬಡಬಗ್ಗರು, ಶ್ರೀಮಂತ ಸೆಟ್ಟರು, ಹೆಂಗಳೆಯರು, ಮಕ್ಕಳು ತಂಡತಂಡವಾಗಿ ಬಂದು ಹೋದರು, ಭೂಶಯನರಾಗಿದ್ದ ಬ್ರಹ್ಮನಂದಶಾಸ್ತ್ರಿಗಳ ದರ್ಶನಕ್ಕೆಂದು. ಸುತ್ತಮುತ್ತಲಿನ ಹಳ್ಳಿಗಳಿಂದ ಗಾಡಿಯಲ್ಲಿ ಬಂದರು. ಕೂಸುಗಳನ್ನು ಬಗಲಲ್ಲಿ ಹಾಕಿಕೊಂಡು ನಡದೇ ಬಂದ ಹಳ್ಳಿಯ ಹೆಂಗಳೆಯರು ಅದೆಷ್ಟೋ, ಬ್ರಹ್ಮಪ್ಪತಾತನ ಹೆಸರೇ ಎಲ್ಲರ ಬಾಯಲ್ಲಿಯೂ.

ಮಾರ್ಗಶೀರ್ಷಮಾಸ, ಶುಕ್ಲಪಕ್ಷ, ವೈಕುಂಠ ಏಕಾದಶಿ, ಮಧ್ಯಾಹ್ನ ಸೂರ್ಯದೇವನು ಸರಿಯಾಗಿ ನಡುನೆತ್ತಿಯ ಮೇಲೆ ಬಂದಿದ್ದಾನೆ.

ಶಾಸ್ತ್ರಿಗಳು ಸಂಕಟ ಎಂದರು. ವಿಲಿವಿಲಿ ಒದ್ದಾಡಿದರು. ಮೂರಿಪ್ಪತ್ತು ವರ್ಷಗಳಿಂದಲೂ ಗೂಡಾಗಿ ಸೇವೆ ಸಲ್ಲಿಸಿದ ದೇಹವನ್ನು ಅಷ್ಟು ಸುಲಭವಾಗಿ ಪ್ರಾಣದೇವನು ಬಿಡುಗಡೆ ಮಾಡುವದೇ?

"ಏನು ಬೇಕು?"

ಸರಸ್ವತಿ ಎಡಬದಿಯೇ ಕುಳಿತಿದ್ದಳು.

ದೊಡ್ಡ ಕುಂಕುಮವನ್ನು ಧರಿಸಿಕೊಂಡು ಅಚ್ಚಮ್ಮ ಬಲಬದಿ ಕುಳಿತಿದ್ದಳು.



"ಏನು ಬೇಕು, ಏನಾದರೂ ಕೊಡಲೇನು?"

ಅಚ್ಚಕ್ಕ ಕೇಳಿದಳು.

ಬ್ರಹ್ಮಾನಂದಶಾಸ್ತ್ರಿಗಳಿಗೆ ಸಂಪೂರ್ಣವಾಗಿ ಸ್ಮೃತಿ ಇದ್ದಿತು. ಹಣೆಯನ್ನು ಮೂರು ಬೆರಳಿನಿಂದ ಮುಟ್ಟಿ ವಿಭೂತಿ ಬೇಕೆಂದು ಸೂಚಿಸಿದರು.

ಸರಸ್ವತಿ ಓಡಿ ತಂದುಕೊಟ್ಟಳು.

ಕುಮಾರಸ್ವಾಮಿಯ ವಿಭೂತಿಯನ್ನು ಶಾಸ್ತ್ರಿಗಳು ಸ್ವತಃ ತಾವೇ ಲಲಾಟದಲ್ಲಿ ಧರಿಸಿದರು.

ಸರಸ್ವತಿಗೆ ಸಂಜ್ಞೆಮಾಡಿದರು.

ಶಂಕರ ಪ್ರಣೀತ ಆನಂದಲಹರಿಯನ್ನು ಪ್ರವಚನ ಮಾಡುತ್ತ ಕೈ ಮುಗಿದು ಕಣ್ಣು ಮುಚ್ಚಿದಳು ಸರಸ್ವತಿ.

"ನನ್ನ ಗತಿ ಏನು? ನನಗೆ ಏನು ಹೇಳುತ್ತೀರಿ?"

ಲೌಕಿಕ ಹೆಂಗಳೆಯರಂತೆ ಆರ್ಭಟಿಸಿ ಅಳುತ್ತ ಕೂಗಿ ಕೇಳಲಿಲ್ಲ ಅಚ್ಚಕ್ಕ. ಪತಿದೇವನ ಪಕ್ಕದಲ್ಲಿ ಧ್ಯಾನಮಗ್ನಳಾಗಿ ಕುಳಿತಳು.

ಸಾಕ್ಷಾತ್ ಶಂಕರಾಚಾರ್ಯರೇ ಸರಸ್ವತಿಯ ಮುಖಕಮಲದಲ್ಲಿ ನಿಂತು ಹಾಡಿದಂತಿತ್ತು. 'ಶ್ರೀ ವಿದ್ಯೆ'ಯ ಮೂಲತತ್ತ್ವಗಳುಳ್ಳ ಆ ಸ್ತೋತ್ರ ರತ್ನವು ಕವಿಸಹಜವಾದ ಆ ಶೈಲಿ, ಭಾಷಾಮಾಧುರ್ಯ, ತತ್ವಾರ್ಥ ಗುಂಫನ, ಅರ್ಥಗಾಂಭೀರ್ಯಗಳಿಂದ ಅಸದೃಶ ಆನಂದವನ್ನುಬ್ರಹ್ಮಾನಂದರ ಆತ್ಮಕ್ಕೆ ತಂದೊದಗಿಸಿತು. ಸರಸ್ವತಿಯ ಕಂಠದೊಂದಿಗೆ ಶಾಸ್ತ್ರಿಗಳ ಆತ್ಮವೂ ದನಿಗೂಡಿಸಿ ಹಾಡಿತು. ದೇವಲೋಕೇ ಬಂದಿಳಿಯಿತು ಈ ಅಪೂರ್ವ ಪುಣ್ಯದಲ್ಲಿ ಭಾಗಿಯಾಗಲು.

ಶೃತಿಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಮ್।  
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್॥

ಪ್ರಾರಂಭಿಸಿದುದು ಮಂತ್ರವೇ ಸರಸ್ವತಿ. ಅದಾವ ಮಹಾಶಕ್ತಿಯೋ ಮುಂದುವರಿಸಿತು. ಕೇವಲ ನಿಮಿತ್ತ ರೂಪವಾಗಿ ಸರಸ್ವತಿಯು ಅಲ್ಲಿ ಕುಳಿತಿದ್ದಳು. ವಾಣಿಯು ಭವ್ಯವನ್ನೆಲ್ಲ ಭೋಂಕರಿಸಿತು. ನಭೋಮಂಡಲವನ್ನೆಲ್ಲ ಪುಳಕಿತ ಮಾಡಿತು.

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತ: ಪ್ರಭುವಿತುಂ  
ನ ಚೇದೇವಂ ದೇವೋ ನಖಲು ಕುಶಲ: ಸ್ಪಂದಿತುಮಪಿ।  
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚ್ಯಾದಿಭಿರೊಇ

ಪ್ರಣನ್ತುಂ ಸ್ತೋತುಂ ವಾ ಕಥಮಕೃತಪುಣ್ಯ: ಪ್ರಭವತಿ॥

ಪ್ರವಚನವು ನಿರರ್ಗಳವಾಣಿಯಿಂದ, ಗಂಗೆಯ ಆನಂದದ ಅಲೆಗಳಂತೆ, ಬ್ರಹ್ಮಾನಂದರ ಆತ್ಮವನ್ನು ಶಬ್ದಬ್ರಹ್ಮದ ಲೋಕದಲ್ಲಿ ತೇಲಾಡಿಸಿತು. ಸರಸ್ವತಿಯು ಕರಜೋಡಿಸಿ ಹಾಡಿದಳು

ಕ್ಷಣತ್ಕಾಂಚೀದಾಮಾ ಕಲಿಕಲಭಂಸ್ತನಭರಾ
ಪರಿಕ್ಷೀಣ ಮಧ್ಯೇ ಪರಿಣತಶರಚ್ಚಂದ್ರವದನಾ।
ಧನುರ್ಭಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈ:
ಪುಸರಸ್ತಾದಾಸ್ತಾಂ ನ: ಪ್ಪುಮಥಿತುರಾಹೋ ಪುರುಷಿಕಾ॥

"ಜೈ ಶಿವೇ"

ಅಂದರು ಶಾಸ್ತ್ರಿಗಳು. ಬ್ರಹ್ಮಾನಂದಶಾಸ್ತ್ರಿಗಳು ಅನಿತ್ಯ ದೇಹವನ್ನು ತ್ಯಜಿಸಿದರು. ಶಿರಸ್ಸಿನಿಂದ ಪ್ರಾಣದೇಚರು ಹೊರಟು ಹೋಗಿದ್ದರು. ಬ್ರಹ್ಮಾನಂದ ಶಾಸ್ತ್ರಿಗಳ ಆತ್ಮವು ಬ್ರಹ್ಮಾಂಡದಲಲಿ ಬೆರೆತು ಬ್ರಹ್ಮಾನಂದ ಭೋಗಪಡುತ್ತಿತ್ತು. ಅಂದಿನಿಂದ ಆ ಮನೆ ಬ್ರಹ್ಮಾನಂದ ಸ್ವಾಮಿಗಳ ಮಠವಾಯಿತು. ಶಾಸ್ತ್ರಿಗಳು ಅಮರರಾದರು. ದೇಹಾತೀತವಾದ ಅವರ ಆತ್ಮವು ಪರಮಾನಂದ ಪಡೆಯಿತು.

## ೧೭

### ತೀರ್ಥರೂಪ ಸ್ವರೂಪರ ಪಾದಾವಿಂದದಲ್ಲಿ

ಚಿರಂಜೀವಿ ಗಣಪತಿಯ ಅನಂತಾನಂತ ಪ್ರಣಾಮಗಳು. ತಮ್ಮ ಮತ್ತು ಸಾಕ್ಷಾತ್ ಮಾತೃರಾದ ಕುಂ.ಸೌ.ಅಚ್ಚಮ್ಮನವರ ಆಶೀರ್ವಾದ, ಅಂತ:ಕರಣಗಳಿಂದ ನಾನು ಸುಖವಾಗಿದ್ದೇನೆ. ದೇಹ, ಮನಸ್ಸುಗಳ ಆರೋಗ್ಯ ತಮ್ಮ ಕೃಪೆಯಿಂದ ಅತ್ಯುತ್ತಮವಾಗಿದೆ.

ತಮ್ಮೆಲ್ಲರ ಅಪ್ಪಣೆ ಪಡೆಯದೆ ಬಂದು ಬಿಟ್ಟುದಕ್ಕಾಗಿ ನನ್ನಲ್ಲಿ ತುಂಬಾ ಪಶ್ಚಾತ್ತಾಪವಾಗಹತ್ತಿದೆ. ಈ ಅಪರಾಧವನ್ನು ತಾವಿಬ್ಬರೂ ಮನ್ನಿಸಬೇಕು. ಇಷ್ಟು ದಿನಗಳು ತಾವು ನನ್ನನ್ನು ಹೊಟ್ಟೆಯ ಮಗುವಿಗಿಂತಲೂ ಹೆಚ್ಚಾಗಿ ಸಾಕಿ ಸಲಹಿ ಸಂರಕ್ಷಿಸಿದ ಉಪಕಾರವನ್ನು ನಿತ್ಯವೂ ಸ್ಮರಿಸುತ್ತಲಿದ್ದೇನೆ. ಮಾತೋಶ್ರೀ ಅಚ್ಚಮ್ಮನವರ ಋಣವನ್ನು ಈ ಜನ್ಮದಲ್ಲಿಯಂತೂ ತೀರಿಸಲಾರೆ. ನಿರ್ಗತಿಕನಾಗಿ ನಿರಾಶ್ರಿತನಾಗಿದ್ದ ನನಗೆ ಆಶ್ರಯದಾತರಾಗಿ ಪಿತೃವಿಯೋಗದ ದು:ಖವನ್ನು ತಾವು ಮರೆಯಿಸಿದಿರಿ. ಚಿಕ್ಕಂದಿನಲ್ಲಿಯೇ ಕಳೆದು ಹೋಗಿ ಸ್ಮೃತಿ ಪಥದಿಂದಲೇ ಅಳಿಸಿಹೋಗುತ್ತಿದ್ದ ಆ ತಾಯಿಯ ಸ್ಥಾನವನ್ನು ಕುಂ.ಸೌ. ಅಚ್ಚಮ್ಮನವರು ಆಕ್ರಮಿಸಿ, ನನ್ನಲ್ಲಿ ಬತ್ತಿ



ಹೋಗಿದ್ದ ಒಂದು ನೂತನ ಚೇತನವನ್ನು ತಂದುಕೊಟ್ಟರು. ಬಂಧು-ಬಳಗ, ಸಹೋದರ-ಸಹೋದರಿಯರಿಲ್ಲದೆ ಮರಳು ಗಾಡಿನಂತಿದ್ದ ನನ್ನ ಜೀವನವನ್ನು ಚಿರಂಜೀವಿ ಸರಸ್ವತಿ ತಂಗಿಯಾಗಿ ಬಂದು ತುಂಬಿಕೊಟ್ಟಳು.

ಇಷ್ಟೆಲ್ಲವನ್ನು ಕರುಣಿಸಿದ ಆ ದಯಾಮಯನೇ ಮೊನ್ನೆ ನನ್ನನ್ನು ತಮ್ಮ ಮನೆಯಿಂದ ಹೊರದೂಡಿದ-ಅವರ ಇಚ್ಛೆ. ಇನ್ನೊಬ್ಬರ ಜೀವನದಲ್ಲಿ ಕಾಲ್ತೊಡಕಾಗಿ ಸುಗಮವಾಗಿ ಸಾಗುವ ಬಾಳಿನಲ್ಲಿ ಮುಳ್ಳಾಗಿ, ಇತರರಿಗೆ ಹಿಂಸೆಯಗುವ ರೀತಿಯಲ್ಲಿ ನಾನು ಬದುಕಿದರೆ ಸ್ವರ್ಗದಲ್ಲಿರುವ ನನ್ನ ಪಿತೃದೇವತೆಗಳಿಗೂ ದ್ರೋಹವಾದಂತೆಯೆ ಸರಿ. ತಂಗಿ ಸರಸ್ವತಿ ಎರಡು ಮನೆಗಳ ಹೆಸರನ್ನೆತ್ತಬೇಕು. ಸ್ತ್ರೀಜಾತಿಗೆ ಕಳಸಪ್ರಾಯಳಾಗಬೇಕು. ಮಾನವರ್ಗಕ್ಕೇ ಮೊದಲ ಶ್ರೇಣಿಯಲ್ಲಿ ಮೊದಲಿಗಳಾಗಬೇಕು. ಅವಳ ನಿಷ್ಕಳಂಕ ಕೀರ್ತಿಅಚಂದ್ರಾರ್ಕವಾಗಿ ಉಳಿಯಬೇಕು-ಎಂಬ ಉತ್ಕಟೇಚ್ಛೆ, ಅಭಿಲಾಷೆಗಳಿಂದ ನಾನು ಗೃಹಹೀನನಾಗಿ, ದೇಶಭ್ರಷ್ಟನಾಗಿ ಹೊರಬಿದ್ದಿದ್ದೇನೆ. ಕುಂ.ಸೌ.ಗೌರಮ್ಮನವರ ಮೇಲೂ ನನಗಾವ ಜುಗುಪ್ಸೆ ಇಲ್ಲ. ಅವರದು ಲೋಕದ ಕಣ್ಣು ಓರ್ವ ತಂಗಿಗೆ ಅಣ್ಣನಾಗುವ ಪುಣ್ಯವು ನನಗಿದ್ದರೆ ದೇವರು ಹುಟ್ಟಿನಿಂದಲೇ ದಯಪಾಲಿಸುತ್ತಿದ್ದ. ಅದಾರನ್ನೊ ತಂಗಿಯೆಂದು ಕರೆದರೆ ಲೋಕವು ಏಕೆ ಸುಮ್ಮನಿದ್ದೀತು? ಪಡೆಯದೆ ಬಂದು ಇಲ್ಲಿ ಅಪೇಕ್ಷಿಸಿದುದಕ್ಕೆ, ಇದೇ ಲೋಕವು ವಿಧಿಸುವ ಶಿಕ್ಷೆ.

ನನ್ನ ಧೀರ್ಘ ಪತ್ರದಿಂದ ನಿಮಗೆ ತೊಂದರೆ ಕೊಡುವ ಇಚ್ಛೆ ನನಗಿಲ್ಲ.

ನನ್ನ ಈ ದೇಹದಲ್ಲಿ ಪೂಜ್ಯ ಶ್ರೀ ಶಂಕರದೀಕ್ಷಿತರ ರಕ್ತವು ಪ್ರವಹಿಸುತ್ತದೆ- ನಾನು ಆತ್ಮಹತ್ಯೆಯಂತಹ ಕೀಳು ವಿಚಾರ ಮಾಡುವವನಲ್ಲ. ಎಲ್ಲರ ಶ್ರೇಯೋಭಿವೃದ್ಧಿಗೆ ಹಿತವೆಂದು ಕಂಡ ಹಾದಿಯಲ್ಲಿಯೇ ಸಾಗಿದ್ದೇನೆ. ದಯವಿಟ್ಟು ನನ್ನನ್ನು ಹುಡುಕಿಸುವ ಯತ್ನವಾನ್ನಾಗಲಿ, ಮರಳಿ ಮನೆಗೆ ಕರೆದುಕೊಂಡು ಹೋಗುವ ಪ್ರಯತ್ನವನ್ನಾಗಲಿ ಮಾಡಬೇಡಿರೆಂದು ನಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ನನ್ನ ಈ ಒಂದೇ ವಿನಂತಿಯನ್ನು ಪಾಲಿಸಿಕೊಟ್ಟು ಉಪಕರಿಸಬೇಕು.

ಮಾತೃ ಕುಂ.ಸೌ.ಅಚ್ಚಮ್ಮನವರಿಗೆ ನನ್ನ ಧೀರ್ಘದಂಡ ನಮಸ್ಕಾರಗಳನ್ನು ಇದ್ದಲ್ಲಿಂದಲೇ ಅರ್ಪಿಸುತ್ತಿದ್ದೇನೆ.

ಚಿರಂಜೀವಿ ಸಹೋದರಿ ಸರಸ್ವತಿಗೆ ನನ್ನ ಆಶೀರ್ವಾದಗಳು. ಅವಳ ಶ್ರೇಯಸ್ಸನ್ನೇ ಸದಾ ಕೋರುತ್ತಿದ್ದೇನೆ.

ಕೀರ್ತಿಶೇಷರಾದ ಶ್ರೀಬ್ರಹ್ಮಾನಂದ ಸ್ವಾಮಿಗಳು ವೈಕುಂಠಯಾತ್ರೆ ಮುಗಿಸಿದ ಮರುದಿನವೇ ಗಣಪತಿಯ ಪತ್ರವು ಬಂದುಬಿದ್ದಿತು.

ಬಾಗಿಲಲ್ಲಿದ್ದವರಾರೋ ಒಬ್ಬರು ತೆಗೆದುಕೊಂಡು ಲಕೋಟೆಯನ್ನು ಒಡೆದು ಓದಿದರು. ಸರಸ್ವತಿ ಬಿಕ್ಕಿ ಬಿಕ್ಕಿ ಅತ್ತಳು, ಅಚ್ಚಮ್ಮ ಗೋಡೆಗೆ ತಲೆ ಜಜ್ಜಿಕೊಂಡಳು.

ಗೌರಮ್ಮ ಚೆನ್ನದಂತಹ ಮಾತನ್ನಾಡಿ ಮುಗಿಸೇಬಿಟ್ಟಳು.

“ಹುಚ್ಚೂ ಮುಂಡೇಗಂಡ, ನಾಡ ಹುಚ್ಚೂ ಮುಂಡೇಗಂಡ. ಬುದ್ದಿ ಎಲ್ಲ’ಖರ್ಚುಮಾಡಿ ಕಾಗದ ಬರದಾನೆ, ಕಾದಗಾನ ಸತ್ತ ಬ್ರಹ್ಮಪ್ಪಗ ಅವನ್ನೇ ಹೋಗಿ ಕೊಟ್ಟು ಬಾ ಅನ್ರಿ, ಬ್ರಹ್ಮಪ್ಪ ಇರೋ ಹತ್ತಿರ ಹೋಗಿ, ಕೂಳಿಗೆ ಬಂದ ಮುಂಡೇಗಂಡ್ರು, ಮತ್ತೇನಂತೆ, ಏನಾರೆ ಆಗಲಿ, ಒಂದು ಬಾರಿ ಮನ್ಯಾಗಿನ ಸಾಮಾನ ಝುಡ್ತಿ ಮಾಡಿಕೋ ಅಚ್ಚಿ. ಬೆಳ್ಳಿಬಟ್ಟಲು ಗಿಟ್ಟಲು ಏನಾದರೂ ಎಬ್ಬಿಶ್ಯಾನೇನೋ, ಆ ಹುಡುಗ ಮುಂಡೇಗಂಡ, ಪೊಲೀಸರ ಕೈಯಾಗ ಕೊಟ್ಟು ಮೈ ಎಲುಬು ಪುಡಿಪುಡಿ ಮಾಡಿಸ್ತೀನಿ.”

ಅಚ್ಚಮ್ಮಳಿಗೆ ಈ ಮಾತುಗಳನ್ನು ಕೇಳಿದ ನಂತರ ಆದ ದು:ಖದ ಮುಂದೆ ವೈಧವ್ಯದಿಂದಾದ ದು:ಖವು ಅದಾವ ಮಹಾ ದುಃಖ! ಗಣಪತಿಯ ಪತ್ರವನ್ನು ನೋಡಿ ಊರಿಗೆ ಊರೇ ಮರುಗಿತು. ಆದರೆ ಅವನು ಯಾವ ಊರಿಗೆ ಹೋಗಿದ್ದಾನೆಂಬುದನ್ನು ಊಹಿಸಲೂ ಸಾಧ್ಯವಿರಲಿಲ್ಲ ಅವನ ಪತ್ರದಿಂದ. ಅದು ಪತ್ತೆಯಾಗಬಾರದೆಂದೇ ಅವನು ಕಾಗದವನ್ನು ರೈಲಿನಲ್ಲಿ ಹಾಕಿದ್ದನು.

“ಯಾವ ಊರಿಗೆ ಹೋಗಿರಬಹುದು ಅವನು?”

ಗುಂಪು ಸೇರಿದವರೆಲ್ಲ ಚರ್ಚಿಸಿದರು.

“ಇನ್ನೆಲ್ಲಿ ಸುಡುಗಾಡಿಗೆ ಹೋಗ್ತಾನೆ? ಕಾಶೀ ರಾಮೇಶ್ವರ ಕಡಿ ಹೋಗಿರ್ತಾನೆ ಅಷ್ಟೆ” ಗೌರಮ್ಮ ಬುದ್ದಿಯನ್ನೆಲ್ಲ ವ್ಯಯಮಾಡಿ ಅತ್ಯುತ್ತಮ ಸಲಹೆಯನ್ನು ಅನುಗ್ರಹಿಸಿದಳು.

“ಏನೇ ಆಗಲಿ ಹೋದರೆ ಹನ್ನೆರಡಾಣೆ, ಬಂದರೆ ಮಗನು ಬರುತ್ತಾನೆ.” ಯಾರೋ ಒಬ್ಬರು ಮುಂದೆ ಬಿದ್ದು ಕಾಶೀವಿದ್ಯಾಪೀಠಕ್ಕೆ ತಾರು ಮಾಡಿದರು.

“ಬ್ರಹ್ಮಾನಂದರ ಆತ್ಮಕ್ಕಾದರೂ ಶಾಂತಿಯಾಗಲಿ, ಗಣಪತಿಯೇ ಬಂದು ಉತ್ತರಕ್ರಿಯೆಗಳನ್ನು ಮಾಡಲಿ.”

ಗಣಪತಿಯನ್ನು ಬ್ರಹ್ಮಾನಂದಶಾಸ್ತ್ರಿಗಳ ಮಗನೆಂದು ಒಪ್ಪಿಕೊಂಡ ಅದೇ ಲೋಕವು ಸರಸ್ವತಿಯು ಅವನ ತಂಗಿ ಎಂದು ಅದೇಕೆ ಒಪ್ಪಿಕೊಳ್ಳ ಒಲ್ಲದೋ?



ಗಣಪತಿಯು ಸಲುವಾಗಿ ಅವನಕ್ಕಿಂತಲೂ ಮೂರು ದಿನಗಳು ಮುಂಚಿತವಾಗಿಯೇ ಬಂದು ಕಾಶಿಯಲ್ಲಿ ಕಾದು ಕುಳಿತಿತ್ತು ತಾರು. ಬೊಗಸೆಯಲ್ಲಿ ಮುಖವನ್ನಿಟ್ಟು ಅಳಹತ್ತಿದ ಗಣಪತಿ. ಶಂಕರದೀಕ್ಷಿತರು ಮೃತರಾದಾಗ ಒಂದು ಬಿಸಿಯುಸಿರನ್ನೂ ಬಿಟ್ಟಿರಲಿಲ್ಲ ಅವನು. ಒಳ್ಳೆಯ ಮನೋಧಾರ್ಢ್ಯ ಅವನದು.

“ನನ್ನಿಂದ ಬ್ರಹ್ಮಹತ್ಯೆ ಆಯಿತು. ನಾಣು ಮಹಾಪಾಪಿ, ನನಗಿನ್ನು ಪ್ರಾಯಶ್ಚಿತ್ತವೂ ಇಲ್ಲ. ಪುನರ್ಜನ್ಮವೂ ಇಲ್ಲ. ನಾನು ಆದ್ಯಂತವೂ ರೌರವ ನರಕದಲ್ಲಿ ಬಿದ್ದು ಹೊರಳಬೇಕು....”

ಗೋಳೋ ಎಂದು ಅತ್ತ–ಕಣ್ಣುಗಳು ಬಾಯುವ ವರೆಗೂ.

ಗಂಗೆಯಲ್ಲಿ ಮುಳುಗಿದ, ಅರ್ಘ್ಯದವರೆಗೂ ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಬಂದು, ದೂರದಿಂದಲೆ ವಿಶ್ವನಾಥನಿಗೆ ಕೈಮುಗಿದ. ಬಂದ ಹಾದಿಗೆ ಸುಂಕವಿಲ್ಲವೆಂದು ಮರಳಿದ.

ಅನ್ನ, ನೀರು, ನಿದ್ರೆ ಇಲ್ಲದೆ, ಸ್ನಾನ, ಕ್ಷೌರ ಒಂದೂ ಕಾಣದೆ ನಾಲ್ಕು ದಿನಗಳು ಪ್ರವಾಸ ಮಾಡಿ ಗಣಪತಿ ಮನೆಬಾಗಿಲಿಗೆ ಬಂದು ನಿಂತ. ಅವನ ಬಟ್ಟೆಗಳು ಕೊಳೆಯಾಗಿದ್ದವು, ಮುಖವು ಬಾಡಿದ್ದಿತು. ಹುಚ್ಚನೋ ಭಿಕ್ಷುಕನೋ ಎಂಬಂತಿದ್ದ.

ಮನೆಯ ತುಂಬ ಜನ, ಗೌರಮ್ಮಳ ದನಿಯಂತೂ ಹೊರಬಾಗಿಲಲ್ಲಿಯೇ ಕುಳಿತು. ಬಾಳಪ್ಪ, ಭಾಸ್ಕರಭಟ್ಟರು ಇದ್ದರು. ಗಣಪತಿಗೆ ಮಾತ್ರ ಅವರ ಪರಿಚಯವಿರಲಿಲ್ಲ.

ತಾನು ಉಂಡು, ಆಡಿ, ದೇಹ ಬುದ್ಧಿಗಳನ್ನು ಬೆಳೆಸಿಕೊಂಡು, ಪಳಗಿಸಿಕೊಂಡು ಮನುಷ್ಯನಾದುದು ಇದೇ ಮನೆಯಲ್ಲಿಯೇ, ತಾನು ಪರದೇಶಿಯಾಗಿ ‘ನನ್ನ ಗತಿ ಏನು’ ಎನ್ನುವಕ್ಕಿಂತಲೂ ಮುಂಚಿತವಾಗಿಯೇ ತನ್ನನ್ನು ಸ್ವಾಗತಿಸಿ ತಂದು, ಪಿತೃವಿಯೋಗದ ದು:ಖವನ್ನೇ ಮರೆಯಿಸುವಂತಹ ಆಶ್ರಯ ದೊರೆತುದು ಇದೇ ಮನೆಯಲ್ಲಿಯೆ. ಬ್ರಹ್ಮಾನಂದಶಾಸ್ತ್ರಿಗಳ ಮನೆ ಇದು; ಅವರ ಆಧ್ಯಾತ್ಮ ಪುತ್ರನಾದ ತನ್ನದೇ ಈ ಮನೆ. ಇದೇ ವಿಚಾರಲಹರಿಯಲ್ಲಿ ದುಡುದುಡು ಒಳಬಂದ ನಡುಮನೆಯ ಬಾಗಿಲವರೆಗೂ.

ಬಾಗಿಲ ಎದುರಿಗೇ ಹಾಕಿದ್ದ ಎಲೆಯೊಂದರ ಮುಂದೆ ಬಾಳಪ್ಪ ಕುಳಿತಿದ್ದ– ಎಲೆಯಲ್ಲಿದ್ದ ಅನ್ನದ ರಾಶಿ ಕೊಂಚ ಅಡ್ಡವಾಗಿತ್ತು ಅಷ್ಟೆ.

"ಏ, ಯಾವನೋ ಅವನು, ಒಳತನಕಾ ಬರ್ತಾನೆ, ಕಣ್ಣು ಕಾಂಬೋದಿಲ್ಲೇನೋ ಬ್ರಾಂಬ್ರು ಊಟಕ್ಕೆ ಕೂತಿರೋದು, ಸೂದ್ರ ಮುಂಡೇಮಗನೆ, ಭಿಕ್ಷಾಕ್ಕೆ ಬಂದವನು ಹೊರಬಾಗಿಲದಾಗ ನಿಂತು ಕೂಗಬೇಕು."

ಬಾಯಲ್ಲಿದ್ದ ತುತ್ತನ್ನು ಒಳಜಾರಿಸಿ ಬಾಳಪ್ಪ ಕಣ್ಣು ಕೆಂಪು ಮಾಡಿ ನುಡಿದ.

ಬಾಳಪ್ಪನಂತಹ ಬ್ರಾಹ್ಮಣನು ಗಣಪತಿಯನ್ನು ಶೂದ್ರನೆಂದು ಬೈದಾಗ, ನಿಂತು ನೋಡುತ್ತಿದ್ದ ದೇವತೆಗಳೆಲ್ಲರೂ ಘೊಳ್ಳೆಂದು ನಕ್ಕರೋ ಏನೋ! ಆನೆಗೆ ಮಹಾಬಲವಿದ್ದರೂ ಶುನಕಕ್ಕೆ ಸ್ಥಾನಬಲವಿದೆಯಲ್ಲ! ಬಾಳಪ್ಪನಿಎ ಬೊಗಳುವ ಹಕ್ಕು ಇಲ್ಲವೇ

ಈ ಮನೆಯಲ್ಲಿ ಗಣಪತಿಗೆ 'ನೀನು ಯಾರು' ಎಂಬ ಪ್ರಶ್ನೆಯೇ? ಒಂದೇ ಒಂದು ವ್ಯಕ್ತಿಯ ಹೋಗುವಿಕೆಯಿಂದ! ಅಹುದು ಮತ್ತೆ, ಸೂರ್ಯನೊಬ್ಬನೇ ಹೋಗುತ್ತಾನೆ, ಜಗತ್ತೆಲ್ಲವೂ ಕತ್ತಲಲ್ಲಿ ಮುಳುಗುತ್ತದೆ,

ಬಾಗಿಲ ಕಡೆ ಬೆನ್ನು ಮಾಡಿ ಊಟಕ್ಕೆ ಕುಳಿತಿದ್ದ ಸರಸ್ವತಿ ಹಿಂದಿರುಗಿ ನೋಡಿದಳು. "ಗಣಪತೀ."

ಚೀರುತ್ತ ಹಾಗೆಯೇ ಓಡಿಬಂದಳು ಎಂಜಲ ಕೈಯಿಂದಲೇ.

ಮೂಲೆಯಲ್ಲಿ ಮಲಗಿದ್ದ ಅಚ್ಚಮ್ಮ ಕೂಡ ಹೊರಬಂದಳು. ಗಣಪತಿಯನ್ನು ನೋಡಿದಳು. ತಿಲಕಹೀನವಾಗಿದ್ದ ಅವಳ ಮುಖವನ್ನು ಕಂಡ ಕೂಡಲೆ ಗಣಪತಿಯ ಉಸಿರೇ ಹೋಯಿತು. ಇಬ್ಬರೂ ಮಾತನಾಡಲು ಒಂದೇ ಬಾರಿ ಬಾಯಿ ತೆಗೆದರು. ಇಬ್ಬರ ನಾಲುಗೆ ಆಡಲಿಲ್ಲ, ಹೃದಯಗಳು ಆಡಬಲ್ಲ ಮಾತುಗಳ ಮುಂದೆ ಕಣ್ಣುಗಳು ತಿಳಿಸಬಲ್ಲ ಭಾವಗಳ ಮುಂದೆ ಈ ಬಡ ನಾಲುಗೆಯ ಪರಾಕ್ರಮವೆಷ್ಟಾದೀತು?

ಸರಸ್ವತಿ ಗಣಪತಿಯನ್ನು ಗಟ್ಟಿಯಾಗಿ ತಬ್ಬಿಕೊಂಡಳು. ಅವನ ಎದೆಯ ಮೇಲೆ ತಲೆಯಿಟ್ಟು ಅಳಹತ್ತಿದಳು.

ಅವಸರವಸರದಿಂದ ಅನ್ನವನ್ನು ಮುಗಿಸಿ ಹೊರಬಂದ ಬಾಳಪ್ಪ ಈ ದೃಶ್ಯವನ್ನು ನೋಡಿದ.

"ಅಯ್ಯಯ್ಯೋ! ಗಂಡಸರನ್ನ ಮುಟ್ಟತೀಯಲ್ಲೆ? ಇತ್ತಲಾಗೆ ಬಾರೇ ಸರಸೀ, ನನ್ನ ಕಡಿ. ಗಂಡಸರನ್ನ ಮುಟ್ಟಬಾರ್ದೆ, ನನ್ನ ಎದಿಮಾಲೆ ತಲಿಇಟ್ಟು ಅಳಬಾರೇ. ಅವನು ಗಂಡಸೇ....."

ಒಂದೇ ಸಮನೆ ಚೀರ ಹತ್ತಿದ ಬಾಳಪಪ್, ಗಿರಣಿ ಬೆಂಕಿಬಿದ್ದಾಗ ಭೋಂಗಾ ಒದರಿದಂತೆ.



ಏನಾಯಿತೋ ಎಂದು ಗಾಬರಿಯಿಂದ ಹೊರಬಂದಳು ಗೌರಮ್ಮ, ಏನಾಗಬಾರದಿತ್ತೋ ಅದೇ ಆಗಿದ್ದಿತು, ಅದೂ ಅವಳ ಕಣ್ಣ ಮುಂದೆಯೇ, ಬಾಲಪ್ಪನ ಇದಿರಿನಲ್ಲಿಯೇ!

ಬಾಯಿತೆಗೆದಳು ಬೈಯಲು ಗೌರಮ್ಮ.

ಸೂಕ್ಷ್ಮಗ್ರಾಹಿಯಾದ ಭಾಸ್ಕರಭಟ್ಟರು ಮಲಗಿದಲ್ಲಿಂದಲೆ ಎಲ್ಲವನ್ನೂ ನೊಡಿದ್ದರು. ಒಂದೇ ಮಾತಿನಲ್ಲಿಯೇ ತಾಯಿ–ಮಗನ ಇಬ್ಬರನ್ನೂ ಗದರಿಸಿ ಒಳಗೆ ಕಳಿಸಿ ಉಪಕಾರ ಮಾಡಿದರು.

ಗಣಪತಿಯಾಯಿತು ನಗರೇಶ್ವರ ಸ್ವಾಮಿ ಆಯಿತು. ಆಧ್ಯಾತ್ಮ ತಂದೆಯಾಗಿದ್ದ ಬ್ರಹ್ಮಾನಂದಶಾಸ್ತ್ರಿಗಳ ಉತ್ತರ ಕ್ರಿಯೆಗಳನ್ನು ಸಾಂಗವಾಗಿ ಮಾಡುವುದು, ಮಧ್ಯಾಹ್ನಕ್ಕೆ ಕರೆದವರ ಮನೆಯಲ್ಲಿ ತುತ್ತು ಅನ್ನುತಿನ್ನುವದು, ಉಳಿದೆಲ್ಲ ಹೊತ್ತೂ ನಗರೇಶ್ವರನೊಟ್ಟಿಗೆ.

ಸರಸ್ವತಿಯೇ ಒಂದೆರಡು ಬಾರಿ ಕದ್ದು ಬಂದಿದ್ದಳು ಗುಡಿಗೆ, ಅಣ್ಣನೊಡನೆ ಮಾತನಾಡಲು. ಗಣಪತಿ ಒಂದೋ ಅರ್ಧವೋ ಮಾತನ್ನಾಡಿ ಕಳಿಸಿದ್ದ ಅವಳನ್ನು, ಇನ್ನೊಂದು ಸಲ ಬಂದಾಗಲಂತೂ ಮುಖವನ್ನೇ ಗಂಟು ಹಾಕಿದ ಪುಣ್ಯಾತ್ಮ.

"ನನಗೆ ಸಮಯವಿಲ್ಲ ಸರಸ್ವತಿ ನಿನ್ನೊಡನೆ ಮಾತನಾಡಲಿಕ್ಕೆ. ನೀನು ಹೀಗೆಲ್ಲ ಬರಬೇಡ ಇಲ್ಲಿಗೆ."

ಕೊಂಚ ಬಿರುಸಾಗಿಯೇ ಬುಡಿದ ಗಣಪತಿ–ಸರಸ್ವತಿಯ ಜೀವನದಲ್ಲಿ ಇದೇ ಮೊಟ್ಟಮೊದಲ ಅನುಭವ.

ತನ್ನ ತಂಗಿಯ ಮನಸ್ಸು ಮುರಿಯುವ ವರೆಗೂ ಅವರಿಗೆ ಸುಖವಿಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದ ಗಣಪತಿ, ಆದರೆ ಬಾಳಪ್ಪನ ಮಡದಿಯಾದ ಸರಸ್ವತಿಗೆ ಸಾಯುವವರೆಗೂ ಸುಖವಿಲ್ಲ ಎಂಬುದನ್ನು ಅರಿತಿದ್ದಿಲ್ಲ ಗಣಪತಿ.

ಸರಸ್ವತಿಯ ಮನಸ್ಸಿಗೆ ಆಗಲೇ ಬೇಕಾದಷ್ಟು ನೋವು ಆಯಿತು. ಗಣಪತಿಯ ಗಡಚುತನದಿಂದ, ಆದರೆ ಅವನು ಅಪೇಕ್ಷಿಸಿದ ಫಲವೇನೂ ದೊರೆಯಲಿಲ್ಲ. ಗಣಪತಿಯ ಬಗ್ಗೆ ಅವಳ ಮನಸ್ಸು ಮುರಿಯುವದು ಹಾಗಿರಲಿ, ಇನ್ನೂ ಹೆಚ್ಚು ಸನಿಹಳಾದಳು.

"ಸಿಟ್ಟಾಗಬೇಡ ಗಣಪತಿ, ಅಪ್ಪನೂ ಹೋದಮೇಲೆ ಬೇರಿನ್ನಾರು ಇದ್ದಾರೆ ನನಗೆ? ಅಣ್ಣನಾದ ನೀನೂ ದೂರ ಮಾಡುತ್ತೀಯಾ?"

ಗಣಪತಿಯ ಅಂತ:ಕರಣದಲ್ಲಿ ಕೈಯಿಟ್ಟು ಕಲಕಿದಂತಾಯಿತು. ಮನೋನಿರ್ಧಾರ, ನಿಷ್ಠುರತೆ ಎಲ್ಲವೂ ಪಲಾಯನ ಮಾಡಿದವು. ಮೆಲ್ಲನೆ ಸನಿಹ

ಬಂದು ಅವಳ ಮುಂಗುರುಳಲ್ಲಿ ಬೆರಳಾಡಿದ, ಸರಸ್ವತಿಯು ಕಣ್ತುಂಬ ನೀರು ತಂದು ಕೇಳಿದಳು

"ಗಣಪತೀ, ನನ್ನ ಗಂಡನನ್ನು ನೋಡಿದೆಯಾ?"

ನೋಡಿದ್ದ, ಅವನಿಂದ ಬೈಗಳನ್ನೂ ತಿಂದಿದ್ದ. ಅದೆಲ್ಲವನ್ನೂ ಸರಸ್ವತಿಯೇ ಸ್ವತಃ ನೋಡಿದ್ದಳಲ್ಲ?

ಮುಂದಿನ ಮಾತನ್ನು ತಾನೇ ಆಡಿದಳು

"ಅವನೊಂದು ದ್ವಿಪಾದ ಪಶು."

"ಛೇ, ಹುಚ್ಚಿ! ಹಾಗನ್ನಬಾರದಮ್ಮ."

"ಬಾಲ ಒಂದೇ ಇಲ್ಲ, ಅಂದು ನಾವಂದುಕೊಂಡಂತೆ."

ಸರಸ್ವತಿ, ಗಣಪತಿ ಇಬ್ಬರೂ ಅಳುತ್ತಲೇ ನಕ್ಕರು.

ಕತ್ತಲಾಗುವ ಮುನ್ನ ಸರಸ್ವತಿ ಮನೆ ಸೇರಿದಳು.

ಹನ್ನೆರಡು–ಹದಿಮೂರು ಆಯಿತು. ಗಣಪತಿ ಭುಜಕ್ಕೆ ಚೀಲವನ್ನು ಕಾಕಿದ.

ಬ್ರಹ್ಮಾನಂದ ಶಾಸ್ತ್ರಿಗಳ ಮನೆಯ ಹೊಸ್ತಿಲಿನಿಂದ ಕಡೆಯ ಬಾರಿ ಹೊರಬೀಳುವ ದೊಡ್ಡ ಕೆಲಸವೊಂದು ಉಳಿದಿದ್ದಿತು ಗಣಪತಿಯ ಪ್ರಾರಬ್ಧಕ್ಕೆ. ಬೆಂಕಿಯಲ್ಲಿ ನುಗ್ಗುವ ಸಾದಕನಂತೆ ಓಳನುಗ್ಗಿದ, ನೇರವಾಗಿ ನಡು ಮನೆಗೆ ಸಾಗಿದ.

ಕಂಬಕ್ಕೆ ಕುಳಿತಿದ್ದರು ಅಚ್ಚಕ್ಕ, ಧೀರ್ಘ ನಮಸ್ಕಾರ ಹಾಕಿದ. ಕಂಠಗತ ಮಾಡಿಕೊಂಡವರಂತೆ ಎರಡೇ ಮಾತನ್ನಾಡಿದ

"ಈ ಮಗನು ತಮಗೆ ಬೇಕಾದಾಗ, ಕಾಶಿಯಲ್ಲಿ ಸ್ಥಾಪಿತವಾಗಲಿರು ಬ್ರಹ್ಮಾನಂದ ವಿದ್ಯಾಪೀಠಕ್ಕೆ ಒಂದು ಪತ್ರ ಬರೆಯಿರು ತಾಯಿ, ಓಡಿ ಬರುತ್ತೇನೆ."

ದುಡುದುಡು ಸಾಗಿದ, ಅತ್ತ ಇತ್ತ ನೋಡದೆ.

"ನಿನ್ನ ಲಗ್ನಕ್ಕೆ ಕರಿಸಪ್ಪಾ ಗಣಪತಿ, ಬರುತ್ತೇನೆ."

ಅಚ್ಚಕ್ಕ ಅಭಿಮಾನದಿಂದ ನುಡಿದಳು.

"ಗಣಪತಿ ಬ್ರಹ್ಮಚಾರಿ ತಾಯೀ."

"ಸರಸ್ವತಿಗೆ ಹೇಳದೇ ಹೋಗುತ್ತಿಯಲ್ಲಪ್ಪಾ, ಗಣಪತಿ?"

ಅಚ್ಚಕ್ಕಳ ಮಾತು ಅಚ್ಚಕ್ಕಳ ಬಾಯಿಯಲ್ಲಿರುವಾಗಲೆ ಗಣಪತಿ ಹೊರಬಾಗಿಲ ಬಳಿ ಬಂದಿದ್ದ.

ನೀರುಮನೆಯಲ್ಲಿದ್ದ ಸರಸ್ವತಿ ತಾಯಿಯ ಮಾತನ್ನು ಕೇಳಿಸಿಕೊಂಡು ಒಂದೇ ಓಟದಲ್ಲಿ ಹೊರಬಂದಳು. ನಡುಮನೆ ಬಾಗಿಲಲ್ಲಿ ನಿಂತಿದ್ದ ಬಾಳಪ್ಪ



'ಹೂಂ' ಎಂದುಗದರಿಸಿ ಲಾಲಾವಂಡಿಗೆಯಂತಿದ್ದ ತನ್ನ ಕೈಯನ್ನು ಬಾಗಿಲಿಗೆ ಅಡ್ಡ ಇಕ್ಕಿದ, ಹೊರಗಿದ್ದ ಗೌರಮ್ಮ ಧುಪ್ಪೆಂದು ತಲಬಾಗಿಲನ್ನು ಹಾಕಿದಳು. ಮನೆಯಿಂದ ಎರಡು ಹೆಜ್ಜೆ ಸಾಗಿದ್ದ ಗಣಪತಿಯ ಎದೆಯಲ್ಲಿ ಬಾಗಿಲು ಧುಪ್ಪೆಂದು ಬಿದ್ದ ಸಪ್ಪಳ ಮರುಧ್ವನಿಗೈದಿತು. ಅವನು ಮಾತ್ರ ತಿರುಗಿ ನೋಡದೆ ನಡೆದೇ ಬಿಟ್ಟ.

## ೧೮

ತಂದೆ ಹೋದ ವರ್ಷದಲ್ಲಿಯೇ ಮನೆಯಲ್ಲಿ ಯಾವ ಶುಭಕಾರ್ಯಗಳೂ ಆಗಬಾರದೆಂದು ಸ್ವತ: ಭಾಸ್ಕರಭಟ್ಟರೇ ಮೊದಲು ತಕರಾರು ಹೂಡಿದರು ಮಗನ ನಿಷೇಕದ ಮಾತು ಬಂದಾಗ.

"ಸಾಕು ಸುಮ್ಮನಿರ್ರಿ ನಾನೊಲ್ಲೆ, ನೀನ್ಯಾವ ಶುಭಕಾರ್ಯ ಮಾಡ ಅಂತೀರಿ ಅಂತ ಪಂಚಾಂಗ ಹೇಳ್ತೀರಿ. ನಿಮ್ಮ ಜನ್ಮವೆಲ್ಲ ಹೆಣ ಹೋರೋದೆ ಆಗ್ಯಾದೆ. ಆಗಬಾರದಂತೆ ಶುಭಕಾರ್ಯ, ಎಲ್ಲಾನೂ ಬಲ್ಲವರಪ್ಪನ ಹಾಗೆ ಮಾತೊಮದು ಆಡಿದರೆ ಬಂತೇನು? ಗಂಡುಮಗ್ಗೆ ಅವೆಲ್ಲ ಅನ್ವಯಿಸುತಾವೆ. ಹೆಣ್ಣಿಗೇನು ಚಿಂತಿ? ಈಗ ತೀರಿಕೊಂಡಿರೋದು ಸರಸೀ ತಂದಿ; ಬಾಳನ ತಂದಿ ಅಲ್ಲ."

ಸ್ಪಷ್ಟವಾಗಿ ಅನುಕೂಲ ಸಿಂಧುವನ್ನು ಹೇಳಿ ಗೂಟದಂತೆ ಸೆಟೆದು ಕುಳಿತಳು ಗೌರಮ್ಮ ಗೋಡೆಗಾತು.

"ಬಾಳನ ತಂದೀಗೆ ಇನ್ನೂ ಆ ಪುಣ್ಯ ಇಲ್ಲಲ್ಲೆ? ಇನ್ನಾ ಏನೇನು ನೋಡಬೇಕೋ, ಈ ಪಾಪಿ ಕಣ್ಣಿಂದ."

ಭಾಸ್ಕರಭಟ್ಟರು ಗೌರಮ್ಮಳ ಗಂಡನಾಗಿಯೂ ಇನ್ನೂ ಬದುಕಿರುವುದಕ್ಕಾಗಿ ವ್ಯಥೆ ಪಟ್ಟರು.

ವಿಪರೀತವಾಗಕತ್ಯವೆನಿಸಿರಬೇಕು ಅಚ್ಚಕ್ಕಳಿಗೆ.

"ಹೋಗಲಿ ಬಿಡಪ್ಪಾ, ಆ ಮಾತು ಸಾಕು ಇನ್ನು, ಸಾವು. ಕೇಡು ಬರುವ ಕಾಲಕ್ಕೆ ಬಂದೇ ಬರುತ್ತವೆ, ಬೇಡವೆಂದರೂ ಬಿಡುವಂತಿಲ್ಲ. ಈಗೇಕೆ ಆ ಯೋಚನೆ?"

"ಸೈಯವ್ವ ಅಚ್ಚಿ, ಹೀಗೆ ಮಾತಾಡಬೇಕು. ನಾನು ಆಗಲೆ ಜೋಯಿಸರನ್ನು ಕೇಳಿಕೊಂಡು ಬಂದೀನಿ, ಹದಿನೈದು ದಿನದಾಗೆ ಒಳ್ಳೆ ಮುಹೂರ್ತ ಅದೆ ಅಂತ...."

"ಹೋಳಿ ಹುಣ್ಣಿಮೆ ಮುಂದೆ ಅದಾವ ಜೋಯಿಸ ನಿನಗೆ ಮುಹೂರ್ತ ಹುಡುಕಿ ಕೊಟ್ಟನೇ? ಸಾಲದೇನು ಈಗ ಆಗಿರೋದು? ಎರಡು ತಿಂಗಳಾದರೂ

ಬಿಟ್ಟು ಇಡ್ರಿ, ಹುಡಿಗಿ ಇನ್ನೂ ಮೈ ಹಿಡಿದಲ್ಲ. ಮನಸ್ಸೂ ಸರೀಗಿಲ್ಲ ಅವಳಿಗೆ. ತಂದಿ ಸತ್ತದ್ದು, ಅಣ್ಣ ಮನಿ ಬಿಟ್ಟು ಹೋದದ್ದು ಎಲ್ಲಾನೂ ಸೇರಿ, ಹುಡಗಿ ಭಾಳಾ ಜರಕೊಂಡಾಳೆ. ಅಷ್ಟ್ಯಾಕೆ ಅವಸರ ಮಾಡ್ತೀದೆ, ನಿನ್ನ ಮಗ ಏನು ಶೋಭನ ಮಾಡಿಕೊಂಡು ಇಂಗ್ಲಂಡು, ಅಮೇರಿಕಾಕ್ಕೆ ಹೋಗೋದು ಕೆಟ್ಟಾದೆ."

ಭಾಸ್ಕರಭಟ್ಟರ ಈ ಮಾತಿಗೆ ಮರುಗಳಿಗೆಯಲ್ಲಿಯೇ ಉತ್ತರ ಒದೇ ಬಿಟ್ಟಿತು ಗೌರಮ್ಮನ ಬಾಯಿಂದ–

"ನೀವ್ಯಾವ ಹಿಂಗ್ಲಂಡು ಎಮ್ಮಿಕರಕ್ಕೆ ಹೋದ್ರಿ. ಅಷ್ಟು ಅವಸರ ಮಾಡಿ ಮುಹೂರ್ತ ಇಡಿಸಿಗೊಂಡ್ರೆಲ್ಲ ನಿಮ್ಮ ಶೋಭನಕ್ಕೆ?"

"ಸಾಕು ಬಾಯಿ ಮುಚ್ಚೆ."

ಗಂಡನ ಅಧಿಕಾರವನ್ನು ಬಳಸಿ ಈ ಮಾತನ್ನಾಡಿದರು ಭಾಸ್ಕರಭಟ್ಟರು.

ಎರಡು ತಿಂಗಳ ನಂತರವೇ ನಿಷೇಕ ಎಂಬುದು ನಿರ್ಧಾರವಾಯಿತು. ಮರುದಿನವೇ ತಮ್ಮ ಊರಿಗೆ ಹೊರಟಿತು ಗೌರಮ್ಮನವರ ಸವಾರಿ, ಮಗ, ಗಂಡನನ್ನು ಕರೆದುಕೊಂಡು, ತಲೆಬಾಗಿಲ ವರೆಗೂ ಸಾಗಿದ್ದ ಗೌರಮ್ಮ, ಮಾತು ಹೊಟ್ಟೆಯಲ್ಲಿಯೇ ಉಳಿದರೆ ಹುಣ್ಣಾಗುತ್ತದೇನೋ ಎನ್ನುವ ರೀತಿಯಲ್ಲಿ ಹಿಂದೆ ಬಂದು ಮಗಳಿಗೆ ಹೇಳಿದಳು.

"ಅಲ್ಲೀಗೂ ಹೀಗೆ ಬರಬ್ಯಾಡ ಅಚ್ಚಿ, ಲಕ್ಷಣಾಗಿ ಮಡಿ ಆಗಿ ಬಾ. ಹಳ್ಳೂರಾಗೆ ಆಕ್ಷೇಪಣೆಗಳು ಜಾಸ್ತಿ. ಅವರಿವರು ಯಾಕೆ? ನನಗೇ ಸರಿ ಹೋಗೋದಿಲ್ಲ ಮದಲು."

ಈ ಮಾತಿನಿಂದ ಅಚ್ಚಕ್ಕಳಿಗೆ ಅದಾವ ಯಾತನೆಯೂ ಆಗಲಿಲ್ಲ. ಬ್ರಹ್ಮಾನಂದಭಟ್ಟರಂತಹ ಗಂಡನನ್ನು ಕಳೆದುಕೊಂಡವಳಿಗೆ ರುಂಡ ಹೋದರೂ ದುಃಖವಿಲ್ಲ. ಬರೀ ಕೂದಲೇಕೆ? ಅಚ್ಚಕ್ಕಳ ಜೀವನದಲ್ಲಿ ಏನು ಉಳಿದಿದ್ದಿತು? ಗಂಡ ಹೋದದ್ದಲ್ಲದೆ, ಮಗನೆಂದುಕೊಂಡಿದ್ದ ಗಣಪತಿಯೂ ದೂರಾದ. ಇದ್ದಬ್ಬ ಮಗಳೂ ಬಾಲನ ಪಾಲಾದಳೂ.

"ಆಗಲಮ್ಮ, ನಾಳೆಯೇ ಮಡಿ ಆಗುತ್ತೇನೆ. ಇದ್ದು ನೋಡಿಯೇ ಹೋಗು ಆ ಸ್ವರೂಪವನ್ನು."

ಅಚ್ಚಮ್ಮ ಗೌರಮ್ಮಳ ಮಗಳಾಗಿದ್ದರೆ ಈ ಮಾತನ್ನು ಅಂದೇ ಬಿಡುತ್ತಿದ್ದಳು. ಆದರೆ ಅವಳು ಭಾಸ್ಕರಭಟ್ಟರ ಮಗಳು ತಾನೆ? ನೋವು, ನಂಜು ನುಂಗಿಯೇ ಹೊಟ್ಟೆ ತುಂಬಿಹೋಗಿತ್ತು ತಂದೆ–ಮಗಳು ಇಬ್ಬರಿಗೂ.



## ೧೯

"ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬಂತೆ ಊರು ಚಿಕ್ಕದಾದರೂ ಹರಪನಹಳ್ಳಿಗೆ ಹೆಸರು ದೊಡ್ಡದು ಇದೆ. ಎರಡು ಶಕ್ತಿಗಳ ಗುತ್ತಿಗೆಯನ್ನಂತೂ ಅದು ಅತಿ ಪುರಾತನ ಕಾಲದಿಂದಲೂ ಹಿಡಿದಿದೆ–ಬುದ್ಧಿ ಶಕ್ತಿ ಮತ್ತು ಜೀರ್ಣಶಕ್ತಿ. ಲಕ್ಷ್ಮೀ ಸರಸ್ವತಿಯರಂತೆ ಈ ಎರಡು ಶಕ್ತಿಗಳೂ ಸಹಜ ಶತ್ರುಗಳಾದರೂ ಅವೆರಡೂ ಶಕ್ತಿಗಳ ಸಮ್ಮಿಳನ ಅಲ್ಲಿ ಆಗಿರುವುದೇ ಆ ಊರಿನ ವೈಶಿಷ್ಟ್ಯ. ಸುತ್ತಮುತ್ತಲಿನ ತಾಲೂಕುಗಳಲ್ಲಿ ಒಡೆದು ಕಾಣುವ ಬುದ್ಧಿಯ ಅಭಾವಕ್ಕೆ ಹರಪನಹಳ್ಳಿಯಲ್ಲಿ ಈ ವಸ್ತುವು ಹೇರಳವಾಗಿರುವುದೇ ಕಾರಣವಾಗಿರಬಹುದೇನೋ?

ಬುದ್ಧಿಶಕ್ತಿ ಹೆಚ್ಚಿದಂತೆಲ್ಲ ಅದರ ಸದುಪಯೋಗ ಕಡಿಮೆಯೋ ಏನೋ? ದೇಶಕ್ಕೆ ಉಪಯೋಗವಾಗದಿದ್ದರೆ ಹೋಗಲಿ, ದೆವ್ವಕ್ಕೆ ಉಪಯೋಗವಾದರೆ ಏನು ಗತಿ? ಮಾತುಗಾರಿಕೆಯ ಮೋಜನ್ನು ನೋಡಬೇಕು ಆ ಊರಲ್ಲಿಯೇ, ಹೊಸದಾಗಿ ಆ ಊರಿಗೆ ಬಂದ ಬಕರಾ ಯಾರ ಕೈಗಾದರೂ ಸಿಕ್ಕರೆ ಆಯಿತು– ಅವನನ್ನು ದೇವರೇ ಕಾಪಾಡಬೇಕು. ಕಕ್ಕಾ, ಮಾವಾ ಎಂಬ ಅಭಿಮಾನ ತುಂಬಿ ತುಳುಕುವ ರೀತಿಯಲ್ಲಿಯೇ ವೊದವೊದಲು ಸಂಭೋಧಿಸಿ, ಅರ್ಧಗಂಟೆಯಲ್ಲಿಯೇ ಬರೀ ಮಾತಿನಿಂದಲೇ ಲೇವಡಿಗೀಡು ಮಾಡಿ ಅವನ ಹೆಣವನ್ನು ಮಲಗಿಸಿಬಿಡುತ್ತಾರೆ.

ಅಂತಹ ತೀಕ್ಷ್ಣ ಬುದ್ಧಿಯ ತುಂಟ ಜಾಣರ ಕೈಯಲ್ಲಿ ಬಾಳಪ್ಪ ಸಿಕ್ಕರೇನು ಕೇಳಬೇಕು? ಹಪ್ಪಳವನ್ನು ಮುರಿದಂತೆ ಮುರಿದು ಗಾಳಿಗೇ ತೂರಿ ಬಿಟ್ಟರು ಅವನನ್ನು.

ನಾಳೆಯ ಬಾಳಪ್ಪನ ನಿಷೇಕ. ಜುಟ್ಟು, ಅಂಗಿ ಇಲ್ಲ, ಹರಕು–ಮುರುಕು ಗಡ್ಡದ ಆಚಾರಿಯೊಬ್ಬ ಬಾಳಪ್ಪನ ಭುಜದ ಮೇಲೆ ಕೈ ಇಕ್ಕಿದ, ರಸ್ತೆಯಲ್ಲಿ ಅವನೊಬ್ಬನೇ ಸಾಗಿದ್ದಾಗ.

"ಯಾರ್ರೀ ನೀವು?"

ಬಾಳಪ್ಪ ಕಕ್ಕಾವಿಕ್ಕಿಯಾದ, ಈ ಅಪರಿಚಿತರ ಸಲುಗೆಯನ್ನು ಕಂಡು.

"ಆಗಲೇ ಮರತೇ ಬಿಟ್ಟೇನೋ, ಬಾಳಾ? ನಿನ್ನ ಈ ದೌಲತ್ತಿನಾಗೆ ಬಡವರು ಯಾಕೆ ಗುರುತು ಸಿಕ್ಕಾರಪ್ಪಾ, ಪಾಪ!"

ಅಂತಃಕರಣದ ಕಾವಿನಲ್ಲಿ ನುಡಿದಂತೆ ಆಡಿದ ಈ ಮಾತುಗಳು, ಅರೆ ದಡ್ಡ ಬಾಳನ ಹೃದಯಕ್ಕೆ ನೇರವಾಗಿ ತಾಗವುದರಲ್ಲಿ ಏನಾಶ್ಚರ್ಯವಿದೆ?

“ನೆನಪಿಲ್ಲಲ್ರೀ, ನೀವು ಯಾರು ಹೇಳ್ರೀ.”

ಮೈ ಮೇಲಿದ್ದ ನೀರಪಂಚೆಯನ್ನು ಹಿಡಿದು, ಗಂಟೇಬಿದ್ದ ಬಾಲ ಆ ಆಷಾಢಭೂತಿ ಬಡಬಂಧುವಿಗೆ.

“ನಿನ್ನ ಸೋದರಮಾವನ ಅಕ್ಕನ ಗಂಡನ ತಮ್ಮನ ತಂಗೀ ನೆಗೆಣ್ಣಿ ಮಗ ಅಲ್ಲೇನೋ ನಾನು? ನಿನ್ನ ಲಗ್ನದಾಗೆ ನಾನು ಸಾರು ಬಡಸಲಿಲ್ಲೇನು?”

ಬಾಳ ಈ ತನ್ನ ನೂತನ ಅತಿ ಸಮೀಪ ಬಂಧುವನ್ನು ಕಾಲಿಂದ ತಲೆಯವರೆಗೂ ಎರಡೆರಡು ಬಾರಿ ನೋಡಿದ.

“ಈಗಾರೆ ಗುರುತು ಸಿಕ್ಕಿತೋ ಇಲ್ಲಪಾ ಮಾರಾಯ? ಇಲ್ಲದಿದ್ದರೆ ಇಲ್ಲಾ ಅಂದುಬಿಡು. ಹೋಗ್ತೀನಿ ಹಾಳಾಗಿ, ನೀನು ದೊಡ್ಡ ಮನಿಶಾ ಇದ್ದೀ ಅಂತ ಅಂದುಕೊಂಡು.”

ಭಿಡೆಗೆ ಬಸುರಾದಂತಾಯಿತು ಬಾಳನ ಗತಿ. ಅದೆಲ್ಲಿಂದಲೋ ಬಂದಿತು ಬಾಳನಿಗೂ ಕೂಡ ಸಮಯೋಚಿವಾಗಿ ಸುಳ್ಳನ್ನು ಹೇಳಲು

“ಹೌ, ಹೌದು, ನೋಡಿದ್ದೆ ನಿನ್ನ.”

“ಬಾ ಹೋಗೋಣ, ಚಹಾದ ಅಂಗಡಿ ಕಡಿ.”

ಬಾಳ ಒಮ್ಮೆಲೆ ಕೂಗಿ ಹೇಳಿಬಿಟ್ಟ, ಆಮೇಲೆ ತಕರಾರು ಬರಬಾರದೆಂದು

“ನನ್ನ ಹತ್ತಿರ ನಾಲ್ಕೇ ಆಣೆ ಅವೆ ನೋಡಪ್ಪಾ, ನಿನ್ನ ಹೆಸರೇನಂದಿ?”

“ಗುಂಡ ಅಲ್ಲೇನೋ?”

“ಹೂಂ, ಹೌದು. ನೋಡಪ್ಪಾ ಗುಂಡ, ಜಾಸ್ತಿ ತಿನಬಾರದು ನೀನು.”

ಗುಂಡನೆಂಬ ನಾಮಧೇಯದಿಂದ ಬಾಳಪ್ಪನಿಗೆ ಪರಿಚಯವಾಗಿದ್ದ ವ್ಯಕ್ತಿ ಮತ್ತು ಬಾಳಪ್ಪ ಇಬ್ಬರೂ ಬಸ್‌ಸ್ಟ್ಯಾಂಡ್ ಭವನಕ್ಕೆ ಹೊರಟರು ನಾಲ್ಕಾಣೆಯ ಜಲಸಾ ಮಾಡಲು

ಒಂದು ವಗ್ಗರಣೆ, ಒಂದು ಕಾಫಿ–ಮೈಸೂರ್ ಸಿಸ್ಟೆಮ್–ಒಂದರಲ್ಲಿ ಇಬ್ಬರು ಮುಗಿಸಿದರು. ಗುಂಡ ಬೀಡಿ ಹಚ್ಚಿದ, ಬಾಳನಿಗೂ ಒಂದು ಕೊಟ್ಟ.

“ಏ! ಬ್ಯಾಡಪ್ಪಾ, ನನಗೆ ಅಭ್ಯಾಸ ಇಲ್ಲ.”

“ಅಭ್ಯಾಸ ಇಲ್ಲ, ಮಾಡಿಕೊಳ್ಳೋ ಮಗನೆ, ಎಲ್ಲಾ ಅಭ್ಯಸಗಳೂ ಹುಟ್ಟುತಾನೆ ಬರತಾವೆ ಏನು? ಹಾಗಾದರೆ ನಿನಗೆ ನಿಷೇಕದ ಅಭ್ಯಾಸ ಅದೇನು? ಇವತ್ತು ಯಾಕೆ ಮಾಡಿಕೋತಿ ಹಾಗದರೆ?”

ಬಾಳನಿಗೆ ಅದೇಕೋ ಆ ‘ಗೋಬ್ರಾಹ್ಮಣ’ ಘಟನೆ ಸ್ಮರಣೆಗೆ ಬಂದಿತು.

“ಇದಕೂ ಮದಲೆ ಎಂದಾದರೂ ಆಗಿತ್ತೇನು ಬಾಳ ಶೋಬನ ನಿನಗೆ”



“ಇಲ್ಲಪ್ಪ.”

ಚಟ್ಟನೆ ಸುಳ್ಳನ್ನಾಡಿದ ಬಾಳಪ್ಪ ಗುಂಡನ ಮುಂದೆ, ಇದೇ ಉತ್ತರವೇ ಬೇಕಾಗಿದ್ದಿತು ಗುಂಡನಿಗೂ ಕೂಡ.

“ಹಾಗಾದರೆ ಏನು ಮಾಡ್ತೀ ನೀನು ಅಲ್ಲೆ?”

ಕೊಂಚವಾದರೂ ನಗು, ಚೇಷ್ಟೆಯೆಂಬ ಸಲಹೆ, ಯಾವುದೂ ಸುಳಿಯಲಿಲ್ಲ. ಗುಂಡನ ಮುಖದ ಮೇಲೆ, ಗಂಭೀರವಾಗಿಯೇ ಪ್ರಶ್ನಿಸಿದ.

“ನಮ್ಮವ್ವನ್ನ ಕೇಳ್ತೀನಿ, ಆಕಿ ಹ್ಯಾಗೆ ಹೇಳಿದರೆ ಹಾಗೆ....”

“ನಿನ್ನ ತಲಿ. ಅವ್ವನ್ನ ಕೇಳಬಾರ್ದು, ನಮ್ಮಂಥಾ ಸ್ನೇಹಿತರಿಂದ ತಿಳಕೋಬೇಕು ಇಂಥಾ ವಿಷಯ, ನಾವೇನು ಸತ್ತಿರತೀವೇನು? ಅವ್ವನ್ನ ಕೇಳಬ್ಯಾಡಾ, ಅದೇನು ಬಿಡು, ಅದು ಗುರು ಇಲ್ಲದೆ ಬರೋ ವಿದ್ಯಾ ಅದು. ಆದರೂ ಅದರಾಗೂ ಇರತದಲ್ಲ. ಹೇಳೋದು,

ಕೇಳೋದು....”

ಬಾಳಪ್ಪನ ಕುತೂಹಲ ಕೆರಳಿತು.

“ಅದೇನು ಹೇಳಿಕೊಡೋ ಗುಂಡಾ, ಇನ್ನೊಂದು ಕಾಫಿ ತರಿಸು, ಎರಡಾಣೆ ಅದೆ ಇನ್ನಾ ನನ್ನ ಹತ್ತಿರ.”

ಇನ್ನೊಂದು ಕಾಪಿಯನ್ನು ಇಬ್ಬರೂ ಹಂಚಿಕೊಂಡು ಕುಡಿದರು. ಗುಂಡ ಬಾಳನಿಗೆ ಮಂತ್ರೋಪದೇಶ ಮಾಡಿದ

“ಎರಡು ತೊಲಿ ಇಂಗು ತೊಗೋ, ಇಂಗು, ಬಿಳೀ ಇಂಗು, ದುಡ್ಡು ಅದೋ ಇಲ್ಲ ಕೊಡಲೊ?”

“ಅದ ಬಿಡೋ, ಇನ್ನ ಎರಡು ರೂಪಾಯಿ ಅವೆ ಟೊಂಕದಾಗ”

ಬಾಳ ಜಂಬ ಕೊಚ್ಚಿಕೊಂಡ.

“ಒಂದೇ ಒಂದು ಕರಣಿ ಇರಬೇಕು ಇಂಗು, ಎರಡು ತೊಲೀದು, ಯಾರಿಗೂ ತೋರಿಸಬ್ಯಾಡ ಅದನ್ನ, ನಿಮ್ಮ ಅವ್ವಗೂ ಕೂಡ, ರಾತ್ರಿ ಕಾಣಿವಳಗೆ ಹೋಗಿ ಬಾಗಿಲ ಭದ್ರಮಾಡಿದ ನಂತರ ಆ ಇಂಗನ್ನು ಬಾಯಿಯಲ್ಲಿ ಹಾಕಿಕೊ. ದವಡೆವಳಗೆ ಸುಮ್ಮನೆ ಹಿಡಿ, ಬಾಯಾಗೆ ನೀರು ಬಂದರೆ ನುಂಗು. ಅದನ್ನು ಮಾತ್ರ ಉಗುಳಿದರೆ ಕೆಲಸವೇ ಕೆಟ್ಟುಹೋಗುತ್ತದೆ ನೋಡು. ಸುಮ್ಮನೆ ನುಂಗುತ್ತಿರು. ಆ ಮಜಾ ನೋಡು ಬಂದು, ನಾಳೆ ಮುಂಜಾನೆ ನೀನೇ ಹೇಳ್ತಿ, ಉಪಕಾರ ಆತು ಗುಮಡ ನನ್ನಿಂದ ಅಂತ.”

ಗುಂಡನ ಮಾತಿನಲ್ಲಿ ಯಾರಿಗೆ ತಾನೆ ವಿಶ್ವಾಸವಾಗಲಿಕ್ಕಿಲ್ಲ, ಅವನು ಹೇಳುವ ರೀತಿ, ಆತ್ಮೀಯತೆಗಳನ್ನು ನೋಡಿದರೆ? ಈ ಬಲೆಗೆ ಬಕರಾ ಬಾಳಪ್ಪ ಬೀಳುವದರಲ್ಲಿ ಅದಾವ ಆಶ್ಚರ್ಯವಿದೆ?

ಗುಂಡ ಹೇಳಿದ ಮಜಾ ಮಾಡಿಯೇ ಬಿಡಬೇಕೆಂದು ಬಾಳ ತಕ್ಷಣವೇ ನಿರ್ಧರಿಸಿದ. ಇಂತಹ ಒಳ್ಳೆಯ ಗೆಳೆಯನಾದ ಗುಂಡ ಬಾಳಪ್ಪನಿಗೆ ಸಿಕ್ಕಿರಲಿಲ್ಲ. ಇನ್ನೊಂದು ವಗ್ಗರಣೆ ಇನ್ನೊಂದು ಕಾಫಿ ತರಿಸಿದ ಮನೆಗೆ ಹೊರಡು ಮುನ್ನ, ಗಂಡನಿಗೇ ಹೆಚ್ಚು ಭಾಗವನ್ನು ಹಾಕಿದ.

ಆಮೇಲೆ ಅಂಗಂಡಿಗೆ ಬರಲು ಸಮಯವು ಸಿಗುತ್ತದೋ ಇಲ್ಲವೋ ಎಂಬ ಅಂಜಿಕೆಯಿಂದ ಕೂಡಲೆ ಗುಂಡನ ಜೊತೆಯಲ್ಲಿ ಕುಂಟಲಚ್ಚಪ್ಪನ ಅಂಗಡಿಗೆ ಬಂದು, ಮಜಾ ಮಾಡಲು ಬೇಕಾಗಿದ್ದ ಆ ಸಾಮಾನನ್ನು ಎರಡು ತೊಲೆ ಇಂಗನ್ನು ಕೊಂಡು ಬಾಳ ಮನೆಯ ಹಾದಿ ಹಿಡಿದ. ಗಂಟೆಗೆ ಆರು ಬಾರಿ ಸೊಂಟದಲ್ಲಿ ಸೇರಿಸಿದ್ದ ಆ ಇಂಗಿನ ಡಬ್ಬಿಯನ್ನು ಮುದಟಿಕೊಂಡು, ಇಡೀ ದಿನವೆಲ್ಲ ರಾತ್ರಿಯ ಹಾದಿಯನ್ನೇ ಕಾಯುತ್ತಿದ್ದ.

"ಹಳ್ಳಿಗೆ ಹೋಗಬೇಕು, ಕೆಲಸದೆ."

ಊಟದ ಶಾಸ್ತ್ರ ಮುಗಿಸಿ ಕೈಮೇಲೆ ನೀರು ಹಾಕಿಕೊಂಡು ಅದೇ ಮಧ್ಯಾಹ್ನವೇ ಹೊರಟುಹೋದರು ಭಾಸ್ಕರಭಟ್ಟರು.

"ನಾನಂದುಕೊಂಡಂತೆ ದೇವರು ಒಂದೂ ಮಾಡಿಸಲಿಲ್ಲ. ಸರಸ್ವತಿ ಗಣಪತಿಯರ ಲಗ್ನವಾಗಲಿಲ್ಲ. ಬಾಳಕುಮಾರ ಮದುವೆ ಇಲ್ಲದ ಉಳಿಯಲಿಲ್ಲ. ಬ್ರಹ್ಮಾನಂದ ಶಾಸ್ತ್ರಿಗಳು ಇನ್ನು ನಾಲ್ಕು ಕಾಲ ಬದುಕಲಿಲ್ಲ. ನಾನು ಜಾಗ್ರತಿ ಕಣ್ಣು ಮುಚ್ಚಲಿಲ್ಲ.... ಹಂಟರವಾಲಿಯಂತಹ ನನ್ನ ಹೆಂಡತಿಗೆ ಪಾರ್ಶ್ವವಾಯು ಬಂದು ಕೈಕಾಲು, ಮುಖ್ಯವಾಗಿ ನಾಲುಗೆ ಬಿದ್ದು ಅವಳು ನೆಲ ಹಿಡಿಯಲಿಲ್ಲ. ಲಗ್ನವಾಗುವ ಮುಂಚೆಯೇ ಈ ಬಾಳನಾದರೂ ಸಾಯಲಿಲ್ಲ."

ಹೀಗೆಯೇ ಏನೇನನ್ನೊ ವಟಗುಟ್ಟುತ್ತ ಹಾದಿ ನಡೆದರು ಭಟ್ಟರು, ಅದೇಕೋ ಅಂದು ಅವರಿಗೆ ಇಲ್ಲದ ಕುರುಕುರಿ ಆಯಿತು ಮನಸ್ಸಿಗೆ. ರಾತ್ರಿಯ ಹೊತ್ತಿಗೆ ನೇರವಾಗಿ ಬಂದು, ಶಂಕರದೀಕ್ಷಿತರ ಮುರುಕು ಗುಡಿಸಲ ಮುಂದೆ ಕುಳಿತ ಕಣ್ಣೀರು ಇಕ್ಕುತ್ತಿದ್ದರು ನೊಂದಜೀವಿ ಭಾಸ್ಕರಭಟ್ಟರು.

ಹೊಸದಾಗಿ ವೈಧವ್ಯದ ಪುಟವನ್ನು ಕಟ್ಟಿಸಿಗೊಂಡಿದ್ದ ಅಚ್ಚಮ್ಮ ಅಡಕಲೆ ಕೋಣೆ ಹಿಡಿದಿದ್ದಳು–ಅಚೇತನವಾದ ಅಲ್ಲಿಯ ಗಡಿಗೆ–ಮಡಿಕೆಗಳೊಂದಿಗೆ ತಾನು ಒಂದಾಗಿದ್ದಳು. ಸರಸ್ವತಿ ಯಾವುದೋ ಮೂಲೆಯಲ್ಲಿ ಕುಳಿತು ಮುಪ್ಪು ಕಾಯುತ್ತಿದ್ದಳು.



ಮನೆಯ ತುಂಬ ಗೌರಮ್ಮಳದೇ ಓಡಾಟ, ಹಿರಿಯತನ, ಅಡುಗೆ ಕೆಲಸವೆಲ್ಲ ತನ್ನದು–ಊಟದ ಕೆಲಸವೆಲ್ಲ ಬಾಳಪ್ಪನದು.

ಶೋಭನದ ಕೋಣೆಯನ್ನು ಸಿಂಗರಿಸುವ ಹೊಣೆಯಲ್ಲ ಗೌರಮ್ಮನದೇ, ತನ್ನ ಅಭಿರುಚಿಗೆ ತಕ್ಕಂತೆ ಅಲಂಕಾರ ಮಾಡಿದ್ದಳು, ತಿನಿಸು–ತಿಂಡಿಗಳನ್ನಂತೂ ಬಾಳಪ್ಪನಿಗೆ ಬೇಕಾಗುವ ಪ್ರಮಾಣದಲ್ಲಿಯೇ ಮಾಡಿಟ್ಟಳು.

ಇಡೀ ಊರಿಗೆ ಔತಣಕೊಟ್ಟು ಬಂದಳು ಊಟಕ್ಕಲ್ಲ–ಕೋಣೆ ನೋಡಲಿಕ್ಕೆ. ಬಾವಿಯಲ್ಲಿ ಬಿದ್ದು ಸತ್ತವನ ಹೆಣವನ್ನು ನೋಡಲುಬಂದಂತೆ ತಂಡ–ತಂಡವಾಗಿ ಬಂದು ನೋಡಿ, ಅಲ್ಲಿ ನಿಲ್ಲಲಾರದೆ ಓಡಿ ಹೊರಟಿತು ಊರಲ್ಲಿಯ ಜನ. ಊರ ತುಂಬ ಬಾಳಕುಮಾರನ ಕೋಣೆಯ ಅಲಂಕಾರದ ಮಾತೇ ಮಾತು.

"ಏನು ಪಟಗಳು ಹಾಕ್ಯಾಳೇ ನಮ್ಮವ್ವ ಆ ಗೌರಮ್ಮ ಪ್ರಸ್ತದ ಕೋಣೆ ತುಂಬ!"

ಈ ವಿಷಯವನ್ನು ಚರ್ಚಿಸದ ಮನೆಯೇ ಇಲ್ಲ ಆ ಸಂಜೆ.

"ಹುಡುಗೀ ಪುಣ್ಯಾ ಅಂಥಾದ್ದೇ. ಯಾವದಕ್ಕೂ ಕೊಟ್ಟು ಹುಟ್ಟಿರಬೇಕು ಅಂಬೋದು ಸುಳ್ಳಲ್ಲ ನೋಡು. ಆ ಸುಡುಗಾಡು ಬಾಳಪ್ಪನಂಥಾ ಗಂಡ, ಆ ರಾಕ್ಷಸಿ ಗೌರಮ್ಮನಂಥಾ ಅತ್ತಿ ಸಿಕ್ಕಮ್ಯಾಲೆ, ಪ್ರಸ್ತದ ಕೋಣೀವಳಗ ಎಂಥಾ ಪಟ ಇದ್ದರೇನು?"

ಓರ್ವ ನೊಂದ ಜೀವಿ ನುಡಿಯಿತು.

ಕಿರಿಯಳೊಬ್ಬಳು ಸುರುಮಾಡಿದಳು, ಹೊರಸೂಸುತ್ತಿದ್ದ ನಗುವನ್ನು ಬಿಗಿಹಿಡಿಯುತ್ತ

"ಪ್ರಸ್ತದ ಕೋಣೀವಳಗೆ ನರಕದ ಪಯಾಕ್ರೆ ನಮ್ಮವ್ವ?"

ಕುಳಿತವರೆಲ್ಲರೂ ಖೊಳ್ಳೆಂದು ನಕ್ಕುಬಿಟ್ಟರು ಒಬ್ಬಳನ್ನು ಮಾತ್ರ ಉಳಿದು.

"ನಗಬ್ಯಾಡ್ರೇ ಹುಡಿಗೀರೆ. ಖರೇವಂದ್ರು ನರಕಾನೆ ಆ ಹುಡಿಗೀಗೆ, ಪಾಪ! ಅಪರಿಚಿತಳಾದ ಸರಸ್ತಿಯ ಬಗ್ಗೆ ಅನುಕಂಪದಿಂದ ನುಡಿದಳು ಆ ನೊಂದ ಪ್ರಾಣಿ.

"ತಲಕಡೀ ಹಾಕಿರೋ ದೊಡ್ಡ ಪಟ ನೀ ನೋಡ್ದೇನೆ?"

"ಗ್ರಾಚಾರ ಅವರದು, ಆ ಯತಿಗಳ ಪ್ರಾರಬ್ಧ ಇದೀತೆ ಅಂತೀನಿ."

"ರಾಘವಂದ್ರ ಸ್ವಾಮಿಗಳದು ಏನು ಕೆಲಸೇ ಅಲ್ಲೇ, ಆ ನಿಷೇಕ ಪ್ರಸ್ತದ ಕ್ವಾಣ್ಯಾಗೆ."

ಬಿದ್ದು ಬಿದ್ದು ನಗಹತ್ತಿದರು ಆ ಹೆಂಗಳೆಯರು.

"ಪ್ರಪಂಚಾನೆ ಒಲ್ಲೆ ಅಂದು ಹೆಂಡತಿ–ಮಕ್ಕಳನ್ನು ಬಿಟ್ಟುಕೊಟ್ಟು ಮಂಚಾಲಿವಳಗೆ ಅವರು ಕೂತರೆ, ಈ ಪರಮ ಭಕ್ತಳು ಗೌರಮ್ಮ ಅಲ್ಲಿಂದ ಎಳದು ತಂದಾಳೆ ಅವರನ್ನ. ನೋಡಬರ್ರಿ ನನ್ನ ಮಗನ ಪ್ರತಾಪ ಅಂತ."

"ಸಾಕು ಬಿಡ್ರೆ ನಮ್ಮವ್ವ, ಇನ್ನಾದರೂ ಆ ಸುದ್ದೀನ. ನನಗೆ ಕೇಳಿದರೇ ಹೊಟ್ಯಾಗೆ ನೆಲ್ಲುಮಸರು ಕಲಿಸಿಧಾಗೆ ಆಗ್ತದೆ?"

ಆಗ ನಿಲ್ಲಿಸಿಬಿಟ್ಟರು ಅವರು ಆ ಮಾತನ್ನು.

ಇನ್ನೊಂದು ಮನೆಯಲಲಿಯೂ ಇದೇ ಮಾತು ಸಾಗಿತ್ತು.

"ಎಲ್ಲ ಫೋಟೋಗಳಕ್ಕಿಂತಲೂ ಒಂದು ಭಾಳಾ ನನ್ನ ಮನಸ್ಸಿಗೆ ಬಂತು ನೋಡು. ಯಾವುದು ಹೇಳು."

"ಆ ಲೋಧ್ರ ಔಷಧಿ ಕ್ಯಾಲೆಂಡರು."

"ಅದೂ ಒಂದು, ಇನ್ನೊಂದು ಕ್ಯಾಫಿ ಆಸ್ಪಿರನ್ ಕ್ಯಾಲೆಂಡರ್ ಇನ್ನೊಂದು."

"ಎರಡೂ ಬಹಳ ಭೇಷ್ ಅವೆ ನೋಡೆ, ಜೊತೀಲೆ, ತಲೆಶೂಲಿಗೊಂದು ಹೊಟ್ಟಿ ಶೂಲಿಗೊಂದು–ಒಂದು ಗೌರಮ್ಮ ಕೊಡೋ ರೋಗ, ಇನ್ನೊಂದು ಬಾಳಪ್ಪ ಕೊಡೋ ರೋಗ."

"ಆದರೂ ಇನ್ನೊಂದು ಫೋಟೋ ಛಲೋ ಅದೆ ಬಿಡು–ಆ ಮಹಿಷಾಸುರನದು."

"ಬಾಳಪ್ಪನೇ ವೇಷ ಹಾಕಿಕೊಂಡು ನಿಂತ ಹಾಗೆ ಅದೆ ಮಾರಾಯಳೆ, ಆ ಮಹಿಷಾಸುರನ್ನ ನೋಡಿದರೆ."

"ಛೇ, ಹಾಗ್ಯಾಕಂತೀಯೇ, ಪಾಪ! ಮಹಿಷಾಸುರ ಅಷ್ಟು ಕುರೂಪಿ ಏನು? ಬಾಳಪ್ಪಗೆ ಹೋಲಸತೀಯಲ್ಲ, ನೀನು."

"ಸುಮ್ಮನಿರೇ ನಮ್ಮವ್ವ, ಎಲ್ಯಾರೆ ಗೌರಮ್ಮನ ಕಿವೀಗೆ ಬಿತ್ತಂದರೆ ನಿನ್ನ ಗತೀನೆ ಮುಗಿಸಿ ಬಿಟ್ಟಾಳು."

"ಇನ್ನು ಮ್ಯಾಲೆ ಊರಾಗೆ ಯಾರ ಮನ್ಯಾಗಾದರೂ ನಿಷೇಕ ಆಗಲಿ, ಪ್ರಸ್ತದ ಕ್ವಾಣೀ ಸಿಂಗಾರಕ್ಕೆ ಗೌರಮ್ಮನ್ನೆ ಕರೀಬೇಕು ನೋಡೇ."

ಮಾತನಾಡುಸತ್ತ ಕೂಡುವವರಿಗೇನು ಬೆಳ್ಳಂಬೆಳಗೂ ಕೂಡಬಹುದು. ಪಾಪ! ಗೌರಮ್ಮಳಿಗೆಲ್ಲಿದೆ ಸಮಯ?



ಮಧ್ಯಾಹ್ನ ಎಲ್ಲರ ಮಧ್ಯೆ ಊಟಕ್ಕೆ ಕುಳಿತಾಗಲೆ ಕೂಗಿ ಕೇಳಿದ್ದ ಬಾಳಪ್ಪ, ಸೊಂಟದಲ್ಲಿ ಒತ್ತುತ್ತಿದ್ದ ಇಂಗಿನ ಡಬ್ಬಿಯನ್ನು ಎರಡೆರಡು ಬಾರಿ ಮುಟ್ಟಿಗೊಂಡು

"ಅವ್ವ, ಇನ್ನಾ ಯಾವಾಗವ್ವ ಕ್ವಾಣೆಗೆ ಕಳಿಸೋದು ನನ್ನ?" ಸುತ್ತಮುತ್ತಲವರೆಲ್ಲ ಊಟ ಬಿಟ್ಟು ನಗಹತ್ತಿದರು.

"ಹಾಗೆಲ್ಲ ಅವಸರ ಮಾಡಬಾರದಪ್ಪಾ, ನನ್ನ ಕೂಸೇ."

ಇತ್ತ ಮಗನಿಗೆ ಸಮಾಧಾನವನ್ನು ಹೇಳಿ, ಅತ್ತ ಊಟಕ್ಕೆ ಕುಳಿವರ ಕಡೆ ನೋಡಿ ಹೆಮ್ಮೆಯಿಮದ ಹೇಳಹತ್ತಿದಳು ಗೌರಮ್ಮ.

"ಸರಸಿ ಅಂದ್ರೆ ಪ್ರಾಣ ನೋಡ್ರಿ ಬಾಳಗೆ. ಎಷ್ಟು ಪುಣ್ಯ ಮಾಡ್ಯಾಳೋ ಆ ಸರಸಿ ಬಾಳನ ಕೈಹಿಡೀಲಿಕ್ಕೆ?"

"ಅಲ್ಲೇ ಮತ್ತೆ."

ಅರ್ಥಗರ್ಭಿತವಾಗಿ ನುಡಿದು ಭಾಸ್ಕರಭಟ್ಟರು ಒಲ್ಲೆ ಎನ್ನುತ್ತಿದ್ದತ್ತನ್ನು ಒಳಗೆ ನೂಕಿದರು. ಊಟದ ನಡುವೆ ಆದ ಒಮದು ಅಸಹ್ಯದ ಘಟನೆಯಿಂದ ಮನನೊಂದು ಅವರು ಊರೇ ಬಿಟ್ಟರು.

ಎಲ್ಲರ ಊಟಗಳೂ ಮುಗಿದವು. ಅತ್ತೆಯಾದ ಗೌರಮ್ಮ ಕೂಗಿ ಹೇಳಿದಳು

"ಸರಸೀ, ಧೊರೆಸಾನಿ ಕೂತ್ಹಾಗೆ ಕೂಡಬ್ಯಾಡ ಕಾಲುಚಾಚಿ. ಆ ತಟ್ಟೆಗಳು ತಗದು ತೊಳೀ ಹೋಗು, ಹಿತ್ತಲಾಗಿನ ಹೊರಬಚ್ಚಲಾಗೆ. ನನ್ನ ಮನ್ಯಾಗೆ ಸೋಮಾರಿತನ ಎಲ್ಲ ನಡಿಯೋದಿಲ್ಲ. ತಿಳೀತೇ?"

ಸೋಮಾರಿತನವೆಂದರೇನು ಎಂಬುದನ್ನೇ ಅರಿಯಳು ಸರಸ್ವತಿ, ಹೇಳಿಸಿಕೊಳ್ಳುವ ಮುನ್ನವೆ ಎದ್ದು ಚಟಪಟ ಕೆಲಸ ಮುಗಿಸುವ ಸ್ವಭಾವ ಅವಳದು. ಓಡುವ ಕುದುರೆಯನ್ನು ಛಬಕಿನಿಂದ ಹೊಡೆದರೆ ಕೇಳುವದೇನು? ನಿಮಿಷಾರ್ಧದಲ್ಲಿಯೆ ಎಲೆ ತಟ್ಟೆಗಳನ್ನು ತೆಗೆದು, ನೆಲವನ್ನು ಸಗಣಿಯಿಂದ ಸಾರಿಸಿ ಶುದ್ಧಿ ಮಾಡಿ ಮುಗಿಸಿದಳು. ತೊಳೆಯಬೇಕಾದ ತಟ್ಟೆಗಳನ್ನೆಲ್ಲ ಹೊರಬಚ್ಚಲಲ್ಲಿಕ್ಕಿಕೊಂಡು ಬೂದಿ ತರಲು ನೀರಮನೆಗೆ ಬಂದಳು.

ಗಿಳಿಮರಿಯನ್ನು ಹಿಡಿಯಲು ಹೊಂಚು ಹಾಕಿ ಕುಳಿತ ಬಾವುಗನಂತೆ, ಕಟ್ಟಿಗೆ  ಹಿಂದೆ ಅಡಗಿಕೊಂಡಿದ್ದ ಬಾಳಪ್ಪ ಹಸಿದ ತೋಳನಂತೆ ಸರಸ್ವತಿಯ ಮೈಮೇಲೆಯೇ ಬಂದ.

ಸರಸ್ವತಿ ಅವಾಕ್ಕಾದಳು. ಬಾಲಪ್ಪನ ವರ್ತನೆ ಅವಳಿಗೆಷ್ಟೂ ಅರ್ಥವಾಗಲಿಲ್ಲ. ಪಾಪ! ಬಾಯಿಯ ಬಳಿ ಸಿಕ್ಕ ಹುಲ್ಲೆಯನ್ನು ಕ್ರೂರ ಕಾಡುಮೃಗವು ನೋಡುವಂತೆ

ನೋಡಿದ ಆ ತನ್ನ ಬೇಟೆಯನ್ನು, ಸರಸ್ವತಿಗೆ ಭಯವೂ ಆಗಲಿಲ್ಲ. ಅಂತಹ ಹೇಡಿತನ ಅವಳರಸಲಿಲ್ಲ.

ಅವಳಿಗೇನಾಯಿತೋ ತಿಳಿಯದಾಗಲಿ, ಈ ಅವಿವೇಕಿಯನ್ನು ಕಂಡು ಜಿಗುಪ್ಸೆಯೂ ಕೋಪವೂ ಬಂದಿತು.

'ಶುದ್ಧ ಪಶು.'

ಬಾಯಲ್ಲಿಯೇ ಅಂಧುಕೊಂಡು ಬೇಗ ಬೇಗ ಸಾಗಿದಳು ಬಾಗಿಲ ಕಡೆ.

"ಏ ಸರಸಿ, ನೀನು ನನ್ನ ಹೆಂಡತಿ ಅಲ್ಲೇನೆ?"

"ಏನು ಈಗ?"

ಸರಸ್ವತಿ ದುಷ್ಟೆಯಂತೆ ಕಂಡಳು ಕಣ್ಣರಳಿಸಿ ಮಾತನಾಡಿದಾಗ.

ಓಡಿಬಂದ ಬಾಳಪ್ಪ ತನ್ನ ಕಬ್ಬಿಣದ ಅಂಗೈಯಿಂದ ಗಟ್ಟಿಯಾಗಿ ಅವಳ ಬಾಯಿಯನ್ನು ಮುಚ್ಚಿದ.

ಹಿಂದಿನಿಂದ ಮೆಲ್ಲನೆ ಬಂದು ನಲ್ಲೆಯ ಕಣ್ಣನ್ನು ನೋವಾಗದಂತೆ ಮುಚ್ಚುವದು ಹಲವರ ಪ್ರಣಯಲೀಲೆಯ ರೀತಿ, ಹುಲಿಯಂತೆ ಎದುರಿಗೇ ಹಾರಿ ಬಂದು ಹಲ್ಲು ಮುರಿಯುವಂತೆ ಹೆಂಡತಿಯ ಬಾಯಿಯನ್ನು ಗಟ್ಟಿಯಾಗಿ ಮುಚ್ಚುವದು ಬಾಳಪ್ಪನ ಪ್ರಣಯಲೀಲೆಯ ರೀತಿ. ಅದನ್ನೂ ಇದನ್ನೂ ಕೂಡ ಅರಿಯಳು ಆ ಸರಸ್ವತಿ.

ಕೈಕೊಸರಿಸಿಗೊಂಡು ಪಾರಾಗಲು ವಿಲಿವಿಲಿ ಒದ್ದಾಡಿದಳು. ಜೋರಿನಿಂದ ನೆಲಕ್ಕೇ ಉರುಳಿಸಿದ ಬಾಳಪ್ಪ ಸರಸ್ವತಿಯನ್ನು, ತಂಬಿಗೆ ತಲೆಗೆ ತಗಲಿ ನೋವಾಯಿತು, ಗಟ್ಟಿಯಾಗಿ ಕೂಗಿಕೊಂಡಳು.

ಹೊರಗೆ ಕುಳಿತವರೆಲ್ಲರೂ ಓಡಿಬಂದರು. ಏನಾಯಿತೋ ಎಂದು. ಮಗಳ ಆರ್ತದನಿಯನ್ನು ಕೇಳಿ ಅಚ್ಚಮ್ಮ ಮೊದಲು ಬಂದಳು. ಹಿಂದೆಯೇ ಗೌರಮ್ಮ ಕೂಡ. ಗುಂಪು ನಿಂತು ನೋಡಿತು ಬಾಳ ಮಹಾತ್ಮನ ಅವಿವೇಕವನ್ನು.

ಭಾಸ್ಕರಭಟ್ಟರು ಹಿತ್ತಲಲ್ಲಿ ಬಿದ್ದಿದ್ದ ಹಸಿದಂಟೊಂದನ್ನು ತಂದು ಚೆನ್ನಾಗಿ ನೀಡಿದರು ಬಾಳಪ್ಪನ ಬೆನ್ನಿನ ಕೆಳಗಡೆ. ಮೂರು ಬಾರಿ ಬಿಗಿದ ನಂತರ ಬಾಳ ಮನುಷ್ಯನಾದ, ಮೇಲೆದ್ದು ಮಂಗನಂತೆ ಮುಖಮಾಡಿ ನಿಂತ. ಸರಸ್ವತಿ ಉಟ್ಟಬಟ್ಟೆಯನ್ನು ಸರಿಮಾಡಿಕೊಂಡು ತಲೆಬಾಗಿ ಓಡಿದಳು ತಾಯಿಯ ಕೋಣೆಗೆ. ಮುಸುಗಿಕ್ಕಿ ಮಲಗಿದ ಮಗಳ ಮೈಮೇಲೆ ಕೈಯಾಡುತ್ತ ಅಚ್ಚಮ್ಮ ನುಡಿದಳು

"ಪುಣ್ಯವಂತರಮ್ಮಾ ನಿನ್ನ ತಂದೆ ಅವರು, ಕಣ್ಣು ಮುಚ್ಚಿದರು ಬೇಗ. ನನ್ನ ಕರ್ಮ ಸವೆಯುವದು ಇನ್ನೂ ಎಂದಿಗೋ?"



ಆ ತಕ್ಷಣವೇ ಹೊರಬಿದ್ದ ಭಾಸ್ಕರಭಟ್ಟರು ರಾತ್ರಿಯಾದರೂ ಮನೆಗೇ ಬರಲಿಲ್ಲ.

ಬಾಳನನ್ನು ಚೆನ್ನಾಗಿ ಥಳಿಸಿದಳು ಗೌರಮ್ಮ ಒಳಗೆ ಕರೆತಂದು. ಸಾಕಷ್ಟು ಥೂ ಛೀ ಮಾಡಿದಳು.

"ಕತ್ತೆಮುಂಡೇ ಮಗನೆ! ಸಂಜಿತನಕ ಜೀವ ಬಿಗಿಹಿಡಿದಿದ್ದರೆ ಸಾಯತಿದ್ಯಾ....?"

ಬಾಳಪ್ಪನ ಸಿಟ್ಟು ಗೌರಮ್ಮಳ ಮೇಲೆಯೇ ಹೊರಳಿತು.

"ಸರಸಿ ನನ್ನ ಹೆಣ್ತೀ ಅಂತ ನೀನೆ ಹೇಳಿದೆಲ್ಲ? ನನ್ನ ಹೆಣ್ತಿನ್ನ ನಾನೂ....."

"ಥೂ, ನಿನ ಮಾರಿಗೆ ಬೆಂಕಿ ಹಚ್ಚ."

## ೨೦

ರಾತ್ರಿ ಹತ್ತೂ ಮುಕ್ಕಾಲಿಗೆ ಮುಹೂರ್ತ.

ಗಂಟೆ ಹನ್ನೊಂದಾದರೂ ಬಾಳಪ್ಪ ನಿಷೇಕ ಕೋಣೆಯಲ್ಲಿ ಬರಲೊಲ್ಲ. ಮುನಿಸುಗುಟ್ಟಿ ಬಚ್ಚಲುಮನೆಯಲ್ಲಿ ಮಲಗಿದವನು, ನಾಲ್ಕು ಆನೆಗಳನ್ನು ಹಚ್ಚಿ ಎಳೆಸಿದರೂ ಅಂಗುಲ ಮುಂದಕ್ಕೆ ಸರಿಯಲಿಲ್ಲ. ಮುಸುಗು ತೆಗೆಯಲಿಲ್ಲ. ಗೌರಮ್ಮಳ ಸಾಹಸವೆಲ್ಲವೂ ವ್ಯರ್ಥವಾಯಿತು.

"ತಗೊ ಹಿಡಿ, ನೆಲಗಡಲಿ ಉಂಡಿ ತಂದೀನಿ, ಎಳ್ಳುಂಡಿ ತಂದೀನಿ, ತಿನ್ನು ಮತ್ತೆ."

ಗೌರಮ್ಮ ನಾಯಿಯನ್ನು ಕರೆಯುವಂತೆ ಅವನ ಪ್ರೀತಿಯ ತಿಂಡಿಗಳನ್ನು ತೋರಿಸಿ, ಬಾಳನನ್ನು ನಾನಾ ರೀತಿಯಲ್ಲಿ ರಮಿಸಿದಳು.

"ನೀನೇ ತಿನ್ನು."

"ಹೊಸ ಜರತಾರಿ ಶೆಲ್ಲೆ ತಂದೀನಿ, ಉಟುಗೋ ಏಳು ನನ್ನ ದೇವರೂ."

"ನೀನೇ ಉಟುಗೋ."

"ತಲಿ ಅಸಹ್ಯ ಬೆಳದಿತ್ತಪ್ಪಾ ಬಾಳಾ, ನಿನ್ನೆ ಒಂದಿಷ್ಟು ಕ್ಷೌರನಾರೆ ಮಾಡಿಸಿಗೋ ಬೇಕಿತ್ತು."

"ನೀನೇ ಮಾಡಿಸಿಗೊ."

"ನಿನ್ನ ಹೆಣ ಹೋಗ, ಏನ ಸುಡುಗಾಡಾರ ಮಾಡಿಕೊ. ಅಂದದ್ದೆಲ್ಲಾದಕ್ಕೂ ನೀನು ಅನ್ನೀಯಾ. ಇವತ್ತೊಂದು ದಿನ ಕೆಟ್ಟ ಮಾತು ಆಡಬಾರದು ಅಂತ ಬಿಟ್ಟೀನಿ. ನಾಳೆ ಬೆಳಗೊಂದು ಆಗಲಿ, ನಿನ್ನ ಸಿದಿಗೀ ಬಿಗಿದು ನಿನ್ನ ಅಸ್ಥಿ ಹೊಳಿ ಕಾಣಿಸಿ ಬಂದು ಉಣುತೀನಿ."

ಸಾಧ್ಯವಿದ್ದಷ್ಟು ಸಾಹಿತ್ಯದಿಂದ ಮುದ್ದು ಮಗನನ್ನು ಬಾಯ್ತುಂಬ ಆಶೀರ್ವದಿಸಿ, ಉಸ್ಸೆಂದು ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟ ಗೌರಮ್ಮ. ಆರತಿ, ಅಕ್ಷತಿ, ಗಂಡ–ಹೆಂಡತಿಯನ್ನು ಹಾಸಿಗೆಯ ಮೇಲೆ ಕುಳ್ಳಿರಿಸಿ ಹಾಲು– ತುಪ್ಪ ಕೊಡವದು– ಮುಂತಾದವನ್ನು ನೋಡಲಿಕ್ಕೂ ಬಾಗಿಲು ಹಾಕಿದ ನಂತರ ಕಿಡಿಗೇಡಿತನದಿಂದ ಕಿಂಡಿಯಲ್ಲಿ ನೋಡಲಿಕ್ಕೂ ಬಂದಿದ ಹಿರಿ–ಕಿರಿ ಮುತ್ತೈದೆಯರು, ಮಕ್ಕಳು ಬೇಸತ್ತು ತಂತಮ್ಮ ಮನೆಗಳಿಗೆ ತೆರಳುವ ಸೂಚನೆ ತೋರಿದರು.

ಗಂಟೆಗಳ ಮುಂಚೆಯೇ ಸರಸ್ವತಿಯನ್ನು ಸಿಂಗರಿಸಿ ಕುಳ್ಳಿರಿಸಿದ್ದರು ಅವಳಮ್ಮನ ಕೋಣೆಯಲ್ಲಿ, ಕರೆದ ಕೂಡಲೆ ಬಾ ಎಂದು ಹೇಳಿ, ಕಟುಕನ ಖಮೇಲಿಯಲ್ಲಿ ಕಡಿಸಿಗೊಳ್ಳಲು ಸಿದ್ಧವಾಗಿದ್ದ ಕುರಿಯಂತೆ ಕಂಡಳು ಸರಸ್ವತಿ.

ಅಚ್ಚಕ್ಕಳ ಮನಸ್ಸು ಅತ್ಯದ್ಭುತ ವೈರಾಗ್ಯವನ್ನು ತಾಳಿದ್ದಿತು. ಸರಸ್ವತಿಯು ತನ್ನ ಮಗಳೇ ಅಲ್ಲವೇನೋ ಎನ್ನುವ ರೀತಿಯಲ್ಲಿ, ತನ್ನಿಂದ ತಾನೇ ಹೊರನಿಂತು ಎಲ್ಲವನ್ನು ಇನ್ನೊಬ್ಬಳಾಗಿ ನೋಡುತ್ತಿದ್ದಳು.

"ನಾವು ಬರ್ತೀವ್ರೀ ಗೌರಮ್ಮನವರೆ, ಹೊತ್ತಾತು."

ಅಂಜಂಜುತ್ತ ಒಬ್ಬೊಬ್ಬರಾಗಿ ಅಪ್ಪಣೆ ಕೇಳಲು ಬಂದರು ಹೂವೀಳ್ಯೆಗೆ ನೆರೆದಿದ್ದ ಮುತ್ತೈದೆಯರು.

"ಏನು ಸಾಯಲವ್ವಾ ಅಂತೀನಿ, ಈ ಬಾಳನ ಕಾಲಾಗೆ? ಏನು ಹೇಳಿದರೂ ಕೇಳವಲ್ಲ, ಏನು ಕೊಟ್ಟರೂ ಬರವಲ್ಲ."

ಸೂಕ್ಷ್ಮ ಬುದ್ದಿಯ ಗೌರಮ್ಮಳಿಗೆ ಯಾರಿಗೂ ಹೊಳೆಯದಂತಹ ಹೊಸ ವಿಚಾರವೇ ಹೊಳೆಯಿತು.

"ಯಾರಾದರೂ ಏನಾದರೂ ಮಾಡಿಗೀಡ್ಯಾರೋ ಏನೋ ಅಂತೀನಿ ಮಾಟ, ಮದ್ದು, ಸುಡುಗಾಡು, ಸಿದ್ಧನಮಠ ಇರತಾವಲ್ಲ–ಅಂಥಾವೇನಾದರೂ, ಹೌದವ್ವ ಹೌದು, ಇದೆಲ್ಲ ಕೆಲಸ ಆ ನೀಚಮುಂಡೇ ಮಗಂದೆ ಇರತದ. ಬಂದಿದ್ದನಲ್ಲ ಬಾವಾಜಿ ಅಂಥ ಗಣಪ್ಪ, ನಾಳೆ ಬೆಳಗಾಗಲಿ, ಎದುರು ಮಾಟ ಮಾಡಿಸಿ ಅವನ್ನ ಕಾಸೀವಳಗೇ ಕಾರಿಕಾರಿ ಸಯೋಹಾಗೆ ಮಾಡಸ್ತೀನಿ...."

ಅಚ್ಚಕ್ಕಳಿಗೆ ಕಿವಿಯಲ್ಲಿ ಸೀಸವನ್ನು ಕಾಸಿ ಹುಯಿದಂತಾಯಿತು, ತಾಯಿಯ ಈ ಮಾತುಗಳನ್ನು ಕೇಳಿದಾಗ.

"ಇನ್ನೂ ಏನು ಮಾಡ್ತಿರೇ ಹುಡುಗೇರಾ. ಸರಹೊತ್ತು ಆದ್ರೂನು."

ನಡುಗುವ ದನಿಯಲ್ಲಿ ವಟಗುಟ್ಟುತ ಬಾಗಿಹೋಗಿದ್ದ ಸೊಂಟದ ಮೇಲೆ ಕೈಯಿಕ್ಕಿ ಒಳಬಂದಳು ವೃದ್ಧ ವಿಧವೆ ತಾರವ್ವ.



"ಇನ್ನಾ ಕಳಿಸಿಲ್ಲೇನೆ ಗೌರಿ, ಕ್ವಾಣ್ಯಾಗೆ? ಇಷ್ಟ್ಯಾಕೆ ತಡ ಮಾಡ್ತೀರೆ?"

ಬಾಳ ಕೋಣೆಯಲ್ಲಿ ಹೋಗುವದಿಲ್ಲೆಂದು ಹಟ ಹಿಡಿದು ಮಲಗಿದ್ದ ವೃತ್ತಾಂತವನ್ನೆಲ್ಲ ಗೌರಮ್ಮ ತಿಳಿಸಿದಳು.

"ಅದ್ಯಾಕಂತೆ ಹಟ, ಈ ಹುಡುಗ ಮುಂಡೇವು ಹೀಗೇ ಮಾಡೋದು, ಒಳ್ಳೆ ಆಯ್ತದ ಹೊತ್ತಿನಾಗೆ, ನಾನೆಲ್ಲ ಒಪ್ಪಸತೀನಿ ನಿಂದ್ರು ಎಲ್ಲಿ, ಇದ್ದಾನೆಲ್ಲಿ ಬಾಳ."

ಬಚ್ಚಲ ಮನೆಯ ಕಡೆ ಧಾವಿಸಿದರು ತಾರವ್ವ ಹಳೆಯ ಹುಳಿನೆನಪುಗಳನ್ನು ಕೇಳದವರಿಗೂ ಹೇಳುತ್ತ

"ನನ್ನ ಗಂಡನೂ ಹೀಗೇ ಮಾಡಿದ್ರು ನಮ್ಮವ್ವ, ಎಪ್ಪತ್ತೈದು ವರ್ಷದ ಹಿಂದೆ, ಮನಿ ಮಂದೆಲ್ಲ ಕೈಕಾಲು ಕಟ್ಟಿಗೊಂಡ್ರೂ ಬರಲಿಲ್ಲ. ಹನ್ನೆರಡು ಹೋಳಿಗಿ ಅಚ್ಚೇರಕ್ಕಿ ಅನ್ನ ಉಂಡು ಕೈತೊಳೆದು ಎದ್ದ ಮ್ಯಾಲೆ, ತಿನಲಿಕ್ಕೆ ಬೇಕು ಅಂತ ಎರಡು ಬೆಲ್ಲದ ಅಚ್ಚು ಬೇಡಿದರಂತೆ ನಮ್ಮ ಅತ್ತಿನ್ನ. ರಾತ್ರಿ ಕ್ವಾಣ್ಯಾಗೆ ಹ್ಯಾಗೂ ಇಟ್ಟಿರತಾರೆ ಬೆಲ್ಲಾನ, ಆಗ ತಿನ್ನೋ ರಂಡೇಗಂಡ ಅಂದ್ರೂ ಕೇಳಲಿಲ್ಲಂತೆ. ನಮ್ಮ ಮಾವನವರು–ಅವರಿಗಂತೂ ಮೂಗಿನಮ್ಯಾಲೆ ಸಿಟ್ಟು–ಶಗಣಿ ತಿನ್ನು ಶಗಣಿ ಅಂದರು ಅಂತ...."

"ಬಾಳಪ್ಪಾ, ಏಳಪ್ಪಾ ನನ ದೇವರು, ಹೀಗೆಲ್ಲ ಮಾಡಬಾರದು, ಏಳು ನೋಡು ನಿಮ್ಮಮ್ಮ ಗೌರಿ ಸಣ್ಣ ಮಾರಿ ಮಾಡ್ಯಾಳೆ ಪಾಪ! ಏನು ಮಾಡೀತು ಆ ಹುಡುಗಿ, ಅವನೆಲ್ಲಿ ಹೋದ ಭಾಸ್ಕರ?"

ಆಗ ಆಯಿತು ಗೌರಮ್ಮಳಿಗೆ ಗಂಡನ ನೆನಪು–ತಾರವ್ವನ ಪ್ರಶ್ನೆಗೆ ಯಾರೂ ಉತ್ತರಕೊಡುವ ಗೋಜಿಗೇ ಹೋಗಲಿಲ್ಲ. ಎಷ್ಟೂ ನಿರುತ್ಸಾಹವಿಲ್ಲೆ ಸಾಗಿತು ತಾರವ್ವನ ಪ್ರಯತ್ನ.

"ಏಳು ಮತ್ತೆ ಕ್ವಾಣಿವಳಗೆ ಹೋಗು ಏಳು."

"ನೀನೇ ಹೋಗು ಬೇಕಾದರೆ."

ಚಿನ್ನದಂತಹ ಈ ಮಾತನ್ನಾಡಲು ಬಾಳಪ್ಪ ಬಾಯಿ ತೆಗೆದ.

"ಧಡ್ಡ ಖೋಡಿ, ನಾಡಧಡ್ಡ ಖೋಡಿ. ನಾನು ಯಾವ ಕ್ವಾಣ್ಯಾಗೆ ಹೋಗಲಿ ಇನ್ನ, ಎಲ್ಲಾ ಮುಗಿಸಿ, ಕೈಹಿಡಿದಾತಗೂ ಅಪ್ಪಣಿ ಕೊಡಿಸಿ, ಮುಂಡಾ ಮೋಚಿಗೊಂಡು ಕೂತೀನೀ, ಯಾಕೆ ಒಲ್ಲೆ ಅಂತೀದಿ, ಅದನಾರೆ ಹೇಳೋ ಬಾಳ, ನಿನ್ನ ಹೆಣ್ತೀ ಹತ್ತಿರ ನೀನು ಹೋಗಲಿಕ್ಕೆ....."

ಛಟ್ಟನೆ ಎದ್ದು ಕುಳಿತು ಕೇಳಿದ ಬಾಳಪ್ಪ ಅಣಕಿನ ದನಿಯಲ್ಲಿ:

"ಹೂಂ, ನನ್ನ ಹೇಣ್ತಿ, ಈಗ ನನ್ನ ಹೇಣ್ತಿ. ಮಧ್ಯಾನದಾಗೆ ಸರಸಿ ಯಾರ ಹೆಣ್ತಿ ಆಗಿದ್ಲಂತೆ? ಆಗ್ಯಾಕೆ ಬೈದ್ಲು ಅವ್ವ ಹಾಗಾದರೆ?

ತಾರವ್ವಳಿಗೆ ಸಂದರ್ಭವೇ ಅರ್ಥವಾಗಲಿಲ್ಲ. ತಿಳಿಯುವ ಹವ್ಯಾಸಕ್ಕೂ ಹೋಗಲಿಲ್ಲ. ಬಾಳನನ್ನು ರಮಿಸುತ್ತಲೇ ಕುಳಿತಳು.

ಭಾಸ್ಕರಭಟ್ಟರ ಸ್ನೇಹಿತರಾದ ಕೆಂಪು ಅಣ್ಣಂಭಟ್ಟರು, ಉದ್ದಿನವಡೆ ಉದ್ದಾನಯ್ಯ, ಮೂಲೀಮನಿ ಮರ್ದಾನಿ, ಜೈನರ ಭೂಪಾಲಪ್ಪ–ಮುಂತಾದ ಊರ ಎಲ್ಲ ಪ್ರಮುಖರೂ ಬಂದು ಹೇಳಿದರು ಬಾಳಪ್ಪನಿಗೆ ಬುದ್ದಿವಾದವನ್ನು, ಅವರೆಲ್ಲರದೂ ಒಂದೇ ಮಾತು, ಬಾಳಪ್ಪನದೂ ಒಂದೇ ಮಾತು.

"ಹಾಗೆಲ್ಲ ಮಾಡಬಾರದು, ಶೋಬನದ ಕ್ವಾಣೀವಳಗೆ ಹೋಗೋ ಬಾಳಾ."

"ನೀವೇ ಹೋಗಿರಿ ಬೇಕಾದರೆ."

ಹಣಿ ಬಡೆದುಕೊಂಡು, ಒಬ್ಬೊಬ್ಬರೆ ಹೊರಗೆ ಹೊರಟುಬಿಟ್ಟರು. ಅಣ್ಣಂಭಟ್ಟರು ಮಾತ್ರ ಮನಸ್ಸಿನಲ್ಲಿ ಅಂದುಕೊಂಡು, ತೃಪ್ತಿಯಾಗದೆ ಬಾಳಪ್ಪನ ಇದಿರಿಗೇ ಹೇಳಿ ನಡೆದರು

"ಮೂಢೋ, ಮೂರ್ಖೋ, ಗಾರ್ಧಭೋ ಏಕ ರಾಶಿ"

ಸುಲಭವಾಗಿ ಸೋಲನ್ನೊಪ್ಪಿಕೊಳ್ಳುವ ಮುದುಕಿ ಅಲ್ಲವಲ್ಲ ತಾರವ್ವ! ಕುಳಿತಲ್ಲಿಂದ ಕದಲದೆ, ಆಡಿದ ಮಾತನ್ನೇ ಆಡುತ್ತ, ಭಾರ್ಯಾ ಸತ್ಯಾಗ್ರಹಿಯಾದ ಬಾಳಪ್ಪನನ್ನು ರಮಿಸಿದಳು

"ಏಳಪ್ಪಾ, ನನ್ನ ಕಂದಾ. ನಾಳೆ ಸಂಜೀಗೆ ನನ್ನ ಮನಿಗೆ ಬಾ. ನಾನು ಮಾಡಿಕೊಂಬೊ ವಗ್ಗರಣಿ ಹಿಟ್ಟಿನಾಗೆ ಅರ್ಧ ಕೊಡ್ಡೀನಿ ನಿನಗೆ, ಏಳಪ್ಪಾ ಏಳು...."

ಬಾಳಪ್ಪನ ತಲೆ ಮುಖಗಳ ಮೇಲೆಲ್ಲಾ ಕೈಯಾಡುತ್ತ, ಗಲ್ಲ ಹಿಡಿಯುತ್ತ ಪ್ರೀತಿಯ ದರ್ಶನ ಮಾಡಿತು ಆ ಅಜ್ಜಿ. ಮುಖ ಕೆಳಗೆ ಮಾಡಿ ಬೋರಲು ಮಲಗಿದ್ದ ಬಾಳನ ಬೆನ್ನ ಮೇಲೆಯೂ ಕೈಯಾಡಿಸಿದಳು. ನಡುವಿನಲ್ಲಿ ಅದೇನೋ ಕೈಗೆ ತಾಗಿತು.

"ಇದೇನೋ ಬಾಳ ಟೊಂಕದಾಗೆ, ಏನೋ ಡಬ್ಬಿ...."

ತಾರವ್ವಳ ಮಾತು ಬಾಯಿಂದ ಹೊರ ಬೀಳುವ ಮುಂದೆಯೇ ಗರ್ರೆಂದು ಹೊರಳಿ ಛಟಕ್ಕನೆ ಎದ್ದು ಕುಳಿತ ಬಾಳ, ಜಾತ್ರೆಯ ಬೊಂಬೆಯಂತೆ. ಇಂಗಿನ ಡಬ್ಬೆ ಇತರರ ಕಣ್ಣಿಗೆ ಬೀಳಬಾರದೆಂದು ಗುಂಡ ಹೇಳಿದುದು ನೆನಪಿತ್ತು ಬಾಳಪ್ಪನಿಗೆ.

"ಹೂಂ. ಹಾಗೆ ಬಾ ನನ್ನ ದೇವರೂ, ನನ್ನ ಭಂಗಾರಾ. ಅಷ್ಟಷ್ಟಕ್ಕೆಲ್ಲ ಸಿಟ್ಟಾಗಬಾರದಪ್ಪಾ, ಜಾಣ ಅಲ್ಲೇ ನೀನು....."



ಬುದ್ದಿ ಅನುಭವಗಳನ್ನೆಲ್ಲಾ ವ್ಯಯ ಮಾಡಿ ಬಾಳನನ್ನು ಎಬ್ಬಿಸಿದಳು ತಾರವ್ವ.

ಕೋಣೆಯ ಒಳಗೆ ಹೋಗುವ ಮುನ್ನ ಬಾಳ ಒಂದು ಕರಾರು ಮಾಡಿದ

"ಕ್ವಾಣೀವಳಗೆ ಅವ್ವ ಇರಬಾರದು, ಹಾಗಾದರೇ ನಾನು ಹೊಗ್ತೀನಿ."

"ಆಕಿ ಯಾಕೆ ಅಲ್ಲೆ ಇರತಾಳೊ, ಹುಚುಖೋಡಿ, ಇಲ್ಲ ಬಾರಪ್ಪಾ, ಬಾ."

ಅಂತೂ ತಾರವ್ವ ಗೆದ್ದಳು ಕೊನೆಗೂ.

ಕೋಣೆಯ ಬಾಗಿಲು ಧುಪ್ಪೆಂದು ಬಿದ್ದಿತು. ಒಳ ಚಿಲಕ ಹಾಕಿದ ಸಪ್ಪಳವಾಯಿತು.

ಇದನ್ನು ಕೇಳಿಯಾದರೂ ಪ್ರಾಣಪಕ್ಷಿ ಹಾರಿಹೋಗಬಹುದೆಂದು ಸಾವಿನ ದಾರಿ ನೋಡುತ್ತ ಅಡಕಲ ಕೋಣೆಲ್ಲಿ ಕುಳಿತಿದ್ದ ಅಚ್ಚಕ್ಕಳಿಗೆ ಅತಿ ನಿರಾಶೆಯಾಯಿತು. ಇನ್ನೂ ಅನುಮಾನವೇ ಅವಳಿಗೆ ತಾನು ಸತ್ತಿರಬಹುದೆಂದು. ಎದೆಯ ಮೇಲೆ ಕೈಯಿಕ್ಕಿಗೊಂಡಳು. ಹೃದಯಕ್ರಿಯೆ ಡಬಡಬ ಸಾಗಿಯೇ ಇದ್ದಿತು. 'ಇನ್ನೂ ಏನೆನನ್ನು ನೋಡಬೇಕೊ, ಈ ಪಾಪಿ' ಎಂದುಕೊಂಡಳು.

ಐದು ನಿಮಿಷಗಳು ಸಂದವು.

"ಸರಸ್ವತಿಯ ದೇಹ ಬಾಳಪ್ಪನ ಹೆಂಡತಿಯಾಯಿತು."

ಬೇಡ ಎನ್ನಿಸಿದರೂ ಈ ಮಾತನ್ನು ಅದೆಷ್ಟೋ ಬಾರಿ ಅಂದುಕೊಂಡಳು ದುರ್ದೈವೀ ಅಚ್ಚಕ್ಕ.

ಧುಪ್ಪೆಂದು ಯರೋ ಬಿದ್ದ ಸಪ್ಪಳವಾಯಿತು ಕೋಣೆಯಲ್ಲಿ ಸರಸ್ವತಿ ಕೆಟ್ಟ ದನಿಯಿಂದ ಚೀರಿದಳು.

"ಏನಾಯಿತು, ಏನಾಯಿತು?"

ಓಡಿಬಂದರು ಹೊರಕುಳಿತವರು, ಗೌರಮ್ಮ ಬಾಗಿಲಿಗೆ ಬಾಯಿ ಇಕ್ಕಿ, ಸಿಡಿಪಿಡಿ ಮಾಡಿ ಸೊಸೆಯನ್ನು ಗದರಿಸಿ ನುಡಿದಳು.

"ತೆಪ್ಪಗಿರೇ ಹುಚ್ಚು ಲವುಡಿ, ಅವನೇನು ಹುಲೀನಾ, ಸಿಂಹನಾ...."

ಧಿಡಿಲ್ಲೆಂದು ಕೋಣೆಯ ಬಾಗಿಲು ತೆರೆಯಿತು.

ಗೌರಮ್ಮ ಕಂಡ ದೃಶ್ಯವು ಅಧ್ಭುತವಾಗಿದ್ದಿತು; ಅವಳನ್ನು ಅಂಜಿಸಿ ಅಳುವಂತೆ ಮಾಡಿತು.

ಬಾಳಪ್ಪ ಆ ಉದ್ದಕ್ಕೂ ನೆಲದ ಮೇಲೆ ಬಿದ್ದಿದ್ದ, ಮುಖ ಮೇಲೆ ಮಾಡಿ ಬಾಯಿಂದ ಜೊಲ್ಲು ಸೋರಿ ಗಲ್ಲದ ಮೇಲೆ ಹರಿದಿತ್ತು, ಪ್ರಜ್ಞೆ ಇರಲಿಲ್ಲ.

"ಏನು ಮಾಡಿಬಿಟ್ಟೆವ್ವಾ ಕೂಸಿಗೆ, ಮಾಟಗಾತಿ"

ದುರುದುರು ನೋಡಿದಳು ಗೌರಮ್ಮ, ಭಯದಿಂದ ಕಂಪಿಸುತ್ತ ಮೂಲೆಯಲ್ಲಿ ನಿಂತಿದ್ದ ಸರಸ್ವತಿಯನ್ನು.

"ನನಗಾಗಲೇ ಅನುಮಾನ ಆಗಿತ್ತು. ಆ ರಂಡೇಮಗ ಗಣಪ್ಪ ಏನೊ ಮಾಡಸ್ಯಾನೆ–ಮಾಟೋ ಮದ್ದೋ–ಅಂತ, ಇಲ್ಲಾ ಆ ಚಂಡಾಲ ಬ್ರಹ್ಮಪ್ಪನೇ ದೆವ್ವ ಆಗಿ ಕಾಡ್ತಾನೋ ಏನು ಮಣ್ಣೋ...."

ಗೌರಮ್ಮ ಸ್ವೇಚ್ಛೆಯಾಗಿ ನಾಳಗೆಯನ್ನು ಹರಿಬಿಟ್ಟು ಮಗನ ಶೈತ್ಯೋಪಚಾರಕ್ಕೆ ತೊಡಗಿದಳು. ಅವರಿವರು ಬಂದರು. ಸರಸ್ವತಿಯನ್ನು ತನ್ನ ತಾಯಿಯ ಕೋಣೆಗೆ ಕಳಿಸಿ, ಬಾಳಪ್ಪನನ್ನು ಎತ್ತಿ ಮಂಚದ ಮೇಲೆ ಹಾಕಿದರು. ಮೂಗಿಗೆ ಬೆರಳಿಟ್ಟು ನೋಡಿದರು. ನಾಡಿ ಹಿಡಿದು ನೋಡಿದರು.

ಸರಸ್ವತಿಯ ಮಾಂಗಲ್ಯದ ಪುಣ್ಯ ಅಷ್ಟಿಷ್ಟೆ!

"ಇದೇನು ವಾಸನೆ, ಇದೇನು ವಾಸನೆ" ಎಲ್ಲರ ಬಾಯಲ್ಲಿಯೂ ಇದೇ ಮಾತು

"ಅದೇನು ಬಾಯೊಳಗೆ?"

ಗುಂಪಿನಲ್ಲಿದ್ದ ಕೃಷ್ಣಾಚಾರಿ ಕೇಳಿದ, ಬಾಳಪ್ಪ ದವಡೆ ಒಂದೇ ಬದಿಯಲ್ಲಿ ಉಬ್ಬಿದುದನ್ನು ಬೆರಳಿನಿಂದ ತೋರಿ.

ಯಾರಿಗೆ ಗೊತ್ತು ಆ ಕೃಷ್ಣಾಚಾರಿಯೇ ಬಾಳಪ್ಪನಿಗೆ ಗುಂಡನಾಗಿ ಮಧ್ಯಾಹ್ನ ಈ ಸಲಹೆ ಕೊಟ್ಟದ್ದು?

ಬಾಯಲ್ಲಿ ಬೆರಳಿಕ್ಕಿ ಹೊರ ತೆಗೆದ; ದೊಡ್ಡ ಇಂಗಿನ ಉಂಡೆ ನೆಲದ ಮೇಲೆ ಉರುಳಿ ಬಿದ್ದಿತು.

"ಇಂಗು ಯಾಕೆ ದವಡ್ಯಾಗೆ ಹಿಡಿದಿದ್ದನೋ, ಇವನ ಮನಿ ಹಾಳಾಗ, ಅದಕ್ಕೇ ಪಿತ್ತ ಆಗ್ಯದೆ, ಎಚ್ಚರದಪ್ಪಿ ಕೆಳಗೆ ಬಿದ್ದಾನೆ."

ಕುಚೇಷ್ಟೆಯ ಕೃಷ್ಣಾಚಾರ್ಯರು ಸರ್ವಸಮ್ಮತವಾದ ಅಭಿಪ್ರಾಯವನ್ನು ಹೇಳಿ ಬೇಗ ಮನೆಗೆ ನಡೆದರು, ಬಾಳನಿಗೆ ಎಚ್ಚರವಾಗಿ ಅವನು ತನ್ನನ್ನು ಗುರುತಿಸಬಹುದೆಂಬ ಅಂಜಿಕೆಯಿಂದ. ಎಲ್ಲರೂ ಮನೆಗಳಿಗೆ ಹೊರಟರು.

ಬಾಳನಿಗೂ ಎಚ್ಚರವಾಯಿತು. ಬೆಳಗೂ ಆಯಿತು.



## ೨೧

ಎಲ್ಲವೂ ತಾನು ಅಂದುಕೊಂಡಂತೆ ಆಯಿತು ಎಂಬ ಸಮಾಧಾನವೇನೋ ಆಯಿತು ಗೌರಮ್ಮಳ ಮನಸ್ಸಿಗೆ ಆದರೆ....

ಅಂದು ಮಧ್ಯಾಹ್ನ ಮನೆಯಿಂದ ಹೊರಬಿದ್ದಿದ್ದ ಭಾಸ್ಕರಭಟ್ಟರು ಮೂರು ದಿನಗಳಾದರೂ ಮರಳಿ ಬರಲೇ ಇಲ್ಲ. ಅದರಿಂದ ಗೌರಮ್ಮಳಿಗೇನೂ ಕೊರತೆಯಾಗಲಿಲ್ಲ. ಅದರ ಬದಲು ಅಕ್ಕಿಯ ಉಳಿತಾವಾಯಿತೆಂದು ಒಳಗೊಳಗೆ ಸಮತಸಗೊಂಡಳು. ಅವರಿವರು ಬಂದು ಕೇಳಿದಾಗ ಮಾತ್ರ ನಾಲಗೆ ಕೊಂಚ ತೊಡರುತ್ತಿದ್ದಿತು.

"ಅಪ್ಪ ಎಲ್ಲಿಗೆ ಹೋಗ್ಯಾನವ್ವಾ?"

ಬಾಳನೇ ಕಳಿದ ಮೂರನೆಯ ದಿನ, ಬೆನ್ನ ಕೆಳಗೆ ಮೂಡಿದ್ದ ಬಾಸುಂಡೆಗಳ ಮೇಲೆ ಬೆರಳಾಡಿಸಿಗೊಳ್ಳುತ್ತ.

"ಅವರು ಕಾಶೀರಾಮೇಶ್ವರನ ಕಡಿ ಹೋಗ್ಯಾರಪ್ಪಾ"

ಗೌರಮ್ಮ ಇದೇ ಮಾತನ್ನೇ ಕೇಳಿದವರಿಗೆಲ್ಲ ಹೇಳಿದಳು.

ಅವಳ ಜೀವನದಲ್ಲಿ ಇನ್ನೊಂದು ಕುರಿಕುರಿ ಬಹುದಿನಗಳ ವರೆಗೂ ಉಳಿಯಿತು. ತನಗೇನೋ ಸೊಸೆ ಆದಳಾಗಲಿ, ಸರಸ್ವತಿ ಮಾತ್ರ ಇನ್ನೂ ಬಾಳಪ್ಪನಿಗೆ ಹೆಂಡತಿಯೇ ಆಗಿರಲಿಲ್ಲ. ಮಗನನ್ನು ಮೇಲಿಂದ ಮೇಲೆ ಕೇಳಿ, ತಿಳಿದುಕೊಂಡಳು ಗೌರಮ್ಮ ಈ ವಿಷಾದವಾದ ವಿಷಯವನ್ನು.

ಬೆಳಗಾದ ಕೂಡಲೆ ಬಾಳಪ್ಪನ ಮುಖವನ್ನು ಅರ್ಥಗರ್ಭಿತವಾಗಿ ನೋಡುವದು ನಿತ್ಯದ ಕರ್ಮವಾಯಿತು. ಅವನದೇನೋ ಒಂದೇ ಉತ್ತರ 'ಊಹುಂ' ಎಂದು.

ಹೆಂಡತಿ ಮನೆಗೆ ಬಂದು ವಾರಗಳು ಸಂದುವು. ಬಾಳನಿಗೇನೂ ಸುಖವಿಲ್ಲ. ಗೌರಮ್ಮ ಅತ್ತೆಯ ಅಧಿಕಾರವನ್ನು ಚಲಾಯಿಸಿದಳು.

"ಇಪ್ಪತ್ನಾಲ್ಕು ತಾಸೂನೂ ಅಡಿಗೀ ಮನ್ಯಾಗೆ ಕೂತು ಏನು ಮಾಡ್ತೀಯೇ ಸರಸೀ? ಹೆಗ್ಗಣ ಮೇದ ಹಾಗೆ ಮೆದ್ದು, ಮನೀ ಖಾಲಿ ಮಾಡಿಡಬ್ಯಾಡ, ಬಾ ಒಂದಿಷ್ಟು ಹೊರಗೆ."

ಬಾಳಪ್ಪ ಗಂಡನ ಹಕ್ಕುಗಳನ್ನು ಜಾರಿಯಲಲಿ ತಂದ.

"ಯಾವನಾದರೂ ಹೇಳಿದ್ದನೇನು ಬರತೀನಿ ಅಂತ. ಪಡಸಾಲೀಗೆ ಬಂದು ಕೂತೀಯಲ್ಲ ತಲಬಾಗಿಲು ಕಡೆ ನೋಡಿಕೋತ? ಇಲ್ಲಾ ಆ ನಿನ್ನ ಗಣಪ್ಪಾ.... ನಡಿ ಒಳಗೆ."

ಒಂದು ಸಂಜೆ ದೀಪವನ್ನು ಹಚ್ಚಿಕ್ಕಿ, ಸರಸ್ವತಿ ತುಳಸಿಗೆ, ಹೊಸ್ತಿಲಿಗೆ, ಕತ್ತಿನಲ್ಲಿದ್ದ ಮಾಂಗಲ್ಯಕ್ಕೆ ಕುಂಕುಮವನ್ನು ಹಚ್ಚಿ ಅಡುಗೆಗೆ ಒಲೆ ಹೊತ್ತಿಸಿದಳು. ಯಾವ ಯಾವದೋ ಸ್ಮರಣೆಗೆ ಬಂದಿತು ಅದೇಕೋ ಅಂದು. ಅವಳಲ್ಲಿ ಸುಷುಪ್ತಳಾಗಿದ್ದ ಸರಸ್ವತಿ ಇನ್ನೂ ಸತ್ತಿರಲಿಲ್ಲ? ಬೇಸಿಗೆಯ ಬಿಸಿಲಿಗೆ ಬಾವಿ–ಕೆರೆಗಳಲ್ಲಿಯ ನೀರು ಹೋಗಬಹುದಾಗಲಿ, ಅಂತರ್ಗಂಗೆಯ ಸೆಲೆ ಬತ್ತುವದೇ? ಕವಿಕುಲ ಸಾರ್ವಭೌಮನಾದ ಕಾಳಿದಾಸನ ರಘುವಂಶದಲ್ಲಿಯ ಹಲವು ಶ್ಲೋಕಗಳು ಇದ್ದಕ್ಕಿದ್ದಂತೆ ಅನಿರೀಕ್ಷಿವಾಗಿ ಹೊರಚಿಮ್ಮಿದವು ಅವಳ ಮುಖಕಮಲದಿಂದ. ಚಿಲುಮೆಯಿಂದ ಪುಟಕಿಸುವ ಶುಭ್ರ ಜಲದಂತೆ, ಅವಳರಿಯದೆಯೇ ಅವಳು ಹಾಡಿಕೊಂಡಳು. ಕಂಠವು ಗಂಭೀರವಾಯಿತು. ಮಾಧುರ್ಯ ಹೆಚ್ಚಿತು. ಮೇಲಿನ ಸ್ಥಾಯಕ್ಕೆ ಏರಿತು. ಸಾಕ್ಷಾತ್ ಕಾಳಿದಾಸನ ಆತ್ಮವು ಕುಳಿತಲ್ಲಿಯೇ ತಲೆದೂಗಿತು.

ಕಾಗೆಗಳ ಗುಂಪಿನಲ್ಲಿ ಕೋಕಿಲೆಯ ಮರಿ ಬದುಕಬಲ್ಲದೆ? ಒಳಬಂದ ಗೌರಮ್ಮಳ ದನಿ ಸಿಡಿಲಿನಂತೆ ಬಡಿಯಿತು

"ನೀನೇನು ಸೂಳೆ ಏನೆ ಸರಸೀ ಹಾಡಲಿಕ್ಕೆ? ಇದು ಮರ್‍ಯಾದಸ್ತರ ಮನೆ, ತಿಳೀತೇ? ಇನ್ನೊಮ್ಮೆ ಬಾಯಿ ತಗಿ ನೋಡು, ಬರಿ ಹಾಕ್ತೀನಿ ಬಾಯಿಮ್ಯಾಲೆ, ನಾಗಸಾನೇರ ಹಾಗೆ ಅದೇನೇ ಹಗಲೆಲ್ಲ ತನನನ?"

ಇನ್ನೊಂದು ದಿನ ಒಬ್ಬಳೇ ಕುಳಿತು ಕುಳಿತು ಬಹು ಬೇಸರವಾಗಿದ್ದಿತು ಸರಸ್ವತಿಯ ಮನಸ್ಸಿಗೆ. ತನ್ನ ಪೆಟ್ಟಿಗೆಯಲ್ಲಿದ್ದ ತೊರವೆ ರಾಮಾಯಣವನ್ನು ಹೊರ ತೆಗೆದಳು, 'ಸೀತಾವನವಾಸ'ವನ್ನು ನೋಡುತ್ತ ಕುಳಿತಳು. ಈ ಮಹಾಪರಾಧಕ್ಕೂ ಚೆನ್ನಾಗಿ ಶಿಕ್ಷೆ ಆಯಿತು ಅವಳಿಗೆ.

"ಪುಸ್ತಕವೊಂದು ಮುಟ್ಟು ನೋಡು, ಕೈ ಬೆಟ್ಟು ಮುರಿದು ಇಡ್ತೀನಿ."

ಪತಿದೇವನಾದ ಬಾಳಪ್ಪ ಎಚ್ಚರಿಕೆ ಕೊಟ್ಟು, ರಾಮಾಯಣಕ್ಕೆ ದಹನ ಸಂಸ್ಕಾರ ಮಾಡಿದ, ಒಲೆಯಲ್ಲಿ ಎಸೆದು.

ಒಂದು ಸಂಜೆ ಗೌರಮ್ಮ ಮಗನನ್ನು ಕುಳ್ಳಿರಿಸಿಕೊಂಡು ಚೆನ್ನಾಗಿ ಬೈದು, ಛೀ ಮಾಡಿ ಕಿವಿಹಿಂಡಿ, ಹೇಳಿದರು. ಬಾಳಪ್ಪ ಅಂದು ಆತ್ರಿ ಹೊಸ ಧೈರ್ಯ, ನಿರ್ಧಾರಗಳಿಂದ ಶಯ್ಯಾಗೃಹವನ್ನು ಪ್ರವೇಶಿಸಿದ.

ಐದು ನಿಮಿಷಗಳಲ್ಲಿಯೇ ಅಳುತ್ತ ಹೊಬಂದ ಬಾಳಭೂಪ.

"ಏನಾಯಿತೋ ಬಾಳಾ, ಅಳತೀ ಯಾಕೋ?"

ತಲೆ ಮೇಲೆ ಕೈಯಾಡಿ ಕೇಳಿದಳು ಗೌರಮ್ಮ.



ಒಂದೇ ಒಂದು ಮುತ್ತಿನಂತಹ ಮಾತನ್ನಾಡಿ, ಜಗತ್ತಿಗೇ ಸಾಕಾಗಿ ಉಳಿಯುವಷ್ಟು ನಗೆಯನ್ನು ಬೀರಿದ ಬಾಳಪ್ಪ. ಅಳುತ್ತಲೇ ಉತ್ತರಿಸಿದ:

"ಚೂ....ಟು....ತಾ....ಳೆ."

ತಾರವ್ವ ಲೋಭಾನವನ್ನು ಮಂತ್ರಿಸಿಕೊಟ್ಟಳು, ಪೀರಲು ದೇವರಿಂದ ಸಕ್ಕರೆ ಓದಿಸಿ ತಂದಾಯಿತು; ಹುಲಿಗೆಮ್ಮನ ಭಾಂಡಾರ ಬಂದಿತು, ಹಯಾತ್ ಶಾಸ್ತ್ರಿ ಪಂಚಾಂಗ ನೋಡಿ ಗ್ರಹಚಾರ ಹೇಳಿದ. ಭೊಂಭೊಂಸಾಬಿ ತಾಯದ ಕಟ್ಟಿದ, ದೆವ್ವದ ರಾಮಪ್ಪ ಅಷ್ಟದಿಗ್ಬಂಧನ ಮಾಡಿದ ಮನೆಗೆ, ಬೆಳ್ಳೊಳ್ಳಿ ಶಂಭುಲಿಂಗ ವಿಭೂತಿ ಮಂತ್ರಿಸಿ ಬಾಳನ ಮುಖಕ್ಕೆ ಮೂರು ಬಾರಿ ಊದಿದ, ಹೊಸಪೇಟೆಯ ಮಲಯಾಳಿ, ಹೋಟೆಲಕಾಕಾ ರಂಗ ಹೂಡಿ ನೋಡಿದ. ಸೇರು ಅಕ್ಕಿ ಅನ್ನ, ಒಂಟಿ ಹೊಸಪಂಚೆ, ಏಳು ಲಿಂಬೆಹಣ್ಣು, ಓಕಳಿ, ಏಳು ತಾಮ್ರದ ಕಾಳಾಣೆಗಳು ಇವೆಲ್ಲವನ್ನೂ ಗೋಕರ್ಣೇಶ್ವರನ ಗುಡಿಯ ಹತ್ತಿರ ಅಮಾವಾಸ್ಯೆ ರಾತ್ರಿ ಇಟ್ಟು ಬಂದುದಾಯಿತು. ಆದರೂ ವಿವಾಹಿತ ಬಾಳಪ್ಪನಿಗೆ ಹೊರಕಟ್ಟೆಯ ಮೇಲೆ ಮಲಗುವದು ತಪ್ಪಲಿಲ್ಲ. ಒಂದೆರಡು ರಾತ್ರ ಅದೆಲ್ಲಿಗೋ ಹೋಗಿ ಬಂದ ಅತಿಕಾಮ ಬಾಳಪ್ಪ ಯಾರಿಗೂ ತಿಳಿಯದೆ.

ಬಾಳಪ್ಪ ಒಂದು ವೇಳೆ ಈ ಕಡ್ಡಾಯದ ಬ್ರಹ್ಮಚರ್ಯದ ಶಿಕ್ಷೆಯನ್ನು ಮನೆಯಲ್ಲಿ ಮಾತ್ರವೇ ಅನುಭವಿಸಲು ಸಿದ್ಧನಾದರೂ, ಗೌರಮ್ಮ ಒಂದು ಒಪ್ಪಬೇಕಲ್ಲ? ಎಲ್ಲ ಉಪಾಯಗಳೂ ನಿರರ್ಥಕವಾದ ನಂತರಗೌರಮ್ಮ ಬಾಳಪ್ಪನಿಗೆ ನಿತ್ಯದ ಕಾರ್ಯಕ್ರಮವನ್ನು ಬಾಯಿಪಾಠ ಮಾಡಿಸಿ, ಪಕ್ಕಾ ಗಂಡನಾಗಲು ಕಲಿಸಿಕೊಟ್ಟಳು. ಅಚ್ಚಕ್ಕ ಕೂಡ ಹೇಗೂ ತನ್ನ ಮನೆಗೆ ಹೋಗಿದ್ದಳು.

ಕೈಯಿಂದ ಕೆನ್ನೆಗೆ ನಾಲ್ಕು, ಬೆನ್ನಿಗೆ ಆರು, ಕಟ್ಟಿಗೆಯಿಂದ ಮೊಳಕಾಲ ಚಿಪ್ಪಿಗೆ ಮೂರು ಏಟುಗಳನ್ನು ನಿತ್ಯವೂ ಕೊಡಲು ಸುರುಮಾಡಿದ. ಎರಡೂ ತೊಡೆಗಳನ್ನು ಚೆನ್ನಾಗಿ ಚೂಟಿಟ್ಟು ಕಳುತ್ತಿದ್ದ:

"ಗಣಪತಿ ಹೀಗೆಲ್ಲ ಮಾಡ್ತಿದ್ದನೇನೆ?"

ಇದೆಲ್ಲವೂ ಸಾಕಾತ್ ಗೌರಮ್ಮ ಮಾತೆಯ ಸನ್ನಿಧಾನದಲಿಯೇ, ಆಕೆಯ ನೇತೃತ್ವ, ಅಧ್ಯಕ್ಷತೆ, ಹಿರಿಯತನಗಳಲ್ಲಿಯೇ ಜರುಗುತ್ತಿದ್ದುದರಿಂದ ಸರಸ್ವತಿಗೆ ತಿರುಗೆ ಬೀಳಲು ಸಹ ಆಗುತ್ತಿರಲಿಲ್ಲ. ಮಕ್ಕಳಂತೆ ಕೈಕಟ್ಟಿ ಅದೆಷ್ಟೋ ಬಾರಿ ಪೆಟ್ಟುಗಳನ್ನು ತಿಂದಳು. ಒಂದು ಬಾರಿ ಕೂಗಲು ಯತ್ನಿಸಿದಾಗ ಸ್ವತಃ ಗೌರಮ್ಮಳೇ ಬಾಯಲ್ಲಿ ಬಟ್ಟೆಯನ್ನು ತುರುಕಿದಳು.

"ಹೊಡಿಯೋ ಬಾಳಾ ಆ ಕಟಗೀ ತೆಗೊಂಡು."

ಮಗನನ್ನು ಪ್ರೇರೇಪಿಸಿದಳು. ಗೌರಮ್ಮ.

ಮಾತೃದೇವೋ ಭವ! ಬಾಳಪ್ಪ ಅಕ್ಷರಶಃ ಪರಿಪಾಲಿಸಿದ, ಹೇಳಿದುದಕ್ಕಿಂತಲೂ ಇನ್ನೂ ಚೆನ್ನಾಗಿಯೇ.

ಸರಸ್ವತಿ ಉಸುರು ಕಟ್ಟಿದಂತಾಗಿ ಒದ್ದಾಡಿದಳು. ಬಾಳಪ್ಪ ಬಡಿಗೆಯ ಏಟು ಬೆನ್ನಿಗೆ ಸರಿ ಇಟ್ಟಿದ್ದರೂ ತಲೆಗೆ ಬಿದ್ದಿತು ಒಂದೇ ಪೆಟ್ಟಿಗೆ ಸರಸ್ವತಿ ಸ್ಮೃತಿ ತಪ್ಪಿ ಬಿದ್ದಳು. ಇಂತಹ ಸುಸಮಯಕ್ಕಾಗಿಯೇ ವಾರಗಳಿಂದ ಕಾದಿದ್ದ ಬಾಳಪ್ಪ. ಬಾಳಪ್ಪ ಈ ಚಿನ್ನದಂತಹ ಯೋಗವನ್ನು ಕಳೆದುಕೊಳ್ಳುವನೇ?

ಗೌರಮ್ಮ ಹೊರಗೆ ಹೋದಳು. ಬಾಳಪ್ಪ ಬಾಗಿಲನ್ನು ಹಾಕಿಕೊಂಡ

* * * *

ಸರಸ್ವತಿ ಬಸುರಿ ಎಂದು ಕಾಗದ ಬಂದಿತು ಅಚ್ಚಕ್ಕಳಿಗೆ ಯಾವ ವಾರ್ತಗಾಗಿ ಎಲ್ಲ ಹೆಣ್ಣಿನ ತಾಯಂದಿರು ಕಾದಿರುತ್ತಾರೆಯೋ, ಯಾವ ವಾರ್ತೆ ಬರಲೋಸುಗ ಅನೇಕ ತಾಯಂದಿರು ನೂರಾರು ದೇವರುಗಳಿಗೆ ದೀಪ ಹಚ್ಚಿ ಕೈ ಮುಗಿಯುತ್ತಿರುತ್ತಾರೆಯೋ, ಯಾವ ವಾರ್ತೆಯಿಂದ ಕನಸಿನಲ್ಲಿಯ ಮೊಮ್ಮಗಳು ಕಣ್ಣ ಮುಂದೆಯೇ ಬರುತ್ತಾಳೆಯೋ, ಆ ಅದೇ ವಾರ್ತ ಅಚ್ಚಮ್ಮಳಿಗೆ ಹೊಸ ವೇದನೆಯನ್ನು ಉಂಟು ಮಾಡಿತು.

ಸರಸ್ವತಿ ಗರ್ಭವತಿಯಾದಳೂ ಎಂಬ ಪತ್ರ ಬರುವ ಬದಲು ಸರಸ್ವತಿ ಸತ್ತಳು ಎಂದು ಬರಬಾರದಿತ್ತೆ?

ಅಚ್ಚ ಮ್ಮಳ ದುಃಖವು ಅಪಾವಾದದ್ದು. 'ಅಯ್ಯೋ' ಎನ್ನುವವರಿಲ್ಲದಾಗಿತ್ತು ಅವಳ ಬಾಳು. ಕೈಹಿಡಿದ ಗಂಡ ಕಣ್ಣು ಮುಚ್ಚಿದರು. ಜನ್ಮವಿತ್ತದ್ದ ತಂದೆ ಏನಾದರೆಂಬುದೂ ತಿಳಿದಿರಲಿಲ್ಲ. ಮಗನೋಪಾದಿಯಿದ್ದ ಗಣಪತಿ ದೂರದ ದೇಶ ಸೇರಿದ್ದ. ಹುಟ್ಟಿದುದೂ ಒಬ್ಬಳೇ, ಹೋಗುವದೂ ಒಬ್ಬಳೇ ನಿಜ, ಆದರೆ ಬಾಳ ಕಡಲ ನಡುವೆ ಜೊತೆಗಾದರು ಒಬ್ಬರೂ ಬೇಡವೇ?

ತಿಂಗಳ ನಂತ ಇನ್ನೊಂದು ಪತ್ರ ಬರೆಸಿದಳು ಗೌರಮ್ಮ, ಸರಕಾರೀ ತಾಕೀದಿನ ಧ್ವನಿಯಲ್ಲಿ. ಮೊದಲ ಹೆರಿಗೆಯ ವೆಚ್ಚ, ಪೋಷಣೆ ಎಲ್ಲವೂ ತವರುಮನೆಯದೇ. ಆದ ಕಾರಣ ತಕ್ಷಣವೇ ಬಂದು ಸರಸ್ವತಿಯನ್ನು ಕರೆದುಕೊಂಡು ಹೋಗತಕ್ಕದೆಂದೂ, ಅಚ್ಚಮ್ಮ ಹಾಗೆ ಮಾಡದಿದ್ದಲ್ಲಿ ಅವಲ ಮಗಳಿಗೆ ಒದಗಬಹುದಾದ ಕಷ್ಟ-ನಿಷ್ಠುರಗಳಿಗೆ ತಾನಾಗಲಿ ತನ್ನ ಮಗನಾಗಲಿ ಹೊಣೆಯಲ್ಲವೆಂದೂ ಸ್ಪಷ್ಟವಾಗಿ ನಮೂದಿಸಲ್ಪಟ್ಟಿದ್ದಿತು.



ಸರಸ್ವತಿಯನ್ನು ನವಮಾಸಗಳು ಗರ್ಭದಲ್ಲಿ ಹೊತ್ತು ರಕ್ತವನ್ನು ಹಂಚಿಕೊಟ್ಟು ಹೆತ್ತು, ಮುದ್ದಾಡಿ, ಪೋಷಿಸಿ, ಅವಳ ದೇಹ-ಮನಸ್ಸುಗಳನ್ನು ಬೆಳೆಯಿಸಿ, ಎಣ್ಣೆ, ನೀರು, ಅನ್ನ, ಅಕ್ಷರ, ಅರಿಬೆ, ಔಷಧಿ, ಕಣ್ಣು ಮೂಗು ನೋಡಿ, ತನ್ನ ಹೃದಯದ ಇನ್ನೋಂದು ತುಣುಕು ಅವಳು ಎಂದು ತಿಳಿದು, ನುಡಿದು, ಅವಳ ಮೇಲೆ ಪ್ರೀತಿಯ ಮಳೆಯನ್ನೆ ಸುರಿಸಿದ ಆ ಸಾಕ್ಷಾತ್ ತಾಯಿ ಅಚ್ಚಮ್ಮಳಿಗೆ ಅದೇ ಸರಸ್ವತಿ ಮನೆಗೆ ಬರುವಳೆಂದರೆ ಅದೆಷ್ಟೂ ರುಚಿಸಲಿಲ್ಲ. ಹೆತ್ತ ಮಗಳನ್ನು ಮನೆಗೆ ಕರೆತರಲು ಮನಸ್ಸು ಸಮ್ಮತಿಸಲಿಲ್ಲ. ಸರಸ್ವತಿಗೇ ಅಚ್ಚಮ್ಮಳಿಂದ ಸ್ವಾಗತವಿಲ್ಲ. ಸರಸ್ವತಿ ಮಗಳು ನಿಜ, ಆದೆ ಆ ಬಾಳಪ್ಪನ ಪಿಂಡನ್ನು ಧರಿಸಿದ್ದಳು.

ತನಗೆ ಯಾರೂ ಇಲ್ಲವೆಂದು ವ್ಯಥೆ ಪಡುತ್ತಿರುವಾಗ ಸರಸ್ವತಿಗಾದರೂ ಯಾರೂ ಇದ್ದಾರೆ ಎಂಬ ಯೋಚನೆ ಹೊಳೆಯಿತು ಅಚ್ಚಕ್ಕಳಿಗೆ, ತನಗೆ ಓಳ್ಳೆಯ ಮಾತನ್ನಾಡುವವರು  ಇಲ್ಲ ಎಂಬುದಕ್ಕಷ್ಟೆ ಅವಳ ವ್ಯಥೆ, ಸರಸ್ವತಿಗೆ ಒಳ್ಳೆಯ ಮಾತನ್ನಾಡುವವರು ಇಲ್ಲ; ಕೆಟ್ಟ ಮಾತನ್ನು ಆಡುವವರು ಇದ್ದಾರೆ. ಈ ಸಮಯದಲಲಿ ಮಗಳನ್ನು ದೂರವಿರಿಸುವುದು ಅವಿವೇಕವನ್ನು ಅರ್ಥವಾಯಿತು ಅಚ್ಚಕ್ಕಳಿಗೆ.

ಆ ಮನೆಯ ಹೊಸ್ತಿಲಲ್ಲಿ ಕಾಲಿಡುವದಿಲ್ಲ ಸಂಕಲ್ಪವನ್ನು ಮಾಡಿಯೇ ಹೊರಬಿದ್ದಳು ಅಚ್ಚಮ್ಮ ಅಂದು. ಈಗ ಸರಸ್ವತಿಯ ಸಲುವಾಗಿ ಏಕೆ ಸಾಕ್ಷಾತ್ ದೇವರ ಸಲುವಾಗಿಯೂ ಅಲ್ಲಿಗೆ ಹೋಗಲು ಸಿದ್ದಳಿರಲಿಲ್ಲ. ಅಚ್ಚಮ್ಮಳ ಪ್ರತುತ್ತರ ಹೊರಟಿತು.

ಸರಸ್ವತಿಯೊಬಬ್ಬೇ ಬಂಡಿಯಿಂದ ಇಳಿದಳು ಮನೆಯ ಮುಂದೆ, ಎಂದೂ ಮುಚ್ಚಿಯೇ ಇರುತ್ತಿತ್ತು. ಬಾಗಿಲನ್ನು ಬಹುಕಷ್ಟದಿಂದ ದೂಡಿಕೊಂಡು ಒಳಬಂದಳು.

ಕಂಬಕ್ಕೆ ಕುಳಿತಿದ್ದ ಸರಸ್ವತಿಯು ಆದ ನೋವನ್ನು ತೋರ್ಪಡಿಸಿಕೊಳ್ಳದೆ, ಮುಂದೆ ಬಂದು ತಾಯಿಗೆ ನಮಸ್ಕರಿಸಿದಳು.

'ಮುತ್ತೈದಿಯಾಗು, ಸಾವಿತ್ರಿಯಾಗು, ಗಂಡುಮಗನ ತಾಯಿಯಾಗು' ಎಂದು ಸರ್ವೇಸಾಮಾನ್ಯದ ಹರಕೆಯ ಮಾತು ತಾಯಿಯಾದ ಅಚ್ಚಕ್ಕಳ ಬಾಯಿಂದ, ತನ್ನ ಪ್ರೇಮದ ಪುತ್ಥಳಿಯಂತಿದ್ದ ಮಗಳು-ಸರಸ್ವತಿ-ಪ್ರಥಮ ಗರ್ಭವತಿಯಾಗಿ ಬಂದು ನಮಸ್ಕರಿಸಿದಾಗ ಬಾರದಾಯಿತು. ಅಚ್ಚಮ್ಮ ಬೆಲ್ಲವನ್ನು ಜಜ್ಜಿದ ಕಲ್ಲಿನಂತೆ ಕುಳಿತಿದ್ದಳು.

ತಾಯಿಯ ಭಾವವನ್ನು ತಿಳಿಯಲಿಕ್ಕೆ ಮಗಳಿಗೆ ಅದೆಷ್ಟು ಸಮಯ ಬೇಕು? ಸ್ವತಃ ತಾನೇ ತನ್ನ ದೇಹವನ್ನು ದ್ವೇಷಿಸುತ್ತಿದ್ದಳು ಸರಸ್ವತಿ.

ಕುಶಲ ಪ್ರಶ್ನೆ ತಾಯಿ ಮಕ್ಕಳ ಮಧ್ಯೆ ಈ ರೀತಿ ಆರಂಭವಾಯಿತು.
"ಬದುಕಿರುವಿ ಏನಮ್ಮಾ ಸರಸ್ವತಿ?"
"ಸತ್ತಿಲ್ಲ, ಆದ ಕಾರ ಬದುಕಿದ್ದೇನೆ."
ಇಬ್ಬರ ದುಃಖದ ಕೊಡಗಳು ಒಂದೇ ಬಾರಿಗೆ ಒಡೆದುಬಿದ್ದವು. ಒಬ್ಬರನ್ನೊಬ್ಬರು ಅಪ್ಪಿಕೊಂಡು ಗಂಟೆಗಟ್ಟಲೆ ಅತ್ತರು. ಅಳುವದು ಸಾಕು, ಏಳಿರಿ ಎಂದು ಅನ್ನಲು ಮೂರನೆಯ ವ್ಯಕ್ತಿ ಇದ್ದರೆ ತಾನೆ ಮನೆಯಲ್ಲಿ? ಅಳುವಿನ ಕಡಲಲ್ಲಿ ಆಯಿ ಮಗಳು ಮುಳುಮುಳುಗು ಎದ್ದರು. ಕಂಬನಿಯನ್ನು ಸುರಿಸಿಸುರಿಸಿ ಹೊಳೆಯನ್ನೇ ಹರಸಿದರು. ಅತ್ತ ಅತ್ತು ತೃಪ್ತಿಯಾದ ಮೇಲೆ ಸತ್ತವರಂತೆ ಬಿದ್ದರು.
ಅನ್ನದ ನೆನಪೂ ಇಲ್ಲ. ಒಬ್ಬರನ್ನೊಬ್ಬರು ಅಪ್ಪಿಕೊಂಡು ಕುಳಿತಲ್ಲಿಯೇ ಮಲಗಿದರು ಬೆಳಗಾಯಿತು.

## ೨೨

ಹಿಂದಿನ ರಾತ್ರಿ ಅಚ್ಚಮ್ಮ ಮಗಳ ಮುಖವನ್ನು ಅಷ್ಟು ಚೆನ್ನಾಗಿ ಗಮನಿಸಿಯೇ ಇರಲಿಲ್ಲ. ಬೆಳಗಿನ ಬೆಳಕಿನಲ್ಲಿ ಸರಸ್ವತಿಯನ್ನು ನೋಡಿದಾಗ ಅಚ್ಚರಿಗೊಂಡಳು.
ದುಂಡುಗಲ್ಲುಗಳು ಮಾಯವಾಗಿದ್ದವು. ಮುಖದಲ್ಲಿಯ ಎಮಿಕೆಗಳು ಎದ್ದು ನಿಂತಿದ್ದವು. ಗದ್ದವು ಕೆಳಗಿಳಿದಿದ್ದಿತು. ಮೋರೆಯ ತುಂಬ ಮೂಗೇ ಕಾಣುತ್ತಿತ್ತು. ಕಣ್ಣು ಕಾಂತಿಹೀನವಾಗಿ, ತುಟಿ ಬಿಳಿಬಣ್ಣಕ್ಕಿಳಿದಿದ್ದವು. ಪ್ರೇತಕಳೆ ಇದ್ದಿತು ಸರಸ್ವತಿಯ ಮುಖದಲ್ಲಿ.
"ಎಷ್ಟು ದಿನಗಳು ಆದುವೇ ಸರಸ್ವತಿ, ನೀನು ಊಟ ಮಾಡಿ? ಈ ಸಂಭ್ರಮಕ್ಕೆ ದೇವರು ಇದನ್ನು ಬೇರೆ ಏಕೆ ಕೊಟ್ಟನೋ!"
ಸರಸ್ವತಿ ಸುಮ್ಮನೆ ತಲೆಬಾಗಿದಳು. ಎರಡನೆ ಪ್ರಶ್ನೆಗೆ ಉತ್ತರರೂಪವಾಗಿ ಹೇಳಲಿದ್ದುದನ್ನು ಹೇಳಿದ್ದರೆ ದಿನವೆಲ್ಲ ಹೇಳಬಹುದಿತ್ತು. ಪ್ರಾಯಶ: ಅವಳ ಹೃದಯವು ಕೂಡ ಹಗುರವಾಗುತ್ತಿತ್ತು. ಆದರೆ ಅಂತಹ ತಾಯಿಯೊಡನೆ ಕೂಡ ಹೇಳಿಕೊಳ್ಳಲು ಹೇಸಿಗೆಯೆನಿಸಿ ಸರಸ್ವತಿ ಸುಮ್ಮನಾದಳು.
ಬಾಳು ಅದೆಷ್ಟು ಬೇಡವಾದರೂ, ಸಾವನ್ನು ನಿತ್ಯವೂ ಸ್ವಾಗತಿಸುತ್ತಿದರೂ, ಸಾವು ತಾನಾಗಿ ಬರುವವರೆಗೂ ಬೇಡಾದ ಬಾಳನ್ನು ಬಾಳಿದರೂ, ಮತ್ತೆ ಮತ್ತೆ ಬಾಳಿಗೇ ಹೊಂದಿಕೊಂಡು ಹೋಗುವಂತೆ ಮಾಡುವುದೇ ಅಲ್ಲವೆ ಬಾಳಿನ ಮರ್ಮ?



"ಒಂದು ತೊಟ್ಟು ಎಣ್ಣೆ ಇಡುತ್ತೀನಿ, ಎಣ್ಣೆ ಸ್ನಾನವನ್ನಾದರೂ ಮಾಡು."
ಮಗಳಿಗೆ ಮಣೆ ಹಾಕಿ ಕರೆದಳು ಅಚ್ಚಮ್ಮ, ಸರಸ್ವತಿ ಬಂದು ಕುಳಿತಳು. ತಲೆಯ ಮೇಲೆ ಎಣ್ಣೆ ಹಾಕಿ ಪಟಪಟ ಬಡಿದ ಕೂಡಲೆ 'ಅಮ್ಮಾ' ಎನ್ನುತ್ತಿದ್ದಳು ಸರಸ್ವತಿ.
"ಏನಾಗಿದೆಯೇ ಸರಸ್ವತಿ ತಲೆಯಲ್ಲಿ?"
ಅಚ್ಚಕ್ಕ ಎಣ್ಣೆ ಹಚ್ಚುವುದನ್ನು ಅರ್ಧಕ್ಕೆ ನಿಲ್ಲಿಸಿ ಕೇಳಿದಳೂ.
"ಏನೂ ಇಲ್ಲ. ಬಚ್ಚಲ ಮನೆಯಲ್ಲಿ ಅಡ್ಡಪಟ್ಟಿ ತಗುಲಿತ್ತು, ಅಷ್ಟೆ."
ಸರಸ್ವತಿ ಕೊಂಚವೂ ಅನುಮಾನಿಸದೆ ಸುಳ್ಳನ್ನು ನುಡಿದುಬಿಟ್ಟಳು. ಜೀವನದಲ್ಲಿ ಅವಳು ಸುಳ್ಳಾಡಿದುದು ಇದೇ ಮೊದಲ ಬಾರಿ, ತನ್ನ ತಾಯಿಗೆ ಹೇಳಿದಳು ಮೊದಲ ಸುಳ್ಳನ್ನು, ತಾಯಿಗೆ ನೋವಾಗಬಾರದೆಂಬುದೇ ಅವಳ ಆಶೆ, ಇಲ್ಲದಿದ್ದರೆ ಸುಳ್ಳಿನ'ಅವಶ್ಯಕತೆಯಾದರೂ ಎಲ್ಲಿದ್ದಿತು?
ಮೈ, ಕೈ, ಕಾಲುಗಳಿಗೆಲ್ಲ ಎಣ್ಣೆ ಸವರಿದಳು ಅಚ್ಚಮ್ಮ.
"ಇದೇನೇ ಸರಸ್ವತಿ ಮೊಳಕಾಲ ಮೇಲೆ ಗಾಯದ ಗುರುತು?"
"ಹೌದು. ಅಡುಗೆ ಕಟ್ಟೆ ತಗಲಿದ್ದಿತು ಒಂದು ದಿನ."
"ಮೈ ತುಂಬ ಚೂರುಗಾಯಗಳು ಇವೆಯಲ್ಲೇ ಸರಸ್ವತಿ? ಇವೆಲ್ಲವೂ ಪತಿದೇವನವೋ ಅಥವಾ ಅತ್ತೆಮ್ಮನವೋ?
ಸರಸ್ವತಿಗೆ ದು:ಖವು ಕೋಡಿ ಒಡೆದು ಬಂದಿತು. ಆಡಿದ್ದ ಸುಳ್ಳುಗಳೊಂದೂ ಕೆಲಸಕ್ಕೆ ಬರಲಿಲ್ಲ, ಬಿಕ್ಕಿ ಬಿಕ್ಕಿ ಅಳಹತ್ತಿದಳು.
"ಹೇಳಮ್ಮ ಸರಸ್ವತಿ, ಯಾರವು ಇವು?"
ಅಳುತ್ತಲೇ ಉತ್ತರಿಸಿದಳು.
"ಇಬ್ಬರವೂ."
ತಾಯಿ–ಮಗಳು ಕಣ್ಣೀರಿನ ಕಾಲುವೆ ಹರಿಸಿದರು. ಬಾವಿಯಲ್ಲಿ ಮಾತು ನಿಲ್ಲಲಾರದೆ, ಸರಸ್ವತಿ ತಾನು ಗರ್ಭ ಧರಿಸಿದ ವೃತ್ತಾಂತವನ್ನು ತಾಯಿಯೆ ಅರುಹಿದಳು. ಗರ್ಭವತಿಯಾದ ಸರಸ್ವತಿ ತವರಿಗೆ ಬಂದಿದ ಸುಳಿಯು ಊರಿನಲ್ಲೆಲ್ಲ ಹಬ್ಬಿತು.
"ನಿನ್ನೇ ಬಂದಳಂತೆ, ನಮಗೆ ಯಾಕಮ್ಮ ಹೇಳಿ ಕಳಿಸಲಿಲ್ಲ?"
"ಎಷ್ಟು ತಿಂಗಳಮ್ಮೋ ಸರಸೋತಮ್ಮ?"
"ಅಂತೂ ಸತ್ತ ವರಸದಾಗೆ ಬ್ರಹ್ಮಪ್ಪಸ್ವಾಮಿ ಹುಟ್ಟಿ ಬರತಾನ ಬಿಡು ಸರಸೋತಮ್ಮನ ಹೊಟ್ಯಾಗಿಂದ."

"ಬಸುರಿ ಹೆಂಗಿರಬೇಕು, ಹಿಂಗ್ಯಾಕೆ ಆಗೈತಮ್ಮ ಹುಡುಗಿ?"

"ಅನ್ನಾನಾದರೂ ಹಾಕತ್ತೈತೊ ಇಲ್ಲೊ ಆ ಗೌರಮ್ಮ?"

"ಪಾಪ ಗಣಪತಿನ್ನ ಕರೆಯಿಸಿರಮ್ಮ, ತಂಗಿ ಅಂದ್ರೆ ಪ್ರಾಣ ಅವನಿಗೆ. ಎಂದು ಬರತಾನಮ್ಮ ಗಣಪತಿ?"

ಅದೆಷ್ಟು ಜನಗಳ ಪ್ರಶ್ನೆಗಳೋ, ಅದೆಷ್ಟು ಜನಗಳ ಸೂಚನೆಗಳೊ!

ದಿನದಿನಕ್ಕೆ ಸರಸ್ವತಿ ಬಲಹೀನವಾಗುತ್ತ ಬಂದಳು, ಪೋಷಣೆಯಲ್ಲಿ ಯಾವ ಕೊರತೆ ಇಲ್ಲದಿದ್ದರೂ ಕೂಡ. ಅನುಗಳವೂ ಒಂದಲ್ಲ ಒಂದು ರೋಗ, ತೊಡೆಗಳಲ್ಲಿ ನೋವು, ಕಾಲು ಸೆಳೆತ, ಸೊಂಟಮುರಿತ, ಕಣ್ಣು ಉರಿ ಬರಬರುತ್ತ ಜಾಸ್ತಿ ಆಗಹತ್ತಿದವು. ಮಧ್ಯಾಹ್ನ ಪಗಡೆಯಾಡಲು ಬಂದು ಕುಳಿತಿದ್ದ ವೈಶ್ಯರ ಸುಬ್ಬಮ್ ಸ್ಪಷ್ಟವಾಗಿ ಅಭಿಪ್ರಾಯ ಕೊಟ್ಟಳು

"ಇದೇನು ಅಚ್ಚಮ್ಮ, ಯಾರರ ನಕ್ಕಾರು, ಹೀಗಿರಬೇಕೆ ಚೊಚ್ಚಲ ಬಸುರಿ ಅಂದ್ರೆ? ಈಕೇನು ಹಡದೆದ್ದು ಮನಶ್ಯಾಳಾಗ್ತಾಳೇನಮ್ಮ ? ಸ್ವಲ್ಪರೆ ತ್ರಾಣ ಇಲ್ಲ ಮೈಯಾಗೆ, ಹೆಣದ ಮುಖ ಆಗ್ಯಾದೆ ಹುಡಿಗಿದು, ಕರಕೊಂಡು ಬರ್ತೀನಿ ತಡಿ ನಮ್ಮ ವೈದ್ಯ ಶ್ರೀಕಂಠಶಾಸ್ತ್ರಿನ್ನ."

ಮಾತಾಡುತ್ತಲೇ ಹೊರಟಳು ಸುಬ್ಬಮ್ಮ.

ಬ್ರಹ್ಮಾನಂದಶಾಸ್ತ್ರಿ ಮಗಳಿಗೆ ಅನಾರೋಗ್ಯ ಎಂದು ಕೇಳಿದ ಕೂಡಲೆ ಒಂದೇ ಓಟದಲ್ಲಿ ಬಂದರು ಶ್ರೀಕಂಠಶಾಸ್ತ್ರಿಗಳು. ನಾಡೀಪರೀಕ್ಷೆ ಬಹಳ ಹೊತ್ತು ಆಯಿತು. ನಂತರ ಬಾಯಿ ತೆಗೆಯಿಸಿ ನೋಡಿದರು.

"ನೀನು ಬಾ ಸುಬ್ಬಮ್ಮ ನನ್ನ ಹಿಂದೆ."

ಶಾಸ್ತ್ರಿಗಳು ಕೈ ಪೆಟ್ಟಿಗೆಯನ್ನು ಹಿಡಿದು ಸಾಗಿಯೇ ಬಿಟ್ಟರು ಹೊರಗೆ ಹೊರಬಾಗಿಲಲ್ಲಿಯೇ ನಿಂತು ಹೇಳಿದರು–ವೈದ್ಯರು

ಔಷಧಿ ಇಬ್ಬರೂ ತೊಗೋಬೇಕು–ಗಂಡ ಹೆಂಡತಿ."

ಸುಬ್ಬಮ್ಮಳಿಗೆ ಅರ್ಥವಾಗಲಿಲ್ಲ. ಶ್ರೀಕಂಠಶಾಸ್ತ್ರಿಗಳ ಮುಖ ನೋಡಿದಳು.

"ಪತಿದೇವನ ಪ್ರಸಾದ ಇದು."

ಸುಬ್ಬಮ್ಮ ಸಮಯ ಸಾಧಿಸಿ ಅಚಮ್ಮ ಮುಂದೆ ಉಸಿರಿದಳು. ಬಿಸಿಯುಸಿರನ್ನು ಹಾಕಿ ಎದ್ದ ಅಚ್ಚಮ್ಮ, ಒಳಬಂದು ದೇವರ ಮುಂದೆ ದೀಪವನ್ನಿಕ್ಕಿ ಕರಜೋಡಿಸಿ ಬೇಡಿಕೊಂಡಳೂ.

"ಬೇಗ ನನ್ನ ಮಗಳಿಗೆ ಸಾವನ್ನು ದಯಪಾಲಿಸಪ್ಪಾ ದೇವರೆ."



ಪಾಪ! ಬೇಡಿದಾಗಲೆಲ್ಲ ಇತರರಿಗೆ ಸಾವು–ಹುಟ್ಟುಗಳನ್ನು ಕೊಡುವ ಶಕ್ತಿ ಆ ದೇವನಲ್ಲಿ ಇದ್ದಿದ್ದರೆ, ಅವನೇಕೆ ಕಲ್ಲಾಗಿ ಕೂಡುತ್ತಿದ್ದ ಗುಡಿಯಲ್ಲಿ?

ದಿನಗಳುರುಳಿದವು. ಸರಸ್ವತಿ ಮಾತ್ರ ಹೆಚ್ಚು ಹೆಚ್ಚು ಕ್ಷೀಣಳಾಗುತ್ತಲೇ ಹೊರಟಳು. ಎದ್ದು ಓಡಾಡಲು ಸಹ ಕಷ್ಟವಾಗುತ್ತಿತ್ತು ಅವಳಿಗೆ. ಒಳಾಂಗಳದಲ್ಲಿಯೇ ಬಹು ಹೊತ್ತು ಕುಳಿತು ಕಾಲ ಕಳೆಯುತ್ತಿದ್ದಳು. ತಾನು ತನ್ನ ತಂದೆ ಮಲಗುತ್ತಿದ್ದ ಸ್ಥಳವನ್ನು ನೋಡುವದು, ತಾನು ಗಣಪತಿ ಕುಳಿತು ಓದುತ್ತಿದ್ದ ಸ್ಥಳವನ್ನು ನೋಡುವದು, ಕೊನೆಗೆ ಕಂಬನಿಇಡುವದು ನಿತ್ಯದ ಕ್ರಮವಾಯಿತು.

ಒಂದು ದಿನ ಹಳ್ಳಿಯಿಂದ ಬಳೆಗಾರ ಅಂಬಣ್ಣ ಹುಡುಕುತ್ತ ಬಂದ ಸರಸ್ವತಿಯನ್ನು. ಅಂಬಣ್ಣನೆಂದರೆ ಬ್ರಹ್ಮಾನಂದಶಾಸ್ತ್ರಿಗಳ ಪಟ್ಟ ಶಿಷ್ಯ ಆ ಕಾಲಕ್ಕೆ. ಅವನು ದೊಡ್ಡಾಟದಲ್ಲಿ ದ್ರೌಪದಿಯ ಪಾತ್ರವನ್ನು ಹಾಕಿದ್ದಾಗಲಂತೂ ಶಾಸ್ತ್ರಿಗಳ ಮನೆಯಲ್ಲಿಯೇ ಇರುತ್ತಿದ್ದ ಸದಾ. ಮಾತುಗಳನ್ನು ಅವರೇ ಕಲಿಸಬೇಕು. ಪದಗಳನ್ನೂ ಅವರೇ ಹೇಳಿಕೊಡಬೇಕು. ಆಟದ ರಾತ್ರಿ ಸೀರೆಯನ್ನು ಸಹ ಶಾಸ್ತ್ರಿಗಳೇ ಉಡಿಸಬೇಕು. ಸರಸ್ವತಿಗೆ ಮೊಳಕೈವರೆಗೂ ಅಂಬಣ್ಣನೇ ಬಳೆ ಇಡಬೇಕು.

ಒಳಗೆ ಬರಬರುತ್ತಲೆ ಅಚ್ಚಮ್ಮಳ ಮೇಲೆ ಸಿಟ್ಟಾಗಿಯೇ ಬಂದ

"ಸರಸಮ್ಮನ್ನ ಮನ್ಯಾಗೆ ಬಚ್ಚಿಕೊಂಡೀ ಏನವ್ವ ಅಚ್ಚಮ್ಮ ತಾಯಿ? ಆಕಿ ಬಂದಕೂಡಲೆ ನನಗೆ ಹೇಳಿ ಕಳಿಸಾಕಿಲ್ಲ? ಬಾರವ್ವ ಬಾರವ್ವ ನಮ್ಮವ್ವ ನಿನ್ನ ಮಕ ನೋಡ್ತೀನೀ ಹೆಂಗದೀಯೊ!"

ಸರಸ್ವತಿಯನ್ನು ನಗೆಯಿಂದಲೇ ಸ್ವಾಗತಿಸಿದ ಅಂಬಣ್ಣ.

"ಐ! ಹಿಂಗ್ಯಾಕಾಗೀಯವ್ವ"

ಸರಸ್ವತಿ ಅಂಬಣ್ಣನ ಭುಜವನ್ನೇರಿ ಆಡಿದ ಹುಡಿಗೆ.

"ನಿನ್ನ ತಲೆ ನಡುಗುತ್ತಲ್ಲೋ ಅಂಬಣ್ಣ ಆಗಲೆ?"

ಸರಸ್ವತಿ ಪ್ರಶ್ನಿಸಿದಳು.

"ಆಗಲೇ ಬೇಸ್ ಅಂದೆವ್ವ ತಲಿ ನಡಗಲಿಕ್ಕೆ ಹತ್ತಿ ಹತ್ತು ವರುಸ ಆದವು. ಇನ್ನೆಷ್ಟು ದಿನ ನಡಗೀತು ಹೇಳು? ಅದಕ್ಕೂ ಟೇಮು ಆಗ್ತಾ ಬಂತು. ಇರಲಿ, ಕೈ ತಾರವ್ವ ತಂಗಿ ನಾಲ್ಕು ನಾಲ್ಕು ಹಸುರು ಬಳೀ ತೊಡಸ್ತೀನಿ."

ಜುಲುಮೆಯಿಂದ ಸರಸ್ವತಿಯ ಕೈಹಿಡಿದ ಅಂಬಣ್ಣ, ಅವಳು ಬೇಡ ಬೇಡ ಎಂದರೂ ಕೂಡ.

"ಬಳಿ, ಕುಂಕುಮ ಯಾರಾದರೂ ಬ್ಯಾಡ ಅಂತಾರೇನವ್ವ, ಹುಚ್ಚು ಮಗಳೆ? ಬಸುರು ಹೆಣ್ಣುಮಗಳು, ಹಸುರು ಬಳಿ ಇರಬೇಕು ಕೈಯಾಗೆ, ಲಕ್ಸನ ಅದು."

ಸರಸ್ವತಿಯ ಮುಂಗೈಯನ್ನು ಹಿಸುಗಿ ಹಿಸುಗಿ ಆರಿಸಿಕ್ಕಿದ್ದ ಬಳೆಗಳನ್ನು ಅವಳ ಕೈಯಲ್ಲಿ ಏರಿಸುತ್ತಿದ್ದ.

ಬಾಗಿಲಲ್ಲಿ ಕಾಲಸಪ್ಪಳವಾಯಿತು. ತಲೆ ಎತ್ತಿನೋಡಿದಳು. ಬಾಳಪ್ಪ! ತಲೆಯನ್ನಲ್ಲಾಡಿಸಿ ಒಳ ಕರೆದಳು ಸರಸ್ವತಿ, ಬನ್ನಿ ಎಂದು.

"ಅಯ್ಯಯ್ಯೋ! ಗಂಡಸಿನ ಕೈಯಾಗೆ ಕೈಕೊಟ್ಟು ಬಳೀ ಇಡಿಸಿಗೋತಾಳೆ."

ಕಾಡು ಮೃಗದಂತೆ ಮೈಮೇಲೆ ಬಂದವನೆ ಬಾಗಿ ಕುಳಿತಿದ್ದ ಸರಸ್ವತಿಯನ್ನು ಕಾಲ್ಚೆಂಡನ್ನು ಒದ್ದಂತೆ ಜೋರಾಗಿ ಕಾಲಿನಿಂದ ಒದ್ದ ಬಾಳಪ್ಪ.

"ಅಮ್ಮಾ!"

ಕೂಗುತ್ತ ನೆಲಕ್ಕೆ ಬಿದ್ದಳು ಸರಸ್ವತಿ.

ತಲೆನಡುಗುತ್ತಿದ್ದ ಮುಪ್ಪಿನ ಮುದುಕ ಅಂಬಣ್ಣ ಕಕ್ಕಾಬಿಕ್ಕಿಯಾದ. ಮುಗಿಲೆ ಕಳಚಿಬಿದ್ದಿತು ಆತನ ತಲೆಯ ಮೇಲೆ.

"ಅಯ್ಯ ಪುಣ್ಯಾತ್ಮ, ಯಾರಪ್ಪಾ ನೀನು? ಸರಸಮ್ಮನ್ನ ಒದ್ದ ಕಾಲಿಗೆ ಸರ್ಪರಾಜ

ಕಚ್ಚದಾ ಬಿಡುತಾನೆ.....?ಏಳವ್ವ ತಾಯಿ."

ಎಂಭತ್ತು ವರ್ಷಗಳು ಬಾಳಿದ ಅಂಬಣ್ಣ ಒಬ್ಬರಿಂದಲೂ ಬೆರಳು ತೋರಿಸಿಗೊಂಡ ಪ್ರಾಣಿ ಅಲ್ಲ. ಜನ್ಮವೆತ್ತಿ ಜಗತ್ತಿನಲ್ಲಿ ಬರುವ ಹೆಣ್ಣು ಜೀವಿಗಳೆಲ್ಲವೂ ಅಂಬಣ್ಣನ ಮಕ್ಕಳೇ–ಅವನ ಪವಿತ್ರ ದೃಷ್ಟಿಯಲ್ಲಿ. ಅದರಲ್ಲಿ ಸರಸ್ವತಿ! ಅವನಿಗೆಲ್ಲಿ ನೆನಪಿದ್ದಿತು ತಾನು ಗಂಡೆಂಬುದಾದರೂ?

ಅಂಬಣ್ಣನ ಕಣ್ಣು ನೀರೊಡೆದವು. ಹೃದಯವು ಮಿಡಿಯಿತು ಈ ಅಮಾನುಷ ವರ್ತನೆಯನ್ನು ಕಂಡು. ಸರಸ್ವತಿಯನ್ನು ಮೆತ್ತಗೆ ಎತ್ತಿ ಕೂಡಿಸಲು ಕೈ ಚಾಚಿದ;

ಕತ್ತೆಕಿರುಬನಂತೆ ಮುಖ ಮಾಡಿ ಕಿರಿಚಿದ ಬಾಳಪ್ಪ

"ನನ್ನ ಹೆಣ್ಣಿನ್ನ ಮುಟ್ಟುತೀಯಾ ಮುದಿ ಮುಂಡೇಮಗನೆ? ಬಿಡು ಕೈ, ನಿನ್ನೂ ಒದೀತೀನಿ ನೋಡು."

"ಅಯ್ಯಯ್ಯ, ನನ್ನ ದೊರೆಯೆ! ಇನ್ನೂ ನಾಲ್ಕು ಏಟು ಒದಿಯಪ್ಪಾ ನನ್ನ, ಬ್ಯಾಡ ಅಂದೇನೆ? ನನ್ನದೇನೈತೆ, ಕುಣಿಯಾಗ ಇರೋದೇ ಮನ್ಯಾಗೈತೆ ಅಷ್ಟೆ. ತುಂಬಿದ ಬಸುರಿ, ಬ್ರಹ್ಮಪ್ಪ ವುಟ್ಟಿ ಕುಂತಾನೆ ಈ ಕೂಸಿನ ಒಟ್ಯಾಗೆ, ಆ ಪಿಂಡ ಒದೀತಿಯಲ್ಲಪ್ಪಾ– ದೇವರನ್ನೆ ಒದ್ದ ಬೃಗುವಿನ್ಹಂಗೆ. ಆಕಿನ್ನ ನಾನು ಮುಟ್ಟಿದರೆ ಏನು ತಪ್ಪೋ ಸ್ವಾಮಿ? ನನ್ನ ಕಾಲುಮ್ಯಾಗೆ ಮಲಗಿದ ಪಿಳ್ಳಿ ಅದು, ಬುಜದ ಮ್ಯಾಲೆ ಹತ್ತಿ ಆಡಿದ ವುಡಿಗಿ ಅದು, ಅಚ್ಚೆಮ್ಮಗೆ ಮೈ ಕಾಯಿಲೆ ಆದಾಗ ಈ



ಕಂದನ್ನ ಮಗ್ಲಾಗೆ ಮಲಗಿಸ್ಗೊಂಡಿದ್ದ. ಮೈಯೆಲ್ಲ ಕೈಯಾಡಿ ಲಾಲಿ ಹಾಡಿದ್ದೆ, ಗಲ್ಲ ಹಿಡಿದು ಮುದ್ದು ಕೊಟ್ಟಿದ್ದೆ. ನಾನು ಮುಟ್ಟದವೆಲ್ಲ ನನಗೆ ತಾಯ್ಗಳೇ ಆಗ್ತಾರೋ ನನ್ನೊಡೆಯಾ....?

"ಬಾಯಿ ಮುಚ್ಚು ಮುದಿ ಹದ್ದೇ, ನಡಿ ಇಲ್ಲಿಂದ...."

ಕಡ ಕೇಳಲು ಪಕ್ಕದ ಮನೆಗೆ ಹೋಗಿದ್ದ ಅಚ್ಚಮ್ಮ ಒಳಬಂದಳು. ಅಂಗಳದಲ್ಲಿ ಜರುಗಿದ್ದ ಅನ್ಯಾಯವನ್ನು ಕಂಡಳು. ಮರುಮಾತನಾಡದೆ ಮಗಳನ್ನು ಮೆಲ್ಲನೆ ಸಾಗಿಸಿದಳು ಒಳ ಜಗುಲಿಯ ಮೇಲೆ ಹಾಕಿದ್ದ ಚಾಪೆಗೆ.

ಅಂಬಣ್ಣ ಹುಚ್ಚು ಮುಖಮಾಡಿ ಹೊರಬಿದ್ದ ವಟಗುಟ್ಟುತ್ತ.

"ಅನಬೇಕಾದ ಮಾತೇ ಅಂದೆಪ್ಪ. ನನಗೇನೂ ಸಿಟ್ಟೂ ಸೆಡವೂ ಇಲ್ಲ. ಹದ್ದಿನ ಹಂಗೆ ಇನ್ನೂ ಉಳಿದೀನಿ, ಮಕ್ಕಳ ಸಾವೂ–ನೋವೂ ನೋಡಿಕೊಂತ."

ಸಿಟ್ಟಗಿದ್ದ ಬಾಳಪ್ಪ ಸೊಟ್ಟ ಮುಖಮಾಡಿ ಕಟ್ಟೆಯ ಮೇಲೆ ಕುಳಿತ ಒಬ್ಬನೇ ಗೂಬೆಯಂತೆ ಆದರಾತಿಥ್ಯವನ್ನು ಮಾಡಿ, ತಮ್ಮನೆಂದು ಪ್ರೀತಿಸಿ, ಅಳಿಯನೆಂದು ಗೌರವಿಸಿ, ಕೋಪಶಾಂತಿಗಾಗಿ ನೂರೆಂಟು ಮುದ್ದು ಮಾತುಗಳನ್ನಾಡಿ ರಮಿಸುವ ಚೈತನ್ಯ ಅಚ್ಚಕ್ಕಳಲ್ಲಿ ಎಲ್ಲಿ ಬರಬೇಕು? ನಿಶ್ಚೇಷ್ಟಳಾಗಿ ಬಿದ್ದಿದ್ದ ಚೊಚ್ಚಿಲ ಬಸುರಿ ಸರಸ್ವತಿಯನ್ನು ಚಾಪೆಯ ಮೇಲೆ ಮಲಗಿಸಿ ಒಳಬಂದಳು. ದೇವರ ಮನೆಗೆ ಬಂದು ಕೈ ಮುಗಿದಳು.

ಮೂರ್ಛೆ ಬಂದು ಬಿದ್ದಿದ್ದ ತನ್ನ ಮಗಳಿಗೆ ಹಾಗೆಯೇ ದೀರ್ಘನಿದ್ರೆಯನ್ನು ದಯಪಾಲಿಸಲು ದಯಾಮಯನನ್ನು ಬೇಡಿಕೊಂಡಳು. ತನಗೂ ಅದೇ ಉಪಕಾರವನ್ನು ಮಾಡೆಂದು ಪ್ರಾರ್ಥಿಸಿದಳು.

ಕೇಳಿದವರಿಗೆಲ್ಲ ಕೇಳಿದಾಗಲೆಲ್ಲ ಆ ದೇವನ್ನು ಸಾವನ್ನು ಕೊಟ್ಟಿದ್ದರೆ ಭೂಲೋಕವು ಎಂದೋ ಬರಿದಾಗಿ, ಸರ್ವನಾಟಕ ಸೂತ್ರಧಾರಿಯ ನಾಟಕಕ್ಕೆ ಪಾತ್ರಧಾರಿಗಳೇ ಇಲ್ಲದಾಗಿ, ಅವನ ನಿತ್ಯ ರಂಗಭೂಮಿಯು ಬೀಳುಬಿದ್ದು ನಾಟಕವೇ ನಿಂತುಹೋಗುತ್ತಿತ್ತು, 'ಸಾವು ಅಷ್ಟು ಸುಲಭವಾಗಿ ಸಿಗುವದಲ್ಲ; ಸಾಯುವವರೆಗೂ ಬದುಕಿರು!–ಇದೇ ಅವನ ಶಾಸನ.

ವೈಶ್ಯ ಸುಬ್ಬಮ್ಮ ಮಾಮೂಲಿನಂತೆ ಉಂಡು ತಾಂಬೂಲ ಅಗಿಯುತ್ತ ಒಳಬಂದಳು. ಬಾಗಿಲಲ್ಲಿಯೆ ದರ್ಶನವನ್ನಿತ್ತ ಬಾಳಪ್ಪನನ್ನು ಕಂಡು ಮನದಲ್ಲಿಯೇ ಶಪಿಸಿದಳು.

"ಆಗಲೆ ಬಂದದಲ್ಲ ಈ ಶಣಿ."

"ಯಾಕವ್ವಾ ಸರಸವ್ವಾ, ಮನಗೀದಿ?"

ಸರಸ್ವತಿಯನ್ನು ನೋಡಿದಳು, ಗಾಬರಿಗೊಂಡಳು. ದನಿಯನ್ನು ಕೇಳಿ ಹೊರಬಂದ ಅಚ್ಚಕ್ಕ ಸೂಕ್ಷ್ಮವಾಗಿ ತಿಳಿಸಿದಳು ಸಂಭ್ರಮವನ್ನು.

"ಬೇಸು ಮಾಡ್ಯಾನವ್ವ ಶಣಿ. ಏನಾರೆ ಸುಟ್ಟು ಮೂಗಿಗೆ ಹಿಡಿ. ಎಚ್ಚರ ಆಗಲಿ, ನಾನೀಗ ಬರ್ತೀನಿ."

ಸುಬ್ಬಕ್ಕನ ಓಟಕ್ಕೆ ಅವಳ ಪ್ರೇಮ–ವಿಶ್ವಾಸಗಳೇ ಕಾಲಾಗಿದ್ದವು. ನಿಮಿಷದಲ್ಲಿಯೇ ಸೂಲಗಿತ್ತಿಯನ್ನು ತಂದಳು.

ಸನ್ನೆ, ಸೂಕ್ಷ್ಮವನ್ನರಿಯದೆ ಇದಿರಗೇ ಕುಳಿತಿದ್ದ ಬಾಳಪ್ಪ, ಪಿಳಿಪಿಳಿ ಕಣ್ಣುಬಿಡುತ್ತ, ಒಂದಂಗುಲವೂ ಕದಲಲಿಲ್ಲ.

ಸಿಡುಕಿನ ಸ್ವಭಾವದ ಸೂಲಗಿತ್ತಿ ಗುಡುಗಿದಳು ದುರದುರು ನೋಡಿ, ಎದ್ದು ಹೋಗೋ, ಅದೂ ತಿಳಿಯೋದಿಲ್ಲೇನು? ಯಾರು ಇವನು?"

ಅವನೇ ಅಳಿಯದೇವರು ಎಂಬುದನ್ನು ಸುಬ್ಬಕ್ಕ ತಿಳಿಸಿದಳು ಕೈಸನ್ನೆಯಿಂದ. ಬಾಳಪ್ಪನನ್ನು ಹೊರಗೆ ಹಾಕಿ ಬಾಗಿಲು ಹಾಕಿದರು.

"ಕೂಸು ಅಡ್ಡ ಬಿದ್ದಿದೆ, ಜೀವಕ್ಕೆ ದೊಡ್ಡ ಪ್ರಮಾದ, ಅಸ್ಪತ್ರೆಗೇ ಒಯ್ಯಿರಿ, ಕತ್ತರಿಸಿ ತೆಗೆಯುತ್ತಾರೆ."

ಹಸಿಗೋಡೆಗೆ ಹರಳು ಎಸೆದಂತೆ ಮಾತನಾಡಿ ಮಾಯವಾದಳು ಸೂಲಗಿತ್ತಿ.

"ಬದುಕಬೇಕು ಎಂಬುವವರಿಗೆ ಆಸ್ಪತ್ರೆ."

ಅಚ್ಚಕ್ಕ ಕದವಿಕ್ಕಿ ಒಳಚಿಲಕವನ್ನು ಹಾಕಿ ಸ್ವಸ್ಥ ಮಲಗಿಬಿಟ್ಟಳು, ಸುಬ್ಬಮ್ಮಳನ್ನು ಮೆಲ್ಲಗೆ ಹೊದಾಟಿಸಿ.

## ೨೩

ಮಾರ್ಗಶೀರ್ಷ ಮಾಸ, ಶುಕ್ಲಪಕ್ಷ, ದಶಮಿ, ರಾತ್ರಿ ಸುಮಾರು ಎಂಟು ಹೊಡೆದಿರಬೇಕು. ಚಂದ್ರನಿನ್ನೂ ಕೊಂಚ ಮಸಕು ಮಸುಕಾಗಿಯೇ ಇದ್ದ ಮೋಡದ ಮರೆಯಲ್ಲಿ.

ಓರ್ವ ಅಪರಿಚಿತ ವ್ಯಕ್ತಿ ಅಚ್ಚಮ್ಮ ಮನೆಯ ಮುಂದೆ ಎರಡೆರಡು ಬಾರಿ ಓಡಾಡಿ, ಕದವಿಕ್ಕಿದ್ದನ್ನು ಕಂಡು ಅನುಮಾನಿಸಿ ಮುಂದೆ ಸಾಗಿತು. ದಷ್ಟಪುಷ್ಟ ಕಾಯ, ದುಂಡು ಮುಖದಲ್ಲಿ ದಟ್ಟವಾಗಿ ಬೆಳೆದ ಮೀಸೆ–ಗಡ್ಡ, ಎಂದೂ ಬಾಚದ ತಲೆಗೂದಲು, ವಿಶಾಲವಾದ ಹಣೆಯ ಮೇಲೆ ವಿಭೂತಿ, ಭ್ರೂಮಧ್ಯದಲ್ಲಿ ಕುಂಕುಮ, ಉಟ್ಟಿದ್ದ ಚಿಕ್ಕ ಪಂಚೆಯ ಹೊರತು ಇನ್ನೊಂದು ವಸ್ತ್ರವಿಲ್ಲ ಮೈಮೇಲೆ. ವಕ್ಷಸ್ಥಳದ



ಮೇಲೆ ಮೂರೆಳೆ ಯಜ್ಞೋಪವೀತ. ಕೈಯಲ್ಲೊಂದು ಜೋಳಿಗೆ–ಇಡೀ ಬ್ರಹ್ಮಾಂಡವನ್ನೇ ಉಣಿಸಿ, ತಣಿಸಿ ಪೋಷಿಸಬಲ್ಲ ಮಹಾಶಕ್ತಿಯ ಅಕ್ಷಯಪಾತ್ರ, ಬ್ರಹ್ಮಚಾರಿಯ ಕಣ್ಣಲ್ಲಿದ್ದ ಆ ಕಾಂತಿ, ಆ ಪ್ರತಿಭೆ, ಆ ತೇಜಸ್ಸು!

ಆ ಬಾವಾಜಿಯು ದುಡುದುಡು ನಡೆದ ಊರಲ್ಲಿ, ಎಲ್ಲ ದಾರಿಗಳನ್ನೂ ಬಲ್ಲವನಂತೆ, ನಗರೇಶ್ವರ ದೇವಾಲಯದ ಮಹಾದ್ವಾರದಲ್ಲಿ ಕಾಲಿಕ್ಕಿದ್ದ ಜೈ ಶಿವೇ ಎನ್ನುತ್ತ. ಸಾಯಂಕಾಲದ ಮಂಗಳಾರತಿ ಮುಗಿದು ಪ್ರಸಾದ ವಿನಿಯೋಗವೂ ಆಗಿದ್ದಿತು. ಭಕ್ತಾದಿಗಳು ಮನೆ ಹಾದಿ ಹಿಡಿದಿದ್ದರು.

"ಬಹಳ ಛಂದ ಅದರೀ ನಗರೇಶ್ವರ ಮೂರ್ತಿ. ಆ ಮೀಸಿ, ಕಿರೀಟ, ಹುಬ್ಬು ಮಂಗಳಾರತಿ ಆಗುವಾಗ ಹೊಳೆಯುತ್ತವೆ. ಮನಸ್ಸಿಗೆ ಆನಂದವಾಗುತ್ತದೆ."

ಒಬ್ಬ ಕಿರಿಯ ನುಡಿದ. ನಡುವಯಸ್ಸಿನವರೊಬ್ಬರು ನೋವಿನಿಂದ ಉತ್ತರಿಸಿದರು

"ಹೋಯಿತಪ್ಪಾ ಆ ಕಾಲ, ಆಗ ನೋಡಬೇಕಿತ್ತು ನೀವು ನಗರೇಶ್ವರ ಸ್ವಾಮಿ ಮಂಗಳಾರತಿಯನ್ನು, ಹರಿಹರದ ಶಂಕರದೀಕ್ಷಿತರು ಅಂತ ಒಬ್ಬ ಮಹಾನುಭಾವರಿದ್ದರು. ಅವರ ಆ ಪಾಂಡಿತ್ಯ, ವಾಗ್ಝರಿ, ತಪೋಬಲ, ಶಿವಶಿವಾ ಆ ಸಿಂಹದ ಉದರದಲ್ಲಿ ಒಂದು ಮಹಾಸಿಂಹವೇ ಉದ್ಭವಿಸಿತ್ತು ಗಣಪತಿ ದೀಕ್ಷಿತರು. ಸಾಕ್ಷಾತ್ ಸರಸ್ವತಿಯೇ ಆ ಬ್ರಹ್ಮಚಾರಿಯ ನಾಲಿಗೆಯ ಮೇಲೆ ನಿಂತು ನಲಿಯುತ್ತಿದ್ದಳು."

ಕೇಳಿಯೂ ಕೇಳಿಸಿಗೊಳ್ಳದಂತೆ ಮುಂದೆ ಸಗುವವನಿದ್ದ ಬಾವಾಜಿ.

"ಇನ್ನೊಬ್ಬ ಪುಣ್ಯಾತ್ಮರಿದ್ದರಲ್ಲ, ಕಳೆದ ವರ್ಷವೇ ದೇಹ ಬಿಟ್ಟರು–ಬ್ರಹ್ಮಾನಂದ ಶಾಸ್ತ್ರಿಗಳು ಗಣಪತಿ ದೀಕ್ಷಿತರ ಸಾಕು ತಂದೆ ಆಹಾಹಾ! ಅಂತಹ ಅವಧೂತರು ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟುವುದಿಲ್ಲ. ನೋಡಪ್ಪಾ, ಇಚ್ಛಮರಣಿಗಳು ಅವರು."

ಮಂತ್ರಬಂಧಿತನಾದಂತಿದ್ದ ಆ ಸಾಧು, ಅತ್ತ ಮುಖ ಹೊರಳಿಸಿ ಕಣ್ಣ ಕುಣಿಯಲ್ಲಿ ನಿಂತಿದ್ದ ಕಂಬನಿಯನ್ನು ಎಡಗೈ ಬೆರಳಿನಿಂದ ಒರಸಿ ಗುಡಿಯ ಒಳಗಡೆ ಸಾಗಿದ.

"ಎಲ್ಲಿ ಹೋದರು ಸ್ವಾಮೀ ಅವರೆಲ್ಲ?"

ಇನ್ನೊಬ್ಬ ಕಿರಿಯ ಕುತೂಹಲದಿಂದ ಕೇಳಿದ.

"ಆ ಹಿರಿಯರಿಬ್ಬರೂ ಕಾಲವಾದರಪ್ಪಾ, ಗಣಪತಿ ದೀಕ್ಷಿತರೂ ಎಲ್ಲಿಗೋ ಹೊರಟುಹೋದರು. ಬ್ರಹ್ಮಾನಂದ ಶಾಸ್ತ್ರಿಗಳ ಮಗಳು ಸರಸ್ವತಿ ಅವಿವೇಕಿ

ಗಂಡನಿಗೆ ಆಹುತಿಯಾದಳು. ಕಾಳು ಎಲ್ಲಿ ಹೋದವೋ, ನಮ್ಮಂತಹ ಬರೀ ಜೊಳ್ಳು ಉಳಿದಿವೆ ಈಗ ಈಶ್ವರೀ ಇಚ್ಛಾ."

ಕಣ್ಣೊರಸಿಕೊಳ್ಳುತ್ತ ಮನೆಗೆ ಸಾಗಿದರು ಗತವೈಭವವನ್ನು ನೆನೆನೆನೆದು.

ಅರ್ಚಕರು ನಂದಾದೀಪಕ್ಕೆ ಇನ್ನಿಷ್ಟು ಎಣ್ಣೆಯನ್ನು ಸುರಿದು, ಬತ್ತಿಯ ಮೂಗನ್ನು ಸರಿಮಾಡಿ, ಗರ್ಭಗುಡಿಗೆ ಬೀಗಹಾಕಿ ಮನೆಗೆ ತೆರಳಿದರು. ಒಳಬಂದ ಭೈರಾಗಿಯನ್ನು ಅವರೂ ಗಮನಿಸಲಿಲ್ಲ. ಯಾರೂ ಗುರುತಿಸಲಿಲ್ಲ.

ಪ್ರದಕ್ಷಿಣೆ, ಧೀರ್ಘದಂಡ ನಮಸ್ಕಾರಗಳನ್ನು ಮುಗಿಸಿಕೊಂಡು ಆ ಬ್ರಹ್ಮಚಾರಿ ದರ್ಶನಕ್ಕಾಗಿ ಗರ್ಭಗುಡಿಯ ಬಾಗಿಲಿಗೆ ಬಂದ. ಒಂದರೆ ನಿಮಿಷ ಕಣ್ಣುಮುಚ್ಚಿ ಧ್ಯಾನಿಸಿ ಕಣ್ಣು ತೆರೆದ. ಭವ್ಯವಾದ ನಗರೇಶ್ವರ ಸ್ವಾಮಿ ಮೂರ್ತಿಯನ್ನು ಕಣ್ಣಾರೆ ನೋಡಿದ. ಕೈ ಮುಗಿದು ಪುನ: ಅರೆಗಣ್ಣು ಮುಚ್ಚಿ ಧ್ಯಾನಮುದ್ರೆಯಲ್ಲಿ ಕುಳಿತ. ಹತ್ತು ನಿಮಿಷಗಳು ಆಗಿರಬೇಕು.

"ಮನೆಗೆ ಹೋಗಬೇಕಪ್ಪಾ ಗಣಪತಿ, ಅಲ್ಲೇ ನಾನಿಲ್ಲವೆ?"

ಕಿವಿಯಲ್ಲಿ ಉಸಿರಿದಂತಾಯಿತು. ತಕ್ಷಣವೆ ಎದ್ದು ಕೈ ಮುಗಿದು ನೇರವಾಗಿ ಮನೆಗೆ ಸಾಗಿದ.

ಒಳಬಾಗಿಲಲ್ಲಿ ಕಾಳಿಡುವಾಗಲೆ ಕೇಳಿತು, ಚಿಕ್ಕೊಂದು ಹಸುಗೂಸು ಅಳುವ 'ಧ್ವನಿ ಇದಾರ ಮನೆಯಲ್ಲಿ ಬಂದೆ ಎನ್ನುವ ರೀತಿಯಲ್ಲಿ ಗೋಡೆ, ಬಾಗಿಲು, ನೆಲ, ಮಾಳಿಗೆಗಳನ್ನು ನೋಡಿದ. ಅಹುದು ಇದೇ ಬ್ರಹ್ಮಾನಂದ ಶಾಸ್ತ್ರಿಗಳ ಮನೆ, ಅಚ್ಚಕ್ಕಳ ಮನೆ, ಸರಸ್ವತಿಯ ಮನೆ.

ಧೈರ್ಯವಾಯಿತು. ನೇರವಾಗಿ ಒಳಬಂದ ನಡುಮನೆಯ ವರೆಗೂ, ಬಾಗಿಲಲ್ಲಿಯೇ ತಟಸ್ಥನಾದ.

ಬಾಣಂತಿಯ ಕೋಣೆಯಿಂದ ಅಚ್ಚಕ್ಕ ಅದೇ ಹೊರಬಂದಳು. ತಾಯಿಯು ರೂಪು–ವೇಷ ಬದಲಿಸಿದ ಮಾತ್ರಕ್ಕೆ ಮಗನಿಗೆ ಮೋಸವಾಗುವದೇ? ಮನದಲ್ಲಿ 'ಜೈ ಶಿವೇ' ಎಂದುಕೊಂಡು ಅಚ್ಚಕ್ಕಳ ಅಡಿದಾವರೆಗಳಲ್ಲಿ ಮಸ್ತಕವೆನ್ನಿಕ್ಕಿದ.

ಯಾರಿದು ಎಂದುಕೊಂಡಳು ಅತ್ಯಾಶ್ಚರ್ಯದಿಂದ ಅಚ್ಚಕ್ಕ, ಜೋಳಿಗೆ ಹಿಡಿದ ಆ ಜಟಾಧಾರಿ ಭೈರಾಗಿಯನ್ನು ಕಂಡು.

"ನಾನಮ್ಮ, ನಿನ್ನ ಮಗ ಗಣಪತಿ."

ಎದ್ದು ನಿಂತು ನುಡಿದ.

"ಕ್ಷೇಮವೇ ತಾಯಿ?"

"ಇದ್ದೀನಿ ನೋಡಪ್ಪ ಈ ಅವತಾರದಿಂದಲೆ."



ಅವತಾರ ಯಾವುದಾದರೇನು ಮಗನಿಗೆ, ತಾಯಿಯು ತಾಯಿಯೇ.

"ನೀನೇನೋ ಗಣಪತಿ, ಹೀಗೆ ಆಗಿಬಿಟ್ಟೆ?

"ತಂಗಿ ಸರಸ್ವತಿ...."

"ಕಾಲು ತೊಳೆದು ಒಲಗೆ ಬಾ, ಹೆರಿಗೆ ಆಗಿ ಮೂರುದಿನಗಳಾದವು."

"ಕೂಸು?"

"ಗಂಡು."

"ಅಂತೂ ಬ್ರಹ್ಮಾನಂದಸ್ವಾಮಿಗಳು ಪುನರ್ದರ್ಶನ ಕೊಟ್ಟರು ನನಗೆ."

ನೀರಮನೆಗೆ ಹೋಗಿ ಕೈಕಾಲು ಮುಖ ತೊಳೆದು ಹೊರಬಂದ. ಅಚ್ಚಕ್ಕ, ಚಿಕ್ಕಕೋಣೆಯಲ್ಲಿ ಗಣಪತಿಯನ್ನು ಕರೆತಂದಳು. ಹೊರಸಿನ ಮೇಲೆ ಸರಸ್ವತಿ ನಿದ್ರಿಸುತ್ತಿದ್ದಳು. ಬದಿಗೆ ಮಲಗಿ ಮಗು ನಗುತ್ತಿದ್ದಿತು.

"ಮಗುವನ್ನು ನಾನು ಮುಟ್ಟಬಹುದೇನಮ್ಮಾ, ಇನ್ನೂ ವೃದ್ಧಿ ಸ್ನಾನವಾಗಿಲ್ಲ ಸರಸ್ವತಿಗೆ....."

ಮಗುವನ್ನು ಮುಟ್ಟಬೇಕೆಂಬ ಉತ್ಕಟೇಚ್ಛ ಗಣಪತಿಯಲ್ಲಿದ್ದುದು ಸ್ಪಷ್ಟವಾಯಿತು ಅಚ್ಚಮ್ಮಳಿಗೆ.

"ಮುಟ್ಟಪ್ಪ ಅಗತ್ಯವಾಗಿ ಅದರಲ್ಲೇನಿದೆ ಗಣಪತಿ? ನೀನೂ ಅವಧೂತ ಮಾರ್ಗದವರ ಆಧ್ಯಾತ್ಮ ಪುತ್ರನಲ್ಲವೆ?"

ಗಣಪತಿ ಆ ಮೂರು ದಿನದ ಬತ್ತಿಯಂತಹ ಮಗುವನ್ನು ಎತ್ತಿ ಅಂಗೈಯಲ್ಲಿ ಹಿಡಿದ.

"ನನ್ನನ್ನು ಬಿಟ್ಟೇ ಹೋಗಿದ್ದಿರಲ್ಲ. ಬಂದಿರಾ ಈಗ? ನಿಮ್ಮ ದರ್ಶನವಿಲ್ಲದೆ ವರ್ಷವಾಯಿತು.... ಹಣೆ, ತಲೆ ಮೂಗು, ಬಾಯಿ, ಕಿವಿ, ಗದ್ದ, ಕೈ–ಕಾಲು, ಬೆರಳುಗಳು ಎಲ್ಲವೂ ಸಾಕ್ಷಾತ್ ಅವರದೇ ಅಮ್ಮ."

"ಅಹುದಪ್ಪ".

ಅಚ್ಚಕ್ಕಳ ದನಿಯಲ್ಲಿ ಅದೇಕೊ ಉತ್ಸಾಹವಿರಲಿಲ್ಲ. ಬ್ರಹ್ಮಾನಂದರನ್ನು ಎತ್ತಿಕೊಂಡ ಗಣಪತಿ ಬ್ರಹ್ಮಾನಂದವನ್ನೇ ಅನುಭವಿಸುತ್ತಿದ್ದ; ಅಚ್ಚಕ್ಕಳ ನಿರುತ್ಸಾಹವು ಅವನ ಗಮನಕ್ಕೇ ಬೀಳಲಿಲ್ಲ.

"ಮಾತನಾಡಿರಿ ಸ್ವಾಮೀ, ನಿಮ್ಮ ಮಗನೊಡನೆ."

ಗಣಪತಿ ಮಗುವಿನೊಂದಿಗೆ ಆಡಹತ್ತಿದ. ಬೊಚ್ಚುಬಾಯಿ ತೋರಿಸಿ ನಕ್ಕಿತು ಆ ಶಿಶು.

"ಅಮ್ಮಾ"

ಗಣಪತಿಯ ದನಿಯಲ್ಲಿ ಕಾತರವಿದ್ದಿತು.

"ಏನಪ್ಪಾ ಗಣಪತಿ."

ನಡುಮನೆಗೆ ಹೋಗಿದ್ದ ಅಚ್ಚಕ್ಕ ಕೋಣೆಯೊಳಗೆ ಬಂದಳು.

"ಕಣ್ಣು?"

"ಅಹುದಪ್ಪಾ."

"ಕುರುಡು."

"ಎರಡೂ"

"ಏನಾಗಿತ್ತಮ್ಮ ಮಗುವಿನ ಕಣ್ಣಿಗೆ?"

"ಆಗಬೇಕೇನು, ಹುಟ್ಟುವಾಗಲೆ ಹೀಗಿತ್ತು ಗಣಪತಿ, ಎರಡೂ ಕಣ್ಣುಗಳ ಲೊಟ್ಟೆ ಸೇದಿ ಹೋಗಿದ್ದವು. ಮುಂದೂ ಕಣ್ಣು ಬರುವದಿಲ್ಲವೆಂದು ಹೇಳಿದರು.

"ಏಕೆ ಹೀಗಾಯಿತಮ್ಮಾ?"

"ಕೂಸಿಗೆ ತಂದೆ ಕೊಟ್ಟ ಉಡುಗೊರೆಯಪ್ಪಾ ಅದು."

ನಿದ್ರಾಭಂಗವಾಗಿ ಸರಸ್ವತಿ ಎಚ್ಚತ್ತಳು, ಗಾಬರಿಯಿಂದ ನುಡಿದಳು.

"ಯಾರದು.... ಯಾರದು.... ಮಗುವನ್ನು."

ಮೆತ್ತಗೆ ಮಗುವನ್ನು ಪಕ್ಕದಲ್ಲಿ ಮಲಗಿಸಿದ.

"ನಾನು ಗಣಪತಿ, ಅಲ್ಲವೇನಮ್ಮಾ ಸರಸ್ವತಿ?"

"ಐ!ಗಣಪತಿ."

ಎರಡು ಮಾತುಗಳನ್ನಾಡಿ ಹೊರಬಂದು ಅಚ್ಚಕ್ಕಳೊಡನೆ ನುಡಿದ

"ನಾಳೆ ತಂದೆಯವರ ವರ್ಷಾಂತಿಕ"

"ಅಹುದಪ್ಪ."

"ಅದಕ್ಕಾಗಿಯೇ ಬಂದೆ. ನಗರೇಶ್ವರದೇವಾಲಯದಲ್ಲಿಯೆ ಮಾಡುತ್ತೇನಮ್ಮಾ."

"ಆಗಲಪ್ಪ."

ಗಣಪತಿ ರಾತ್ರಿಯೇ ಬಂದು ದೇವಾಲಯದಲ್ಲಿ ಮಲಗಿದ. ನಿದ್ರೆಯ ಸೂಚನೆಯು ಇರಲಿಲ್ಲ. ಬೆಳ್ಳಂಬೆಳಗೂ ಕಣ್ಣಿಲ್ಲದೆ ಏಕೆ ಹುಟ್ಟಿದರು ಬ್ರಹ್ಮಾನಂದಶಾಸ್ತ್ರಿಗಳು? ಈ ಲೋಕದ ಪಾಪವನ್ನು ನೋಡಲಾರದೆಯೆ?



## ೨೪

ಅಚ್ಚಕ್ಕಳಿಗೊದಗಿದ್ದ ನೂರಾರು ಕಷ್ಟ–ಸಂಕಟಗಳು, ಸಾಲವೇನೋ ಎನ್ನುವಂತೆ ಈ ಅಂದ ಮಗು ಬೇರೆ ಹುಟ್ಟಿತು ಸರಸ್ವತಿಯ ಉದರದಿಂದ, ಗಿಳಿಯಂತಿದ್ದಿತು ಮಗು, ಹುಟ್ಟುಗುರುಡು! ಈ ಎಲ್ಲ ಲಂಪಟವೇ ಬೇಡ ಎನಿಸಿತು ಅಚ್ಚಕ್ಕಳಿಗೆ. ಯಾವ ಮಹಾ ಆಸೆಗಾಗಿ ಈ ಬಾಳನ ದೋಣಿಯನ್ನು, ಗೋಳಿನ ಸಾಗರದಲ್ಲಿ ಬಿಟ್ಟು ನೋಡುತ್ತ ಕೂಡಬೇಕು ತಾನು ಎಂದು ಅನೇಕ ಬಾರಿ ತನ್ನಲ್ಲಿಯೆ ಪ್ರಶ್ನಿಸಿಕೊಂಡಿದ್ದಳು. ಈಗ ಅದೇ ವಿಷಯವನ್ನು ಗಣಪತಿಯೊಡನೆ ಪ್ರಸ್ತಾಪಿಸಿದಳು.

"ಕೈ ಹಿಡಿದ ಯಜಮಾನರು ಕಾಲವಾದರು, ಹೆತ್ತ ತಂದೆಯವರು ಕಾಣದಾದರು, ಸರಸ್ವತಿಯ ಸಂಹಾರ ಹೀಗಾಯಿತು. ನಾನಾವ ಪಾಪಕ್ಕಾಗಿ ಇಲ್ಲಿರಲಪ್ಪಾ ಗಣಪತಿ?

"ತಾಯಿ, ತಮ್ಮ ಇದ್ದಾರಲ್ಲಮ್ಮ?"

"ಅವರಿದ್ದಾರೆಂದೇ ನಾನು ಊರು ಬಿಡಬೇಕಾಗಿದೆ ಗಣಪತಿ, ತಾಯಿಯಂತೂ ಹುಟ್ಟಿನಿಂದಲೇ ಶತ್ರುವಾಗಿ ಕುಳಿತಳು. ಆ ತಮ್ಮನೋ ಬಾಯಿಂದಾಡುವದು ನನಗೆಷ್ಟೂ ಇಷ್ಟವಿಲ್ಲ ಗಣಪತಿ."

"ಸರಸ್ವತಿಯ ಗತಿ?"

"ಸರಸ್ವತಿಯ ಗತಿ ಸರಸ್ವತಿಗೆ. ನಾನು ಇಲ್ಲಿದ್ದು ಅವಳಿಗೆ ಮಾಡುವದಾದರೂ ಏನಿದೆ? ಅಳುವ ಮಗಳಿಗೆ ಕಣ್ಣೊರೆಸುವ ಸ್ವಾತಂತ್ರ್ಯವೂ ನನಗಿಲ್ಲ; ಆ ಮನೆಯಲ್ಲಂತೂ ಅರೆಕ್ಷಣವೂ ನಾನು ಇರಲಾರೆ. ಅವಳು ಪಡುವ ನಿತ್ಯ ಯಮಯಾತನೆಗಳನ್ನು ನೋಡುತ್ತ ನಾನೇಕೆ ಇರಬೇಕು ಗಣಪತಿ? ನಾನೆಂದೋ ಗಂಗೆಯ ಒಡಲನ್ನು ಸೇರಿ ಈ  ಕರ್ಮಕಾಂಡವನ್ನು ಮುಗಿಸಿಕೊಳ್ಳುತ್ತಿದ್ದೆ. ಭಾಸ್ಕರಭಟ್ಟರ ಮಗಳಾಗಿ, ಇಂತಹ ಋಷಿಗಳ ಮಡದಿಯಾಗಿ ನಿನ್ನಂತಹ ಮಗನಿಗೆ ತಾಯಿಯಾಗಿ ಆತ್ಮ ಹತ್ಯದಂತಹ ಅವಿವೇಕವನ್ನು ಮಾಡಬಾರದೆಂದು ಇನ್ನೂ ಈ ಭೂಮಾತೆಗೆ ಹೊರೆಯಾಗಿ ಉಳಿದಿದ್ದೇನೆ."

"ಪರಮಾತ್ಮನು ಸೃಷ್ಟಿಸಿ ಕೊಟ್ಟ ಪಂಚಪ್ರಾಣಗಲನ್ನು ನಾಶ ಮಾಡುವ ಅಧಿಕಾರವು ಮಾನವಪ್ರಾಣಿಗಿಲ್ಲ ತಾಯೀ. ಇಂತಹ ಕ್ಷುದ್ರ ವಿಚಾರವು ತಮ್ಮ ಮನದ ಹತ್ತಿರವೂ ಸುಳಿಯದಿರಲಿ. ತಾವು ಹೇಗೆ ಅಪ್ಪಣೆಕೊಡಿಸಿದರೆ ಹಾಗೆ ನಡೆಯಲು ಸಿದ್ಧನಿದ್ದೇನೆ."

ಗಣಪತಿಯ ಬಾಯಿಂದ ಈ ಮಾತು ಹೊರಡುವದೊಂದೇ ತಡ, ಕೂಡಲೆ ನುಡಿದಳು ಅಚ್ಚಮ್ಮ.

"ನಾನೂ ನಿನ್ನೊಡನೆ ಕಾಶಿಗೇ ಬರುತ್ತೇನೆ, ಗಣಪತಿ ಇಲ್ಲಿರಲಾರೆ."

"ಅಗತ್ಯವಾಗಿ, ತಮ್ಮನ್ನು ಸಂತೋಷದಿಂದ ಕರೆದೊಯ್ಯುತ್ತೇನೆ", ಕಣ್ಣಲ್ಲಿಯ ಬೊಂಬೆಯಂತೆ ಕಾಪಾಡಿಕೊಳ್ಳುತ್ತೇನೆ, ನಾಳೆಯೇ ಹೊರಡಿ, ಬೇಕಾದರೆ ಇಂದೇ, ಈ ಕ್ಷಣವೇ."

ಅಚ್ಚಕ್ಕಳ ಕಣ್ಣಿಂದ ಪಳಪಳ ನೀರುದುರಿದವು, ಆಪತ್ಸಮಯದಲ್ಲಿ ಆಗಲು ಸಾಕ್ಷಾತ್ ದೇವನೇ ಗಣಪತಿಯಾಗಿ ಬಂದನಲ್ಲ ಎಂದು.

"ಸರಸ್ವತಿ ಬೇರೆ ಇದ್ದಾಳಲ್ಲ? ಇವಳನ್ನು ಗಂಡನ ಮನೆಗೆ ಕಳುಹಿಸಿ ನಾವು ಹೊರಡಬೇಕು."

"ಅಲ್ಲವೆ ತಾಯಿ? ಹೆರಿಗೆಯಾಗಿ ಈಗಿನ್ನೂ ಹನ್ನೆರಡು ದಿನಗಳಾದವು– ಮೂರು ತಿಂಗಳಾದರೂ ಆಗುವದು ಬೇಡವೆ, ಅವಳಿನ್ನೂ ಹಸಿ ಬಾಣಂತಿ."

"ಅವಳೆಷ್ಟು ಕಾಲ ಬದುಕುವದು? ಬದುಕಿ ಮಾಡುವದಾದರೂ ಏನಿದೆ, ಕಣ್ಣಿಲ್ಲದ ಕರುಡು ಮಗುವನ್ನೂ ಕಣ್ಣಿದ್ದು ಕುರುಡಾದ ಗಂಡ ಅತ್ತೆಯರನ್ನು ಕಟ್ಟಿಗೊಂಡು? ನಾಳೆಯೇ ಹೋಗಿ ಸರಸ್ವತಿಯನ್ನೂ ಕೂಸನ್ನೂ ಆ ಮನೆಯಲ್ಲಿ ಬಿಟ್ಟು ಬಂದುಬಿಡು ನೀನೇ."

ಈ ಆಜ್ಞೆಯನ್ನು ಮಾತ್ರ ಶಿರಸಾ ವಹಿಸುವದು ಬಹು ಕಷ್ಟದ ಕೆಲಸವಾಯಿತು ಗಣಪತಿಗೆ. ತನ್ನಿಂದ ಈಗಾಗಲೆ ಸರಸ್ವತಿಗೆ ಒದಗಿದ ಕಷ್ಟಗಳನ್ನು ನೆನೆಸಿದ.

"ನನ್ನ ಬಗ್ಗೆ ಗೌರಮ್ಮ, ಬಾಳಪ್ಪನವರಿಗೆ ಒಳ್ಳೆಯ ಅಭಿಪ್ರಾಯವಿಲ್ಲ ತಾಯೀ, ಅದು ನನ್ನ ದುರ್ದೈವವೆಂದೇ ತಿಳಿಯುತ್ತೇನೆ. ಸರಸ್ವತಿಯು ಮತ್ತೆ ನನ್ನೊಟ್ಟಿಗೆ ಬಂದರೆ.... ಅವರೂ...."

"ನಿನಗೆ ಏನು ಮಾಡುತ್ತಾರೆ ಗಣಪತಿ?"

"ನನಗೆ ಏನು ಮಾಡಿದರೂ ಇದುರಿಸಬಲ್ಲೆ, ಅಥವಾ ಸಹಿಸಬಲ್ಲೆ, ತಂಗಿ ಸರಸ್ವತಿಗೆ ಅನವಶ್ಯಕವಾಗಿ...."

"ಹಿಂಸೆ ಕೊಡುತಾರೆ ತಾನೆ? ಅದು ಅವಳು ಪಡೆದು ಬಂದ ಪುಣ್ಯ, ನಾನಂತೂ ಆ ದಿಕ್ಕಿಗೂ ಕಾಲಿಡುವಂತಿಲ್ಲ. ನೀನು ಹೋಗಲೇಬೇಕು ಗಣಪತಿ; ನೀನೇ ಹೋಗಬೇಕು ಸರಸ್ವತಿಯೊಟ್ಟಿಗೆ."

"ಜೈ ಶಿವೇ"

ತಾಯಿ–ಮಗನ ನಿರ್ಧಾರವನ್ನು ಸರಸ್ವತಿಗೆ ಅಚ್ಚಮ್ಮಳೇ ಹೇಳಿದಳು. ಇದು ಬಹಳ ಸೂಕ್ತವೆನಿಸಿತು ಸರಸ್ವತಿಗೂ ಕೂಡ.



"ನೀನು ಕಾಶಿಗೆ ಹೋಗುವುದೇ ಮೇಲಮ್ಮ, ನನ್ನ ಕೊರಗು ತಪ್ಪಿದರೆ ನೀನು ಸುಖವಾಗಿಯೇ ಇರುತ್ತಿ."

"ನನಗೆ ಸುಖವು ಬೇಕಿಲ್ಲ. ಇಲ್ಲ ಕೂಡ. ನನ್ನ ಸುಖವು ನನ್ನ ಸ್ವಾಮಿಯೊಡನೆ ಅಂದೇ ಹೋಯಿತು. ಈಗ ಪುನಃ ಅದು ಲಭಿಸುವದು ಸಾವಿನಲ್ಲಿಯೇ. ಆ ಸಾವಿನ ಸುಖಕ್ಕಾಗಿ ಇಲ್ಲಿ ಕುಳಿತು ಕಾಯುವ ಬದಲು, ಅಲ್ಲಿಯೇ ಆ ವಿಶ್ವನಾಥನ ಸನ್ನಿಧಾನದಲ್ಲಿಯೇ ಕುಳಿತು ಕಾಯುತ್ತೇನೆ. ನಿನ್ನ ಕ್ಷೇಮದ ವಾರ್ತೆ ಅಷ್ಟು ದೂರ ಹೇಗೂ ಬರುವುದಿಲ್ಲ. ಅದೇ ಸಾಕು ನನಗೆ."

ತಾಯಿ, ಮಗಳ ಅಗಲಿಕೆ ಅದೆಷ್ಟೂ, ಅಳು, ಕೆರೆಗಳಿಲ್ಲದೆ ಮುಗಿದು ಹೋಯಿತು. ವೈರಾಗ್ಯದ ದೃಷ್ಟಿ ಹುಟ್ಟಿನಿಂದ ಬೆಳೆದುಬಂದಿರುವಾಗ, ದೈಹಿಕ ಬಂಧನಗಳನ್ನು ಹರಿದೊಗೆಯುವದು ಯಾವ ಕಷ್ಟದ ಕೆಲಸ, ಎರಡೂ ಪಕ್ವಜೀವಿಗಳು.

ಹೊಸಪೇಟೆಯಲ್ಲಿ ರೈಲಿನ ಬಳಿ ತನಗಾಗಿ ಕಾದಿರಲು ತಾಯಿಯನ್ನು ಮುಂಚಿತವಾಗಿಯೇ ಕಳುಹಿಸಿದ ಗಣಪತಿ.

ತಂಗಿಯನ್ನು ಗಾಡಿಯಲ್ಲಿ ಕೂಡಿಸಿ, ಅವಳ ಅಂಧ ಮಗುವನ್ನು ತನ್ನ ಭವ್ಯವಾದ ಅಂಗೈಯಲ್ಲಿ ಎತ್ತಿಗೊಂಡು ತಾನೂ ಕುಳಿತ. ಅದೇಕೋ ಗಣಪತಿಗೆ ಆ ಮಗುವನ್ನು ಬಿಟ್ಟು ಹೋಗಬೇಕಲ್ಲಾ ಎಂಬ ವಿಚಾರವು ಬಹಳವಾಗಿ ಬಾಧಿಸಹತ್ತಿತು. ತನ್ನ ಗುರುವೂ, ಪಿತೃವೂ, ಸಂರಕ್ಷಕನೂ ಆಗಿದ್ದ ಬ್ರಹ್ಮಾನಂದಶಾಸ್ತ್ರಿಗಳ ಆತ್ಮವನ್ನು ಆ ಕುರಡು ಶಿಶುವಿನಲ್ಲಿ ಗುರುತಿಸಿದ್ದ. ಹಾದಿಯುದ್ದಕ್ಕೂ ಅದರೊಡನೆ ಮಾತನಾಡಿದ. ನಕ್ಕ, ಅತ್ತ.

"ಕಣ್ತೆರೆ ನನ್ನ ಸ್ವಾಮೀ, ನಿನ್ನ ಮಗನನ್ನು ನೋಡು. ನಿನ್ನ ಮಗಳನ್ನು ನೋಡು. ನಗು, ನಗಿಸು, ಬ್ರಹ್ಮಾನಂದ ನೀನು. ನಾನು ಬಲ್ಲೆ ನೀನಾರು ಎಂಬುದನ್ನು, ನಾನು ಬಿಡುವುದಿಲ್ಲ ನಿನ್ನನ್ನು. ನೀನು ಕಣ್ತೆರೆಯುವವರೆಗೂ, ಕಣ್ತೆರೆ, ಮಾತನಾಡು...."

ಗಣಪತಿ ಶಿಶು ಬ್ರಹ್ಮಾನಂದನೊಟ್ಟಿಗೆ ದಾರಿಯುದ್ದಕ್ಕೂ ಆಡುತ್ತ ಆಡುತ್ತ ಮೈಮರೆತ, ಸರಸ್ವತಿಯ ಊರು ಸಮೀಪಿಸಿತು.

"ಕೊಂಚ ಇಳಿಯಪ್ಪಾ ಗಣಪತಿ, ನನಗೇಕೊ ಮೈ ತಿರುಗುತ್ತದೆ."

ಸರಸ್ವತಿ ಆಯಾಸದಿಂದ ನುಡಿದಳು.

ಮಗುವನ್ನು ಕೈಯಲ್ಲಿ ಹಿಡಿದುಕೊಂಡೇ ಇಳಿದ, ಒಂದು ಕೈಯಿಂದ ಸರಸ್ವತಿಯ ಕೈಹಿಡಿದು ಅವಳನ್ನು ಕೆಳಗಿಳಿಸಿದ.

ಸರಸ್ವತಿ ಉಂಡುದನ್ನೆಲ್ಲ ಹೊರಗುಗುಳಿದಳು. ಅಯ್ಯೋ, ಅಮ್ಮಾ ಎನ್ನುತ್ತ ಕೈ ಚಾಚಿದಳು. ಗಣಪತಿಯ ಭುಜಕ್ಕೆ ಕೈಯಿಕ್ಕಿದಳು. ಅವಳಿಂದ ನಿಲ್ಲಲಾಗಲಿಲ್ಲ. ನಡುರಸ್ತೆಯಲ್ಲಿಯೇ ಮಲಗುವ ಸ್ಥಿತಿಯಾಯಿತು ಅವಳದು.

"ಎರಡು ಹೆಜ್ಜೆ ಹಾಗೆಯೇ ಬಾ, ಸರಸ್ವತಿ. ಆ ಕಟ್ಟೆಯ ಮೇಲೆ ಮಲಗಿಸುತ್ತೇನೆ; ಕೊಂಚ ನೆಳಲೂ ಅದೆ."

ಗಣಪತಿ ಅವಳನ್ನು ಮೆತ್ತಗೆ ಗೋಕರ್ಣೇಶ್ವರನ ಗುಡಿಯ ಕಟ್ಟೆಗೆ ಸಾಗಿಸಿದ. ಕಾಲು ಚಾಚಿ ಮಲಗಿದಳು ಸರಸ್ವತಿ, ತಲೆಗೆ ಬಂಡೆ ಒತ್ತುತ್ತದೆಂದು ತನ್ನ ತೊಡೆಯನ್ನೇ ಅವಳಿಗೆ ತಲೆದಿಂಬು ಮಾಡಿದ. ಐದಾರು ನಿಮಿಷಗಳು ಹಾಯಾಗಿ ಮಲಗಿ ವಿಶ್ರಾಂತಿ ಪಡೆದಳು ಸರಸ್ವತಿ.

* * * *

ಬಾಳಪ್ಪನ ಬ್ರಹ್ಮಚರ್ಯವು ಆಗಾಗ್ಗೆ ರಜೆ ಪಡೆಯುತ್ತಿದ್ದಿತು ಯಾವುದೋ ಒಂದು ರೀತಿಯಲ್ಲಿ. ಅಲ್ಲದೆ ಅವನೊಬ್ಬ ಮಹಾ ಅದ್ವೈತಿ ಈ ವಿಷಯದಲ್ಲಿ ಮಾತ್ರ, ಎಲ್ಲವೂ ಒಂದೇ ಅವನ ಪಾಲಿಗೆ, ಉಚ್ಚ, ನೀಚ, ಉತ್ತಮ, ಅಧಮ, ಯೋಗ್ಯ– ಅಯೋಗ್ಯ, ಪಾತ್ರ–ಅಪಾತ್ರವೆಂಬ ತಾರತಮ್ಯವೇ ಇರಲಿಲ್ಲ ಆ ಪುಣ್ಯಾತ್ಮನಿಗೆ. ಅತಿಕಾಮಿಯಾಗಿದ್ದ ಅವನಿಗೆ ಲೈಂಗಿಕ ವ್ಯವಹಾರವು ಕೇವಲ ಶಾರೀರಿಕ. ಕೇವಲ ದಾಹ ತೃಪ್ತಿಯೊಂದೇ ಅವನಿಗೆ ಸಂಬಂಧಿಸಿದುದು.

ತನ್ನ ಹಳೆಯ ನಾಮಧೇಯವನ್ನು–ಗೋಬ್ರಾಹ್ಮಣ–ಪುನ: ಸಾರ್ಥಕಗೊಳಿಸಲು ಆ ಮಧ್ಯಾಹ್ನದ ತೀಕ್ಷ್ಣ ಬಿಸಿಲಲ್ಲಿಯೇ ಮನೆಯಿಂದ ಹೊರಬಿದ್ದ. ನೇರವಾಗಿ ಧಾವಿಸಿದ ಗೋಕರ್ಣೇಶ್ವರನ ಗುಡಿಗೆ, ಅಲ್ಲಿ ಅವನು ನೋಡಿದುದೇನು?

ಹೆತ್ತ ತಾಯಿ ಅವನ ತಲೆಯಲ್ಲಿ ಬಿತ್ತಿದ್ದ ಅನುಮಾನವು ಆಕಾರ ಪಡೆಯಿತು. ಪೆಡಂಭೂತವಾಗಿ ನಿಂತಿತು ಮನದಲ್ಲಿ. ಎಲ್ಲವೂ ಸ್ಪಷ್ಟವಾಗಿ ಹೊಳೆಯಿತು ಅವನ ಕುಶಲಮತಿಗೆ. ಅವನಲ್ಲಿದ್ದ ಮೃಗವು ಕ್ರೋಧದಿಂದ ಕೆರಳಿತು. ಅಸೂಯೆಯ ಆವೇಶದಿಂದ ಅವನು ಸಾಕ್ಷಾತಗ ರಾಕ್ಷಸನೇ ಆದ. ತುಟಿ ಕಚ್ಚಿದ, ಹಲ್ಲು ಕಡಿದ, ನಾಳಗೆಯನ್ನು ಹೊರ ಹಿರಿದುಕೊಂಡ, ಕಾಲುಗಳು ನಡುಗಿದವು.

"ಇನ್ನೂ ನೀನು ಬಿಡಲಿಲ್ಲೇ ಈ ಭಯರಾಗೀ ಸ್ನೇಹ! ಅಯ್ಯೋ!!ಅವನ ತೊಡಿಮ್ಯಾಲೆ ತಲಿ!!! ಅಗೊ, ಅವನು ಅವಳ ಬಾಯಿ ಒರೆಸುತ್ತಾನೆ."

ಕಂಡುದೆಲ್ಲವನ್ನೂ, ತನ್ನ ಅರ್ಥಕ್ಕೇ ಅನ್ವಯಿಸಿಗೊಳ್ಳುತ್ತ ಮೆಲ್ಲನೆ ಹೆಜ್ಜೆ ಇಡುತ್ತ, ಮಾಡಬೇಕಾದುದನ್ನು ಮನದಲ್ಲಿಯೆ ನಿರ್ಧರಿಸಿದ ಬಾಳಪ್ಪ. ಆದರೆ ಆ



ಬೈರಾಗಿಯ ಬಲವಾದ ದೇಹವನ್ನು ಕಂಡ ಕೂಡಲೆ ಬಾಳಪ್ಪನ ಧೈರ್ಯವೆಲ್ಲವೂ ಬೆಳಕಿಗೆ ಅಂಜಿ ಓಡುವ ಕತ್ತಲೆಯಂತೆ ಪಲಾಯನ ಮಾಡುತ್ತಿತ್ತು. ಒಂದು ಗಳಿಗೆ ಮರೆಯಲ್ಲಿಯೇ ನಿಂತು ಯೋಚಿಸಿದ ಆ ಮಹಮೇಧಾವಿ.

ಸರಸ್ವತಿ ಮೆಲ್ಲನೆ ಎದ್ದಳು. ಬಾಯೆಲ್ಲವೂ ಹುಳಿಯಾಗಿದ್ದಿತು. ಬಾಯಿ ತೊಳೆಯಲು ನೀರು ಬೇಕಾಯಿತು. ಗಣಪತಿ ಎದ್ದು ಗಾಡಿಗೆ ಬಂದ. ತಂಬಿಗೆಯಲ್ಲಿಕ್ಕಿದ್ದ ನೀರೆಲ್ಲವೂ ತುಳಿಕಿ ಚೆಲ್ಲಿ ಹೋಗಿದ್ದಿತು. ಬರೀ ತಂಬಿಗೆಯನ್ನೇ ತಂದ, ಬಾವಿಯಿಂದ ತಂದರಾಯಿತೆಂದು.

ಸರಸ್ವತಿ ದುಡುದುಡು ಬಾವಿಯ ಮೆಟ್ಟಲನ್ನು ಇಳಿದಳು ಬೇಡ ಬೇಡವೆಂದು ಗಣಪತಿ ಕೂಗುತ್ತಿದ್ದರೂ ಲೆಕ್ಕಿಸದೆ.

ಬೇಟೆಗಾಗಿ ಕಾದಿದ್ದ ಹುಲಿಯು ಹುಲ್ಲೆಯನ್ನು ಕಂಡು ಓಡಿ ಬರುವಂತೆ ಬಂದ ಬಾಳಪ್ಪ ಎತ್ತಲಿಂದಲೋ ಬಂದವನೆ ಅವಳ ಕತ್ತಿಗೆ ಕೈ ಹಾಕಿದ.

ಅಯ್ಯೋ! ಎಂಬ ಚೀತ್ಕಾರ ಕೇಳಿತು.

ಕೈಯಲ್ಲಿದ್ದ ಕೂಸನ್ನು ಎತ್ತಿಗೊಂಡೇ ಓಡಿ ಬಂದ ಗಣಪತಿ.

ಬಾಳಪ್ಪ ತನ್ನ ಕೆಲಸವನ್ನು ಆಗಲೆ ಮುಗಿಸುತ್ತಿದ್ದ. ಸರಸ್ವತಿಯ ಅವತಾರದ ಕತೆಯನ್ನು ಸಂಪೂರ್ಣ ಮಾಡಿತ್ತಿದ್ದ.

ದುಡುದುಡು ಮೆಟ್ಟಲಿಳಿಯುತ್ತ ಗಣಪತಿ ಕೂಗಿದ.

"ಹೆಂಡ್ತಿನ್ನ ಏನು ಮಾಡ್ತೀಯೋ ಬಾಳಪ್ಪಾ?"

"ಕುತ್ಗಿ ಹಿಚಿಗಿ ಭಾವ್ಯಾಗೆ ಹಾಕ್ತೀನಿ."

ಬಾಳಪ್ಪ ಕ್ರಿಯಸ್ತ. ಕೊಟ್ಟ ಮಾತಿಗೆ ಕಡೆಗೂ ನಿಂತ, ಅಂದಂತೆ ಮಾಡಿ ಮುಗಿಸಿದ.

*